ಸೋಮವಾರ, ನವೆಂಬರ್ 27, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 327 | ಪುಟ 14
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಆರೋಗ್ಯಕರ ಭಯ ವಿದ್ಯಾರ್ಥಿಗಳ ಏಕಾಗ್ರತೆ ಹಾಗೂ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಆದರೆ, ಅದು ಅತಿಯಾಗದಂತೆ ನೋಡಿಕೊಳ್ಳಬೇಕು.

ಆಳ-ಅಗಲ
ಆರ್‌ಟಿಐ ವ್ಯಾಪ್ತಿಯಿಂದ ಸಿಇಆರ್‌ಟಿ ಇನ್ ಹೊರಕ್ಕೆ
ಹಮಾಸ್ ಕಮಾಂಡರ್, ನಾಲ್ವರು ನಾಯಕರ ಹತ್ಯೆ 10
‘ಭಯೋತ್ಪಾದನೆಯನ್ನು ಭಾರತ ಹತ್ತಿಕ್ಕುತ್ತಿದೆ’ 7
23 ಕೋಟಿ ಟನ್ ಹಾಲು ಉತ್ಪಾದನೆ 10

ಚೀನಾದಲ್ಲಿ ನ್ಯುಮೋನಿಯಾ ಪ್ರಕರಣಗಳು ಹೆಚ್ಚಳ • ರಾಜ್ಯಗಳಿಗೆ ಪತ್ರ

ಸನ್ನದ್ಧತೆ ಪರಿಶೀಲಿಸಿ: ಕೇಂದ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಚೀನಾದ ಉತ್ತರ ಭಾಗದ ಮಕ್ಕಳಲ್ಲಿ ನ್ಯುಮೋನಿಯಾ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿರುವ ಬೆನ್ನಲ್ಲೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸನ್ನದ್ಧತೆಯ ಕುರಿತು ತಕ್ಷಣವೇ ಪರಿಶೀಲನೆ ನಡೆಸುವಂತೆ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಸಲಹೆ ನೀಡಿದೆ.

ಉಸಿರಾಟ ಸಮಸ್ಯೆಯ (ನ್ಯುಮೋನಿಯಾ) ಪ್ರಕರಣಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದು, ಇದನ್ನು ಎದುರಿಸಲು ಕೈಗೊಂಡಿರುವ ಅಗತ್ಯ ಮುಂಜಾಗ್ರತಾ ಕ್ರಮಗಳ ಬಗ್ಗೆ ಪರಿಶೀಲಿಸಲು ನಿರ್ಧರಿಸಲಾಗಿದೆ ಎಂದು ಸಚಿವಾಲಯವು ಭಾನುವಾರ ಹೇಳಿಕೆಯಲ್ಲಿ ತಿಳಿಸಿದೆ.

ಚೀನಾದಲ್ಲಿ ಕಾಣಿಸಿಕೊಂಡಿರುವ ಸೋಂಕಿನ ಕಾರಣ ಮತ್ತು ಚಳಿಗಾಲದಲ್ಲಿ ಉಸಿರಾಟ ಸಮಸ್ಯೆ ಉಲ್ಬಣಿಸುವ ಸಾಧ್ಯತೆ ಇರುವುದರಿಂದ ಈ ಸೂಚನೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಸದ್ಯದ ಪರಿಸ್ಥಿತಿಯನ್ನು ಭಾರತ ಸರ್ಕಾರವು ಗಮನಿಸುತ್ತಿದೆ. ದೇಶದಲ್ಲಿ ಸದ್ಯ, ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ಅದು ಹೇಳಿದೆ.

ರೋಗ ಉಲ್ಬಣಕ್ಕೆ ಕೋವಿಡ್ ಕಾರಣವಲ್ಲ: ಚೀನಾ

ಬೀಜಿಂಗ್ (ಎಪಿ): ‘ಚೀನಾದಾದ್ಯಂತ ಉಸಿರಾಟದ ಕಾಯಿಲೆಗಳು ಉಲ್ಬಣಿಸಲು ಜ್ವರ ಮತ್ತು ಇತರ ರೋಗಕಾರಕಗಳು ಕಾರಣ. ಆದರೆ, ಇದಕ್ಕೆ ಕೊರೊನಾ ವೈರಸ್ ಕಾರಣವಲ್ಲ’ ಎಂದು ದೇಶದ ಆರೋಗ್ಯ ಸಚಿವಾಲಯ ಭಾನುವಾರ ಹೇಳಿದೆ.

ಇನ್ಫ್ಲುಯೆನ್ಜ್ ವೈರಸ್, ಆರ್‌ಎಸ್‌ವಿನಂತಹ ಸಾಮಾನ್ಯ ವೈರಸ್‌ಗಳಿಂದ ಉಸಿರಾಟದ ಸೋಂಕು ಪ್ರಕರಣಗಳು ಇತ್ತೀಚೆಗೆ ಉಲ್ಬಣಿಸುತ್ತಿವೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗದ ವಕ್ತಾರರಾದ ಮಿ ಫೆಂಗ್ ತಿಳಿಸಿದ್ದಾರೆ. ಕೋವಿಡ್– 19 ನಿರ್ಬಂಧಗಳನ್ನು ತೆಗೆದುಹಾಕಿದ ನಂತರದ ಮೊದಲ ಪೂರ್ಣ ಚಳಿಗಾಲದಲ್ಲಿ ದೇಶವು ಉಸಿರಾಟದ ಕಾಯಿಲೆಗಳ ಅಲೆಯೊಂದಿಗೆ ಹೋರಾಡುತ್ತಿದೆ. ಹೀಗಾಗಿ ಹೆಚ್ಚಿನ ಜ್ವರ ಚಿಕಿತ್ಸಾಲಯಗಳನ್ನು ತೆರೆಯಲು ಮತ್ತು ಮಕ್ಕಳು ಹಾಗೂ ವೃದ್ಧರಿಗೆ ಲಸಿಕೆ ಹಾಕುವುದನ್ನು ಉತ್ತೇಜಿಸಬೇಕು. ಜನರು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ನೋಡಿಕೊಳ್ಳಬೇಕು. ಶಾಲೆಗಳು ಮತ್ತು ನರ್ಸಿಂಗ್ ಹೋಮ್‌ಗಳಂತಹ ಕಿಕ್ಕಿರಿದ ಸ್ಥಳಗಳಲ್ಲಿ ರೋಗಗಳು ಹರಡುವುದನ್ನು ತಡೆಯುವತ್ತಲೂ ಗಮನಹರಿಸಬೇಕು ಎಂದು ಅವರು ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

> **ಚೀನಾದಲ್ಲಿ ಮತ್ತಷ್ಟು ಪ್ರದೇಶಗಳಲ್ಲಿ ಸೋಂಕು ಹರಡಿದರೆ ಆಮದು ಮೇಲೆ ಪರಿಣಾಮ ಬೀರಲಿದೆ. ಮುಂದಿನ 5–6 ದಿನಗಳು ನಿರ್ಣಾಯಕ**
> **ಅಜಯ್ ಸಹಾಯ್**
> ಭಾರತೀಯ ರಫ್ತು ಸಂಘಗಳ ಒಕ್ಕೂಟದ ಮಹಾನಿರ್ದೇಶಕ

ಈ ಬಗ್ಗೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಆರೋಗ್ಯ ಕಾರ್ಯದರ್ಶಿ ಪತ್ರ ಬರೆದಿದ್ದಾರೆ. ಸಾರ್ವಜನಿಕ ಆರೋಗ್ಯ ಮತ್ತು ಆಸ್ಪತ್ರೆಗಳ ಸಿದ್ಧತೆ, ಹಾಸಿಗೆ, ಔಷಧ, ವೈದ್ಯಕೀಯ ಆಮ್ಲಜನಕ, ಲಸಿಕೆ, ಪರೀಕ್ಷಾ ಕಿಟ್, ವೆಂಟಿಲೇಟರ್, ಸೋಂಕು ನಿಯಂತ್ರಕ, ಆ್ಯಂಟಿಬಯೋಟಿಕ್, ಪಿಪಿಇ ಕಿಟ್ (ವೈಯಕ್ತಿಕ ಸುರಕ್ಷಾ ಸಾಮಗ್ರಿ) ಹಾಗೂ ಆಮ್ಲಜನಕ ಉತ್ಪಾದನಾ ಘಟಕಗಳ ಲಭ್ಯತೆ ಹಾಗೂ ಸೋಂಕು ಪ್ರಸರಣ ನಿಯಂತ್ರಣ ಅಭ್ಯಾಸಗಳ ಪಾಲನೆ ಬಗ್ಗೆ ತಕ್ಷಣವೇ ಪರಿಶೀಲಿಸಲು ಸೂಚಿಸಿದ್ದಾರೆ.

ತೀವ್ರ ಅನಾರೋಗ್ಯ (ಐಎಲ್‌ಐ) ಮತ್ತು ಉಸಿರಾಟದ ಸಮಸ್ಯೆಯ (ಎಸ್‌ಎಆರ್‌ಐ) ಬಗ್ಗೆ ನಿಗಾ ಇಡಲು ಈ ವರ್ಷದ ಆರಂಭದಲ್ಲಿ ಕೋವಿಡ್–19 ಸಂಬಂಧ ಹೊರಡಿಸಿದ್ದ ಪರಿಷ್ಕೃತ ಕಣ್ಗಾವಲು ಮತ್ತು ಕಾರ್ಯ ತಂತ್ರದ ಮಾರ್ಗಸೂಚಿಗಳನ್ನು ಪಾಲಿಸುವಂತೆಯೂ ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆಯನ್ನು ಪತ್ರದಲ್ಲಿ ನೀಡಲಾಗಿದೆ.

ಅಲ್ಲದೆ, ತೀವ್ರ ಉಸಿರಾಟ ಮತ್ತು ಅನಾರೋಗ್ಯ ಇರುವ ರೋಗಿಗಳ ಮೇಲೆ ಅದರಲ್ಲೂ ಮಕ್ಕಳು ಮತ್ತು ಹದಿವಯಸ್ಸಿನವರಲ್ಲಿ ಈ ರೋಗ ಲಕ್ಷಣಗಳು ಕಾಣಿಸಿದರೆ, ಸಮಗ್ರ ರೋಗ ಕಣ್ಗಾವಲು ಯೋಜನೆಯ (ಐಡಿಎಸ್‌ಪಿ) ಜಿಲ್ಲಾ ಮತ್ತು ರಾಜ್ಯ ಕಣ್ಗಾವಲು ಘಟಕಗಳಿಂದ ತೀವ್ರ ನಿಗಾವಹಿಸಬೇಕು ಎಂದು ರಾಜ್ಯಗಳ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಕಂಬಳ ಗೌಜು ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಕಂಬಳ ನೋಡಲು ಸಾವಿರಾರು ಜನ ಸೇರಿದ್ದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್ 6

2024 ಜನವರಿಗೆ ‘ಯುವನಿಧಿ’: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಐದನೇ ‘ಗ್ಯಾರಂಟಿ’ಯಾದ ‘ಯುವ ನಿಧಿ’ ಯೋಜನೆ 2024ರ ಜನವರಿಯಲ್ಲಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರದಲ್ಲಿ ಭಾನುವಾರ ಪಾಲ್ಗೊಂಡಿದ್ದ ಅವರು, ಈ ವಿಷಯ ತಿಳಿಸಿದರು.

ಪದವಿ, ಡಿಪ್ಲೊಮಾ ಪಡೆದು ನಿರುದ್ಯೋಗಿಗಳಾಗಿರುವವರಿಗೆ ಯುವ ನಿಧಿ ಸಿಗಲಿದೆ. 2022-23ನೇ ಸಾಲಿನಲ್ಲಿ ಪದವಿ ಪಡೆದ ಯುವಜನರಿಗೆ ಎರಡು ವರ್ಷಗಳವರೆಗೆ ತಿಂಗಳಿಗೆ ₹3,000 ಹಾಗೂ ಡಿಪ್ಲೊಮಾ ಮಾಡಿದ ಯುವಜನರಿಗೆ ಎರಡು ವರ್ಷಗಳವರೆಗೆ ತಿಂಗಳಿಗೆ ₹1,500 ನೀಡಲಾಗುವುದು. ಇದಲ್ಲದೇ ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನೂ ನೀಡಲಾಗುತ್ತದೆ ಎಂದರು.

‘ಕಾಂಗ್ರೆಸ್ ತನ್ನ ಎಲ್ಲ ಭರವಸೆಗಳನ್ನೂ ಈಡೇರಿಸಿದೆ. ಕರ್ನಾಟಕದಲ್ಲಿದ್ದ ಬಿಜೆಪಿ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಹೇಳಿದ್ದ ಶೇ 10ರಷ್ಟು ಭರವಸೆಗಳನ್ನಷ್ಟೇ ಈಡೇರಿಸಿತ್ತು. ಕರ್ನಾಟಕ ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಗ್ಯಾರಂಟಿ ಯೋಜನೆ ಜಾರಿಯೇ ಆಗುವುದಿಲ್ಲ. ಈ ರೀತಿಯ ಘೋಷಣೆಯಿಂದ ರಾಜ್ಯದ ಆರ್ಥಿಕತೆ ಕುಂಠಿತವಾಗುತ್ತದೆ ಎಂದಿದ್ದರು’ ಎಂದು ಹೇಳಿದರು.

₹2.66 ಕೋಟಿ ಮೌಲ್ಯದ ಅಕ್ಕಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಆಹಾರ ಧಾನ್ಯದ ಉಗ್ರಾಣ ಕೇಂದ್ರದಲ್ಲಿ ಸುಮಾರು ₹2.66 ಕೋಟಿ ಮೌಲ್ಯದ 6 ಸಾವಿರ ಕ್ವಿಂಟಲ್ ಪಡಿತರ ಅಕ್ಕಿ ನಾಪತ್ತೆಯಾಗಿದ್ದು, ಈ ಕುರಿತು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳಾದ ಶಿವಪ್ಪ ಮಲ್ಲಪ್ಪ ಸುರಪುರ ಹಳಿಸಗರ, ಶಿವರಾಜ ಗುಂಡಪ್ಪ ಹಾಲಗೇರಾ, ಶಹಾಪುರ ಟಿಎಪಿಸಿಎಂಎಸ್ ಆಡಳಿತ ಮಂಡಳಿ ಸದಸ್ಯರು ಮತ್ತು ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಟಿಎಪಿಸಿಎಂಎಸ್‌ನ ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಶಿವರಾಜ ಗುಂಡಪ್ಪ ಹಾಲಗೇರಾ, ಈಗಿನ ಮುಖ್ಯ ಕಾರ್ಯನಿರ್ವಾಹಕ ಶಿವಪ್ಪ ಮಲ್ಲಪ್ಪ ಸುರಪುರ ಹಾಗೂ ಆಡಳಿತ ಮಂಡಳಿಯು ಸರ್ಕಾರಕ್ಕೆ ಮೋಸ ಮಾಡಿ ಪಡಿತರ ಧಾನ್ಯವನ್ನು ತಮ್ಮ ಸ್ವಂತ ಲಾಭಗೋಸ್ಕರ ಬಳಸಿಕೊಂಡಿದ್ದಾರೆ ಎಂದು ಆಹಾರ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ಭೀಮರಾಯ ಎಂ. ದೂರು ನೀಡಿದ್ದರು.

ರಕ್ಷಣಾ ಕಾರ್ಯಕ್ಕೆ ಸೇನೆ

ಲಂಬವಾಗಿ ಸುರಂಗ ಕೊರೆಯುವ ಕೆಲಸ ಆರಂಭ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ 15 ದಿನಗಳಿಂದ ಸಿಲುಕಿರುವ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ಭಾನುವಾರ ಲಂಬವಾಗಿ ಕೊರೆಯುವ ಕಾರ್ಯ ಆರಂಭಿಸಲಾಗಿದೆ. ಕಾರ್ಯಾಚರಣೆಗೆ ನೆರವಾಗಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಭಾರತೀಯ ಸೇನೆಯ ಮದ್ರಾಸ್ ಸ್ಯಾಪರ್ಸ್ ಘಟಕ ಸ್ಥಳಕ್ಕೆ ಬಂದಿದೆ.

ಕಾರ್ಮಿಕರ ರಕ್ಷಣೆಗೆ ಎಲ್ಲಾ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಭಾನುವಾರ ಮಧ್ಯಾಹ್ನದಿಂದ ಲಂಬ ವಾಗಿ ಸುರಂಗ ಕೊರೆಯುವ ಕೆಲಸ ಆರಂಭವಾಗಿದ್ದು, ಈವರೆಗೆ 20 ಮೀಟರ್‌ನಷ್ಟು ಕೊರೆಯಲಾಗಿದೆ. ಅಡೆತಡೆ ಎದುರಾಗದಿದ್ದರೆ, ಕಾರ್ಮಿಕ ರನ್ನು ತಲುಪಲು 4 ದಿನ ಬೇಕಾಗ ಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಮೇಲ್ಭಾಗದಿಂದ ಒಟ್ಟು 86 ಮೀಟರ್‌ನಷ್ಟು ಸುರಂಗ ಕೊರೆಯಬೇಕಿದೆ. ಬಳಿಕ ಕಾರ್ಮಿಕರನ್ನು ಹೊರತರಲು ಸುರಂಗದ ಹೊರಪದರ ಒಡೆಯಬೇಕಾಗುತ್ತದೆ. ಸಟ್ಲಜ್ ಜಲ ವಿದ್ಯುತ್ ನಿಗಮ್ ಲಿಮಿಟೆಡ್ (ಎಸ್‌ಜೆವಿಎನ್‌ಎಲ್) 1.2 ಮೀಟರ್ ವ್ಯಾಸದ ಲಂಬ ಡ್ರಿಲ್ಲಿಂಗ್ ಕೆಲಸ ಮಾಡುತ್ತಿದೆ. ಯಂತ್ರವು 45 ಮೀಟರ್‌ವರೆಗೆ ಮಾತ್ರ ಡ್ರಿಲ್ ಮಾಡಬಹುದು. ನಂತರ ಯಂತ್ರವನ್ನು ಬದಲಾಯಿಸಬೇಕಾಗುತ್ತದೆ’ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತ್ತಾ ಹಸ್ನೈನ್ ಹೇಳಿದರು.

ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣೆಗಾಗಿ ಲಂಬವಾಗಿ ಕೊರೆಯುವ ಕೆಲಸ ಆರಂಭವಾಗಿದೆ ಎಎಫ್‌ಪಿ ಚಿತ್ರ

ಕಾರ್ಮಿಕರನ್ನು ರಕ್ಷಿಸಲು ಆರು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಆದರೆ, ಉತ್ತಮ ಆಯ್ಕೆ ಅಡ್ಡವಾಗಿ ಸುರಂಗ ಕೊರೆಯುವುದು. ಅಡ್ಡವಾಗಿ 47 ಮೀಟರ್ ಡ್ರಿಲ್ಲಿಂಗ್ ಪೂರ್ಣಗೊಂಡಿದೆ ಎಂಬುದನ್ನು ಅವರು ಉಲ್ಲೇಖಿಸಿದರು.

7ನೇ ಪುಟ ನೋಡಿ

ಹಲವು ಗ್ರಾಮ ಕೈಬಿಡಲು ನಿರ್ಧಾರ

ಪರಿಸರ ಸೂಕ್ಷ್ಮವಲಯ ವ್ಯಾಪ್ತಿ ಮರುನಿಗದಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಜನವಸತಿ ಹಾಗೂ ಪಶ್ಚಿಮಘಟ್ಟ ಎರಡಕ್ಕೂ ಧಕ್ಕೆಯಾಗದಂತೆ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯನ್ನು ಪುನರ್‌ನಿಗದಿ ಮಾಡಿ ಕೇಂದ್ರಕ್ಕೆ ಸಲ್ಲಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ.

ದೇಶದ ಜೀವವೈವಿಧ್ಯ ತಾಣ ಪಶ್ಚಿಮಘಟ್ಟ ಪರಿಸರ ಸೂಕ್ಷ್ಮವಲಯ ಸಂರಕ್ಷಣೆ ಕುರಿತು ಕಸ್ತೂರಿರಂಗನ್ ನೇತೃತ್ವದ ಸಮಿತಿ ನೀಡಿದ್ದ ವರದಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿ ಬರುವ ಮಾರ್ಚ್‌ಗೆ (2024) ಒಂದು ದಶಕವಾಗುತ್ತಿದೆ. ಕೇಂದ್ರ ಪರಿಸರ ಸಚಿವಾಲಯ ಅಂತಿಮ ಅಧಿಸೂಚನೆ ಹೊರಡಿಸುವ ಮೊದಲು ಕರ್ನಾಟಕ ಸೇರಿದಂತೆ ಪಶ್ಚಿಮಘಟ್ಟ ವ್ಯಾಪ್ತಿಯ ರಾಜ್ಯಗಳು ಸಮ್ಮತಿ ನೀಡಬೇಕಿದೆ. ಅಂತಿಮ ಅಧಿಸೂಚನೆ ಹೊರಡಿಸುವ ಮೊದಲು ರಾಜ್ಯ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸುವ ಅನಿವಾರ್ಯತೆಗೆ ಸಿಲುಕಿದೆ.

ಮಾಧವ ಗಾಡ್ಗೀಳ್ ವರದಿಯನ್ನು 2011ರಲ್ಲಿ ತಿರಸ್ಕರಿಸಿದ ಕೇಂದ್ರ ಸರ್ಕಾರ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮಾಜಿ ಅಧ್ಯಕ್ಷ ಕಸ್ತೂರಿರಂಗನ್ ಅವರ ಅಧ್ಯಕ್ಷತೆಯಲ್ಲಿ 10 ಸದಸ್ಯರನ್ನು ಒಳಗೊಂಡ ಮತ್ತೊಂದು ಸಮಿತಿ ರಚಿಸಿತ್ತು. ಸಮಿತಿ 15 ಏಪ್ರಿಲ್ 2013ರಂದು ವರದಿ ಸಲ್ಲಿಸಿತ್ತು. ವರದಿ ಅಂಗೀಕರಿಸಿದ ಸರ್ಕಾರ 14 ಮಾರ್ಚ್ 2014ರಂದು ಮೊದಲ ಕರಡು ಅಧಿಸೂಚನೆ ಹೊರಡಿಸಿತ್ತು. ಇದುವರೆಗೂ ಐದು ಬಾರಿ ಅಧಿಸೂಚನೆ ವಿಸ್ತರಿಸಲಾಗಿದೆ.

6ನೇ ಪುಟ ನೋಡಿ

ಅಂಕಿ–ಅಂಶ

1.29 ಲಕ್ಷ ಚ.ಕಿ.ಮೀ
ಗಾಡ್ಗೀಳ್ ಸಮಿತಿ ಗುರುತಿಸಿದ ಪರಿಸರ ಸೂಕ್ಷ್ಮವಲಯ

59,940 ಚ.ಕಿ.ಮೀ
ಕಸ್ತೂರಿ ರಂಗನ್ ವರದಿಯಲ್ಲಿನ ಸೂಕ್ಷ್ಮವಲಯ

44,448 ಚ.ಕಿ.ಮೀ
ರಾಜ್ಯದ ಪಶ್ಚಿಮಘಟ್ಟ ವ್ಯಾಪ್ತಿ

20,668 ಚ.ಕಿ.ಮೀ
ರಾಜ್ಯದ ಪರಿಸರ ಸೂಕ್ಷ್ಮವಲಯ

1,416 ಚ.ಕಿ.ಮೀ
ಸೂಕ್ಷ್ಮವಲಯದಿಂದ ಕೈಬಿಟ್ಟ ಪ್ರದೇಶ

ತಜ್ಞರ ಸಮಿತಿ ಕಳುಹಿಸಿದ ಕೇಂದ್ರ

ಕಸ್ತೂರಿರಂಗನ್ ವರದಿ ಕುರಿತು ರಾಜ್ಯ ಸರ್ಕಾರ, ಜನಪ್ರತಿನಿಧಿಗಳು ಹಾಗೂ ಪಶ್ಚಿಮಘಟ್ಟ ವ್ಯಾಪ್ತಿಯ ಜನರ ಜತೆ ಚರ್ಚಿಸಲು ಕೇಂದ್ರ ಸರ್ಕಾರ ಸಂಜಯ್‌ಕುಮಾರ್ ನೇತೃತ್ವದ ತಜ್ಞರ ಸಮಿತಿಯನ್ನು ಕಳುಹಿಸಿದೆ. ಈಗಾಗಲೇ ಸರ್ಕಾರದ ಪ್ರತಿನಿಧಿಗಳ ಜತೆ ಸಮಿತಿ ಒಂದು ಸುತ್ತಿನ ಚರ್ಚೆ ನಡೆಸಿದೆ. ವರದಿ ಜಾರಿಗೆ ಆಕ್ಷೇಪ ವ್ಯಕ್ತಪಡಿಸುತ್ತಿರುವ ಜನಪ್ರತಿನಿಧಿಗಳು ಹಾಗೂ ಜನರ ಜತೆ ಎರಡನೇ ಹಂತದಲ್ಲಿ ಮಾತುಕತೆ ನಡೆಸಿ, ಅವರ ಅಹವಾಲು ಆಲಿಸಲಿದೆ.

ಒಳ ಪುಟಗಳು

ಮಂತ್ರಾಲಯದಲ್ಲಿ ಲಕ್ಷ ದೀಪೋತ್ಸವ ಸಂಭ್ರಮ 6

ಅಶೋಕ ಸಿಎಂ ಇಳಿಸುವ ಸೂತ್ರಧಾರರೇ: ಮಧು ಪ್ರಶ್ನೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

MedPlus

ಅರ್ಪಿಸುತ್ತಿದೆ...

ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳು

50-80%*

ರಿಯಾಯತಿ ದರದಲ್ಲಿ

ಇದೀಗ ಮೆಡ್‌ಪ್ಲಸ್ 4000ಕ್ಕೂ ಹೆಚ್ಚು ಸ್ಟೋರ್‌ಗಳನ್ನು, 4500 ಕೋಟಿ ವಹಿವಾಟು ಹೊಂದಿದ್ದು, ಪ್ರತಿ ತಿಂಗಳು 1 ಕೋಟಿ ಗ್ರಾಹಕರಿಗೆ ಸೇವೆ ಒದಗಿಸುತ್ತಲಿದೆ. ಇದೇ ಸಂದರ್ಭದಲ್ಲಿ, ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳನ್ನು ಪ್ರಾರಂಭಿಸುತ್ತಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತಿದ್ದೇವೆ. ಜನಪ್ರಿಯ ಔಷಧಿ ಬ್ರಾಂಡ್‌ಗಳು, ತಮ್ಮ ಔಷಧಿಗಳ ಉತ್ಪಾದನೆಗೆ ಬಳಸಿಕೊಳ್ಳುವ ಬಹುತೇಕ ಸೌಲಭ್ಯಗಳನ್ನೇ ಬಳಸಿಕೊಂಡು, ಗರಿಷ್ಠ ಮಾನದಂಡಗಳ ಪ್ರಕಾರವೇ ನಮ್ಮ ಔಷಧಿಗಳನ್ನು ಕೂಡ ಉತ್ಪಾದಿಸಲಾಗುತ್ತದೆ.

ಮೆಡ್‌ಪ್ಲಸ್ ಬ್ರಾಂಡ್‌ಗಳಿಗೆ ಯಾವುದೇ ಮಾರ್ಕೆಟಿಂಗ್ ಅಥವಾ ವಿತರಣಾ ವೆಚ್ಚಗಳು ಇಲ್ಲದಿರುವುದರಿಂದಾಗಿ, 50 ರಿಂದ 80% ವರೆಗೆ ರಿಯಾಯತಿ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

ಮೆಡ್‌ಪ್ಲಸ್ ಬ್ರಾಂಡ್‌ಗಳನ್ನೇ ಖರೀದಿಸಿ. ಹೆಚ್ಚು ಉಳಿತಾಯ ಮಾಡಿ!

T&C Apply

ಇಂದೇ ನಿಮ್ಮ ಸಮೀಪದ ಮೆಡ್‌ಪ್ಲಸ್ ಸ್ಟೋರ್‌ಗೆ ಭೇಟಿ ಕೊಡಿ ಅಥವಾ ಕರೆ ಮಾಡಿ 040-6700 6732

ಸೀಮಿತ ಅವಧಿಯ ಚಂದಾದಾರಿಕೆ ಕೊಡುಗೆ ವಾರ್ಷಿಕ ರೂ. 50/– (ಸಾಮಾನ್ಯ ದರ ವಾರ್ಷಿಕ ರೂ. ~~499~~/–)

*ಷರತ್ತು ಮತ್ತು ನಿಬಂಧನೆಗಳು ಅನ್ವಯ. ಡಿಪಿಸಿಒ ಉತ್ಪನ್ನಗಳ ಮೇಲಿನ ರಿಯಾಯತಿ ಭಿನ್ನವಾಗಿರುತ್ತದೆ.

‘ಕೋರ್ಟ್ ಮೆಟ್ಟಿಲೇರಲು ಭಯ ಬೇಡ’

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ‘ಜನರ ನ್ಯಾಯಾಲಯ’ದಂತೆ ಕೆಲಸ ಮಾಡುತ್ತದೆ. ನಾಗರಿಕರು ನ್ಯಾಯಾಲಯದ ಮೆಟ್ಟಿಲೇರಲು ಭಯ ಪಡಬಾರದು ಅಥವಾ ಅದನ್ನು ಕೊನೆಯ ಯತ್ನದಂತೆಯೂ ಪರಿಗಣಿಸಬಾರದು ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಅವರು ಭಾನುವಾರ ಹೇಳಿದರು.

ಸಂವಿಧಾನ ದಿನದ ಅಂಗವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ನಮ್ಮ ಕಕ್ಷೀದಾರರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ನಲ್ಲಿ, ವಿವರಿಸಿರುವ ಷೆಡ್ಯೂಲ್ ಎ, ಷೆಡ್ಯೂಲ್ ಬಿ, ಷೆಡ್ಯೂಲ್ ಸಿ, ನಲ್ಲಿ ಸವಿವರವಾಗಿ ವಿವರಿಸಿರುವ (ಒಟ್ಟಾರೆಯಾಗಿ ಇದನ್ನು **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ) ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಮಾಡಬಹುದಾದ ಹಕ್ಕಿನ ಬಗ್ಗೆ ತಿಳಿಯಲು ಅಪೇಕ್ಷಿಸಿದ್ದಾರೆ; ಮತ್ತು ಇದಕ್ಕೆ ಸಂಬಂಧಿಸಿದಂತೆ, ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತುಗಳ ಮಾಲೀಕರ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ.

ಕ್ರಮ ಸಂಖ್ಯೆ	ಜಮೀನಿನ ಮಾಲೀಕರುಗಳ ಹೆಸರು
1)	ಮಂಘರಾಮ್ ಮತ್ತು ಮಕ್ಕಳು (ಷೆಡ್ಯೂಲ್ ಎ ಸ್ವತ್ತಿನಲ್ಲಿ ವಿವರಿಸಿರುವ ಸ್ಥಿರಾಸ್ತಿ ಸ್ವತ್ತಿನ ಮಾಲೀಕರು)
2)	ಬೀಹೈವ್ ಬ್ರಾಂಡ್ಸ್ ಪ್ರೈವೇಟ್ ಲಿಮಿಟೆಡ್ (ಷೆಡ್ಯೂಲ್ ಬಿ ಸ್ವತ್ತಿನಲ್ಲಿ ವಿವರಿಸಿರುವ ಸ್ಥಿರಾಸ್ತಿ ಸ್ವತ್ತಿನ ಮಾಲೀಕರು)
3)	ಶ್ರೀ. ರಾಜೇಂದ್ರ ಜೆ ಹಿಂದುಜಾ ಮತ್ತು ಶ್ರೀ. ದಿನೇಶ್ ಜೆ. ಹಿಂದುಜಾ (ಷೆಡ್ಯೂಲ್ ಸಿ ಸ್ವತ್ತಿನಲ್ಲಿ ವಿವರಿಸಿರುವ ಸ್ಥಿರಾಸ್ತಿ ಸ್ವತ್ತಿನ ಮಾಲೀಕರು)

ಯಾವುದೇ ವ್ಯಕ್ತಿಗಳು, ಹಿಂದೂ ಅವಿಭಕ್ತ ಕುಟುಂಬ ಕಂಪನಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆಗಳು, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಸಂಸ್ಥೆ, ಸ್ಥಾಪನೆಯಾಗಿರುವುದೋ ಅಥವಾ ಇಲ್ಲದಿರುವುದೋ, ಹಣಕಾಸು ನೀಡಿಕೆದಾರರು ಮತ್ತು/ಅಥವಾ ಸಾಲನೀಡಿಕೆದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವಾನಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಅಭಿವೃದ್ಧಿ ಹಕ್ಕು, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಲಿಸ್ ಪೆಂಡೆನ್ಸ್, ಯಾವುದೇ ನ್ಯಾಯಾಂಗ/ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ಒಪ್ಪಂದ, ಪವರ್ ಆಫ್ ಅಟಾರ್ನಿ, ಆಯ್ಕೆ, ಎಫ್‌ಎಸ್‌ಐ/ಎಫ್‌ಎಆರ್ ಬಳಕೆ, ಪ್ರಥಮ ನಿರಾಕರಣೆ ಹಕ್ಕು, ಮುನ್‌ಕೊಳ್ಳುವಿಕೆ, ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **7 (ಏಳು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರುಗಳ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಮತ್ತು ನಮ್ಮ ಕಕ್ಷಿದಾರರು ಸದರಿ ಮಾಲೀಕರುಗಳೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು.

ಷೆಡ್ಯೂಲ್ “ಎ”
(ಮಂಘರಾಮ್ ಮತ್ತು ಮಕ್ಕಳ ಮಾಲೀಕತ್ವದಲ್ಲಿದೆ)

ಬೆಂಗಳೂರು, ಬೆಂಗಳೂರು – ತುಮಕೂರು ರಸ್ತೆ, ಕೈಗಾರಿಕಾ ಉಪನಗರ 2ನೇ ಹಂತ ಎಕ್ಸ್‌ಟೆನ್ಷನ್, ಇಲ್ಲಿರುವ ಸೈಟ್ ನಂ. 4, 5, ಮತ್ತು 6,ರ ಪಿ.ಐ.ಡಿ ನಂ.11–50–4/5/6, ಇದರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 420 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 250 ಅಡಿ, ಒಟ್ಟಾರೆ ವಿಸ್ತೀರ್ಣ 1,05,000 ಚದರ ಅಡಿಗಳು, ಮತ್ತು ಇದರ ಚಕ್ಕುಬಂಧಿ ಈ ಕೆಳಕಂಡಂತಿರುವುದು:– **ಪೂರ್ವಕ್ಕೆ** : ಸೈಟ್ ನಂ.3, **ಪಶ್ಚಿಮಕ್ಕೆ** : ಸೈಟ್ ನಂ.7, **ಉತ್ತರಕ್ಕೆ** : ತುಮಕೂರು ರಸ್ತೆ (ಸರ್ವಿಸ್ ರಸ್ತೆ), **ದಕ್ಷಿಣಕ್ಕೆ** : ಸೈಟ್ ನಂ.11, 12, ಮತ್ತು 13.

ಷೆಡ್ಯೂಲ್ “ಬಿ”
(ಬೀಹೈವ್ ಬ್ರಾಂಡ್ಸ್ ಪ್ರೈವೇಟ್ ಲಿಮಿಟೆಡ್ ರವರ ಮಾಲೀಕತ್ವದಲ್ಲಿದೆ)

ಬೆಂಗಳೂರು, ಬೆಂಗಳೂರು – ತುಮಕೂರು ರಸ್ತೆ, ಕೈಗಾರಿಕಾ ಉಪನಗರ 2ನೇ ಹಂತ ಎಕ್ಸ್‌ಟೆನ್ಷನ್, ಇಲ್ಲಿರುವ ಪ್ಲಾಟ್ ನಂ. 8 ಮತ್ತು 9ರ, ಪಿ.ಐ.ಡಿ ನಂ.11–50–8/9, ಇದರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 170+166/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 250 ಅಡಿ, ಒಟ್ಟಾರೆ 42,000 ಚದರ ಅಡಿಗಳು, ಮತ್ತು ಇದರ ಚಕ್ಕುಬಂಧಿ ಈ ಕೆಳಕಂಡಂತಿರುವುದು:– **ಪೂರ್ವಕ್ಕೆ** : ಸೈಟ್ ನಂ.7, **ಪಶ್ಚಿಮಕ್ಕೆ** : 3ನೇ ಮುಖ್ಯ ರಸ್ತೆ, **ಉತ್ತರಕ್ಕೆ** : ತುಮಕೂರು ರಸ್ತೆ (ಸರ್ವಿಸ್ ರಸ್ತೆ), ಮತ್ತು **ದಕ್ಷಿಣಕ್ಕೆ** : ಸೈಟ್ ನಂ.10 ಮತ್ತು 11.

ಷೆಡ್ಯೂಲ್ “ಸಿ”
(ಶ್ರೀ. ರಾಜೇಂದ್ರ ಜೆ ಹಿಂದುಜಾ ಮತ್ತು ಶ್ರೀ. ದಿನೇಶ್ ಜೆ. ಹಿಂದುಜಾ ರವರ ಮಾಲೀಕತ್ವದಲ್ಲಿದೆ)

ಬೆಂಗಳೂರು, ಬೆಂಗಳೂರು – ತುಮಕೂರು ರಸ್ತೆ, ಕೈಗಾರಿಕಾ ಉಪನಗರ 2ನೇ ಹಂತ ಎಕ್ಸ್‌ಟೆನ್ಷನ್, ಇಲ್ಲಿರುವ ಕಾರ್ಖಾನೆ ಸ್ವತ್ತಿನ ಸೈಟ್ ನಂ. 7 ಮತ್ತು 12ರ, ಪಿ.ಐ.ಡಿ ನಂ.11–50–7/12, ಇದರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 140 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 500 ಅಡಿಗಳು, ಒಟ್ಟಾರೆ ವಿಸ್ತೀರ್ಣ 70,000 ಚದರ ಅಡಿಗಳು, ಮತ್ತು ಇದರ ಚಕ್ಕುಬಂಧಿ ಈ ಕೆಳಕಂಡಂತಿರುವುದು:– **ಪೂರ್ವಕ್ಕೆ** : ಸೈಟ್ ನಂ. 6 ಮತ್ತು 13, **ಪಶ್ಚಿಮಕ್ಕೆ** : ಸೈಟ್ ನಂ. 8 ಮತ್ತು 11, **ಉತ್ತರಕ್ಕೆ** : ತುಮಕೂರು ರಸ್ತೆ (ಸರ್ವಿಸ್ ರಸ್ತೆ), ಮತ್ತು **ದಕ್ಷಿಣಕ್ಕೆ** : ರಸ್ತೆ,

ಶ್ರೀ. ಎಸ್ ಟಿ ಪ್ರಶಾಂತ ಕುಮಾರ್ – ಹಿರಿಯ ಪಾಲುದಾರರು ದಿನಾಂಕ: 27.11.2023
ಶ್ರೀಮತಿ. ಸ್ಮಿತಾ ಪವನ್ – ಗ್ರೂಪ್ ಹೆಡ್
ಫಾಕ್ಸ್ ಮಂಡಲ್ ಮತ್ತು ಅಸೋಸಿಯೇಟ್ಸ್, ಸಾಲಿಸಿಟರ್ಸ್ ಮತ್ತು ವಕೀಲರು
ಎಫ್‌ಎಂ ಹೌಸ್, 6/12, ಪ್ರೈಮ್‌ರೋಸ್ ರಸ್ತೆ, ಬೆಂಗಳೂರು–560025,
ಕರ್ನಾಟಕ, ಭಾರತ, ದೂ. ಸಂ. +91 80 30554100, ಮೊ: +91 98801 62142
ಇ–ಮೇಲ್: prashantha.kumar@foxmandal.in, smitha.pavan@foxmandal.in

ಸಿಗ್ನಲ್‌ಗಳಲ್ಲಿ ಬ್ಯಾಟರಿ ಕಳವು: ಇಬ್ಬರ ಬಂಧನ

ಬೆಂಗಳೂರು: ನಗರದ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಬ್ಯಾಟರಿ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನಶಂಕರಿ ನಿವಾಸಿಗಳಾದ ಸೈಫ್ ಪಾಷಾ ಮತ್ತು ಸಲ್ಮಾನ್ ಖಾನ್ ಬಂಧಿತರು.

ಆರೋಪಿಗಳಿಂದ ₹5 ಮೌಲ್ಯದ 70 ಬ್ಯಾಟರಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಪರಿಶೀಲನೆ ವೇಳೆ ಸಿಕ್ಕಿಬಿದ್ದರು’: ನಗರದಲ್ಲಿ ಇತ್ತೀಚೆಗೆ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಬ್ಯಾಟರಿ ಕಳವು ಪ್ರಕರಣಗಳು ಹೆಚ್ಚಾಗಿದ್ದವು. ಇದು ಪೊಲೀಸರಿಗೆ ತಲೆನೋವು ತರಿಸಿತ್ತು. ಸಂಚಾರ ವಿಭಾಗದ ಪೊಲೀಸರು, ಹೈಗ್ರೌಂಡ್ಸ್ ಸೇರಿದಂತೆ ನಗರದ ನಾನಾ ಠಾಣೆಗಳಿಗೆ ದೂರು ನೀಡಿದ್ದರು. ಎಲ್ಲ ಠಾಣೆ ಪೊಲೀಸರು ತಮ್ಮ ಭಾಗದ ಜಂಕ್ಷನ್‌ಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲನೆ ನಡೆಸಿದ್ದರು. ಹೈಗ್ರೌಂಡ್ಸ್ ಠಾಣೆ ಭಾಗದಲ್ಲಿ ಕ್ಯಾಮೆರಾ ಪರಿಶೀಲನೆ ವೇಳೆ ಇಬ್ಬರು ಬ್ಯಾಟರಿ ಕಳವು ಮಾಡಿರುವುದು ಪತ್ತೆಯಾಗಿತ್ತು. ದೃಶ್ಯಾವಳಿ ಆಧರಿಸಿ ಇಬ್ಬರನ್ನು ಬಂಧಿಸಲಾಗಿದೆ.

‘ನಗರದ ಹಲವು ಸಿಗ್ನಲ್‌ಗಳಲ್ಲಿ ಅಳವಡಿಸಿದ್ದ ಬ್ಯಾಟರಿಗಳನ್ನು ಕಳವು ಮಾಡಿ, ಅವುಗಳನ್ನು ಗುಜರಿಗೆ ಮಾರಾಟ ಮಾಡುತ್ತಿದ್ದರು. ಬಂದ ಹಣದಲ್ಲಿ ಮೋಜು-ಮಸ್ತಿ ಮಾಡುತ್ತಿದ್ದರು ಎಂಬುದು ವಿಚಾರಣೆಯಲ್ಲಿ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಗರ್ಭಪಾತ; ₹5 ಕೋಟಿಯವರೆಗೆ ವ್ಯವಹಾರ • ಬಂಧಿತರ ಸಂಖ್ಯೆ 9ಕ್ಕೆ ಏರಿಕೆ

ಹೆಣ್ಣು ಭ್ರೂಣ ಹತ್ಯೆ: ಹಲವರ ಕೈವಾಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರೂಣ ಲಿಂಗಪತ್ತೆ ಹಾಗೂ ಗರ್ಭಪಾತ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಬೈಯಪ್ಪನಹಳ್ಳಿ ಠಾಣೆ ಪೊಲೀಸರು, ತಲೆಮರೆಸಿಕೊಂಡಿರುವ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಪ್ರಕರಣದಲ್ಲಿ ಬಂಧಿತರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಬಂಧಿತರು ವಿಚಾರಣೆ ವೇಳೆ ನೀಡಿದ ಮಾಹಿತಿ ಆಧರಿಸಿ ತಲೆಮರೆಸಿಕೊಂಡಿರುವ ಚೆನ್ನೈ, ಮೈಸೂರು, ಮಂಡ್ಯ ಮೂಲದ ಆರೋಪಿಗಳ ಬಂಧನಕ್ಕೆ ಪೊಲೀಸರು ಮುಂದಾಗಿದ್ದಾರೆ.

ಚೆನ್ನೈನ ಡಾ.ತುಳಸಿರಾಮ್, ಮೈಸೂರಿನ ಮಾತಾ ಆಸ್ಪತ್ರೆ ಹಾಗೂ ಅಲ್ಲಿನ ರಾಜ್‌ಕುಮಾರ್ ರಸ್ತೆಯಲ್ಲಿರುವ ಆಯುರ್ವೇದಿಕ್ ಡೇ ಕೇರ್ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಡಾ. ಚಂದನ್ ಬಲ್ಲಾಳ್, ಆತನ ಪತ್ನಿ ಮೀನಾ, ಸ್ವಾಗತಗಾರ್ತಿ ರಿಜ್ಮಾ, ಲ್ಯಾಬ್ ಟೆಕ್ನಿಷಿಯನ್ ನಿಸ್ಸಾರ್, ಶಿವನಂಜೇಗೌಡ, ವೀರೇಶ್, ನವೀನ್‌ಕುಮಾರ್, ನಯನ್‌ಕುಮಾರ್ ಅವರನ್ನು ಇದುವರೆಗೆ ಬಂಧಿಸಲಾಗಿದೆ. ಈ ಆರೋಪಿಗಳ ಜತೆಗೆ ಇನ್ನೂ ಹಲವರು ಕೈಜೋಡಿಸಿರುವ ಶಂಕೆ ವ್ಯಕ್ತವಾಗಿದೆ ಎಂದು ಮೂಲಗಳು ಹೇಳಿವೆ.

> ಮಂಡ್ಯ ಮತ್ತು ಮೈಸೂರು ಭಾಗಗಳಲ್ಲಿ ಭ್ರೂಣ ಹತ್ಯೆ ವ್ಯಾಪಕವಾಗಿ ನಡೆಯುತ್ತಿರುವುದು ಪತ್ತೆಯಾಗಿದೆ. ಇದರಲ್ಲಿ ತೊಡಗಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಸಂಬಂಧಪಟ್ಟವರ ಜೊತೆ ಸಭೆ ನಡೆಸಲಾಗುವುದು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಭ್ರೂಣ ಹತ್ಯೆ ಪ್ರಕರಣ ನಮ್ಮ ಪೊಲೀಸರು ಭೇದಿಸಿದ್ದಾರೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಲಿಂಗಪತ್ತೆ ಹಾಗೂ ಭ್ರೂಣ ಹತ್ಯೆ ತಡೆಗಟ್ಟಲು ಸರ್ಕಾರ ಕಾನೂನಿನ ಕುಣಿಕೆಯನ್ನು ಇನ್ನಷ್ಟು ಬಿಗಿಗೊಳಿಸಲಿದೆ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

‘ಆರೋಪಿಗಳು ಭ್ರೂಣ ಲಿಂಗ ಪತ್ತೆ ಹಾಗೂ ಗರ್ಭಪಾತಕ್ಕೆ ವ್ಯವಸ್ಥಿತ ಜಾಲ ರೂಪಿಸಿಕೊಂಡಿದ್ದರು. ಪ್ರಯೋಗಾಲಯ ಮಾಡಿಕೊಂಡಿದ್ದ ಆಲೆಮನೆಗೂ ಭೇಟಿ ನೀಡಿ ಪರಿಶೀಲಿಸಲಾಗಿದೆ. ಅಲ್ಲಿ ಸ್ಕ್ಯಾನಿಂಗ್ ಯಂತ್ರ ಪತ್ತೆಯಾಗಿದೆ. ಆರೋಪಿಗಳು ₹4ರಿಂದ ₹5 ಕೋಟಿಯಷ್ಟು ವ್ಯವಹಾರ ನಡೆಸಿದ್ದಾರೆ. ಎಲ್ಲ ಆರೋಪಿಗಳ ಬ್ಯಾಂಕ್ ಖಾತೆ, ಆನ್‌ಲೈನ್ ವಹಿವಾಟು ಪರಿಶೀಲನೆ ನಡೆಸಲಾಗಿದೆ.

‘ಮಂಡ್ಯ ಜಿಲ್ಲೆಯ ಮೇಲುಕೋಟೆ ರಸ್ತೆಯಲ್ಲಿರುವ ಆಲೆಮನೆಯನ್ನೇ ಈ ತಂಡ ಭ್ರೂಣಲಿಂಗ ಪರೀಕ್ಷೆಯ ಪ್ರಯೋಗಾಲಯವನ್ನಾಗಿ ಮಾಡಿಕೊಂಡಿತ್ತು. ಅಲ್ಲಿಗೆ ಮಧ್ಯವರ್ತಿಗಳು, ಭ್ರೂಣ ಲಿಂಗ ಪತ್ತೆ ಪರೀಕ್ಷೆಗೆ ಗರ್ಭಿಣಿಯರನ್ನು ಕರೆ ತರುತ್ತಿದ್ದರು. ನಕಲಿ ವೈದ್ಯ ವೀರೇಶ್, ಸ್ಕ್ಯಾನಿಂಗ್ ಯಂತ್ರದ ಮೂಲಕ ಭ್ರೂಣ ಪತ್ತೆ ಮಾಡುತ್ತಿದ್ದ. ಹೆಣ್ಣು ಭ್ರೂಣ ಎಂಬುದು ತಿಳಿದಾಗ ಅಲ್ಲಿಂದ ಮೈಸೂರಿನ ಡೇ ಕೇರ್ ಸೆಂಟರ್‌ಗೆ ಆರೋಪಿಗಳೇ ಕರೆದೊಯ್ಯುತ್ತಿದ್ದರು. ಯಾರಿಗೂ ಅನುಮಾನ ಬಾರದಂತೆ ತಂತ್ರ ರೂಪಿಸಿಕೊಂಡಿದ್ದರು. ಆ ಸೆಂಟರ್‌ನಲ್ಲಿ ಗರ್ಭಿಣಿಯನ್ನು ಎರಡರಿಂದ ಮೂರು ದಿನ ಇರಿಸಿಕೊಂಡು ಗರ್ಭಪಾತ ಮಾತ್ರೆ ನೀಡುತ್ತಿದ್ದರು. ಗರ್ಭಪಾತವಾದ ಮೇಲೆ ಕಳುಹಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ತುಳಸಿರಾಮ್ ಸಹ ಪ್ರಮುಖ ಆರೋಪಿ’: ಈ ಪ್ರಕರಣದಲ್ಲಿ ಮೈಸೂರಿನ ಚಂದನ್ ಬಲ್ಲಾಳ್ ಹಾಗೂ ಚೆನ್ನೈನ ಮಕ್ಕಳ ತಜ್ಞ ತುಳಸಿರಾಮ್ ಪ್ರಮುಖ ಆರೋಪಿಗಳು ಎಂಬುದು ಪೊಲೀಸ್ ತನಿಖೆಯಿಂದ ಬಯಲಾಗಿದೆ.

ತುಳಸಿರಾಮ್ ಅವರ ತಾಯಿ ಸ್ತ್ರೀರೋಗ ತಜ್ಞೆಯಾಗಿದ್ದರು. ಅವರು ಮೈಸೂರಿನ ಉದಯಗಿರಿಯಲ್ಲಿ ‘ಲತಾ ಆಸ್ಪತ್ರೆ’ ನಡೆಸುತ್ತಿದ್ದರು. ಈತ ಕೂಡ ಮಕ್ಕಳ ತಜ್ಞನಾಗಿ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ತಾಯಿ ಮೃತಪಟ್ಟ ಬಳಿಕ ಅಕ್ರಮ ದಂಧೆಗೆ ಕೈಹಾಕಿದ್ದ ತುಳಸಿರಾಮ್, ಹೆಣ್ಣು ಭ್ರೂಣ ಪತ್ತೆ ಹಚ್ಚಿ ಗರ್ಭಪಾತ ಮಾಡಿಸುತ್ತಿದ್ದ ಎಂದು ಪೊಲೀಸರು ಹೇಳಿದರು.

‘ವೈಯಕ್ತಿಕ ಕಾರಣಕ್ಕೆ ಕುಟುಂಬ ಸಮೇತ ಚೆನ್ನೈಗೆ ಸ್ಥಳಾಂತರಗೊಂಡಿದ್ದ ತುಳಸಿರಾಮ್, ತನ್ನ ‘ಲತಾ ಆಸ್ಪತ್ರೆ’ಯನ್ನು ಚಂದನ್ ಬಲ್ಲಾಳ್‌ಗೆ ಮಾರಾಟ ಮಾಡಿದ್ದ. ಅದನ್ನು ಚಂದನ್, ಮಾತಾ ಎಂದು ಹೆಸರು ಬದಲಿಸಿಕೊಂಡಿದ್ದ. ಅದಕ್ಕೆ ಪತ್ನಿ ಮೀನಾಳನ್ನು ವ್ಯವಸ್ಥಾಪಕ ನಿರ್ದೇಶಕಿಯಾಗಿ ನೇಮಿಸಿಕೊಂಡಿದ್ದ.

‘ಚಂದನ್ ಬಲ್ಲಾಳ್ ಮಾತಾ ಆಸ್ಪತ್ರೆಯ ಮೇಲ್ಭಾಗದಲ್ಲಿ ಪ್ರತ್ಯೇಕ ಕೊಠಡಿ ಹಾಗೂ ರೋಗಿಗಳ ಕೋಣೆ ನಿರ್ಮಿಸಿಕೊಂಡಿದ್ದ. ತುಳಿಸಿರಾಮ್ ಚೆನ್ನೈನಲ್ಲಿದ್ದುಕೊಂಡೇ ಮಧ್ಯವರ್ತಿಗಳಾದ ವೀರೇಶ್, ಶಿವಲಿಂಗೇಗೌಡ ಎಂಬುವರ ಮೂಲಕ ಗರ್ಭಪಾತ ಮಾಡಿಸಿಕೊಳ್ಳುವವರ ಪತ್ತೆ ಮಾಡಿ ಚಂದನ್ ಬಲ್ಲಾಳ್ ಆಸ್ಪತ್ರೆಗೆ ಕಳುಹಿಸುತ್ತಿದ್ದ’ ಎಂದು ತನಿಖಾಧಿಕಾರಿಗಳು ಹೇಳಿದರು.

16 ಪ್ರಕರಣಗಳಿದ್ದ ರೌಡಿ ಶೀಟರ್ ಬಂಧನ

ಬೆಂಗಳೂರು: ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಸಹ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗುತ್ತಿದ್ದ ರೌಡಿ ಶೀಟರ್ ಜಗದೀಶ್ ಅಲಿಯಾಸ್ ಜಗ್ಗನನ್ನು ವಿಶೇಷ ಗೂಂಡಾ ಕಾಯ್ದೆ ಅಡಿಯಲ್ಲಿ ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಜಗ್ಗ ಪದೇ ಪದೇ ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. 3 ಕೊಲೆ ಪ್ರಕರಣ, 1 ಕೊಲೆ ಯತ್ನ, 3 ಹಲ್ಲೆ ಪ್ರಕರಣ, 4 ದರೋಡೆಗೆ ಸಂಚು, 1 ಅಪಹರಣ ಪ್ರಕರಣ ಸೇರಿದಂತೆ ಈತನ ವಿರುದ್ಧ ಒಟ್ಟು 16 ಪ್ರಕರಣಗಳು ದಾಖಲಾಗಿದ್ದವು’ ಎಂದು ಪೊಲೀಸರು ಹೇಳಿದರು.

‘2017ರಲ್ಲಿ ಈತನ ವಿರುದ್ಧ ರೌಡಿಪಟ್ಟಿ ತೆರೆಯಲಾಗಿತ್ತು. ಅದೇ ವರ್ಷ ಗೂಂಡಾ ಕಾಯ್ದೆ ಅಡಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಆರು ತಿಂಗಳು ಜೈಲಿನಲ್ಲಿದ್ದ ಜಗ್ಗ, ಹೈಕೋರ್ಟ್‌ನಿಂದ ಜಾಮೀನು ಪಡೆದು ಬಿಡುಗಡೆ ಆಗಿದ್ದ. ಬಿಡುಗಡೆಯಾದ ನಂತರ ರೌಡಿ ಚಟುವಟಿಕೆ ಮುಂದುವರಿಸಿದ್ದ. ಕಾಮಾಕ್ಷಿಪಾಳ್ಯ, ಬಸವೇಶ್ವರ ನಗರ, ಮಾದನಾಯಕನಹಳ್ಳಿ ಈತನ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಮತ್ತೆ ಅಪರಾಧ ಚಟುವಟಿಕೆ ನಡೆಸುತ್ತಿದ್ದರಿಂದ ಗೂಂಡಾ ಕಾಯ್ದೆ ಅಡಿ ಬಂಧಿಸಲಾಗಿದೆ’ ಎಂದು ಹೇಳಿದರು.

ನೃತ್ಯ ಪ್ರದರ್ಶನ ಕೆ.ಆರ್. ಪುರದ ಕೇಂಬ್ರಿಜ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಚಿಗುರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು

ಬ್ಯಾಂಕ್ ದಾಖಲೆ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ಗಳಲ್ಲಿ ಸಾಲ ಕೊಡಿಸುವುದಾಗಿ ಉದ್ಯಮಿಗಳಿಂದ ದಾಖಲೆ ಪಡೆದು ವಂಚಿಸುತ್ತಿದ್ದ ಯುಸೂಫ್ ಎಂಬ ಆರೋಪಿಯನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ.

ಹೋಟೆಲ್ ಉದ್ಯಮಿ ಶಾಜಿ ಕೃಷ್ಣನ್ ಎಂಬುವರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಕೊಡಿಸುವುದಾಗಿ ನಂಬಿಸಿ ಅವರಿಂದ ದಾಖಲೆಗಳನ್ನು ಪಡೆದುಕೊಂಡಿದ್ದ. ಬಳಿಕ, ಕೃಷ್ಣನ್ ಅವರನ್ನು ಬ್ಯಾಂಕ್‌ಗೆ ಕರೆದೊಯ್ದು ಅರ್ಜಿಗಳಿಗೆ ಸಹಿ ಮಾಡಿಸಿಕೊಂಡಿದ್ದ. ₹2.5 ಕೋಟಿ ಸಾಲ ಪಡೆದುಕೊಂಡು ಸಾಲದ ಕಂತು ಕಟ್ಟುತ್ತಿರಲಿಲ್ಲ. ಕೃಷ್ಣನ್ ಅವರು ಬ್ಯಾಂಕ್ ತೆರಳಿ ವಿಚಾರಣೆ ನಡೆಸಿದಾಗ ಸಾಲದ ಕಂತು ಪಾವತಿ ಮಾಡದಿರುವುದು ಗೊತ್ತಾಗಿತ್ತು. ಶಾಜಿ ಕೃಷ್ಣನ್ ನೀಡಿದ ದೂರು ಆಧರಿಸಿ ವಂಚನೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ಆರೋಪಿ ಯುಸೂಫ್, ರಾಜಕೀಯ ಮುಖಂಡರು ಹಾಗೂ ಬ್ಯಾಂಕ್ ವ್ಯವಸ್ಥಾಪಕ ಪರಿಚಯಸ್ಥರು ಎಂದು ಹೇಳಿಕೊಂಡು ಓಡಾಟ ನಡೆಸುತ್ತಿದ್ದ. ಸರ್ಕಾರದಲ್ಲಿ ಉದ್ಯಮಕ್ಕೆ ಸಂಬಂಧಿಸಿದ ಕೆಲಸ ಮಾಡಿಸಿ ಕೊಡುವುದಾಗಿ ನಂಬಿಸುತ್ತಿದ್ದ. ಹೀಗಾಗಿ ಕೆಲವು ಸಚಿವರು ಹಾಗೂ ಅಧಿಕಾರಿಗಳಿಗೆ ಕೆಲಸ ಮಾಡಿಕೊಡಲು ಹಣ ಕೊಡಬೇಕೆಂದು ಉದ್ಯಮಿಗಳಿಂದ ಹಣ ಪಡೆದುಕೊಂಡಿದ್ದಾನೆ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಅಲ್ಲದೇ ಟ್ರಾವೆಲ್ಸ್ ಕಂಪನಿ ಮಾಲೀಕರೊಬ್ಬರಿಗೆ ಜಿಎಸ್‌ಟಿ ಕಮಿಷನರ್ ಹೆಸರಲ್ಲಿ ವಂಚನೆ ಎಸಗಿದ್ದ’ ಎಂದು ಪೊಲೀಸರು ಹೇಳಿದರು.

ಬಿ.ವೈ.ವಿಜಯೇಂದ್ರ ಹೆಸರು ಬಳಸಿ ವಂಚನೆ: ‘ಆರೋಪಿಯು ಬಿಜೆಪಿ ರಾಜ್ಯ ಅಧ್ಯಕ್ಷ ವಿಜಯೇಂದ್ರ ಹೆಸರು ಹೇಳಿಕೊಂಡು ಕೆಲವರಿಂದ ಹಣ ಪಡೆದು ವಂಚಿಸಿದ್ದಾನೆ. ಬಿಜೆಪಿ ಹೈಕಮಾಂಡ್ ನಾಯಕರು ತನಗೆ ಪರಿಯವಿದ್ದು, ರಾಜಕೀಯವಾಗಿ ಕೆಲಸ ಮಾಡಿಸುವುದಾಗಿ ಹಲವರಿಂದ ಹಣ ಪಡೆದು ವಂಚಿಸಿದ್ದಾನೆ. ಯೂಸೆಫ್ ಉದ್ಯಮಿಗಳಿಗೆ ಸಮಸ್ಯೆ ತಿಳಿದುಕೊಂಡು ಬಳಿಕ ಅವರ ಸ್ನೇಹ ಬೆಳೆಸುತ್ತಿದ್ದ. ನಂತರ ಸಹಾಯ ಮಾಡುವ ನೆಪದಲ್ಲಿ ಹಣ ಪಡೆದು ವಂಚಿಸುತ್ತಿದ್ದ’ ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಅಸಮಾಧಾನ ಇದ್ದರೂ ಸೋಮಣ್ಣ ಬಿಜೆಪಿ ಬಿಡಲ್ಲ’

ಕೋಲಾರ/ಮುಳಬಾಗಿಲು: ವಿ. ಸೋಮಣ್ಣ ಹಾಗೂ ಬಸನಗೌಡ ಪಾಟೀಲ ಯತ್ನಾಳ ಬಿಜೆಪಿಯ ಹಿರಿಯ ನಾಯಕರು. ಕಿರಿಯರಾದ ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಕ್ಕೆ ಅವರಿಗೆ ಅಸಮಾಧಾನವಿದೆ. ಹಾಗಂತ ಸೋಮಣ್ಣ ಕಾಂಗ್ರೆಸ್‌ಗೆ ಹೋಗಲ್ಲ. ಈಗಾಗಲೇ ಅವರು ಎಲ್ಲಾ ಪಕ್ಷ ನೋಡಿಕೊಂಡು ಬಂದಿದ್ದಾರೆ ಎಂದು ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿದ್ದಾರೆ.

ಸೋಮಣ್ಣ, ಯತ್ನಾಳ ಹಾಗೂ ಯಡಿಯೂರಪ್ಪ ಮಾರ್ಗದರ್ಶನದಲ್ಲೇ ವಿಜಯೇಂದ್ರ ಕೆಲಸ ಮಾಡುತ್ತಾರೆ ಎಂದು ಭಾನುವಾರ ಇಲ್ಲಿ ತಿಳಿಸಿದರು.

ಮಾದಾವರದ ಬಳಿ ಅಪಘಾತಕ್ಕೀಡಾದ ಬಸ್

ಡಿವೈಡರ್‌ಗೆ ಬಸ್ ಡಿಕ್ಕಿ

ಪೀಣ್ಯ ದಾಸರಹಳ್ಳಿ: ರಾಷ್ಟ್ರೀಯ ಹೆದ್ದಾರಿ–4ರ ಮಾದಾವರದ ಬಳಿ ಭಾನುವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ಕೆಎಸ್ ಆರ್‌ಟಿಸಿ ಬಸ್ ಡಿವೈಡರ್‌ಗೆ ಡಿಕ್ಕಿಯಾಗಿದ್ದು, ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ಅಪಘಾತಕ್ಕೀಡಾದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 20 ಪ್ರಯಾಣಿಕರಿದ್ದರು. ಬಸ್‌ನಲ್ಲಿ ಮುಂದೆ ಕುಳಿತಿದ್ದ ಮಹಿಳೆಗೆ ಗಾಯವಾಗಿದೆ. ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್ ಬೆಂಗಳೂರಿನಿಂದ ಸೋಮವಾರಪೇಟೆಗೆ ತೆರಳುತ್ತಿತ್ತು. ಬಸ್ಸಿನಲ್ಲಿ ಸುಮಾರು 20 ಮಂದಿ ಪ್ರಯಾಣ ಮಾಡುತ್ತಿದ್ದರು ಎಂದು ನೆಲಮಂಗಲ ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಡಿವೈಡರ್‌ಗೆ ಗುದ್ದಿದ ಪರಿಣಾಮ ಬಸ್ ತೆರವು ಮಾಡುವುದು ವಿಳಂಬವಾಯಿತು. ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಕಿಲೋಮೀಟರ್ ಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಜನರು ವಾಹನ ದಟ್ಟಣೆಯಲ್ಲಿ ಸಿಲುಕಿ ಪರದಾಡುವಂತಾಯಿತು.

ಹೂಡಿಕೆದಾರರಿಗೆ ವಂಚನೆ: ₹1.8 ಕೋಟಿ ಕಳೆದುಕೊಂಡ ಬೆಂಗಳೂರಿನ ಮೂವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 10 ರಾಜ್ಯ ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳ 26 ಹೂಡಿಕೆದಾರರಿಗೆ ಒಟ್ಟು ₹2.9 ಕೋಟಿ ವಂಚಿಸಿರುವ ಜಾಲ ಪತ್ತೆಯಾಗಿದ್ದು, ಈ ವಂಚನೆ ಜಾಲಕ್ಕೆ ಸಿಲುಕಿ ಬೆಂಗಳೂರಿನ ಮೂವರು ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾರೆ.

ಆಗಸ್ಟ್‌ನಿಂದ ನವೆಂಬರ್‌ಒಳಗೆ ಈ ವಂಚನೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಸಾಮಾಜಿಕ ಮಾಧ್ಯಮದಲ್ಲಿ ₹10 ಲಕ್ಷ ಹೂಡಿಕೆ ಮಾಡುವಂತೆ ಪ್ರಕಟಣೆ ನೀಡಲಾಗಿತ್ತು. ಅವರದ್ದೇ ವೆಬ್‌ಸೈಟ್ ಹಾಗೂ ನಕಲಿ ಆ್ಯಪ್ ಮೂಲಕ ಹೂಡಿಕೆ ಮಾಡುವಂತೆ ತಿಳಿಸಿ, ಹಣ ವರ್ಗಾವಣೆಗೆ ವಿವಿಧ ಬ್ಯಾಂಕ್ ಖಾತೆ ನೀಡಿ ವಂಚಿಸಲಾಗಿದೆ.

ಬೆಂಗಳೂರಿನ ಮೂವರು ಹೂಡಿಕೆದಾರರು ₹1.8 ಕೋಟಿ ಕಳೆದುಕೊಂಡಿದ್ದಾರೆ. ವೈದ್ಯರೊಬ್ಬರಿಗೆ ₹70 ಲಕ್ಷ ವಂಚನೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಮೂರು ಸೇರಿದಂತೆ ಬೇರೆ ಬೇರೆ ಭಾಗಗಳಲ್ಲಿ ಆರು ಎಫ್.ಐ.ಆರ್‌ಗಳು ದಾಖಲಾಗಿವೆ.

ಈ ವಂಚನೆ ಪ್ರಕರಣದ ಸೂತ್ರಧಾರ ಆದಿತ್ಯ ಅಗರ್‌ವಾಲ್ ಎಂಬ ಶಂಕೆ ವ್ಯಕ್ತವಾಗಿದೆ. ಆತನಿಗೆ ಒಂಬತ್ತು ಮಂದಿ ಬೇರೆ ಹೆಸರಿನಲ್ಲಿ ನೆರವು ನೀಡುತ್ತಿದ್ದರು ಎಂದು ಗೊತ್ತಾಗಿದೆ. ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರ್ಪಡೆಯಾದರೆ ಅಗರ್‌ವಾಲ್ ಅವರು ಹೂಡಿಕೆ ಮಾಡುವುದು ಹೇಗೆ? ಯಾವ ಷೇರುಗಳನ್ನು ಆಯ್ಕೆ ಮಾಡಬೇಕು ಎಂಬ ಸಲಹೆ ನೀಡುತ್ತಾರೆ ಎಂದು ನಂಬಿಸಲಾಗುತ್ತಿತ್ತು. ಅದಾದ ಮೇಲೆ ನಾನಾ ರೀತಿಯಲ್ಲಿ ವಂಚಿಸಿರುವುದು ಗೊತ್ತಾಗಿದೆ.

ಕ್ಯಾಮೆರಾದ ಎದುರು ಅಗರ್‌ವಾಲ್ ಎಂಬ ವ್ಯಕ್ತಿ ಮುಖ ಪ್ರದರ್ಶನ ಮಾಡುತ್ತಿರಲಿಲ್ಲ. ಪವರ್ ಪಾಯಿಂಟ್ ಮೂಲಕವೇ ಹೂಡಿಕೆ ಮಾಡುವ ಮಾಹಿತಿ ನೀಡುತ್ತಿದ್ದರು ಎಂದು ಹಣ ಕಳೆದುಕೊಂಡವರು ಹೇಳಿದ್ದಾರೆ.

‘₹70 ಲಕ್ಷ ಹಣ ಕಳೆದುಕೊಂಡಿದ್ದ ಪ್ರಕರಣದಲ್ಲಿ, ₹16 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ. ಎರಡನೇ ಪ್ರಕರಣದಲ್ಲಿ ಬ್ಯಾಂಕ್‌ನಿಂದ ಮಾಹಿತಿ ಪಡೆಯಲಾಗುತ್ತಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ತಿಳಿಸಿದ್ದಾರೆ.

‘ವ್ಯಕ್ತಿಯೊಬ್ಬರು ₹ 19 ಲಕ್ಷ ವರ್ಗಾವಣೆ ಮಾಡಿದ್ದರು. ಅದರಲ್ಲಿ ₹ 1.50 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಬಿ.ಎಂ.ಲಕ್ಷ್ಮಿಪ್ರಸಾದ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಪಾ.ಸ. ಕುಮಾರ್ ಅವರ ‘ಲೆಫ್ಟ್ ಹ್ಯಾಂಡ್ ಡ್ರಾಯಿಂಗ್ಸ್’ ಕಲಾಕೃತಿಗಳ ಪ್ರದರ್ಶನದ ಉದ್ಘಾಟನೆ: ಶೀಲಾ ಗೌಡ, ಅತಿಥಿಗಳು: ಎಂ.ಜೆ. ಕಮಲಾಕ್ಷಿ, ರಜನಿ ಪ್ರಸನ್ನ, ಪ್ರೇಮಾ ಕುಮಾರಿ, ಆಯೋಜನೆ: ಮಾರ್ಕಿಂಗ್ ಆಫ್ ಹ್ಯಾಂಡ್, ಸ್ಥಳ: ಆರ್ಟ್ ಹೌಸ್, ಅರಮನೆ ರಸ್ತೆ, ವಸಂತನಗರ, ಬೆಳಿಗ್ಗೆ 10ರಿಂದ

ಕರ್ನಾಟಕ ರಾಜ್ಯೋತ್ಸವ, ‘ಸುವರ್ಣ ಕನ್ನಡಿಗ ಪ್ರಶಸ್ತಿ’ ಪ್ರದಾನ: ಅಧ್ಯಕ್ಷತೆ: ಪಲ್ಲವಿ ಮಣಿ, ಪ್ರಾಸ್ತಾವಿಕ ನುಡಿ: ಶಂಕರ್ ಹೂಗಾರ್, ಅತಿಥಿಗಳು: ಕಂನಾಡಿಗಾ ನಾರಾಯಣ, ಹೃದಯ ಶಿವ, ಸತೀಶ್ ಎಸ್., ಪ್ರಶಸ್ತಿ ಪುರಸ್ಕೃತರು: ನಿಡಸಾಲೆ ಪುಟ್ಟಸ್ವಾಮಯ್ಯ, ವೈ.ವಿ.ಎಚ್. ಜಯದೇವ, ಬಿ. ಉಮೇಶ್, ಮಹೇಂದ್ರ ಟಿ., ಆಯೋಜನೆ: ಪಿ.ಬಿ. ಶ್ರೀನಿವಾಸ್ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘6ನೇ ಗಾಂಧಿ ವಿಚಾರ ಸಂಸ್ಕಾರ ಪರಿಷತ್ತಿನ ಘಟಿಕೋತ್ಸವ’: ಉದ್ಘಾಟನೆ: ಕೆ.ಎಂ. ಸುರೇಶ ಕುಮಾರ್, ಅತಿಥಿಗಳು: ಎಸ್.ಬಿ. ಅಪ್ಪಾಜಿ ಗೌಡ, ಪ್ರತಾಪ ಲಿಂಗಯ್ಯ, ಎಚ್.ಆರ್. ರವೀಶ, ಎಚ್.ಬಿ. ದಿನೇಶ್, ಗಿರೀಶ್ ಕುಲಕರ್ಣಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

‘ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಶಿವರಾಜ್ ಎಸ್. ತಂಗಡಗಿ, ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ದೇವುಗುಪ್ತಪು ವೀರವೆಂಕಟ ಜಗನ್ನಾದ ರಾವ್, ಅತಿಥಿಗಳು: ಎನ್. ಭಕ್ತವತ್ಸವ ರೆಡ್ಡಿ, ಕೆ. ಧರಣಿದೇವಿ, ಅಧ್ಯಕ್ಷತೆ: ಹಿ.ಶಿ. ರಾಮಚಂದ್ರೇಗೌಡ, ಪ್ರಾಸ್ತಾವಿಕ ನುಡಿ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಚಂದ್ರಶೇಖರ ಕಂಬಾರ

‘36ನೇ ಲಾ ಏಷಿಯಾ’ ಸಮ್ಮೇಳನ: ‘ಮಹಾತ್ಮ ಗಾಂಧಿ ಇಂದಿಗೂ ಏಕೆ ಪ್ರಸ್ತುತ’ ವಿಷಯ ಬಗ್ಗೆ ಚರ್ಚೆ: ರಾಮಚಂದ್ರ ಗುಹಾ, ಶ್ಯಾಮ್ ದಿವಾನ್, ಆಯೋಜನೆ: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ: ಫೋರ್ ಸೀಸನ್ ಹೋಟೆಲ್, ಬೆಳಿಗ್ಗೆ 11ರಿಂದ

ಕರ್ನಾಟಕ ರಾಜ್ಯೋತ್ಸವ, ಪ್ರತಿಭಾ ಪುರಸ್ಕಾರ, ವರ್ಗೀಸ್ ಕುರಿಯನ್ ಜನ್ಮದಿನೋತ್ಸವ: ಪ್ರತಿಭಾ ಪುರಸ್ಕಾರ: ಕೆ.ಎನ್. ರಾಜಣ್ಣ, ಬಹುಮಾನ ವಿತರಣೆ: ಕೆ. ವೆಂಕಟೇಶ್, ಉದ್ಘಾಟನೆ: ಹಂಸಲೇಖ, ಅಧ್ಯಕ್ಷತೆ: ಎಲ್.ಬಿ.ಪಿ. ಭೀಮನಾಯ್ಕ, ಆಯೋಜನೆ: ಕೆ.ಎಂ.ಎಫ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5.30

ಜೆ. ಡುಂಡರಾಜ ಮತ್ತು ವಿದ್ಯಾರ್ಥಿಗಳ ‘ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ’ ಪ್ರದರ್ಶನ: ಮಹೇಂದ್ರ ಡಿ., ಅತಿಥಿಗಳು: ವಿಜಯ ಸಿದ್ದರಾಮಪ್ಪ ಅಗರಗುಂಡಗಿ, ಪ್ರಭು ಮಲ್ಲೇಶ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ವಿಶ್ವದ ಮತ್ತು ಏಷ್ಯಾ ವಕೀಲರ ಸಂಘಗಳ ಮುಖಂಡರಿಗೆ ಸನ್ಮಾನ ಕಾರ್ಯಕ್ರಮ: ಕೆ. ಶಶಿಕಿರಣ್ ಶೆಟ್ಟಿ, ಬಸವ ಪ್ರಭು ಎಸ್. ಪಾಟೀಲ, ಅನಿಲ್ ದಿವಾನ್, ಎಸ್.ಎಸ್. ನಾಗಾನಂದ್, ಶಾಂತಿ ಭೂಷಣ್ ಎಚ್., ಅಧ್ಯಕ್ಷತೆ: ವಿವೇಕ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹೈಕೋರ್ಟ್ ಯೂನಿಟ್ ಹಾಲ್, ಮಧ್ಯಾಹ್ನ 2.30

ರಾಜ್ಯೋತ್ಸವ ಕಾವ್ಯೋತ್ಸವ: ಆಶಯ ನುಡಿ: ಜೋಗಿ, ಅಧ್ಯಕ್ಷತೆ: ಬೇಲೂರು ರಘುನಂದನ್, ಉಪಸ್ಥಿತಿ: ನಿತಿನ್ ಶಾ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಸಂಜೆ 4.30

‘ಶರಣೆ ನೀಲಾಂಬಿಕೆ’ ಜಯಂತಿ: ಉದ್ಘಾಟನೆ: ಸಿ. ಸೋಮಶೇಖರ್, ಅಭಿನಂದನೆ: ಸಿಂ.ರಾ. ಹೊನ್ನಲಿಂಗಯ್ಯ, ಉಪನ್ಯಾಸ: ಸಂಗಮೇಶ ಗೌಡಪ್ಪನವರ, ಅತಿಥಿಗಳು: ಎಸ್. ಮಹದೇವಯ್ಯ, ಸಿ.ಆರ್. ಉಮಾಶಂಕರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಪೂರ್ಣಚಂದ್ರ ರಂಗಮಂದಿರ, ಸಿದ್ಧಿವಿನಾಯಕ ದೇವಸ್ಥಾನದ ಆವರಣ, ಡಿ ಗ್ರೂಪ್ ಬಡಾವಣೆ, ಸಂಜೆ 5.30

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

REQUIRED FOR Jewellery Showroom @Basaveshwara Nagar Sales staff & Designer Male/Female Fresher/ Experienced WhatsApp resume @9019158585

Hotel

WANTED MARKETING / Sales / Housekeeping / Security forHotel. Contact: 9606436007 / 9591767676

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

CONNECT

ICCR
Indian Council for Cultural Relations
(Ministry of External Affairs, Government of India)
Zonal Office (South) Bengaluru
in association with
Mount Carmel College, Autonomous, Bengaluru
cordially invites you to
Folk Music & Dance Group from
ETHIOPIA
on Tuesday, 28th November ,2023 at 6.00 p.m.
at
Diamond Jubliee Auditorium
Mount Carmel College, Autonomous
No. 58, Palace Road, Vasanthnagar, Bengaluru- 560052
All are invited
ENTRY FREE ON FIRST COME FIRST SERVE BASIS

SINCE 2004
BALC ಬಾಲ್ಕ್ Discount 50%
Avail 50% Discount on all Computer Courses @ BALC
Learn : Tally Prime, Adv Excel, SAP, C, C++, Java, Python AI, ML, Civil / Mechanical CADD, DTP, Web Design, Animation, Digital Marketing Training, Spoken English
RAJAJINAGAR 88848 68882 | TOLLGATE 88847 08887 | SUNKADAKATTE 98860 50481/2
JAYANAGAR 8884 483 483 | ULLAL ROAD 88845 48887 | BASAVANAGUDI 8884 482 482
KONANAKUNTE CROSS 8884 72 8887 | KENGERI UPANAGAR 8884 64 8887
www.balc.in www.balccadd.com

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಸಂವಿಧಾನ ದಿನಾಚರಣೆ

ಕೆಂಗೇರಿಯ ಉಲ್ಲಾಳ್ ವಾರ್ಡ್‌ನ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಆಯೋಜಿಸಿದ್ದ ಸಂವಿಧಾನ ಸಮರ್ಪಣಾ ದಿನ ಹಾಗೂ ಡಾ. ಬಿ .ಆರ್. ಅಂಬೇಡ್ಕರ್ ಪ್ರತಿಷ್ಠಾನ ಸೇವಾ ಟ್ರಸ್ಟ್ ಉದ್ಘಾಟನಾ ಸಮಾರಂಭದಲ್ಲಿ ಸಶಸ್ತ್ರ ಪಡೆಯ ಉಪ ಪೊಲೀಸ್ ಆಯುಕ್ತ ಎಸ್. ಸಿದ್ದರಾಜು, ಟ್ರಸ್ಟ್ ಅಧ್ಯಕ್ಷ ಜೆ. ಮುನಿರಾಜು, ಉಪಾಧ್ಯಕ್ಷ ಸಿ.ಶಿವಕುಮಾರ್ ಗೌಡ , ಸೂಲಿಕೆರೆ ವಿಜಯಕುಮಾರ್, ಕಾಂತರಾಜು, ವೆಂಕಟೇಶ್, ಹೊನ್ನಯ್ಯ, ಆತ್ಮಾನಂದ ಇದ್ದರು

ಕೆ.ಆರ್.ಪುರದಲ್ಲಿ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ದಮನಿತ ಸಂಘಟನೆಗಳ ಸಮನ್ವಯ ಸಮಿತಿಯ ರಾಜ್ಯಾಧ್ಯಕ್ಷ ಸಾಮ್ರಾಟ್ ಶೇಖರ್, ಹಾಗೂ ಸಂಚಾಲಕ ಟಿ.ನಾರಾಯಣಸ್ವಾಮಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಹಾಗೂ ಸಂವಿಧಾನ ಪುಸ್ತಕಕ್ಕೆ ಪುಷ್ಪ ನಮನ ಸಲ್ಲಿಸಿದರು. ಪದಾಧಿಕಾರಿಗಳು ಇದ್ದರು

ಸಂವಿಧಾನ ದಿನಾಚರಣೆಯ ಅಂಗವಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಅವರು ಭಾನುವಾರ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ನರಸಿಂಹಮೂರ್ತಿ, ಹಣಕಾಸು ಅಧಿಕಾರಿ ವಿಜಯಲಕ್ಷ್ಮಿ, ಕಲಾ ನಿಕಾಯದ ಡೀನ್ ಜ್ಯೋತಿ ವೆಂಕಟೇಶ, ವಿಜ್ಞಾನ ವಿಭಾಗದ ಡೀನ್ ಹರಿಪ್ರಸಾದ್, ದೇವರಾಜ್, ಶಿವಶಂಕರ್ ಇದ್ದರು

ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಸಂವಿಧಾನ ಸರಿಯಾದವರ ಕೈಗಳಲ್ಲಿರಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದ ಅನುಷ್ಠಾನದ ಅಧಿಕಾರವು ಅದರ ಆಶಯಗಳ ಪರವಾಗಿರುವವರ ಕೈಗಳಲ್ಲಿರಬೇಕು. ಆಗ ಮಾತ್ರ ಸಂವಿಧಾನದ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಾಧ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಂವಿಧಾನದ ದಿನದ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಭಾನುವಾರ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

‘ಭಾರತದ ಸಂವಿಧಾನವು ಶ್ರೇಷ್ಠವಾದುದು. ಸಂವಿಧಾನವು ಎಷ್ಟೇ ಶ್ರೇಷ್ಠವಾಗಿದ್ದರೂ, ಅದನ್ನು ಅನುಷ್ಠಾನಕ್ಕೆ ತರುವ ಅಧಿಕಾರ ಸರಿಯಾದ ಕೈಗಳಲ್ಲಿ ಇರದಿದ್ದರೆ ಅದರ ಉದ್ದೇಶ ಸಾರ್ಥಕವಾಗುವುದಿಲ್ಲ ಎಂದು ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರೇ ಹೇಳಿದ್ದರು. ಅದು ಸತ್ಯ’ ಎಂದರು.



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಂವಿಧಾನ ದಿನಾಚರಣೆಯ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಮತ್ತು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಇದ್ದರು –ಪ್ರಜಾವಾಣಿ ಚಿತ್ರ

ದೇಶದ ಎಲ್ಲರ ಹಕ್ಕುಗಳಿಗೂ ರಕ್ಷಣೆ ನೀಡುವುದು ಭಾರತದ ಸಂವಿಧಾನದ ಮುಖ್ಯ ಆಶಯ. ಮಾನವೀಯತೆಯು ಕೂಡ ಸಂವಿಧಾನದ ಪ್ರಮುಖ ತತ್ವವಾಗಿದೆ ಎಂದು ಹೇಳಿದರು.

‘ದೇಶವು ಸರ್ವ ಜನಾಂಗದ ಶಾಂತಿಯ ತೋಟವಾಗಬೇಕು ಎಂದು ಗಾಂಧಿ, ನೆಹರೂ ಕನಸು ಕಂಡಿದ್ದರು. ಅದನ್ನೇ ರಾಷ್ಟ್ರಕವಿ ಕುವೆಂಪುರವರು ಪ್ರತಿಪಾದಿಸಿದ್ದರು. ನಮ್ಮ ಸರ್ಕಾರ ಕೂಡ ಸಂವಿಧಾನದ ಆಶಯಗಳಂತೆ ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ’ ಎಂದರು.

ಸಂವಿಧಾನದ ಪ್ರಸ್ತಾವನೆಯಲ್ಲಿ ಅದರ ಸಾರವಿದೆ. ಶಾಲೆಗಳಲ್ಲಿ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸುವುದನ್ನು ರಾಜ್ಯ ಸರ್ಕಾರ ಕಡ್ಡಾಯಗೊಳಿಸಿದೆ. ಸರ್ಕಾರದ ಈ ಕ್ರಮದಿಂದ ಮಕ್ಕಳು ಸಂವಿಧಾನದ ಧ್ಯೇಯೋದ್ದೇಶಗಳ ಕುರಿತು ಅರಿಯಲು ಸಾಧ್ಯವಾಗುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

‘ನೆಹರೂ ಕುಟುಂಬಕ್ಕಾಗಿ ಅಂಬೇಡ್ಕರ್ ಕಡೆಗಣನೆ’

ಬೆಂಗಳೂರು: ‘ನೆಹರೂ ಕುಟುಂಬಕ್ಕೆ ಅಧಿಕಾರ ನೀಡುವುದೇ ಕಾಂಗ್ರೆಸ್ ಪಕ್ಷದ ಏಕೈಕ ಗುರಿ. ಇದಕ್ಕಾಗಿ ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನೇ ಕಡೆಗಣಿಸಲಾಗಿತ್ತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷವು ಅಂಬೇಡ್ಕರ್ ಅವರನ್ನು ಯಾವತ್ತೂ ಗೌರವಯುತವಾಗಿ ನಡೆಸಿಕೊಳ್ಳಲಿಲ್ಲ’ ಎಂದರು.

ಮಾಜಿ ಸಚಿವ ಗೋವಿಂದ ಕಾರಜೋಳ ಮಾತನಾಡಿ, ‘ಶಿಕ್ಷಣ ಮತ್ತು ಉದ್ಯೋಗದ ಮೂಲಕ ಪರಿಶಿಷ್ಟರಿಗೆ ಶಕ್ತಿ ತುಂಬುವಂತೆ ಅಂಬೇಡ್ಕರ್ ಹೇಳಿದ್ದರು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಕ್ಕಿ, ಕುರಿ, ಕೋಳಿ, ಬೇಳೆ ಕೊಡುತ್ತೇನೆ ಎನ್ನುತ್ತಿದ್ದಾರೆ. ಇದರಿಂದ ಪರಿಶಿಷ್ಟರ ಸಬಲೀಕರಣ ಆಗುವುದಿಲ್ಲ’ ಎಂದರು.

ವಿಧಾನಸಭೆಯ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಚಿವ ಸಿ.ಟಿ. ರವಿ, ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮಾತನಾಡಿದರು. ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ., ಉಪಸ್ಥಿತರಿದ್ದರು.

ದಿನದ ಬಾಡಿಗೆ ₹ 6 ಲಕ್ಷ ನಿಗದಿಗೆ ಆಕ್ಷೇಪ; ರಿಯಾಯಿತಿ ನೀಡುವಂತೆ ಚಿತ್ರರಂಗದ ಆಗ್ರಹ

‘ಮೆಟ್ರೊ’ದಲ್ಲಿ ಶೂಟಿಂಗ್: ಕನ್ನಡ ಸಿನಿಮಾಕ್ಕೆ ದರ ಇಳಿಸಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ‘ನಮ್ಮ ಮೆಟ್ರೊ’ದಲ್ಲಿ ಸಿನಿಮಾ, ಧಾರಾವಾಹಿ ಶೂಟಿಂಗ್ ನಡೆಸಲು ಅವಕಾಶ ನೀಡಿರುವುದನ್ನು ಸಿನಿಮಾ ರಂಗ ಸ್ವಾಗತಿಸಿದೆ. ಆದರೆ, ದಿನಕ್ಕೆ ನಿಗದಿಪಡಿಸಿರುವ ₹ 6 ಲಕ್ಷ ಬಾಡಿಗೆ ಬಹಳ ದುಬಾರಿಯಾಗಿದ್ದು, ಕನ್ನಡ ಸಿನಿಮಾಗಳಿಗೆ ಹೆಚ್ಚು ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿದೆ.

ಮೆಟ್ರೊ ಸಂಚಾರ ಆರಂಭವಾದಾಗ ಶೂಟಿಂಗ್‌ಗೆ ಅವಕಾಶ ನೀಡಲಾಗಿತ್ತು. ‘ನಟಸಾರ್ವಭೌಮ’ ಸೇರಿದಂತೆ ಕೆಲವು ಸಿನಿಮಾಗಳಲ್ಲಿ ಮೆಟ್ರೊ ರೈಲಿನ ಒಳಾಂಗಣ ದೃಶ್ಯಗಳಿವೆ. ನಂತರದಲ್ಲಿ, ಭದ್ರತೆಯ ಕಾರಣಕ್ಕಾಗಿ ಶೂಟಿಂಗ್‌ಗೆ ಅನುಮತಿ ನೀಡುವುದನ್ನು ನಿಲ್ಲಿಸಲಾಗಿತ್ತು. ಐದು ವರ್ಷಗಳಿಂದ ಯಾವುದೇ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ನೀಡಿರಲಿಲ್ಲ. ಮೆಟ್ರೊ ನಿಲ್ದಾಣ ಮತ್ತು ಮೆಟ್ರೊ ರೈಲುಗಳಲ್ಲಿ ಹಾಡು, ಫೈಟಿಂಗ್ ಇನ್ನಿತರ ದೃಶ್ಯಗಳ ಚಿತ್ರೀಕರಣಕ್ಕೆ ಅವಕಾಶ ನೀಡಬೇಕು ಎಂದು ಚಿತ್ರರಂಗದವರು ಬೇಡಿಕೆ ಇಟ್ಟಿದ್ದರು.

ಇದಕ್ಕೆ ಸ್ಪಂದಿಸಿರುವ ಬಿಎಂಆರ್‌ಸಿಎಲ್ ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಲು ನಿರ್ಧರಿಸಿದೆ. ಚಿತ್ರಕಥೆಗೆ ಅನುಗುಣವಾಗಿ ಚಿತ್ರೀಕರಣ ಮಾಡಬೇಕು. ಮೆಟ್ರೊ ರೈಲು ಅಥವಾ ನಿಲ್ದಾಣಕ್ಕೆ ಹಾನಿಯಾಗದಂತೆ ಎಚ್ಚರ ವಹಿಸಬೇಕು. ದಟ್ಟಣೆ ಇಲ್ಲದ ಸಮಯದಲ್ಲಿ ಮಾತ್ರ ಶೂಟಿಂಗ್ ಮಾಡಬೇಕು. ಪ್ರಯಾಣಿಕರಿಗೆ ತೊಂದರೆ ನೀಡಬಾರದು ಮುಂತಾದ ನಿಬಂಧನೆಗಳನ್ನು ವಿಧಿಸಿದೆ.

ಮೆಟ್ರೊ ಆಸ್ತಿಗಳನ್ನು ರಕ್ಷಿಸುವುದಕ್ಕಾಗಿ ವಿಧಿಸಿರುವ ಷರತ್ತುಗಳನ್ನು ಚಿತ್ರರಂಗ ವಿರೋಧಿಸಿಲ್ಲ. ಆದರೆ, ನಿಗದಿಪಡಿಸಿರುವ ಶುಲ್ಕ ತುಂಬಾ ಹೆಚ್ಚಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ದಿನಕ್ಕೆ ₹ 6 ಲಕ್ಷದ ಬದಲು ₹ 1.5 ಲಕ್ಷದಿಂದ ₹ 2 ಲಕ್ಷದವರೆಗೆ ಬಾಡಿಗೆ ನಿಗದಿ ಮಾಡಬೇಕು ಎಂಬುದು ಚಿತ್ರರಂಗದವರ ಮನವಿಯಾಗಿದೆ. ಇಲ್ಲದಿದ್ದರೆ, ಈಗಿನ ಶುಲ್ಕದ ಪ್ರಕಾರ 30 ದಿನಗಳ ಕಾಲ ಮೆಟ್ರೊ ರೈಲಿನಲ್ಲಿ ಚಿತ್ರೀಕರಣ ನಡೆಸಿದರೆ ₹ 1.80 ಕೋಟಿ ಪಾವತಿಸಬೇಕಾಗುತ್ತದೆ. ಇದೇ ದೊಡ್ಡ ಹೊರೆಯಾಗಲಿದೆ ಎಂಬುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ.

ದೊಡ್ಡ ಬಜೆಟ್‌ನ ಚಿತ್ರಗಳಿಗೆ ಇದು ದೊಡ್ಡ ಮೊತ್ತ ಅಲ್ಲದೇ ಇರಬಹುದು. ಆದರೆ, ಸಣ್ಣ ಬಜೆಟ್‌ನಲ್ಲಿ ಚಿತ್ರ ನಿರ್ಮಿಸುವವರಿಗೆ ಆರ್ಥಿಕವಾಗಿ ಹೊರೆಯಾಗಲಿದೆ. ಕನ್ನಡ ನಾಡಿನಲ್ಲಿ ಸಂಚರಿಸುವ ಮೆಟ್ರೊ ರೈಲಿನಲ್ಲಿ ಕನ್ನಡ ಚಿತ್ರಗಳಿಗೆ ರಿಯಾಯಿತಿ ನೀಡಬೇಕು ಎಂಬುದು ನಿರ್ಮಾಪಕರ ಬೇಡಿಕೆಯಾಗಿದೆ.

ಲಾಭಕ್ಕಾಗಿ ಅಲ್ಲ, ಮೆಟ್ರೊ ಪ್ರಚಾರಕ್ಕಾಗಿ

ಬಿಎಂಆರ್‌ಸಿಎಲ್‌ಗೆ ಲಾಭಕ್ಕಾಗಿ ಶೂಟಿಂಗ್‌ಗೆ ಅವಕಾಶ ನೀಡಿದ್ದಲ್ಲ. ಚಲನಚಿತ್ರಗಳು, ಧಾರಾವಾಹಿಗಳಲ್ಲಿ ಮೆಟ್ರೊ ರೈಲುಗಳ ದೃಶ್ಯ ಕಂಡಾಗ ಜನರು ಮೆಟ್ರೊ ಕಡೆ ಹೆಚ್ಚು ಆಕರ್ಷಿತರಾಗುತ್ತಾರೆ. ಈ ಕಾರಣಕ್ಕೆ ಅವಕಾಶ ನೀಡಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದ್ದಾರೆ.

ಮೆಟ್ರೊ ಪ್ರಯಾಣಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಶೂಟಿಂಗ್ ಅವಧಿಯಲ್ಲಿ ಹೆಚ್ಚುವರಿ ಪೊಲೀಸರನ್ನು, ಗೃಹರಕ್ಷಕ ದಳದವರನ್ನು ನಿಯೋಜಿಸಬೇಕು. ಇವೆಲ್ಲವೂ ಖರ್ಚನ್ನು ಹೆಚ್ಚಿಸುತ್ತವೆ. ಇಂಥ ಖರ್ಚುಗಳೆನ್ನೆಲ್ಲ ಲೆಕ್ಕ ಹಾಕಿ ಶುಲ್ಕ ನಿಗದಿ ಮಾಡಲಾಗಿದೆ. ಅಲ್ಲದೇ ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿಯೇ ಶೇ 25ರಷ್ಟು ರಿಯಾಯಿತಿ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಚಿತ್ರರಂಗದವರು ಏನಂತಾರೆ?

ಮೆಟ್ರೊ ರೈಲಿನಲ್ಲಿ ಚಿತ್ರೀಕರಣಕ್ಕಾಗಿ ವಿಪರೀತ ಬಾಡಿಗೆ ವಿಧಿಸಿದರೆ ಸಣ್ಣ ಬಜೆಟ್ ಸಿನಿಮಾಗಳ ನಿರ್ಮಾಣ ಕಷ್ಟವಾಗುತ್ತದೆ. ಸಣ್ಣ ಸಿನಿಮಾಗಳೇ ಜನರಿಗೆ ಹೆಚ್ಚು ಉದ್ಯೋಗಗಳನ್ನು ನೀಡುತ್ತವೆ. ಹಾಗಾಗಿ, ಬಾಡಿಗೆ ಕಡಿಮೆ ವಿಧಿಸಿದರೆ, ಸಣ್ಣ ಸಿನಿಮಾಗಳು ಉಳಿಯುತ್ತದೆ, ನಿರ್ಮಾಪಕರಿಗೂ ಪ್ರಯೋಜನವಾಗಲಿದೆ.

ಎನ್.ಎಂ. ಸುರೇಶ್, ಅಧ್ಯಕ್ಷ, ಕರ್ನಾಟಕ ವಾಣಿಜ್ಯ ಮಂಡಳಿ

ಮೆಟ್ರೊದಲ್ಲಿ ಚಿತ್ರೀಕರಣಕ್ಕೆ ಅವಕಾಶ ನೀಡಿದ್ದು ಸ್ವಾಗತಾರ್ಹ. ಆದರೆ, ನಿಗದಿ ಮಾಡಿರುವ ದರದಲ್ಲಿ ಚಿತ್ರೀಕರಣ ಮಾಡುವುದು ಕಷ್ಟ. ಪ್ಲಾಟ್‌ಫಾರ್ಮ್‌ನಲ್ಲಷ್ಟೇ ಚಿತ್ರೀಕರಿಸಲು ದಿನಕ್ಕೆ ₹ 50 ಸಾವಿರದ ಒಳಗೆ ಶುಲ್ಕ ನಿಗದಿ ಮಾಡಬೇಕು. ಪ್ಲಾಟ್‌ಫಾರ್ಮ್ ಮತ್ತು ಮೆಟ್ರೊ ರೈಲು ಬಳಸಲು ನಿಗದಿಪಡಿಸುವ ಶುಲ್ಕ ಗರಿಷ್ಠ ₹ 2 ಲಕ್ಷ ದಾಟಬಾರದು. ಆಗ ಮಾತ್ರ ಬಿಎಂಆರ್‌ಸಿಎಲ್‌ನವರು ಚಿತ್ರೀಕರಣಕ್ಕೆ ನೀಡಿರುವ ಅವಕಾಶ ಸಮರ್ಪಕವಾಗಿ ಬಳಕೆಯಾಗಬಹುದು.

ಎ. ಮಂಜು, ಚಿತ್ರ ನಿರ್ಮಾಪಕ

ಈಗ ನಿಗದಿಪಡಿಸಿರುವ ಶುಲ್ಕ ಸಣ್ಣ ಬಜೆಟ್‌ನ ಚಿತ್ರಗಳಿಗೆ ದುಬಾರಿಯಾಗಿದೆ. ಆದರೆ, ಗ್ರಾಫಿಕ್ಸ್ ಮಾಡಿ ತೋರಿಸುವುದಕ್ಕಿಂತ ಅಥವಾ ಸೆಟ್ ಹಾಕಿ ಕೃತಕವಾಗಿ ಸೃಷ್ಟಿಸುವುದಕ್ಕಿಂತ ಕಡಿಮೆ ವೆಚ್ಚದಲ್ಲಿ ಮೆಟ್ರೊವನ್ನು ರಿಯಲ್ ಆಗಿ ತೋರಿಸಬಹುದು ಎಂಬುದು ಸಕಾರಾತ್ಮಕ ಅಂಶ. ಕನ್ನಡ ಚಿತ್ರಗಳಿಗೆ ಹೆಚ್ಚು ರಿಯಾಯಿತಿ ನೀಡಿದರೆ ಒಳ್ಳೆಯದು.

ಸಿಂಪಲ್ ಸುನಿ, ಚಿತ್ರ ನಿರ್ದೇಶಕ

‘ದಿವಾಕರ್ ಸಾಹಿತ್ಯದಲ್ಲಿ ಕಾಣುವ ಡಿವಿಜಿ’

‘ನಮ್ಮ ದಿವಾಕರ್’ ಕಾರ್ಯಕ್ರಮದಲ್ಲಿ ವಿಮರ್ಶಕಿ ಎಂ.ಎಸ್.ಆಶಾದೇವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿವಿಜಿಯವರು ಯಾವಾಗಲೂ ಸಾಹಿತ್ಯಕ್ಕೆ ಇರಬೇಕಾದ ಸಾಮಾಜಿಕ ಹೊಣೆಗಾರಿಕೆ ಮತ್ತು ರಾಜಕೀಯ ಉತ್ತರದಾಯಿತ್ವವನ್ನು ಎತ್ತಿ ಹಿಡಿದವರು. ದಿವಾಕರ್ ಅವರ ಪ್ರಬಂಧಗಳನ್ನು ಓದಿದರೆ, ಇವರು ಡಿವಿಜಿಯವರ ಮುಂದುವರಿಕೆ ಎಂಬಂತೆ ಕಾಣಿಸುತ್ತಾರೆ’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಅಭಿಪ್ರಾಯಪಟ್ಟರು.

ಕಥೆಗಾರ ಎಸ್.ದಿವಾಕರ್ ಅವರು 80ನೇ ವರ್ಷಕ್ಕೆ ಅಡಿಯಿಡುತ್ತಿರುವ ನೆನಪಿಗಾಗಿ ‘ಎಸ್. ದಿವಾಕರ್ ಸ್ನೇಹಿತರ ಬಳಗ’ ಭಾನುವಾರ ಆಯೋಜಿಸಿದ್ದ ‘ನಮ್ಮ ದಿವಾಕರ್’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕನ್ನಡ ಸಾಹಿತ್ಯ ಲೋಕ ದಿವಾಕರ್ ಅವರ ಕಥೆಗಳಿಗೆ ಸರಿಯಾದ ಮನ್ನಣೆ ನೀಡಿದೆ. ಕವಿತೆಗಳಿಗೆ ಅರ್ಧ ನ್ಯಾಯ ನೀಡಿದೆ ಮತ್ತು ಅವರ ಪ್ರಬಂಧಗಳಿಗೆ ಸಿಗಬೇಕಾದ ಪ್ರಾಮುಖ್ಯವನ್ನು ನೀಡಲಿಲ್ಲ. ಆದರೆ, ಇವರು ಪ್ರಬಂಧ ಪ್ರಕಾರವನ್ನು ಕನ್ನಡ ಸಾಹಿತ್ಯದ ಮುಖ್ಯ ಪ್ರಕಾರಗಳಲ್ಲಿ ಒಂದು ಎನ್ನುವ ಮಟ್ಟಕ್ಕೆ ಕೊಂಡೊಯ್ದ ಲೇಖಕ’ ಎಂದು ಅವರು ಅಭಿಪ್ರಾಯಪಟ್ಟರು.

ಎಸ್.ದಿವಾಕರ್–ಜಯಶ್ರೀ ದಂಪತಿಯನ್ನು ಗೌರವಿಸಲಾಯಿತು. ವಿವೇಕ ಶಾನಭಾಗ, ಎಂ.ಎಸ್.ಶ್ರೀರಾಮ್, ಪಂಡಿತ್ ಪರಮೇಶ್ವರ ಹೆಗಡೆ, ವೀರಕಪುತ್ರ ಶ್ರೀನಿವಾಸ್, ವಿಶಾಖ ಎನ್, ಸಚ್ಚಿದಾನಂದ ಹೆಗಡೆ, ಎಂ.ಎಸ್.ಆಶಾದೇವಿ, ರಘುನಾಥ ಚ.ಹ., ಪದ್ಮನಾಭ ಭಟ್, ಕೃಷ್ಣಮೂರ್ತಿ ಕರ್ಕಿ ಇದ್ದಾರೆ ಪ್ರಜಾವಾಣಿ ಚಿತ್ರ

ಕಥೆಗಾರ ವಿವೇಕ ಶಾನಭಾಗ, ‘ಕಾಲೇಜು ಓದಿನ ದಿನಗಳಲ್ಲೇ ಅಗಾಧ ಪಾಂಡಿತ್ಯ ಪಡೆದಿದ್ದ ದಿವಾಕರ್ ತಾವು ಬರೆದ ಎಲ್ಲಾ ಕೃತಿಗಳ ಮೂಲಕ ಅದನ್ನು ಹಿತವಾಗುವಂತೆ ಪ್ರಸ್ತುತಪಡಿಸಿದ್ದಾರೆ’ ಎಂದರು.

‘ಜಗತ್ತಿನ ಸಾಹಿತ್ಯದ ದೃಷ್ಟಿಯಿಂದ ಕನ್ನಡವನ್ನು ನೋಡುವುದು ಹೇಗೆ ಎಂದು ನನ್ನಂಥ ಅನೇಕರಿಗೆ ದಿವಾಕರ್ ಕಲಿಸಿಕೊಟ್ಟರು’ ಎಂದು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಎಸ್.ದಿವಾಕರ್–ಜಯಶ್ರೀ ದಂಪತಿಯನ್ನು ಅಭಿನಂದಿಸಲಾಯಿತು. ‘ಎಸ್ ದಿವಾಕರ್ ಸ್ನೇಹಿತರ ಬಳಗ’ ಸಂಪಾದಿಸಿ, ವೀರಲೋಕ ಪ್ರಕಾಶನ ಪ್ರಕಟಿಸಿರುವ ದಿವಾಕರ್ ಕುರಿತ ‘ಪರಿಮಳದ ಪಡಸಾಲೆ’ ವಿಶೇಷ ಸಂಚಿಕೆ ಬಿಡುಗಡೆ ಮಾಡಲಾಯಿತು.

ಪಂಡಿತ್ ಎಂ.ಪರಮೇಶ್ವರ ಹೆಗಡೆ ಅವರ ಪರಿಕಲ್ಪನೆ ಮತ್ತು ಸಂಯೋಜನೆಯಲ್ಲಿ ದಿವಾಕರ್ ರಚಿಸಿರುವ ಕವಿತೆಗಳಿಗೆ ರಾಗ ಸಂಯೋಜಿಸಿ ಭಾವಗೀತೆಗಳನ್ನು ಪ್ರಸ್ತುತಪಡಿಸಲಾಯಿತು. ಗಾಯಕರಾದ ಲಕ್ಷ್ಮೀ ನಾಗರಾಜ, ಕೀರ್ತನ್ ಹೊಳ್ಳ, ಸುನಿಧಿ ಗಣೇಶ್, ನಿಶಿತಾ ಪ್ರಸಾದ್, ಸಾನ್ವಿ ಶೆಟ್ಟಿ, ವೀಣಾ ರಮೇಶ್ ಗಾಯನ ಪ್ರಸ್ತುತಪಡಿಸಿದರು.

ಕಥೆಗಾರ ಎಂ.ಎಸ್.ಶ್ರೀರಾಮ್ ಸ್ವಾಗತಿಸಿದರು. ‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ ನಿರೂಪಿಸಿದರು.

ಮಾಹಿತಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಹಾಗೂ ಅಪಾಯಕಾರಿ ವಿದ್ಯುತ್ ಕಂಬಗಳು ತಮ್ಮ ಭಾಗದಲ್ಲಿ ಕಂಡುಬಂದರೆ ಬೆಸ್ಕಾಂ ಅಥವಾ ಪೊಲೀಸ್ ಸಹಾಯವಾಣಿಗೆ ಮಾಹಿತಿ ನೀಡುವಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಕೋರಿದ್ದಾರೆ.

ನಗರದಲ್ಲಿ ಭಾನುವಾರ ನಡೆದ ಮಾಸಿಕ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

ಜನಸಂಪರ್ಕ ಸಭೆಯಲ್ಲಿ ಸಿಟಿ ಮಾರುಕಟ್ಟೆ, ಬ್ಯಾಟರಾಯನಪುರ, ಪಾದರಾಯನಪುರ, ಚಿಕ್ಕಪೇಟೆ, ಕಲಾಸಿಪಾಳ್ಯ, ರಾಜರಾಜೇಶ್ವರಿನಗರ, ಚಂದ್ರಾಲೇಔಟ್, ಬಿನ್ನಿಪೇಟೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ವಾಹನ ಸಂಚಾರ ದಟ್ಟಣೆ ಸಮಸ್ಯೆ ಬಗ್ಗೆ ದೂರುಗಳು ಕೇಳಿ ಬಂದವು.

ದಟ್ಟಣೆ ಸಾಧ್ಯತೆ: ಪರ್ಯಾಯ ಮಾರ್ಗಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಯುಕ್ತ ಹೋರಾಟ ಸಮಿತಿ ಸೇರಿದಂತೆ ಹಲವು ಸಂಘಟನೆಗಳು, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನ.27 ಹಾಗೂ 28ರಂದು ‘ಮಹಾಧರಣಿ’ ಹಮ್ಮಿಕೊಂಡಿದ್ದು, ಈ ಭಾಗದಲ್ಲಿ ಎರಡು ದಿನ ಸಂಚಾರ ದಟ್ಟಣೆಯಾಗುವ ಸಾಧ್ಯತೆಯಿದೆ. ವಾಹನ ಸವಾರರು, ಪರ್ಯಾಯ ಮಾರ್ಗ ಬಳಸುವಂತೆ ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಕೆ.ಜಿ. ರಸ್ತೆ ಮೂಲಕ ಮೈಸೂರು ಬ್ಯಾಂಕ್ ವೃತ್ತದಿಂದ ಬಲಕ್ಕೆ ತಿರುವು ಪಡೆದು ಫ್ರೀಡಂ ಪಾರ್ಕ್ ಕಡೆಗೆ ಬರುವ ವಾಹನಗಳು ಪ್ಯಾಲೇಸ್ ಕ್ರಾಸ್ ರಸ್ತೆಯ ಮಹಾರಾಣಿ ಕೆಳಸೇತುವೆ ಬಳಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಫ್ರೀಡಂ ಪಾರ್ಕ್ ಜಂಕ್ಷನ್‌ನಿಂದ ಕನದಾಸ ವೃತ್ತದ ಕಡೆಗೆ ಬರುವ ಹಾಗೂ ಹೋಗುವ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಸುಬ್ಬಣ್ಣ ಜಂಕ್ಷನ್‌ನಿಂದ ಎಂಟಿಆರ್ ಜಂಕ್ಷನ್ ಕಡೆಗೆ ಬರುವ ರಸ್ತೆಯು ಹಾಲಿ ಏಕಮುಖ ಸಂಚಾರ ರಸ್ತೆಯಾಗಿದ್ದು ತಾತ್ಕಾಲಿಕವಾಗಿ ದ್ವಿಮುಖ ಸಂಚಾರ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ ಎಂದು ತಿಳಿಸಿದ್ದಾರೆ.

ಖೋಡೆ ಜಂಕ್ಷನ್‌ನಿಂದ ಮಹಾರಾಣಿ ಜಂಕ್ಷನ್‌ವರೆಗೆ, ವೈ.ರಾಮಚಂದ್ರ ರಸ್ತೆ, ಕಾಳಿದಾಸ ರಸ್ತೆ, ಪ್ಯಾಲೇಸ್ ರಸ್ತೆ, ಕೆಜಿ ರಸ್ತೆಗಳಲ್ಲಿ ಯಾವುದೇ ಮಾದರಿ ವಾಹನಗಳಿಗೆ ನಿಲುಗಡೆಗೆ ಅವಕಾಶ ಇರುವುದಿಲ್ಲ ಎಂದು ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಕೆಎಎಸ್ ಅಧಿಕಾರಿ ಹನುಮಂತರಾಯಪ್ಪ

ಹನುಮಂತ ರಾಯಪ್ಪ

ಹೆಸರಘಟ್ಟ: ಬೆಂಗಳೂರು ಉತ್ತರ ತಾಲ್ಲೂಕು ಗೋಪಾಲಪುರದ ಹನುಮಂತರಾಯಪ್ಪ (42) ನಿಧನರಾದರು.

ರಾಮನಗರ, ಯಡ್ರಾಮಿ, ನೆಲಮಂಗಲ, ಬೆಂಗಳೂರು ಉತ್ತರ, ವಿರಾಜಪೇಟೆ, ಕನಕಪುರ, ಆನೇಕಲ್‌ನಲ್ಲಿ ತಹಶೀಲ್ದಾರ್ ಆಗಿ ಅವರು ಕರ್ತವ್ಯ ನಿರ್ವಹಿಸಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಶನಿವಾರ ಮೃತಪಟ್ಟಿದ್ದಾರೆ. ಅವರಿಗೆ ಸಹೋದರ, ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ.

ಅಂತ್ಯಕ್ರಿಯೆ ಗೋಪಾಲಪುರದಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ 20 ಕೌಂಟರ್ ವ್ಯವಸ್ಥೆ

ಇಂದು ದಿನವಿಡೀ ಸಿಎಂ ಜನತಾದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಸೋಮವಾರ ಬೆಳಿಗ್ಗೆ 9.30ರಿಂದ ಇಡೀ ದಿನ 'ಜನತಾ ದರ್ಶನ' ನಡೆಸಲಿದ್ದಾರೆ.

ಅಹವಾಲು ಸಲ್ಲಿಸುವವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೃಷ್ಣಾ ಆವರಣದಲ್ಲಿ 20 ಕೌಂಟರ್ ವ್ಯವಸ್ಥೆ ಮಾಡಲಾಗಿದೆ. ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಎರಡು ಪ್ರತ್ಯೇಕ ಕೌಂಟರ್‌ಗಳು ಇರಲಿವೆ.

ಜನರಿಂದ ಸ್ವೀಕರಿಸಿದ ಅಹವಾಲುಗಳನ್ನು ಇಲಾಖಾವಾರು ವಿಂಗಡಿಸಿ, ತಂತ್ರಾಂಶದಲ್ಲಿ ದಾಖಲಿಸಿ ಅರ್ಜಿದಾರರಿಗೆ ಸ್ವೀಕೃತಿ ನೀಡಲಾಗುತ್ತದೆ. ಬಳಿಕ, ಜನರ ಅಹವಾಲನ್ನು ನೇರವಾಗಿ ಆಲಿಸಲಿರುವ ಸಿದ್ದರಾಮಯ್ಯ, ಪರಿಹಾರವನ್ನು ಸೂಚಿಸುವರು ಎಂದು ಮುಖ್ಯಮಂತ್ರಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಎಲ್ಲ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಆಯುಕ್ತರು ಖುದ್ದು ಹಾಜರಿರುವಂತೆ ಸೂಚಿಸಲಾಗಿದೆ. ಸುಮಾರು 100 ಅಧಿಕಾರಿಗಳು ಸ್ಥಳದಲ್ಲೇ ಇದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸುವ ಯತ್ನ ಮಾಡಲಿದ್ದಾರೆ ಎಂದೂ ಪ್ರಕಟಣೆ ಹೇಳಿದೆ.

ಅಹವಾಲು ಸಲ್ಲಿಸುವವರು ತಮ್ಮ ಗುರುತಿಗಾಗಿ ಆಧಾರ್ ಸಂಖ್ಯೆ ಅಥವಾ ಪಡಿತರ ಚೀಟಿಯನ್ನು ತರುವಂತೆ ಕೋರಲಾಗಿದೆ. ಇದರಿಂದ, ತಂತ್ರಾಂಶದಲ್ಲಿ ದಾಖಲಿಸುವ ಅರ್ಜಿಗಳ ಸ್ಥಿತಿಗತಿಯನ್ನು ಪತ್ತೆಹಚ್ಚಲು ಅನುಕೂಲವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಹಡ್ಸನ್ ವೃತ್ತದಲ್ಲಿ ತ್ಯಾಜ್ಯ ತುಂಬಿಕೊಂಡು ನಿಂತಿರುವ ಬಿಬಿಎಂಪಿ ವಾಹನಗಳು.

‘ತ್ಯಾಜ್ಯ ತುಂಬಿರುವ ವಾಹನಗಳನ್ನು ತೆರವುಗೊಳಿಸಿ’

ಹಡ್ಸನ್ ವೃತ್ತದಲ್ಲಿರುವ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮುಂಭಾಗದಲ್ಲಿ ಪ್ರತಿನಿತ್ಯ ಬಿಬಿಎಂಪಿ 13 ವಾಹನಗಳು ತ್ಯಾಜ್ಯ ತುಂಬಿಕೊಂಡು ನಿಲ್ಲಿಸಲಾಗುತ್ತಿದೆ. ಈ ಭಾಗದಲ್ಲಿ ಅನೇಕ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಬ್ಯಾಂಕಿಗೆ ಭೇಟಿ ನೀಡುವ ಗ್ರಾಹಕರು ಮತ್ತು ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿರುವ ಅಂಗಡಿಯ ಮಾಲೀಕರು ಮತ್ತು ಸ್ಥಳೀಯ ನಿವಾಸಿಗಳು ಇದನ್ನು ಕಸ ಹಾಕುವ ಸ್ಥಳವನ್ನಾಗಿ ಮಾಡಿಕೊಂಡಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಬಿಬಿಎಂಪಿ ಕೂಡಲೇ ಇಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಿ, ನಗರದ ಸ್ವಚ್ಛತೆ ಕಾಪಾಡಬೇಕು.

ಬಾಲಕೃಷ್ಣ ಎ., ಸ್ಥಳೀಯ ನಿವಾಸಿ

‘ಬನಶಂಕರಿ: ಅರಳಿಕಟ್ಟೆ ಸ್ವಚ್ಛಗೊಳಿಸಿ’

ಬನಶಂಕರಿ ದೇವಸ್ಥಾನದ ಬಳಿ ಇರುವ ಅರಳಿ ಕಟ್ಟೆಯ ಮೇಲೆ ಹಳೆಯ ಗೋಣಿ ಚೀಲಗಳು, ತ್ಯಾಜ್ಯವನ್ನು ಹಾಕಲಾಗುತ್ತಿದೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಈ ಕಟ್ಟೆ ತರಕಾರಿ ಮಾರಾಟಗಾರರ ತಾಣವಾಗಿ ಮಾರ್ಪಟ್ಟಿದೆ. ಅರಳಿಕಟ್ಟೆಯಲ್ಲಿ ನಾಗದೇವರ ಮೂರ್ತಿಗಳಿದ್ದು, ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿನಿತ್ಯ ಈ ಸ್ಥಳವನ್ನು ಗಮನಿಸುತ್ತಾರೆ. ಆದರೆ, ಇದನ್ನು ಸ್ವಚ್ಛಗೊಳಿಸುತ್ತಿಲ್ಲ. ಅರಳಿಕಟ್ಟೆಯಲ್ಲಿ ತುಂಬಿರುವ ವಸ್ತುಗಳು ಮತ್ತು ತ್ಯಾಜ್ಯವನ್ನು ಕೂಡಲೇ ವಿಲೇವಾರಿ ಮಾಡಬೇಕು. ಭಕ್ತಿಯ ತಾಣವನ್ನಾಗಿ ಮಾಡಬೇಕು.

ಪಿ. ಎನ್. ಎಂ. ಗುಪ್ತ, ಸ್ಥಳೀಯ ನಿವಾಸಿ

ಬನಶಂಕರಿ ದೇವಸ್ಥಾನ ಬಳಿ ಇರುವ ಅರಳಿಕಟ್ಟೆ

ವರದಿ ಪರಿಣಾಮ

ಸುರಕ್ಷತಾ ಕ್ರಮ

ಬನಶಂಕರಿ 6ನೇ ಹಂತದಲ್ಲಿರುವ 4ನೇ ಟಿ ಬ್ಲಾಕ್‌ನ ಬಿಡಿಎ ಬಡಾವಣೆಯಲ್ಲಿ ವಾಲಿದ ವಿದ್ಯುತ್ ಕಂಬವನ್ನು ಸರಿಪಡಿಸಲಾಗಿದೆ.

‘ಪ್ರಜಾವಾಣಿ’ ಕುಂದು ಕೊರತೆ ವಿಭಾಗದಲ್ಲಿ ಇದೇ 20ರಂದು ‘ವಾಲಿದ ವಿದ್ಯುತ್ ಕಂಬ’ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದಾರೆ.

‘ರಸ್ತೆ ದುರಸ್ತಿಗೊಳಿಸಿ’

ಯಶವಂತಪುರದ ಪೈಪ್‌ಲೈನ್ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು

ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ರಾಘವೇಂದ್ರ ಬಡಾವಣೆಯ ಪೈಪ್‌ಲೈನ್ ರಸ್ತೆ ಸಂಪೂರ್ಣ ಹಾಳಾಗಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತಿವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇಲ್ಲಿನ ದೂಳು ಆರೋಗ್ಯವನ್ನು ಹಾಳು ಮಾಡುತ್ತಿದೆ. ಈ ಭಾಗದಲ್ಲಿ ಶಾಲೆಗಳಿರುವುದರಿಂದ ರಸ್ತೆಯ ದೂಳು ಮಕ್ಕಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಗುಂಡಿಗಳಿರುವುದರಿಂದ ಸಂಚಾರ ದಟ್ಟಣೆಯಾಗುತ್ತಿದ್ದು, ಸಾರ್ವಜನಿಕರ ಸಂಚಾರಕ್ಕೆ ಅನಾನುಕೂಲವಾಗಿದೆ. ಇತ್ತೀಚೆಗೆ ಪೋಷಕರೊಬ್ಬರು ತಮ್ಮ ಮಗುವನ್ನು ಶಾಲೆಗೆ ಬಿಟ್ಟು ಬರಲು ಹೋದಾಗ ಈ ರಸ್ತೆಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಹೆಚ್ಚು ಅನಾಹುತ ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸಿ.

ಆನಂದ ಕುಮಾರ ಕೆ.ಎಲ್., ಸ್ಥಳೀಯ ನಿವಾಸಿ

ಕೆಂಪಾಪುರ ಕುವೆಂಪು ರಸ್ತೆಯ ಪಾದಚಾರಿ ಮಾರ್ಗದ ದುಃಸ್ಥಿತಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ಹೆಬ್ಬಾಳದ ಕೆಂಪಾಪುರ ಕುವೆಂಪು ರಸ್ತೆಯ ಸಿಂಧಿ ಶಾಲೆಯ ಮುಂಭಾಗದ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಚಪ್ಪಡಿ ಕಲ್ಲುಗಳು ಹಾಳಾಗಿದ್ದು, ಪಾದಚಾರಿಗಳು ಮುಖ್ಯರಸ್ತೆಯಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದಾಗ ಚರಂಡಿಯ ನೀರು ರಸ್ತೆಯ ಮೇಲೆಯೇ ಹರಿಯುತ್ತದೆ. ಇಂಥ ಸಮಯದಲ್ಲಿ ಇಲ್ಲಿ ನಡೆದಾಡುವವರು ಕಂದಕ ನೋಡದೇ ಬಿದ್ದು ಗಾಯಗೊಳ್ಳುವ ಅಪಾಯವಿದೆ. ಈ ಬಗ್ಗೆ ಸ್ಥಳೀಯರು ಬಿಬಿಎಂಪಿಗೆ ಹಲವಾರು ಬಾರಿ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸುವಂತೆ ಮನವಿ ಮಾಡಿದ್ದರೂ ಪ್ರಯೋಜನವಾಗುತ್ತಿಲ್ಲ.

ಶಿವಪ್ರಸಾದ್, ಪಾದಚಾರಿ,

‘ರಸ್ತೆ ಗುಂಡಿ ಮುಚ್ಚಿ’

ಹರಳೂರಿನ ರಾಯಲ್ ಪ್ಲಾಸಿಡ್ 3ನೇ ಹಂತದ 4ನೇ ಅಡ್ಡರಸ್ತೆಯಲ್ಲಿ ಜಿಯೊ ಕಂಪನಿಯ ಸಿಬ್ಬಂದಿ ಬ್ರಾಡ್ ಬ್ಯಾಂಡ್ ಕೇಬಲ್ ಅಳವಡಿಸಲು ರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿದ್ದಾರೆ. ಈ ರಸ್ತೆಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿ ಮುಗಿದ ನಂತರ ಗುಂಡಿ ಮುಚ್ಚುವ ಕೆಲಸ ಮಾಡಿಲ್ಲ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳಿಂದ ವಾಹನ ಸಂಚಾರವೇ ದುಸ್ತರವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಏನು ಪ್ರಯೋಜನವಾಗಲಿಲ್ಲ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಹರಳೂರಿನ ರಾಯಲ್ ಪ್ಲಾಸಿಡ್‌ನ ರಸ್ತೆಯಲ್ಲಿ ಬಿದ್ದಿರುವ ಗುಂಡಿ

ನಾಗೇಶ್ ಕೆ. ಎಸ್., ಸ್ಥಳೀಯ ನಿವಾಸಿ

‘ಮೆಟ್ರೊ ನಿಲ್ದಾಣ: ಆಸನ ವ್ಯವಸ್ಥೆ ಹೆಚ್ಚಿಸಿ’

ಮೆಜೆಸ್ಟಿಕ್‌ನಲ್ಲಿರುವ ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಆಸನ ವ್ಯವಸ್ಥೆ ಕಡಿಮೆ ಇದ್ದು, ಇದರಿಂದ, ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ. ನಿಲ್ದಾಣದಲ್ಲಿರುವ ಮೆಟ್ಟಿಲುಗಳನ್ನು ಹತ್ತಿ ಇಳಿದು ಬರುವ ವೃದ್ಧರು, ಅಂಗವಿಕಲರು, ಗರ್ಭಿಣಿಯರು ಕುಳಿತುಕೊಳಲು ಆಸನ ವ್ಯವಸ್ಥೆ ಕಡಿಮೆ ಇದೆ. ಆದ್ದರಿಂದ, ಹೆಚ್ಚು ಆಯಾಸವಾಗುತ್ತಿದ್ದು, ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆಯನ್ನು ಹೆಚ್ಚಿಸಬೇಕು.

ಬಸವರಾಜ ಹುಡೇದಗಡ್ಡಿ, ಮೆಟ್ರೊ ಪ್ರಯಾಣಿಕ

ಪರೀಕ್ಷಾ ಆತಂಕ ಪರಿಹಾರವೇನು?

ಡಾ. ವಿರೂಪಾಕ್ಷ ದೇವರಮನಿ

ಬದಲಾದ ಸಾಮಾಜಿಕ ಪರಿಸ್ಥಿತಿಗಳಿಂದ ಹಾಗೂ ಹೆಚ್ಚಿದ ಸಾಮಾಜಿಕ ಒತ್ತಡದಿಂದ 'ಪರೀಕ್ಷಾ ಆತಂಕ' ಹಿಂದೆಂದೂ ಕಾಣದಷ್ಟು ಪ್ರಾಮುಖ್ಯ ಪಡೆಯುತ್ತಿದೆ. ಒಂಬತ್ತನೆಯ ತರಗತಿಯವರೆಗೆ ವಿದ್ಯಾರ್ಥಿಗಳು ನಪಾಸಾಗುವಂತಿಲ್ಲ ಎನ್ನುವ ಸತ್ಯ ಗೊತ್ತಿದ್ದರೂ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಆತಂಕವೇನೂ ಕಡಿಮೆ ಆಗಿಲ್ಲ. ಬದಲಾಗಿ ಎಲ್‌ಕೆಜಿ, ಯುಕೆಜಿಯಲ್ಲಿ ಕಲಿಯುತ್ತಿರುವ ಮಕ್ಕಳೂ ಪರೀಕ್ಷೆಯೆಂದರೆ ಭಯಪಡುವ ಸಂದರ್ಭಗಳನ್ನು ಕಾಣುತ್ತಿದ್ದೇವೆ.

ಪರೀಕ್ಷೆಗಳು ಹತ್ತಿರವಾಗುತ್ತಲೇ ಮಕ್ಕಳಿಗಿಂತಲೂ ಹೆತ್ತವರು ಹೆಚ್ಚು ಆತಂಕಿತರಾಗಿ ಮಕ್ಕಳನ್ನು ಪರೀಕ್ಷೆಗೆ ಅಣಿಗೊಳಿಸಲು ಪ್ರಾರಂಭಿಸುತ್ತಾರೆ. ಶಾಲೆಯಲ್ಲಿ ಶಿಕ್ಷಕರದ್ದು ಅದೇ ಧಾಟಿ. 'ಪರೀಕ್ಷೆ ಹತ್ತಿರ ಬಂತು, ಈ ಬಾರಿ ಪಬ್ಲಿಕ್ ಪರೀಕ್ಷೆ. ಗಂಭೀರವಾಗಿ ತೆಗೆದುಕೊಳ್ಳಿ' ಎನ್ನುವ ಸಲಹೆ. ನಮಗೆ ತಿಳಿದೋ ತಿಳಿದೆಯೋ ಪರೀಕ್ಷೆ ಬಂತು ಪರೀಕ್ಷೆ ಬಂತು ಎನ್ನುವ ಧ್ವನಿ 'ಭೂತ ಬಂತು ಭೂತ ಬಂತು' ಎನ್ನುವ ಹಾಗೆ ಧ್ವನಿಸುತ್ತದೆ. ಅದು ನಮ್ಮ ಅರಿವಿಗೆ ಬರುವುದಿಲ್ಲ.

ಹಾಗಿದ್ದರೆ ಪರೀಕ್ಷೆಗಳ ಬಗ್ಗೆ ಭಯ ಬೇಡವೇ? ಸ್ವಲ್ಪವೂ ಭಯವಿರದಿದ್ದರೆ ಮಕ್ಕಳು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎನ್ನುವಿರಾ? ನಿಜ. ಸಣ್ಣ ಪ್ರಮಾಣದ, ಆರೋಗ್ಯಕರ ಭಯ ವ್ಯಕ್ತಿಯ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಆದರೆ ಅದು ಅತಿಯಾಗದಂತೆ ನೋಡಿಕೊಳ್ಳಬೇಕು. ದುರದೃಷ್ಟವೆಂದರೆ ಚೆನ್ನಾಗಿ ಓದುವ ವಿದ್ಯಾರ್ಥಿಗಳು ಹಾಗೂ ಉತ್ತಮ ಅಂಕಗಳನ್ನೇ ಪಡೆದುಕೊಂಡ ವಿದ್ಯಾರ್ಥಿಗಳೂ ಹೆಚ್ಚಿನ ಪ್ರಮಾಣದಲ್ಲಿ ಆತಂಕ ಅನುಭವಿಸುವುದೂ ಕಂಡುಬರುತ್ತದೆ.

> ಆರೋಗ್ಯಕರ ಭಯ ವಿದ್ಯಾರ್ಥಿಗಳ ಏಕಾಗ್ರತೆ ಹಾಗೂ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಆದರೆ, ಅದು ಅತಿಯಾಗದಂತೆ ನೋಡಿಕೊಳ್ಳಬೇಕು. ದುರದೃಷ್ಟವೆಂದರೆ ಚೆನ್ನಾಗಿ ಓದುವ ವಿದ್ಯಾರ್ಥಿಗಳು ಹಾಗೂ ಉತ್ತಮ ಅಂಕಗಳನ್ನೇ ಪಡೆದುಕೊಂಡ ವಿದ್ಯಾರ್ಥಿಗಳೂ ಹೆಚ್ಚಿನ ಪ್ರಮಾಣದಲ್ಲಿ ಆತಂಕ ಅನುಭವಿಸುವುದೂ ಕಂಡುಬರುತ್ತದೆ.

ಪರೀಕ್ಷಾ ಆತಂಕದ ಲಕ್ಷಣಗಳು

1) ಭಾವನಾತ್ಮಕ ಲಕ್ಷಣಗಳು

ಪರೀಕ್ಷೆಗಳು ಹತ್ತಿರವಾಗುತ್ತಿದ್ದಂತೆ ಮಕ್ಕಳಲ್ಲಿ ಹಿಂದಿನ ಪರೀಕ್ಷೆಗಳ ಕಹಿ ಅನುಭವಗಳ ನೆನಪು, ಮತ್ತೆ ಫೇಲಾದರೆ ಎನ್ನುವ ಭಯ, ಅಸಹಾಯಕತೆ, ಏನೂ ಹೊಳೆಯದಂತಹ ಸ್ಥಿತಿ, ಋಣಾತ್ಮಕ ಆಲೋಚನೆಗಳು ಕಾಡತೊಡಗುತ್ತವೆ. ತಮ್ಮನ್ನೇ ಹಳಿದುಕೊಳ್ಳುವುದು, ಮುಜುಗರ ಅನುಭವಿಸುವುದು, ಅಕಾರಣ ಸಿಟ್ಟು, ಆತಂಕ ಕಂಡುಬರುವುದು.

2) ದೈಹಿಕ ಲಕ್ಷಣಗಳು

- ವಾಕರಿಕೆ, ತಲೆಸುತ್ತು
- ಉಸಿರಾಡಲು ಕಷ್ಟವಾಗುವುದು.
- ತಲೆನೋವು
- ಹಸಿವಿಲ್ಲದಿರುವುದು
- ನಿದ್ರಾಹೀನತೆ
- ಎದೆಬಡಿತ ಜೋರಾಗುವುದು

ಶಿಕ್ಷಕರಿಗೆ ಸಲಹೆಗಳು

- ಪರೀಕ್ಷೆ ಬಂತು ಓದಿ ಎಂದು ಒತ್ತಾಯ ಮಾಡುವ ಜತೆಗೆ ಹೇಗೆ ಓದಬೇಕು ಎಂದು ತಿಳಿಸಿಕೊಡಿ.
- ಪರೀಕ್ಷೆಯಲ್ಲಿ ಉತ್ತರ ಬರೆಯುವುದು ಕಲೆ. ಆ ಕಲೆಯನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಡಿ.
- ಸಮಯ ನಿರ್ವಹಣೆ ಕಲಿಸಿಕೊಡಿ.
- ಆತ್ಮವಿಶ್ವಾಸವನ್ನು ಹೆಚ್ಚಿಸಿ.
- ಪರೀಕ್ಷಾ ತಯಾರಿಯ ವೇಳಾಪಟ್ಟಿ ತಯಾರಿಸಲು ಸಹಾಯ ಮಾಡಿ.
- ಯೋಗ - ಪ್ರಾಣಾಯಾಮ ಕಲಿಸಿಕೊಡಿ.
- 'ನೀನು ಒಳ್ಳೆಯ ವಿದ್ಯಾರ್ಥಿ, ನಿಮ್ಮಿಂದ ಶಾಲೆಗೆ ರ‍್ಯಾಂಕ್ ಬಂದೇ ಬರುತ್ತದೆ ಎಂದು ನಮ್ಮ ನಿರೀಕ್ಷೆ' ಎನ್ನುವಂತಹ ಮಾತುಗಳು ಬೇಡ.
- 'ನೀನು ಫೇಲಾದರೆ ಶಾಲೆಯ ಪರ್ಸಂಟೇಜ್ ಹಾಳಾಗುತ್ತದೆ' ಎನ್ನುವಂಥ ಮಾತುಗಳಂತೂ ಖಂಡಿತ ಬೇಡ.

ಪೋಷಕರಿಗೆ ಸಲಹೆಗಳು

- ಪರೀಕ್ಷಾ ಮುನ್ನ ತಯಾರಿಯಲ್ಲಿ ಜೊತೆಗಿರಿ.
- ಪರೀಕ್ಷಾ ತಯಾರಿಯ ವೇಳಾಪಟ್ಟಿ ತಯಾರಿಸಿ, ಹಾಗೆ ಓದಲು ತಿಳಿಸಿ.
- ಓದಿನ ಮಧ್ಯೆ ಸಣ್ಣ ವಿರಾಮಗಳನ್ನು ನೀಡಿ.
- ಈ ಸರಿ ಫೇಲಾದರೆ?, ಕಡಿಮೆ ಅಂಕ ಬಂದರೆ? ಎನ್ನುವ ಮಾತುಗಳು ಬೇಡ.
- ಫಲಿತಾಂಶದ ನಿರ್ಧರಿತ ಕಾಲೇಜಿನ ಆಯ್ಕೆ - ಕೋರ್ಸಿನ ಆಯ್ಕೆ ಕುರಿತು ಹೇಳಿ ಭಯಪಡಿಸುವುದು ಬೇಡ.

ಕಡಿಮೆ ಮಾಡುವುದು ಹೇಗೆ?

ಪರೀಕ್ಷೆ ಕುರಿತಾಗಿ ಶಾಲೆಯಲ್ಲಿ, ಮನೆಯಲ್ಲಿ ಕೆಲವು ವಿಚಾರಗಳನ್ನು ತಿಳಿಸಬೇಕು. 'ನಾನು ವಿದ್ಯಾರ್ಥಿ, ನನ್ನ ಕರ್ತವ್ಯದಂತೆ ಶಾಲೆಗೆ ಹೋಗಿದ್ದೇನೆ. ಪಾಠಗಳನ್ನು ಕೇಳಿಸಿಕೊಂಡಿದ್ದೇನೆ. ನೋಟ್ಸ್ ಬರೆದುಕೊಂಡಿದ್ದೇನೆ. ಇನ್ನು ನನ್ನ ಮುಂದೆ ಇರುವುದು ಪರೀಕ್ಷೆಗೆ ಉಳಿದಿರುವ ದಿನಗಳನ್ನು ವಿಭಜಿಸಿ, ಓದಿದ್ದನ್ನು ಪುನರ್ ಮನನ ಮಾಡಿಕೊಂಡು ಪರೀಕ್ಷೆ ಬರೆಯುವುದು ಮಾತ್ರ. ನನ್ನ ನಿಯಂತ್ರಣದಲ್ಲಿರುವ ಕರ್ತವ್ಯವನ್ನು ನಾನು ಚೆನ್ನಾಗಿಯೇ ಮಾಡುವೆ. ನನ್ನ ಮಿತಿಯಲ್ಲಿರದ ವಿಚಾರಗಳ ಬಗ್ಗೆ ನಾನು ಚಿಂತಿಸುವುದಿಲ್ಲ. ನನ್ನ ಮಿತಿಯಲ್ಲಿರದ ವಿಚಾರಗಳೆಂದರೆ, ಪ್ರಶ್ನೆಪತ್ರಿಕೆ ಹೇಗಿರುತ್ತದೆ? ಮೌಲ್ಯಮಾಪನ ಹೇಗಿರುತ್ತದೆ? ನಾನು ಓದಿದ ವಿಷಯಗಳೇ ಪರೀಕ್ಷೆಗೆ ಬರುತ್ತದೋ ಇಲ್ಲವೋ, ನನಗೆ ಸಮಯ ಸಾಲದಿದ್ದರೆ? ಓದಿದ್ದು ಮರೆತು ಹೋದರೆ? ಅಂಕಗಳು ಕಡಿಮೆ ಬಂದರೆ? ನಾನು ಫೇಲಾದರೆ' ಇಂಥ ಪ್ರಶ್ನೆಗಳನ್ನು ಗುರುತಿಸಿ ಆ ವಿಚಾರಗಳನ್ನು ಅಲಕ್ಷಿಸುವುದನ್ನು ಹೇಳಿಕೊಡಬೇಕು. ನಮ್ಮ ಗಮನ ಶೇ 100ರಷ್ಟು ಕಾರ್ಯಕ್ಷಮತೆಯ ಕಡೆ ಇರಬೇಕೇ ವಿನಃ ಶೇ 100ರಷ್ಟು ಅಂಕಗಳಲ್ಲ ಎಂದು ತಿಳಿಸಿಕೊಡಬೇಕು.

- ಪರೀಕ್ಷಾ ಆತಂಕ ಇರುವ ಮಕ್ಕಳನ್ನು ಗುರುತಿಸಿ ಈ ವಿಚಾರಗಳನ್ನು ತಿಳಿಸಬೇಕು.
- ಅಣುಕು ಪರೀಕ್ಷೆಗಳನ್ನು ನಡೆಸಿ ಅವರಲ್ಲಿನ ಕಾರ್ಯಕ್ಷಮತೆಯನ್ನು ಗುರುತಿಸಿ ಧೈರ್ಯ ತುಂಬಬೇಕು.
- ದೀರ್ಘ ಉಸಿರಾಟದ ಕ್ರಮಗಳನ್ನು ಕಲಿಸಿಕೊಡಬೇಕು.
- ಫೇಲಾಗುವ ಆತಂಕವಿದ್ದರೆ ಪದ್ಯದ ಇಡೀ ಓದಿನ ಬದಲು ಆಯ್ದ ಭಾಗಗಳನ್ನು ಸರಿಯಾಗಿ ಓದಲು ತಿಳಿಸಬೇಕು.

ಅತಿ ಆತಂಕ ಗುರುತಿಸುವುದು ಹೇಗೆ?

- ಪೋಷಕರು - ಶಿಕ್ಷಕರು ಅದೆಷ್ಟೇ ಸಮಾಧಾನ ಮಾಡಿದರೂ ಮಗು ಅತಿಯಾಗಿ ಭಯಪಡುವುದು, ಶಾಲೆ, ಪರೀಕ್ಷೆಗಳನ್ನು ತಪ್ಪಿಸುವುದು.
- ವೈದ್ಯರು ತಪಾಸಣೆ ಮಾಡಿಯೂ ಯಾವುದೇ ನಿಗದಿತ ಕಾಯಿಲೆಯಿರದಿದ್ದರೂ ನಿಲ್ಲದ ದೈಹಿಕಲಕ್ಷಣಗಳಾದ ವಾಂತಿ, ವಾಕರಿಕೆ, ನಿದ್ರಾಹೀನತೆ, ತಲೆನೋವು ಇತ್ಯಾದಿ.
- ಸದಾ ಆತಂಕಿತರಾಗಿರುವುದು, ಕಣ್ಣೀರಿಡುವುದು, ಓದಲು ನಿರಾಕರಿಸುವುದು.
- ತನ್ನನ್ನೇ ಹಳಿದುಕೊಳ್ಳುವುದು, ಬದುಕಿರುವುದು ವ್ಯರ್ಥವೆನ್ನುವಂತಹ ಮಾತುಗಳನ್ನಾಡುವುದು.
- ಅಪರಾಧಿ ಮನೋಭಾವ ಹೊಂದಿರುವುದು, ತಾನು ಒಳ್ಳೆಯ ವಿದ್ಯಾರ್ಥಿಯಲ್ಲ, ಒಳ್ಳೆಯ ಮಗ/ಮಗಳಲ್ಲ ಎನ್ನುವ ಭಾವನೆಗಳನ್ನು ಹೊಂದಿರುವುದು .

National Crime Records Bureau (NCRB) 2017-2021ರ ವರದಿಯ ಪ್ರಕಾರ ವಿದ್ಯಾರ್ಥಿಗಳ ಆತ್ಮಹತ್ಯೆಗಳ ಪ್ರಕರಣಗಳು ಶೇ 21.79ರಷ್ಟು ಹೆಚ್ಚಿವೆ. ಇದು ಆತಂಕದಾಯಕ ವಿಷಯ. ಒತ್ತಡಮಯ ಶೈಕ್ಷಣಿಕ ಬದುಕಿನ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಶಿಕ್ಷಕರು ಮುಂದಾದರೆ, ಹೆತ್ತವರು ಮಕ್ಕಳಿಗೆ ಅನವಶ್ಯಕ ಒತ್ತಡ ಹೇರದೆ, ಇತರರೊಂದಿಗೆ ಹೋಲಿಕೆ ಮಾಡದೆ ಪರೀಕ್ಷೆಯ ದಿನಗಳಲ್ಲಿ ಜತೆಗಿದ್ದರೆ ಈ ಆತ್ಮಹತ್ಯೆಗಳನ್ನು ಕಡಿಮೆಗೊಳಿಸಲು ಪ್ರಯತ್ನಿಸಬಹುದು.



ಪೊಲೀಸ್ ಆಗಲು ತಯಾರಿ ಏನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ಸರ್, ಡಿಪ್ಲೊಮಾ (ಪತ್ರಿಕೋದ್ಯಮ) ಮತ್ತು ಬಿ.ಎಸ್‌ಡಬ್ಲ್ಯು ಪದವಿ ಗಳಿಸಿದವರಿಗೆ ಮುಂದಿನ ಅವಕಾಶಗಳೇನು?

ಹೆಸರು, ಊರು ತಿಳಿಸಿಲ್ಲ.

ಪತ್ರಿಕೋದ್ಯಮ ಡಿಪ್ಲೊಮಾ ನಂತರ, ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ವೃತ್ತಿ ಸಂಬಂಧಿತ ಕೌಶಲಗಳಾದ ಸಂವಹನ (ಓದುವಿಕೆ, ಬರವಣಿಗೆ, ಮಾತುಗಾರಿಕೆ, ನಿರೂಪಣೆ ಇತ್ಯಾದಿ), ಭಾಷಾ ಪರಿಣತಿ, ವಿಶ್ಲೇಷಾತ್ಮಕ ಕೌಶಲ, ದಿಟ್ಟತನ, ಸಮಯದ ನಿರ್ವಹಣೆ ಇತ್ಯಾದಿಗಳನ್ನೂ ಬೆಳೆಸಿಕೊಳ್ಳಬೇಕು. ವಿಸ್ತಾರವಾದ ಈ ಕ್ಷೇತ್ರದಲ್ಲಿ ಮುದ್ರಣ ಮಾಧ್ಯಮ (ದಿನಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿ), ಟೆಲಿವಿಷನ್, ರೇಡಿಯೊ, ಸಾಮಾಜಿಕ ಮಾಧ್ಯಮ, ವೆಬ್‌ಸೈಟ್ಸ್, ಬ್ಲಾಗ್ಸ್, ವಿಡಿಯೊ, ಪಾಡ್‌ಕಾಸ್ಟ್ ಇತ್ಯಾದಿ ವಲಯಗಳಲ್ಲಿದ್ದು, ಅಭಿರುಚಿಯಂತೆ ಆಯ್ಕೆ ಮಾಡಿಕೊಳ್ಳಬಹುದು.

ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಮಾನವ ಸಂಪನ್ಮೂಲದ ನಿರ್ವಹಣೆ ಹೆಚ್ಚಿನ ಪ್ರಾಮುಖ್ಯ ಪಡೆದಿದೆ. ಹಾಗಾಗಿ, ಬಿ.ಎಸ್‌ಡಬ್ಲ್ಯು ಪದವೀಧರರಿಗೆ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಮಾನವ ಸಂಪನ್ಮೂಲದ ಅಭಿವೃದ್ಧಿ ಮತ್ತು ನಿರ್ವಹಣೆ, ಕಾರ್ಮಿಕ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ, ಸಮುದಾಯದ ಅಭಿವೃದ್ಧಿ ಇತ್ಯಾದಿ ವಲಯಗಳಲ್ಲಿ ವ್ಯಾಪಕ ಉದ್ಯೋಗಾವಕಾಶಗಳಿವೆ.

ಎರಡೂ ಕೋರ್ಸ್ ಆಯ್ಕೆಗಳನ್ನು ಮಾಡಿದರೆ, ಮಾಧ್ಯಮ ಕ್ಷೇತ್ರದ ಮಾನವ ಸಂಪನ್ಮೂಲ ವಿಭಾಗದಲ್ಲಿ ವೃತ್ತಿಯನ್ನು ಅರಸಬಹುದು. ಆದ್ದರಿಂದ, ಯಾವ ವೃತ್ತಿಯನ್ನು ಅನುಸರಿಸಬೇಕು ಎನ್ನುವುದನ್ನು ವೃತ್ತಿ ಯೋಜನೆಯ ಮೂಲಕ ಗುರುತಿಸಿ. . ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/MHnPg_sp6E0

2. ನಾನು ಅಂತಿಮ ವರ್ಷದ ಬಿ.ಎ ಮಾಡುತ್ತಿದ್ದು, ಮುಂದೆ ನನಗೆ ಪೊಲೀಸ್ ಆಗುವ ಕನಸಿದೆ. ತಯಾರಿ ಮಾಡುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಪದವಿಯನ್ನು ಪೂರ್ಣಗೊಳಿಸಿದ ನಂತರ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗೆ ಅರ್ಹತೆಯಿರುತ್ತದೆ. ಪದವಿಯ ಜೊತೆ ನಾಯಕತ್ವದ ಕೌಶಲ, ದಿಟ್ಟತನ, ಸಹಭಾಗಿತ್ವದ ಕೌಶಲ, ಉತ್ತಮ ಸಂವಹನ, ಜತೆ ಸಕಾರಾತ್ಮಕ ಧೋರಣೆಯಿರಬೇಕು. ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪಿಎಸ್‌ಐ ನೇಮಕಾತಿಯಲ್ಲಿ ಭಾಗವಹಿಸಿ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸನ್ನು ಗಳಿಸಲು ಯೋಜನಾ ಶಕ್ತಿ, ಏಕಾಗ್ರತೆ, ಪರಿಶ್ರಮ, ಸಮಯದ ನಿರ್ವಹಣೆ ಮತ್ತು ನಿರಂತರ ಅಭ್ಯಾಸವಿರಬೇಕು. ಕರ್ನಾಟಕ ಪೊಲೀಸ್ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ ಮತ್ತು

ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು

ವಿದ್ಯಾರ್ಥಿ ವೇತನ ಕೈಪಿಡಿ

ನಿಕಾನ್ ಸ್ಕಾಲರ್‌ಶಿಪ್

ವಿವರ: ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಕಲಿಯಲು ಆರ್ಥಿಕ ಬೆಂಬಲ ನೀಡುತ್ತದೆ.

ಅರ್ಹತೆ: 12ನೇ ತರಗತಿಯನ್ನು ಪೂರ್ಣಗೊಳಿಸಿರುವ ಮತ್ತು ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಛಾಯಾಗ್ರಹಣ-ಸಂಬಂಧಿತ ಕೋರ್ಸ್‌ಗಳನ್ನು ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆಯಿರಬೇಕು.

ಆರ್ಥಿಕ ಸಹಾಯ: ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/NSP10

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

7) ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ $a_{22} = 149$ $d = 7$

ನಮಗೆ ಗೊತ್ತಿರುವಂತೆ $a_n = a + (n-1)d$

$a_{22} = a + (22 - 1)d$

$a_{22} = a+21d$

$149 = a+(21)(7)$

$a + 147 = 149$

$a = 149 - 147$

$= 2$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{22} = \frac{22}{2}[2(2)+(22-1)7]$$

$$S_{22} = (11)(4+147)$$

$$S_{22} = (11)(151)$$

$$S_{22} = 1661$$

ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತ 1661

8) ಒಂದು ಸಮಾಂತರ ಶ್ರೇಢಿಯ ಎರಡನೇ ಮತ್ತು ಮೂರನೇ ಪದಗಳು ಕ್ರಮವಾಗಿ 14 ಮತ್ತು 18 ಆದರೆ ಅದರ 51 ಪದಗಳವರೆಗಿನ ಮೊತ್ತವೇನು?

ಪರಿಹಾರ: ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

$a_2=14$ $a_3=18$ $d = a_3 - a_2$

$d = 18-14 = 4$

$a_2 = a+d \Rightarrow 14 = a+4$

$a = 14-10 \Rightarrow a=10$

51 ಪದಗಳವರೆಗಿನ ಮೊತ್ತ

S_{51}

$$S_n = \frac{n}{2}[2a+(n-1)d]$$

$$S_n = \frac{51}{2}[2xa+(51-1)d]$$

$$= \frac{51}{2}[2xa+(50)d]$$

$$= 51(a+25d)$$

$$= (51)(10+25x4)$$

$$= (51)(10+100)$$

$$= 5610$$

9) ಒಂದು ಸಮಾಂತರ ಶ್ರೇಢಿಯ 7 ಪದಗಳವರೆಗಿನ ಮೊತ್ತ 49 ಮತ್ತು 17 ಪದಗಳವರೆಗಿನ ಮೊತ್ತ 289. ಆದರೆ ಮೊದಲ n ಪದಗಳವರೆಗಿನ ಮೊತ್ತವೇನು?

ಪರಿಹಾರ: ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, ಸಮಾಂತರ ಶ್ರೇಢಿಯ 7 ಪದಗಳವರೆಗಿನ ಮೊತ್ತ = 49

$S_7 = 49$

$$S_n = \frac{n}{2}[2a+(n-1)d]$$

$$S_n = \frac{7}{2}[2xa+(7-1)d]$$

$$\frac{7}{2}[2a+6d] = 49$$

$$7(a+3d) = 49$$

$$a+3d = \frac{49}{7}$$

$a+3d = 7$.........................(1)

ಸಮಾಂತರ ಶ್ರೇಢಿಯ 17 ಪದಗಳವರೆಗಿನ ಮೊತ್ತ = 289

$S_{17} = 289$

$$S_{17} = 289$$

$$\frac{17}{2}[2a+(17-1)d] = 289$$

$$\frac{17}{2}[2a+16d] = 289$$

$$17(a+8d) = 289$$

$$a+8d = \frac{289}{17}$$

$a+8d = 17$.........................(2)

ಸಮೀಕರಣ (2) ರಿಂದ (1)ನ್ನು ಕಳೆದಾಗ

$5d = 10 \Rightarrow d = 2$

ಸಮೀಕರಣ (1) ರಿಂದ

$a + 3(2) = 7 \Longrightarrow a+6 = 7 \Longrightarrow a = 1$

ಈಗ S_n

$$S_n = \frac{n}{2}[2a+(n-1)d]$$

$$S_n = \frac{n}{2}[2x1+(n-1)2]$$

$$= n[1+n-1]$$

$$= n(n)$$

$$= n^2$$

10) a_n ಈ ಕೆಳಗಿನಂತೆ ನಿರೂಪಿಸಲ್ಪಟ್ಟಾಗ $a_1, a_2, ..., an, ..$ ಇದು ಒಂದು ಸಮಾಂತರ ಶ್ರೇಢಿಯನ್ನು ಉಂಟುಮಾಡುತ್ತದೆ ಎಂದು ತೋರಿಸಿ (i) $a_n = 3 + 4n$ (ii) $a_n = 9 - 5n$

ಪರಿಹಾರ: (i) $a_n = 3 + 4n$

$n = 1, 2, 3, 4$ ಹಾಕಿದಾಗ ಕ್ರಮವಾಗಿ ಕೆಳಗಿನದ್ದನ್ನು ಪಡೆಯುತ್ತೇವೆ

$a_1 = 3 + 4(1) = 3 + 4 = 7$

$a_2 = 3 + 4(2) = 3 + 8 = 11$

$a_3 = 3 + 4(3) = 3 + 12 = 15$

$a_4 = 3 + 4(4) = 3 + 16 = 19$

$\therefore a_2 - a_1 = 11 - 7 = 4$

$a_3 - a_2 = 15 - 11 = 4$

$a_4 - a_3 = 19 - 15 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು $a_1, a_2, ..., an,$ ಸಮಾಂತರ ಶ್ರೇಢಿಗೆ ಸೇರಿದೆ.

(ii) $a_n = 9 - 5_n$

$n = 1,2,3,4$ ಹಾಕಿದಾಗ ಕ್ರಮವಾಗಿ ಕೆಳಗಿನದ್ದನ್ನು ಪಡೆಯುತ್ತೇವೆ

$a_1 = 9 - 5(1) = 9 - 5 = 4$

$a_2 = 9 + 5(2) = 9 - 10 = -1$

$a_3 = 9 + 5(3) = 9 - 15 = -6$

$a_4 = 9 + 5(4) = 9 - 20 = -11$

$\therefore a_2 - a_1 = -1 - 4 = -5$

$a_3 - a_2 = -6 - (-1) = -6 + 1 = -5$

$a_4 - a_3 = -11 - (-6)$

$= -11 + 6 = -5$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -5$ ಹೊಂದಿದ್ದು $a_1, a_2, ..., an,$ ಸಮಾಂತರ ಶ್ರೇಢಿಗೆ ಸೇರಿದೆ.

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

ELECTROCHEMISTRY

64. The cell in which the following reaction occurs

$2Fe^{3+}(aq) + 2I^-(aq) \rightarrow 2Fe^{2+}(aq) + I_2(S)$ has $E^o_{cell} = 0.236$ V at 298 K

Calculate standard Gibbs energy and equilibrium constant for the reaction

Ans:- The two half reactions are:

$2Fe^{3+} + 2e^- \rightarrow 2Fe^{2+}$ and $2I^- \rightarrow I_2 + 2e^-$

For the above reaction, $n = 2$

$$\Delta G^o = -nFE^o_{cell}$$

$$= (-2mol) \times (96500\ C\,mol^{-1}) \times (0.236V)$$

$$= -455480\ CV = -455480\ J = -45.55\ kJ$$

$$\log K_c = \frac{\Delta G^o}{2.303RT}$$

$$= -\frac{(-45.55kJ)}{2.303 \times (8.314 \times 10^{-3}\ kJ\,K^{-1}) \times (298K)}$$

$$= 7.983$$

$$K_c = \text{Anti}\log(7.983) = 9.616 \times 10^7$$

65. Why does the conductivity of a solution decrease with dilution?

Ans:- The conductivity of a solution is linked with the number of ions present per unit volume. With dilution, these decrease and the corresponding conductivity or specific conductance of the solution decreases.

66. If a current of 0.5 ampere flows through a metallic wire for hours, then how many electrons flow through the wire?

Ans:- Quantity of charge (Q) passed =

Current in amperes x Time in seconds

= (0.5 A) x (2 x 60 x 60 s)

= 3600 As

= 3600 C

Number of electrons flowing through the wire by passing a charge of one faraday (96500 C)

$= 6.022 \times 10^{23}$

Number of electrons flowing through the wire by passing a charge of 3600 C

$$= 6.022 \times 10^{23} \times \frac{(3600\ C)}{(96500\ C)}$$

$$= 2.246 \times 10^{22}$$

67. The conductivity of 0.20 M solution of KCl at 298 K is 0.0248 S cm^{-1}. Calculate its molar conductivity.

Ans:- Conductivity (κ) = 0.0248 S cm^{-1}

= 0.0248 $ohm^{-1}\ cm^{-1}$

Molar concentration (C) = 0.20 M = 0.2 mol L^{-1}

$$= \frac{(0.2\ mol)}{(1000\ cm^3)}$$

$$= 2.0 \times 10^{-4}\ mol\,cm^{-3}$$

$$\text{Molar conductivity}\ (L_m) = \frac{\kappa}{C} = \frac{(0.0248\ ohm^{-1}cm^{-1})}{(2.0 \times 10^{-4}\ mol\,cm^{-3})}$$

$$= 124\ ohm^{-1}mol^{-1}cm^2$$

$$= 124\ S\,mol^{-1}cm^2$$

68. The resistance of a conductivity cell containing 0.001M KCl solution at K is 1500 Ω. What is the cell constant if the conductivity of 0.001 M KCl solution at 298 K is 0.146 x 10^{-3} S cm^{-2}?

Ans:- Resistance (R) = 1500 Ω

$$\text{Conductance (C)} = \frac{1}{R} = \frac{1}{1500\ ohm} = \frac{1}{1500}S$$

$$\text{Conductivity}\ (\kappa) = 0.146 \times 10^{-3}\ S\,cm^{-1}$$

$$\text{Cell constant}\ (1/a) = \frac{\text{Conductivity}}{\text{Conduc tan ce}}$$

$$= \frac{(0.146 \times 10^{-3}\ S\,cm^{-1})}{(1/1500\ S)}$$

$$= 0.219\ cm^{-1}$$

69. How much electricity in terms of Faraday is required to produce:

(i) 20.0 g of Ca from molten $CaCl_2$

(ii) 40.0 g of Al from molten Al_2O_3?

Ans:- i) $Ca^{2+}(aq) + 2e^- \rightarrow Ca(s)$

2F 40g

To produce 40g of $CaCl_2$, charge needed = 2F

To produce 20g of $CaCl_2$, charge needed = 1F

ii) $Al_2O_3 + 6e^- \rightarrow 2Al + 3O^{2-}$

6F (2 x 27) g

To produce 54 g of Al, charge needed = 6F

To produce 40g of Al, charge needed

$$= \frac{(40g)}{(54g)} \times (6F) = 4.44F.$$

70. How much electricity is required in coulomb for the oxidation of -

(i) 1 mol of H_2O to O_2

(ii) 1 mol of FeO Fe_2O_3

Ans:- (i) $H_2O \rightarrow 2H^+ + 1/2\ O_2 + 2e^-$

1 mol 2F

Electricity (charge) required = 2F

= 2 x 96500 C

= 1.93 x 10^5 C

(ii) $2FeO + 1/2\ O_2 \rightarrow Fe_2O_3$

$2Fe^{2+} \rightarrow Fe_2^{3+} + 2e^-$

2 mol 2F

For the oxidation of two moles of FeO, charge required = 2 F

For the oxidation of one mole of FeO, charge required = 1 F = 96500 C.

CHEMICAL KINETICS

1. What is chemical kinetics?

Ans:- Chemical kinetics is the branch of chemistry that deals with the study of the rate of a chemical reaction and factors affecting the rate of a chemical reaction.

2. What is meant by the rate of a reaction?

Ans:- The rate of the reaction is defined as the change in the molar concentration of one of the reactants or products in unit time. It is given by the expression $\frac{dx}{dt}$, where dx is the change in the molar concentration of one of the reactants or products in time dt.

(Contd…….)

ಕರ್ಪೂರಿ ಠಾಕೂರ್, ಮಧು ದಂಡವತೆ ಜನ್ಮ ಶತಮಾನೋತ್ಸವ

‘ಕೋಮುವಾದದ ವಿರುದ್ಧ ಹೋರಾಟ ಇಂದಿನ ತುರ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜವಾದಿಗಳು ಹಿಂದೆ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತಿದ್ದರು. ಈಗ ಕೋಮುವಾದ ಬೃಹದಾಕಾರವಾಗಿ ಬೆಳೆದಿದೆ. ಅದರ ವಿರುದ್ಧ ಹೋರಾಟ ಮಾಡಬೇಕಿದೆ’ ಎಂದು ಶಾಸಕ ಬಿ.ಆರ್. ಪಾಟೀಲ ಅವರು ಭಾನುವಾರ ಇಲ್ಲಿ ಹೇಳಿದರು.

ಕರ್ನಾಟಕ ಸಮಾಜವಾದಿ ಒಕ್ಕೂಟ ನಗರದಲ್ಲಿ ಹಮ್ಮಿಕೊಂಡಿದ್ದ ಕರ್ಪೂರಿ ಠಾಕೂರ್ ಮತ್ತು ಮಧು ದಂಡವತೆ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗ ಚಿಂತನೆಗೆ ಬರ ಬಂದಿದೆ. ಗರ ಬಡಿದಿದೆ. ಗಾಂಧೀಜಿಯಂತಹ ಚಿಂತಕರನ್ನು ಕೂಡ ಕೆಟ್ಟವರನ್ನಾಗಿ ಬಿಂಬಿಸಲಾಗುತ್ತಿದೆ. ಎಲ್ಲ ಹೋರಾಟಗಾರರು, ಚಿಂತಕರನ್ನು ದ್ವೇಷಿಸುವುದನ್ನು ಯುವಪೀಳಿಗೆಗೆ ಕಲಿಸಿಕೊಡಲಾಗುತ್ತಿದೆ. ಇದನ್ನು ಎದುರಿಸಲು ಸಮಾಜವಾದಿ ಚಿಂತನೆಯನ್ನು ಜನರ ಬಳಿಗೆ ಕೊಂಡೊಯ್ಯಬೇಕು ಎಂದು ತಿಳಿಸಿದರು.

ಸಮಾಜವಾದಿಗಳು ನೇರವಾಗಿ ಆಡಳಿತ ಮಾಡಿರುವುದು ಕಡಿಮೆ ಇರಬಹುದು. ಆದರೆ, ಕಾಲಕಾಲಕ್ಕೆ ನೀಡಿರುವ ಚಿಂತನೆಗಳು, ಮಾಡಿರುವ ಘೋಷಗಳು, ರೂಪಿಸಿರುವ ಯೋಜನೆಗಳು ಸಮಾಜದಲ್ಲಿ ಬದಲಾವಣೆಗೆ ಕಾರಣವಾಗಿದೆ. ಮಧು ದಂಡವತೆ, ಮಧು ಲಿಮಯೆ, ಕರ್ಪೂರಿ ಠಾಕೂರ್, ಜಾರ್ಜ್ ಫರ್ನಾಂಡಿಸ್, ಕಿಶನ್ ಪಟ್ನಾಯಕ್, ಜಯಪ್ರಕಾಶ್ ನಾರಾಯಣ್, ಜೆ.ಎಚ್. ಪಟೇಲ್ ಸಹಿತ ಅನೇಕ ನಾಯಕರನ್ನು ನೀಡಿದ ಶ್ರೇಯಸ್ಸು ಸಮಾಜವಾದಿ ಸಿದ್ಧಾಂತಕ್ಕೆ ಸಲ್ಲುತ್ತದೆ. ಸಮಾಜವಾದಿ ಹಿರಿಯ ನಾಯಕರ ಜನ್ಮ ಶತಮಾನೋತ್ಸವ ಆಚರಿಸುವ ಮೂಲಕ ಮತ್ತೆ ಸಮಾಜವಾದಿ ಸಿದ್ಧಾಂತಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಜನ್ಮ ಶತಮಾನೋತ್ಸವದ ಸಂಚಾಲಕ ಅರುಣ್ ಶ್ರೀವಾಸ್ತವ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ‘ಮಧು ಲಿಮಯೆ, ಮಧು ದಂಡವತೆ, ಕರ್ಪೂರಿ ಠಾಕೂರ್ ಜನ್ಮ ಶತಮಾನೋತ್ಸವವನ್ನು ದೇಶದಾದ್ಯಂತ ಆಚರಿಸುವ ಮೂಲಕ ಅವರ ಚಿಂತನೆಗಳನ್ನು ಜನರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಿದ್ದೇವೆ. ಚಿಂತನೆಗಳೇ ದೇಶವನ್ನು ಆಳುವುದು. ಒಳ್ಳೆಯ ಚಿಂತನೆಯಾದರೆ ಜನರಿಗೆ ಒಳ್ಳೆಯದಾಗುತ್ತದೆ’ ಎಂದು ತಿಳಿಸಿದರು.

ಹಿರಿಯ ಸಮಾಜವಾದಿಗಳಾದ ಹನುಮಂತ, ಹೀರಾಚಂದ್ ವಾಗ್ಮೋರೆ, ಅನಸೂಯಮ್ಮ ಅವರನ್ನು ಸನ್ಮಾನಿಸಲಾಯಿತು. ಬಿಹಾರದ ರಾಜ್ಯಸಭಾ ಸದಸ್ಯ ರಾಮನಾಥ್ ಠಾಕೂರ್, ಮಧ್ಯಪ್ರದೇಶದ ಮಾಜಿ ಸಚಿವ ರಮಾಶಂಕರ್ ಸಿಂಗ್, ವಿಚಾರವಾದಿ ಉದಯ್ ದಂಡವತೆ, ಮಾಜಿ ಶಾಸಕ ಮಹಿಮ ಪಟೇಲ್ ಇದ್ದರು. ಮಾಜಿ ಶಾಸಕ ಮೈಕೆಲ್ ಬಿ. ಫರ್ನಾಂಡಿಸ್ ಅಧ್ಯಕ್ಷತೆ ವಹಿಸಿದ್ದರು. ಕೆ.ಎಸ್. ನಾಗರಾಜ್ ಬರೆದಿರುವ ‘ಜನನಾಯಕ ಕರ್ಪೂರಿ ಠಾಕೂರ್’ ಕೃತಿ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಸಮಾಜವಾದಿ ಒಕ್ಕೂಟ ಆಯೋಜಿಸಿದ್ದ ‘ಜನನಾಯಕ ಕರ್ಪೂರಿ ಠಾಕೂರ್ ಮತ್ತು ಮಧು ದಂಡವತೆ’ ಅವರ ಜನ್ಮಶತಮಾನೋತ್ಸವ ಅಂಗವಾಗಿ ಅವರಿಬ್ಬರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು —ಪ್ರಜಾವಾಣಿ ಚಿತ್ರ

ಭೂಸುಧಾರಣೆ ತಿದ್ದುಪಡಿ ಕಾಯ್ದೆ ವಾಪಸಿಗೆ ಆಗ್ರಹ

ದೇವರಾಜ ಅರಸು ಅವರು ಭೂಸುಧಾರಣೆ ಕಾಯ್ದೆಯನ್ನು ಜಾರಿಗೆ ತಂದು ಉಳುವವನಿಗೆ ಭೂಮಿ ಸಿಗುವಂತೆ ಮಾಡಿದ್ದರು. ಬಿಜೆಪಿ ಸರ್ಕಾರ ಅದಕ್ಕೆ ತಿದ್ದುಪಡಿ ಮಾಡಿ ಮತ್ತೆ ಜಮೀನ್ದಾರಿ ಪದ್ಧತಿ ಬರುವಂತೆ ಮಾಡಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ತಿದ್ದುಪಡಿ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳುವುದಾಗಿ ಭರವಸೆ ನೀಡಲಾಗಿತ್ತು. ಆದರೆ, ಈವರೆಗೂ ವಾಪಸ್ ಪಡೆದಿಲ್ಲ. ಕೂಡಲೇ ತಿದ್ದುಪಡಿ ಕಾಯ್ದೆಯನ್ನು ವಾಪಸ್ ಪಡೆಯಬೇಕು ಎಂದು ಕಾಂಗ್ರೆಸ್ ಶಾಸಕರೇ ಆಗಿರುವ ಬಿ.ಆರ್. ಪಾಟೀಲ ಆಗ್ರಹಿಸಿದರು.

‘ಕಾಂಗ್ರೆಸ್ ಕುತಂತ್ರ ನಡೆಯದು’

ದಾಸರಹಳ್ಳಿ ಕ್ಷೇತ್ರದ ಪಕ್ಷದ ಮುಖಂಡರಿಗೆ ಎಚ್‌.ಡಿ. ಕುಮಾರಸ್ವಾಮಿ ಅಭಯ

ಪ್ರಜಾವಾಣಿ ವಾರ್ತೆ

ಬಿಡದಿ: ‘ಯಾವುದೇ ಕಾರಣಕ್ಕೂ ಧೈರ್ಯಗೆಡಬೇಡಿ. ನಿಮ್ಮನ್ನು ರಕ್ಷಣೆ ಮಾಡುವ ಹೊಣೆ ನನ್ನದು. ಕಾಂಗ್ರೆಸ್ ಪಕ್ಷದ ಕುತಂತ್ರಗಳು ಯಾವುದೇ ಕಾರಣಕ್ಕೂ ನಡೆಯಲ್ಲ. ಅದಕ್ಕೆ ಹೆದರುವ ಪ್ರಶ್ನೆಯೇ ಇಲ್ಲ. ಪಕ್ಷದೊಳಗೆ ನಿಷ್ಠಾವಂತರನ್ನು ಕಡೆಗಣಿಸುವುದಿಲ್ಲ...’

ಇಲ್ಲಿನ ಕೇತಗಾನಹಳ್ಳಿಯ ತೋಟದ ಮನೆಯಲ್ಲಿ ಭಾನುವಾರ ತಮ್ಮನ್ನು ಭೇಟಿ ಮಾಡಿದ ಬೆಂಗಳೂರಿನ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಪಕ್ಷದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ನೀಡಿದ ಅಭಯವಿದು.

ಕ್ಷೇತ್ರದ ಜೆಡಿಎಸ್‌ನ ಮಾಜಿ ಶಾಸಕ ಆರ್. ಮಂಜುನಾಥ್ ಕಾಂಗ್ರೆಸ್ ಸೇರ್ಪಡೆ ಬಳಿಕ ತಮ್ಮನ್ನು ಭೇಟಿಯಾದ ಪಕ್ಷದವರೊಂದಿಗೆ ಸಭೆ ನಡೆಸಿದ ಅವರು, ಪಕ್ಷ ಬಿಟ್ಟವರ ಕುರಿತು ಬೇಸರ ವ್ಯಕ್ತಪಡಿಸಿದರು.

‘ದಾಸರಹಳ್ಳಿ ಕ್ಷೇತ್ರದಲ್ಲಿ ಪಕ್ಷ ಪ್ರಬಲವಾಗಿದೆ. ನಮ್ಮೆಲ್ಲರ ಶ್ರಮದಿಂದ ಗೆದ್ದು ಶಾಸಕರಾದವರು ಈ ಬಾರಿ ಸೋತೆ ಎನ್ನುವ ಕಾರಣಕ್ಕೆ ಕಾಂಗ್ರೆಸ್ ಸೇರಿದ್ದಾರೆ. ಕಾಂಗ್ರೆಸ್‌ನಿಂದ ಪಕ್ಷಕ್ಕೆ ಬಂದಿದ್ದರು. ಈಗ ಅಲ್ಲಿಗೇ ಹೋಗಿದ್ದಾರೆ. ಸೋತು ಬೇಸರದಲ್ಲಿದ್ದ ಅವರನ್ನು ಎರಡ್ಮೂರು ಸಲ ಕರೆದು ಮಾತನಾಡಿದ್ದೆ. ಅವರ ಮನೆಗೆ ಎಚ್.ಡಿ.ದೇವೇಗೌಡರೂ ಹೋಗಿದ್ದರು. ಅಷ್ಟಾದರೂ ಅವರಿಗೆ ಉಪಕಾರ ಸ್ಮರಣೆ ಇಲ್ಲ’ ಎಂದರು.

‘ದಾಸರಹಳ್ಳಿಯಂತೇ ಮಹಾಲಕ್ಷ್ಮಿ ಲೇಔಟ್‌ನಲ್ಲೂ ಆಯಿತು. ಅಲ್ಲಿಯೂ ಇಬ್ಬರು ಇದೇ ರೀತಿ, ಎರಡು ಬಾರಿ ಟೋಪಿ ಹಾಕಿದರು. ಹಲವು ಕ್ಷೇತ್ರಗಳಲ್ಲಿ ಹೀಗೇ ಆಗಿದೆ. ಆದರೆ, ಕಾರ್ಯಕರ್ತರು ನನಗೆ ಮೋಸ ಮಾಡಿಲ್ಲ. ಅವರಿಗಾಗಿ ಬದುಕುತ್ತೇನೆ. ಪಕ್ಷ ಕಟ್ಟುತ್ತೇನೆ’ ಎಂದು ಹೇಳಿದರು.

ಮುಖಂಡರ ಶಪಥ: ಸಭೆಯಲ್ಲಿದ್ದ ಮುಖಂಡರು ಹಾಗೂ ಕಾರ್ಯಕರ್ತರು, ‘ಮತ್ತೆ ತಳಮಟ್ಟದಿಂದ ಪಕ್ಷ ಕಟ್ಟುತ್ತೇವೆ’ ಎಂದ ಶಪಥ ಮಾಡಿದರು. ‘ಪಕ್ಷದ ನಾಯಕರಾದ ಎಚ್‌.ಡಿ. ದೇವೇಗೌಡ ಮತ್ತು ಕುಮಾರಸ್ವಾಮಿ ಅವರ ನಾಯಕತ್ವದಲ್ಲಿ ಅಚಲ ನಿಷ್ಠೆ ಹೊಂದಿರುವ ನಾವು, ಕಾಂಗ್ರೆಸ್ ಆಮಿಷಗಳಿಗೆ ಬಲಿಯಾಗುವುದಿಲ್ಲ’ ಎಂದು ಮಾತು ಕೊಟ್ಟರು.

ಇದೇ ವೇಳೆ ಕಾಂಗ್ರೆಸ್ ಮುಖಂಡ ಚನ್ನಕೃಷ್ಣ ಅವರು ಜೆಡಿಎಸ್ ಸೇರಿದರು. ಪಕ್ಷದ ರಾಜ್ಯ ಉಪಾಧ್ಯಕ್ಷ ಅಂದಾನಪ್ಪ, ಕ್ಷೇತ್ರದ ಅಧ್ಯಕ್ಷ ಮುನಿಸ್ವಾಮಿ, ಮಹಿಳಾ ವಿಭಾಗದ ಅಧ್ಯಕ್ಷೆ ರಾಣಿ ಪ್ರತಾಪ್, ಮುಖಂಡರಾದ ಲೋಕೇಶ್ ಗೌಡ, ಶಿವರಾಮಯ್ಯ, ಮುನೇಗೌಡ, ನರಸಿಂಹ ಮೂರ್ತಿ, ಲಾರಿ ಮಂಜಣ್ಣ, ಭೈರಣ್ಣ, ಸುರೇಶ್ ಗೌಡ, ಮಲ್ಲೇಶ್ ಗೌಡ, ಮುದ್ದಣ್ಣ, ಭರತ್ ಗುಂಡಣ್ಣ, ಚಂದನ್ ಹಾಗೂ ಇತರರು ಇದ್ದರು.

‘ಆಸೆಯಿಂದ ಹೋದವರಿಗೆ ನಿರಾಸೆ ತಪ್ಪಿದ್ದಲ್ಲ’

‘ಪ್ರತಿಪಕ್ಷಗಳ ಮುಖಂಡರು ನಮ್ಮ ಕಾರ್ಯಕರ್ತರಿಗೆ ಆಮಿಷವೊಡ್ಡುತ್ತಿದ್ದಾರೆ. ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕ್ಯಾಟಗರಿ ಮಾಡಿಕೊಡುವುದಾಗಿ ಹೇಳುತ್ತಿದ್ದಾರೆ. ಆಸೆಯಿಂದ ಹೋದವರಿಗೆ ಮುಂದೆ ನಿರಾಸೆ ತಪ್ಪಿದ್ದಲ್ಲ. ಲೋಕಸಭೆ ಚುನಾವಣೆ ಮುಗಿಯುವವರೆಗೂ ಇವರು ಪಾಲಿಕೆ ಚುನಾವಣೆ ಮಾಡುವುದಿಲ್ಲ. ಈ ಸರ್ಕಾರದ ಪಾಪದ ಕೊಡ ತುಂಬಿದೆ’ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಒಂದು ವರ್ಷದಲ್ಲಿ ನಮ್ಮ ಪಕ್ಷ ಬಲವಾಗುತ್ತದೆ. ಲೋಕಸಭೆ ಚುನಾವಣೆ ನಂತರ ಪಕ್ಷದ ಬಲ ಏನೆಂದು ನಿಮಗೆ ಅರ್ಥವಾಗುತ್ತದೆ. ಕಾರ್ಯಕರ್ತರು ಏನೇ ಸಮಸ್ಯೆ ಇದ್ದರೂ ನೇರವಾಗಿ ನನ್ನ ಬಳಿ ಬನ್ನಿ. ನಿಮ್ಮನ್ನು ಉಳಿಸಿಕೊಳ್ಳುವ ಹೊಣೆ ನನ್ನದು

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಅಧ್ಯಕ್ಷ

‘ಕಾಂಗ್ರೆಸ್‌ಗೆ ಬುದ್ಧಿ ಕಲಿಸಲು ಮೈತ್ರಿ’

ಜೆಡಿಎಸ್ ಅಧ್ಯಕ್ಷ ಎಚ್‌.ಡಿ.ಕೆ ಭೇಟಿ ಮಾಡಿದ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬಿಡದಿ: ‘ರಾಜ್ಯದ ಅಭಿವೃದ್ಧಿ ಮತ್ತು ಹಿತದೃಷ್ಟಿಯಿಂದ ದೆಹಲಿ ಮಟ್ಟದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಮೈತ್ರಿಯಾಗಿದೆ. ಲೋಕಸಭಾ ಚುನಾವಣೆಗೆ ಎರಡೂ ಪಕ್ಷಗಳ ನಡುವೆ ಸೀಟು ಹಂಚಿಕೆ ಕುರಿತು ಎರಡೂ ಪಕ್ಷಗಳ ವರಿಷ್ಠರು ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಇಲ್ಲಿನ ಕೇತಗಾನಹಳ್ಳಿಯಲ್ಲಿರುವ ಎಚ್‌.ಡಿ. ಕುಮಾರಸ್ವಾಮಿ ಅವರ ತೋಟದ ಮನೆಗೆ ಭಾನುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ದೇಶದ ಭವಿಷ್ಯ ರೂಪಿಸುವ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿ ಮೈತ್ರಿ ಪಕ್ಷ ಗೆಲ್ಲಬೇಕು. ರೈತ, ಬಡವರ ಹಾಗೂ ದಲಿತ ವಿರೋಧಿ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಬುದ್ಧಿ ಕಲಿಸಬೇಕು. ಆ ನಿಟ್ಟಿನಲ್ಲಿ ನಾನು ಪಕ್ಷದ ಅಧ್ಯಕ್ಷನಾದ ಬಳಿಕ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಇದೀಗ ಪಕ್ಷದ ರಾಜ್ಯಾಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದೇನೆ’ ಎಂದರು.

‘ನಮ್ಮ ಗುರಿ ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ದೇಶದ ಪ್ರಧಾನಿ ಮಾಡುವುದು. ಈ ಕುರಿತು, ನಮ್ಮಲ್ಲಿ ಏನೇ ಗೊಂದಲಗಳಿದ್ದರೂ, ಪರಸ್ಪರ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು’ ಎಂದು ತಿಳಿಸಿದರು. ಭೇಟಿ ಸಂದರ್ಭದಲ್ಲಿ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ಎ. ಮಂಜುನಾಥ್ ಇದ್ದರು.

‘ಜೆಡಿಎಸ್ ಜೊತೆಗೂಡಿ ಕರ್ನಾಟಕದಲ್ಲಿ 28 ಲೋಕಸಭಾ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸುವ ದೃಷ್ಟಿಯಿಂದ ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರೊಂದಿಗೆ ಮಾತುಕತೆ ನಡೆಸಲಾಯಿತು’ ಎಂದು ವಿಜಯೇಂದ್ರ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಬಿಡದಿಯ ಕೇತಗಾನಹಳ್ಳಿಯಲ್ಲಿರುವ ತಮ್ಮ ತೋಟದ ಮನೆಗೆ ಭಾನುವಾರ ಭೇಟಿ ನೀಡಿದ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು

‘ಇಬ್ಬರದ್ದೂ ಸಮಾನ ಉದ್ದೇಶ’

‘ನರೇಂದ್ರ ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡುವ ಸಮಾನ ಉದ್ದೇಶವನ್ನು ಮೈತ್ರಿಕೂಟ ಹೊಂದಿವೆ. ಕ್ಷೇತ್ರ ಹಂಚಿಕೆ ಕುರಿತು ಬಿಜೆಪಿ ಹೈಕಮಾಂಡ್ ಚರ್ಚಿಸಲಿದೆ’ ಎಂದು ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ವಿಜಯೇಂದ್ರ ಭೇಟಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿಗೆ ಯುವ ಅಧ್ಯಕ್ಷರು ನೇಮಕವಾಗಿದ್ದು, ಕಾರ್ಯಕರ್ತರಲ್ಲಿ ಹುರುಪು ಹೆಚ್ಚಾಗಿದೆ. ಪಕ್ಷಕ್ಕಾಗಿ ಅವರೂ ಶ್ರಮ ಹಾಕುತ್ತಿರುವುದನ್ನು ಗಮನಿಸಿದ್ದೇನೆ. ಬಹಳ ದಿನಗಳ ಹಿಂದೆಯೇ ಅವರನ್ನು ಭೇಟಿ ಮಾಡಬೇಕಿತ್ತು. ಹಲವು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಭೇಟಿ ಸಾಧ್ಯವಾಗಿರಲಿಲ್ಲ. ನಿಖಿಲ್ ಕುಮಾರಸ್ವಾಮಿ ಮತ್ತು ವಿಜಯೇಂದ್ರ ಅವರು ಸಹೋದರ ಮನೋಭಾವದೊಂದಿಗೆ ಒಟ್ಟಾಗಿ ಮುನ್ನಡೆಯಲಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಅಗತ್ಯವಿರುವ ಕಡೆ ಇಬ್ಬರೂ ಪ್ರವಾಸ ಮಾಡಲಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

ನೇಪಾಳದಲ್ಲಿ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ

‘ಜನರೇ ಒಪ್ಪಿರುವ ಪ್ರಜಾಪ್ರಭುತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯ ಬಂದಾಗ ರಾಜಾಡಳಿತ ಕೊನೆಗೊಂಡಿತು. ಜನರೇ ಪ್ರಜಾಪ್ರಭುತ್ವ ಒಪ್ಪಿಕೊಂಡರು. ಜನಾಡಳಿತಕ್ಕೆ ಮೈಸೂರು ಸಂಸ್ಥಾನದ ಸಹಕಾರ ಇರಲಿದೆ’ ಎಂದು ಮೈಸೂರಿನ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ನೇಪಾಳದ ಪಶುಪತಿನಾಥ ದೇವಾಲಯ ಸನ್ನಿಧಿಯಲ್ಲಿರುವ ಆನಂದ ಪಶುಪತಿ ದೇವಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಭಾಷೆ ಮಾತನಾಡುವ ಪ್ರದೇಶಗಳಾದ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಪ್ರದೇಶವನ್ನು ಸೇರಿಸಲು ಬ್ರಿಟಿಷರು ಒಪ್ಪಲಿಲ್ಲ. ಸ್ವಾತಂತ್ರ್ಯಾನಂತರ ಏಕೀಕರಣದ ಹೋರಾಟದಿಂದ ಒಂದಾಯಿತು ಎಂದು ನೆನಪು ಮಾಡಿಕೊಂಡರು.

ಐಪಿಎಸ್ ಅಧಿಕಾರಿ ರೂಪಾ ಡಿ. ಮೌದ್ಗಿಲ್, ‘ನೇಪಾಳದಲ್ಲಿ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಯೋಜಿಸುತ್ತಿರುವುದು ಸಾಹಸದ ಕೆಲಸ’ ಎಂದು ಶ್ಲಾಘಿಸಿದರು.

ಬಿಬಿಎಂಪಿ ಉಪ ಆಯುಕ್ತ ಮಂಜುನಾಥ್ ಸ್ವಾಮಿ ಮಾತನಾಡಿ, ‘ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಆಡಳಿತ ವ್ಯವಹಾರ ಸಂಪೂರ್ಣ ಕನ್ನಡ ಭಾಷೆಯಲ್ಲಿ ನಡೆಯುತ್ತಿದೆ. ಕನ್ನಡ ಭಾಷೆಯನ್ನು ಎಲ್ಲರೂ ಬಳಸಬೇಕು‘ ಎಂದು ಮನವಿ ಮಾಡಿದರು.

ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಅಧ್ಯಕ್ಷತೆ ವಹಿಸಿದ್ದರು. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪತ್ನಿ ತ್ರಿಶಿಖಾಕುಮಾರಿ ಒಡೆಯರ್, ಬಿಬಿಎಂಪಿ ಜಂಟಿ ಆಯುಕ್ತೆ ಲಕ್ಷ್ಮಿದೇವಿ, ಗಾಯಕಿ ಅನುರಾಧ ಭಟ್, ವಕೀಲರಾದ ವಿ. ಶ್ರೀನಿವಾಸ್, ನೌಕರರ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೇಪಾಳದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು

ಬೂಸಾ ಚಳವಳಿ ಅರ್ಧ ಶತಮಾನ, ಜನಸಾಹಿತ್ಯ–ಜನ ಚಳವಳಿ ಸಮಾವೇಶ

ಬಸವಲಿಂಗಪ್ಪ ಜನ್ಮಶತಮಾನೋತ್ಸವ ಸರ್ಕಾರವೇ ಆಚರಿಸಲಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿ. ಬಸವಲಿಂಗಪ್ಪ ಮತ್ತು ಶಾಂತವೇರಿ ಗೋಪಾಲಗೌಡ ಅವರ ಜನ್ಮಶತಮಾನೋತ್ಸವವನ್ನು ಸರ್ಕಾರವೇ ಆಚರಿಸಬೇಕು' ಎಂದು ಸಾಹಿತಿ ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಭಾನುವಾರ ಆಯೋಜಿಸಿದ್ದ 'ಬೂಸಾ ಚಳವಳಿ ಅರ್ಧ ಶತಮಾನ, ಜನಸಾಹಿತ್ಯ–ಜನ ಚಳವಳಿ ಸಮಾವೇಶ'ದಲ್ಲಿ ಅವರು ಮಾತನಾಡಿದರು.

'ಬುದ್ಧ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್, ಬಿ. ಬಸವಲಿಂಗಪ್ಪ, ಶಾಂತವೇರಿ ಗೋಪಾಲಗೌಡ ಅವರ ವಿಚಾರಗಳನ್ನು ಪುಸ್ತಕಗಳ ರೂಪದಲ್ಲಿ ಮುಂದಿನ ಪೀಳಿಗೆಗೆ ತಲುಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಡಾ.ಬಿ.ಆರ್.ಅಂಬೇಡ್ಕರ್ ಅವರ ನಂತರ ಅವರೆಲ್ಲ ಸಂಘ-ಸಂಸ್ಥೆಗಳಿಗೆ ಬಿ.ಬಸವಲಿಂಗಪ್ಪ ಅವರೇ ಉತ್ತರಾಧಿಕಾರಿಯಂತಿದ್ದರು' ಎಂದರು.

'1973ರಲ್ಲಿ ಮೈಸೂರಿನ ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವಲಿಂಗಯ್ಯ ಅವರು 'ಕನ್ನಡ ಸಾಹಿತ್ಯದಲ್ಲೇನಿದೆ ಅದರಲ್ಲಿ ಬಹುಪಾಲು ಬೂಸಾ' ಎಂದು ಹೇಳಿಕೆ ನೀಡಿದ್ದರು.

ಬೂಸಾ ಚಳುವಳಿ ಸಮಾವೇಶದಲ್ಲಿ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಜನಾರ್ದನ್ (ಜನ್ನಿ), ಚಿಂತಕ ಅಗ್ರಹಾರ ಕೃಷ್ಣಮೂರ್ತಿ, ಸಾಹಿತಿ ಕಾಳೇಗೌಡ ನಾಗವಾರ, ದಲಿತ ಮುಖಂಡರಾದ ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ ಮತ್ತು ಗೌರಮ್ಮ ದೊಡ್ಡಮನಿ ಇದ್ದಾರೆ —ಪ್ರಜಾವಾಣಿ ಚಿತ್ರ

ಇದರಿಂದ ಅವರು ಸಚಿವ ಸ್ಥಾನ ಕಳೆದುಕೊಳ್ಳಬೇಕಾಯಿತು' ಎಂದು ಘಟನೆ ಸ್ಮರಿಸಿದರು.

'ಬಸವಲಿಂಗಪ್ಪ ಅವರು ನೀಡಿದ ಹೇಳಿಕೆಯಿಂದ ಬೂಸಾ ಚಳವಳಿ ಆರಂಭವಾಯಿತು. ಈ ಚಳವಳಿಯ ಪರ ಮತ್ತು ವಿರುದ್ಧ ಬಣಗಳು ಹುಟ್ಟಿಕೊಂಡವು. ಆಗ ಕವಿ ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ ಸೇರಿದಂತೆ ಅನೇಕರು ಕರ್ನಾಟಕ ವಿಚಾರವಾದಿ ಗೆಳೆಯರ ಬಳಗ ಎಂಬ ಸಂಘಟನೆ ಕಟ್ಟಿಕೊಂಡು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಬಸವಲಿಂಗಪ್ಪ ಅವರ ಪರ ಹೋರಾಟ ಮಾಡಿದ್ದೆವು' ಎಂದು ನೆನಪಿಸಿಕೊಂಡರು.

ಚಿಂತಕ ಅಗ್ರಹಾರ ಕೃಷ್ಣಮೂರ್ತಿ, 'ಬಸವಲಿಂಗಪ್ಪ ಅವರು ಮಲ ಹೊರುವ ಪದ್ಧತಿಯನ್ನು ವಿರೋಧಿಸಿದ್ದರು. ಆದ್ದರಿಂದ ಅವರು ದೇಶ ದಾದ್ಯಂತ ಪರಿಚಿತರಾಗಿದ್ದರು. ದಲಿತರೇ, ದೇವರ ಪಟಗಳನ್ನು ಚರಂಡಿಗೆ ಹಾಕಿ ಎಂದು ಬಸವಲಿಂಗಪ್ಪ ಅವರು ಕರೆ ಕೊಟ್ಟಿದ್ದರು. ಆಗಿನ ಜನ ಇದಕ್ಕೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಅವರ ವಿರುದ್ಧ ಯಾವ ಪ್ರಕರಣವು ದಾಖಲಾಗಲಿಲ್ಲ. ಆಗ ಸಹಿಷ್ಣತೆ ಇತ್ತು. ಆದರೆ ಈಗ ಆ ಹೇಳಿಕೆ ನೀಡಿದ್ದರೆ ಎಷ್ಟು ಪ್ರಕರಣಗಳು ದಾಖಲಾಗುತ್ತಿದ್ದವೋ' ಎಂದು ಹೇಳಿದರು.

'ಬಸವಲಿಂಗಪ್ಪ ಮಾತು ತಿರುಚಿದ್ದ ಪತ್ರಕರ್ತರು'

'ಸಾಹಿತ್ಯದಲ್ಲಿ ಬೂಸಾ ಎನ್ನುವುದು ಇರುತ್ತದೆ. ಅದು ಸರಿಯೂ ತಪ್ಪೋ ಎನ್ನುವುದನ್ನು ನಾವು ತೀರ್ಮಾನ ಮಾಡಬೇಕು ಎಂದು ಬಸವಲಿಂಗಪ್ಪ ಅವರು ಹೇಳಿದ್ದರು. ಆದರೆ, ಸನಾತನಿ ಪತ್ರಕರ್ತರು ಅವರ ಮಾತುಗಳನ್ನು ತಿರುಚಿ ಕನ್ನಡ ಸಾಹಿತ್ಯದಲ್ಲಿ ಬೂಸಾ ಇದೆ ಎಂದು ಬರೆದಿದ್ದರು' ಎಂದು ಕಾಳೇಗೌಡ ನಾಗವಾರ ದೂರಿದರು.

'ಅನುದಾನಿತ ಶಿಕ್ಷಣ ಸಂಸ್ಥೆಗಳ ಖಾಲಿ ಹುದ್ದೆ ಭರ್ತಿಗೆ ಚಿಂತನೆ'

ಪ್ರಜಾವಾಣಿ ವಾರ್ತೆ

ಗದಗ: 'ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಸಕಾರಾತ್ಮಕ ಚಿಂತನೆ ನಡೆಸಿದ್ದು, ಈ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಲಾಗುವುದು' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ಪದವಿ ಪೂರ್ವ ನೌಕರರ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'2015ರಿಂದ 2023ರವರೆಗೆ ರಾಜ್ಯದ ವಿವಿಧ ಅನುದಾನಿತ ಶಿಕ್ಷಣ ಸಂಸ್ಥೆಗಳಿಂದ ನಿವೃತ್ತಿಯಾಗಿರುವ ಎಂಟು ಸಾವಿರ ಖಾಲಿ ಹುದ್ದೆಗಳ ಭರ್ತಿ ಆಗಬೇಕಿದೆ. ಈ ಕುರಿತಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲಾಗಿದ್ದು, ಕಡೆಪಕ್ಷ 2020ರವರೆಗೆ ನಿವೃತ್ತಿ ಆಗಿರುವ ಹುದ್ದೆಗಳ ಭರ್ತಿಗೆ ಅನುಮತಿ ಪಡೆಯುವ ವಿಶ್ವಾಸವಿದೆ' ಎಂದು ತಿಳಿಸಿದರು.

'ಮುಂದಿನ ವರ್ಷದಿಂದ ಕನಿಷ್ಠ 500ರಿಂದ 600 ಶಾಲೆಗಳಲ್ಲಿ ಪಬ್ಲಿಕ್ ಶಾಲಾ ವ್ಯವಸ್ಥೆ ಜಾರಿ ಆಗಲಿದೆ. ₹2,800 ಕೋಟಿ ಅನುದಾನ ಒದಗಿಸುವ ಗುರಿ ಹೊಂದಲಾಗಿದೆ. ಕೈಗಾರಿಕೆ ಸೇರಿದಂತೆ ಇತರೆ ಸಂಸ್ಥೆಗಳ ಸಿಎಸ್ಆರ್ ಅನುದಾನವನ್ನು ಸಂಪೂರ್ಣವಾಗಿ ಶಿಕ್ಷಣ ಇಲಾಖೆಗೆ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ' ಎಂದು ತಿಳಿಸಿದರು.

'ಶಾಲೆಗಳ ಮೇಲುಸ್ತುವಾರಿಗೆ ಎಸ್‌ಡಿಎಂಸಿ ಇರುವಂತೆ ಪದವಿ ಪೂರ್ವ ಹಂತದ ಮೇಲುಸ್ತುವಾರಿಗೆ ಸಮಿತಿ ಅವಶ್ಯವಿದೆ. ಈ ಹಿನ್ನೆಲೆಯಲ್ಲಿ ಆಡಳಿತ ನಿರ್ವಹಣೆಯನ್ನು ಮಾತ್ರ ಸಿಇಒ, ಉಪ ಕಾರ್ಯದರ್ಶಿಗಳಿಗೆ ವಹಿಸಲಾಗಿದೆ' ಎಂದು ತಿಳಿಸಿದರು.

'ಶಾಲಾ ಶಿಕ್ಷಣ ಇಲಾಖೆಯಲ್ಲಿ ಸಮಸ್ಯೆಗಳು ಹೆಚ್ಚಿದ್ದು, ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ. ಡಯಟ್‌ಗಳನ್ನು ಸಂಪೂರ್ಣವಾಗಿ ಉನ್ನತೀಕರಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು' ಎಂದು ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ: ವೃದ್ಧನ ಬಂಧನ

ಹೊಳೆಹೊನ್ನೂರು (ಶಿವಮೊಗ್ಗ): ಹೋಬಳಿ ವ್ಯಾಪ್ತಿಯ ಗ್ರಾಮವೊಂದರಲ್ಲಿ ಭಾನುವಾರ 78 ವರ್ಷ ವಯಸ್ಸಿನ ವೃದ್ಧನೊಬ್ಬ 9 ವರ್ಷದ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಎಸಗಿರುವ ಮತ್ತೊಂದು ಘಟನೆ ನಡೆದಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

ಆರೋಪಿಯು ಬಾಲಕಿಗೆ ಚಾಕೊಲೇಟ್ ಆಸೆ ತೋರಿಸಿ ಮನೆ ಯೊಂದಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದು, ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಿರುವ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

'ಸಮಯ ಬಂದಾಗ ಶಾಸಕರನ್ನು ವಿದೇಶಕ್ಕೆ ಕರೆದೊಯ್ಯೋಣ'

ಬೆಳಗಾವಿ: 'ಈಗ ಖಾಸಗಿಯಾಗಿ ಪ್ರವಾಸಕ್ಕೆ ಹೋಗಿದ್ದೆ. ಮುಂದೆ ಸಮಯ ಬಂದಾಗ ಶಾಸಕರು ಮತ್ತು ಮಾಜಿ ಶಾಸಕರನ್ನು ವಿದೇಶಕ್ಕೆ ಕರೆದುಕೊಂಡು ಹೋಗೋಣ. ಮುಂದೊಂದು ದಿನ ಆ ಸಮಯ ಬರುತ್ತದೆ' ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಈಚೆಗೆ ದಕ್ಷಿಣ ಆಫ್ರಿಕಾ ಪ್ರವಾಸ ಮುಗಿಸಿ ಮರಳಿರುವ ಅವರು ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಅನುದಾನ ಕೊರತೆಯಾಗಿದ್ದಕ್ಕೆ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸಲು ಸರ್ಕಾರ ಮುಂದಾಗಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಕೆಲವು ಇಲಾಖೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ಅವಶ್ಯಕತೆ ಇಲ್ಲ. ಹಾಗಾಗಿ ಈ ಇಲಾಖೆಗಳನ್ನು ವಿಲೀನ ಗೊಳಿಸುವ ಬಗ್ಗೆ 10 ವರ್ಷಗಳ ಹಿಂದೆಯೇ ವರದಿ ಕೊಟ್ಟಿದ್ದಾರೆ. ಈ ರೀತಿ ಹಿಂದಿನ ಸರ್ಕಾರಗಳಲ್ಲೂ ವಿಲೀನ ಪ್ರಕ್ರಿಯೆ ನಡೆದಿವೆ. ಗ್ಯಾರಂಟಿ ಯೋಜನೆಗಳಿಗೂ, ಇದಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕಾಂತರಾಜ ಆಯೋಗದ ವರದಿ ಜಾರಿಯಾದರೆ ಕಾಂಗ್ರೆಸ್ ಸರ್ಕಾರಕ್ಕೆ ತೊಂದರೆಯಾಗಲಿದೆಯೇ' ಎಂಬ ಪ್ರಶ್ನೆಗೆ, 'ಆಯೋಗದವರು ನಮಗೆ ಇನ್ನೂ ವರದಿಯನ್ನೇ ಕೊಟ್ಟಿಲ್ಲ. ವರದಿ ನೀಡಿದ ನಂತರ, ಅದರ ಬಗ್ಗೆ ಚರ್ಚೆಯಾಗಬೇಕು. ಈ ವರದಿ ನೀಡಲು ಇನ್ನೂ ಎರಡು ತಿಂಗಳು ಸಮಯಾವಕಾಶ ಕೇಳಿದ್ದಾರೆ. ವರದಿ ಬಂದ ಬಳಿಕ ನೋಡೋಣ. ರಾಜ್ಯ ಸರ್ಕಾರ, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಈ ಬಗ್ಗೆ ಚರ್ಚಿಸುತ್ತಾರೆ' ಎಂದರು.

'ಜಾತಿ ಗಣತಿಗೆ ವಿರೋಧ ಇಲ್ಲ'

ಶಿರಾ: ಜಾತಿ ಗಣತಿಯನ್ನು ಬಿಜೆಪಿ ಎಂದೂ ವಿರೋಧ ಮಾಡುವುದಿಲ್ಲ. ಆದರೆ, ಜಾತಿ ಗಣತಿ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಹಿಂದಿನ ಸಲ ಲಿಂಗಾಯತ, ವೀರಶೈವ ಎಂದು ಜಾತಿ ಒಡೆಯುವ ಕೆಲಸ ಮಾಡಿದ್ದ ಸಿದ್ದರಾಮಯ್ಯ ಈ ಬಾರಿ ಜಾತಿ, ಜಾತಿಗಳನ್ನು ಎತ್ತಿಕಟ್ಟಿ ರಾಜಕೀಯ ಲಾಭ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ತಾಲ್ಲೂಕಿನ ದೇವರಹಳ್ಳಿಯಲ್ಲಿ ಭಾನುವಾರ ಬರ ಅಧ್ಯಯನ ನಡೆಸಿದ ಬಳಿಕ ಅವರು ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಅವರ ಸಂಪುಟದ ಸದಸ್ಯರೇ ಜಾತಿ ಗಣತಿ ವರದಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ವರದಿ ಈಗಾಗಲೇ ಸೋರಿಕೆಯಾಗಿದ್ದು, ಅವೈಜ್ಞಾನಿಕವಾಗಿದೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ವಾಪಸ್ ಪಡೆಯುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಕೆಟ್ಟ ಸಂಪ್ರದಾಯ ಆರಂಭಿಸಿದೆ. ಸಂಪುಟ ಸಭೆಯನ್ನು ದುರುಪಯೋಗ ಮಾಡಿಕೊಂಡಿದೆ ಎಂದು ತರಾಟೆಗೆ ತೆಗೆದುಕೊಂಡರು.

ಈ ಹಿಂದೆ ಲೋಕಾಯುಕ್ತ ಸಂಸ್ಥೆ ರದ್ದು ಮಾಡುವ ಮೂಲಕ ಭ್ರಷ್ಟಾಚಾರಕ್ಕೆ ತಳಪಾಯ ಹಾಕಿದ ಭ್ರಷ್ಟಾಚಾರದ ರಾಯಭಾರಿ ಸಿದ್ದರಾಮಯ್ಯ, ಈಗ ಸಿಬಿಐ ತನಿಖೆ ರದ್ದುಪಡಿಸಿ ನ್ಯಾಯಾಂಗ ವ್ಯವಸ್ಥೆಗೆ ಅಪಮಾನ ಮಾಡಿದ್ದಾರೆ ಎಂದು ಅಶೋಕ ಟೀಕಿಸಿದರು.

ಮುಲಾಜಿನಲ್ಲಿ ಮಠಾಧೀಶರು

ಬಾಗಲಕೋಟೆ: 'ತಂದೆ-ತಾಯಿ, ಸಂಸಾರ ಹಾಗೂ ಸರ್ವಸ್ವವನ್ನೂ ತ್ಯಜಿಸಿ ಸನ್ಯಾಸಿಯಾಗುವ ಮಠಾಧೀಶರು ಯಾರ ಅಡಿಯಾಳಾಗಿರಬಾರದು. ಆದರೆ, ರಾಜ್ಯದಲ್ಲಿ ಕೆಲ ಮಠಾಧೀಶರು ರಾಜಕಾರಣಿಗಳ ಮನೆ ಕೆಲಸದಾಳುಗಳಿಗಿಂತಲೂ ಕಡೆಯಾಗಿ ನಡೆದುಕೊಳ್ಳುತ್ತಿದ್ದಾರೆ' ಎಂದು ಶಿರಹಟ್ಟಿ-ಬಾಲೆಹೊಸೂರಿನ ಫಕೀರೇಶ್ವರ ಮಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಟೀಕಿಸಿದರು.

ನವನಗರದ ಕಾಳಿದಾಸ ಶಿಕ್ಷಣ ಸಂಸ್ಥೆ ಮೈದಾನದಲ್ಲಿ ಶಿರೂರಿನ ಸಿದ್ದಲಿಂಗ ಶಿವಯೋಗಿಗಳ ಜನ್ಮ ಶತಮಾನೋತ್ಸವ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಕಲ್ಯಾಣ ಪರ್ವದಲ್ಲಿ ಅವರು ಮಾತನಾಡಿದರು.

ತೆಲಂಗಾಣದ ಮುಶೀರಾಬಾದ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಂಜನಕುಮಾರ್ ಯಾದವ್ ಪರ ನಡೆದ ಪ್ರಚಾರ ಸಭೆಯಲ್ಲಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಮಾತನಾಡಿದರು. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಸಚಿವ ಡಾ.ಎಂ.ಸಿ.ಸುಧಾಕರ್, ಮಾಜಿ ಸಚಿವ ರಘುವೀರ ರೆಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದರು.

'ಮನದ ಮಾತು' ಕಾರ್ಯಕ್ರಮದಲ್ಲಿ ಪ್ರಸ್ತಾಪ

ವರ್ಷಾ ಸಾಧನೆ ಹೊಗಳಿದ ಮೋದಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿ ಅವರು ಆಕಾಶವಾಣಿಯಲ್ಲಿ ನಡೆಸಿಕೊಡುವ 'ಮನದ ಮಾತು' ಕಾರ್ಯಕ್ರಮದ ಈ ಬಾರಿಯ ಸಂಚಿಕೆಯಲ್ಲಿ, ಬಾಳೆ ದಿಂಡಿನಿಂದ ಗೊಬ್ಬರ, ಅದರ ನಾರಿನಿಂದ ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸುತ್ತಿರುವ ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರಿನ ವರ್ಷಾ ಅವರ ಹೆಸರನ್ನು ಪ್ರಸ್ತಾಪಿಸಿ ಶ್ಲಾಘಿಸಿದ್ದಾರೆ.

ವರ್ಷಾ

ಎರಡು ವರ್ಷಗಳ ಹಿಂದೆ ಮೋದಿ 'ಮನದ ಮಾತು' ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ ಅಂಶಗಳಿಂದ ಪ್ರೇರಣೆಗೊಂಡು, ಎಂಟೆಕ್ ಪದವೀಧರೆ ವರ್ಷಾ 'ಆಕೃತಿ ಇಕೊ ಫ್ರೆಂಡ್ಲಿ ಎಂಟರ್‌ಪ್ರೈಸಸ್' ಎಂಬ ಸಂಸ್ಥೆ ಸ್ಥಾಪಿಸಿದ್ದಾರೆ. ಬಾಳೆ ದಿಂಡಿನಿಂದ ನಾರು ತೆಗೆದು ಅದರಿಂದ ಅಲಂಕಾರಿಕ ಮತ್ತು ಮನೆಯಲ್ಲಿ ಬಳಸಬಹುದಾದ ಕರಕುಶಲ ವಸ್ತುಗಳನ್ನು ತಯಾರಿಸಿ ಮಾರುತ್ತಿದ್ದಾರೆ.



ಬಾಳೆದಿಂಡಿನ ನಾರಿನಿಂದ ಮಾಡಿದ ಚಾಪೆ, ಕೈಚೀಲ ಇನ್ನಿತರ ವಸ್ತುಗಳು

ಭಾನುವಾರ ಬಿತ್ತರಗೊಂಡ ಸಂಚಿಕೆಯಲ್ಲಿ ಮಾತನಾಡಿದ ಮೋದಿ, 'ಮನದ ಮಾತು ಕಾರ್ಯಕ್ರಮ ಹಲವರಿಗೆ ಪ್ರೇರಣೆಯಾಗಿದೆ' ಎಂದು ಹೇಳುತ್ತಾ, ವರ್ಷಾ ಅವರ ಕೆಲಸವನ್ನು ವಿವರಿಸಿದರು.

'ವರ್ಷಾ ಅವರು ಬಾಳೆದಿಂಡಿನಿಂದ ಜೈವಿಕ ಗೊಬ್ಬರ ತಯಾರಿಸಲು ಆರಂಭಿಸಿದರು. ಪ್ರಕೃತಿಯ ಬಗ್ಗೆ ತುಂಬಾ ಪ್ರೀತಿ ಹೊಂದಿರುವ ವರ್ಷಾ ಅವರ ಈ ಕೆಲಸ, ಇತರರಿಗೆ ಉದ್ಯೋಗ ಅವಕಾಶ ನೀಡಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂತಸ: ಪ್ರಧಾನಿಯು ತಮ್ಮ ಕೆಲಸ ಗುರುತಿಸಿರುವುದಕ್ಕೆ 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡ ವರ್ಷಾ, 'ಬಾಳೆ ಗೊನೆ ಕಟಾವಿನ ನಂತರ ತ್ಯಾಜ್ಯ ಎಂದು ಎಸೆಯಲಾಗುವ ಬಾಳೆ ದಿಂಡಿನಿಂದ ವಿವಿಧ ವಸ್ತುಗಳನ್ನು ತಯಾರಿಸುತ್ತಿದ್ದೇನೆ. ನನ್ನ ಈ ಕಾರ್ಯಕ್ಕೆ ಮನದ ಮಾತು ಕಾರ್ಯಕ್ರಮ ಪ್ರೇರಣೆ. ಪ್ರಧಾನಿಯವರು ಅದನ್ನು ಗುರುತಿಸುತ್ತಾರೆ ಎಂದು ನಿರೀಕ್ಷಿರಲಿಲ್ಲ. ತುಂಬಾ ಖುಷಿಯಾಗಿದೆ' ಎಂದರು.

ಒಂದೂವರೆ ವರ್ಷದ ಹಿಂದೆ ಸ್ಥಾಪನೆ

ವರ್ಷಾ ತಮ್ಮ ಪತಿ ಶ್ರೀಕಂಠಸ್ವಾಮಿ ಸಹಕಾರದೊಂದಿಗೆ ತಾಲ್ಲೂಕಿನ ಉಮ್ಮತ್ತೂರು ಬಳಿಯ ಜಮೀನಿನಲ್ಲಿ ಒಂದೂವರೆ ವರ್ಷದ ಹಿಂದೆ ಪುಟ್ಟ ಘಟಕ ಆರಂಭಿಸಿದ್ದಾರೆ. ಎಂಟು ಜನರಿಗೆ ಉದ್ಯೋಗ ನೀಡಿದ್ದಾರೆ.

ಬಾಳೆಗೊನೆ ಕಟಾವಿನ ನಂತರ ಅನುಪಯುಕ್ತವಾಗುವ ಬಾಳೆ ದಿಂಡಿನ ಕಾಂಡದಿಂದ ನಾರು ಸಂಗ್ರಹಿಸಿ, ಅದರಿಂದ ಚಾಪೆ, ಹಗ್ಗ, ಮ್ಯಾಟ್, ಕೈಚೀಲ, ಪರ್ಸ್, ಗಡಿಯಾರ ಸೇರಿದಂತೆ ವಿವಿಧ ಕರ ಕುಶಲ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಉತ್ಪನ್ನಗಳನ್ನು ಆನ್‌ಲೈನ್ ವೇದಿಕೆ, ಇ–ಶಾಪಿಂಗ್ ತಾಣಗಳಲ್ಲಿ ಮಾರುತ್ತಿದ್ದಾರೆ.

'ದೀರ್ಘ ಸಮಯ ಅಧ್ಯಯನ ನಡೆಸಿದ ನಂತರ, ಸಣ್ಣ ಪ್ರಮಾಣದಲ್ಲಿ ಘಟಕ ಆರಂಭಿಸಿದ್ದೆವು. ಈಗ ಎಂಟು ಜನರು ಕೆಲಸ ಮಾಡುತ್ತಿದ್ದಾರೆ. ಜನರ ಸ್ಪಂದನೆ ಉತ್ತಮವಾಗಿದೆ. ಕಸದಿಂದ ರಸ ತೆಗೆಯುತ್ತಿರುವ ಖುಷಿಯೂ ನಮಗಿದೆ' ಎಂದು ವರ್ಷಾ ತಿಳಿಸಿದರು.

ಸಂವಿಧಾನ ವಿರೋಧಿಗಳ ಯತ್ನ ವಿಫಲ: ರವಿವರ್ಮ ಕುಮಾರ್

‘ಶ್ರಮಿಕ ವರ್ಗದ ಮಹಾಧರಣಿ’

ಪ್ರಜಾವಾಣಿ ವಾರ್ತೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಆರಂಭವಾದ ಮಹಾಧರಣಿಯಲ್ಲಿ ಪಾಲ್ಗೊಂಡಿದ್ದ ಹೋರಾಟಗಾರರು ಪ್ರಜಾವಾಣಿ ಚಿತ್ರ

ಬೆಂಗಳೂರು: ರೈತ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯುವುದೂ ಸೇರಿದಂತೆ ಹಲವು ಬೇಡಿಕೆ ಮುಂದಿಟ್ಟುಕೊಂಡು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕೇಂದ್ರ ಕಾರ್ಮಿಕ ಜಂಟಿ ಸಮಿತಿ ನೇತೃತ್ವದಲ್ಲಿ 72 ಗಂಟೆಗಳ ‘ದುಡಿಯುವ ಜನರ ಮಹಾಧರಣಿ’ ಭಾನುವಾರ ಆರಂಭಗೊಂಡಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾರಿ ಸಂಖ್ಯೆಯಲ್ಲಿ ಹೋರಾಟಗಾರರು ಪಾಲ್ಗೊಂಡಿದ್ದಾರೆ.

‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ’ ಎಂದು ಆಪಾದಿಸಿ ಘೋಷಣೆ ಕೂಗಿದರು.

ಸಿಪಿಐ, ಸಿಪಿಎಂ, ಸಿಪಿಐಎಂಎಲ್–ಎಲ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ಆಮ್ ಆದ್ಮಿ ಪಕ್ಷ (ಎಎಪಿ), ಲೋಕತಾಂತ್ರಿಕ ಜನತಾದಳ, ಜನತಾದಳ ಯುನೈಟೆಡ್, ನ್ಯಾಷನಲ್ ಕಾಂಗ್ರೆಸ್ ಪಕ್ಷ ಈ ಮಹಾಧರಣಿಗೆ ಬೆಂಬಲ ಸೂಚಿಸಿವೆ.

ರೈತರಿಗೆ ವಿತರಿಸುವ ಬಿತ್ತನೆಬೀಜ, ರಸಗೊಬ್ಬರ ಹಾಗೂ ವಿದ್ಯುತ್ ಮೇಲಿನ ಸಬ್ಸಿಡಿ ಹೆಚ್ಚಳ ಮಾಡಬೇಕು ಎಂದು ಹೋರಾಟಗಾರರು ಒಕ್ಕೊರಲಿನಿಂದ ಆಗ್ರಹಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಲಾದ ಭೂಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಕರ್ನಾಟಕ ಜಾನುವಾರು ಸಂರಕ್ಷಣಾ ತಿದ್ದುಪಡಿ ಕಾಯ್ದೆ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂವಿಧಾನದ ಕುರಿತಾದ ಗೀತ ಗಾಯನ ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಜನವಿರೋಧಿ ಕಾಯ್ದೆ ವಾಪಸ್ ಪಡೆಯುವಂತೆ ಆಗ್ರಹಿಸಿ ಸಾಕಷ್ಟು ಬಾರಿ ಹೋರಾಟ ನಡೆಸಿದ್ದರೂ ಮನವಿಗೆ ಸ್ಪಂದನೆ ಸಿಕ್ಕಿಲ್ಲ. ತಳ ಸಮುದಾಯಗಳಿಗೆ ಉನ್ನತ ಶಿಕ್ಷಣ ಇನ್ನೂ ಲಭಿಸುತ್ತಿಲ್ಲ. ಬಡವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಕೆಟ್ಟ ವ್ಯವಸ್ಥೆ ಬಿಡುತ್ತಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

ಸಂಜೆ ನಡೆದ ‘ಸಂವಿಧಾನ ಸಂಕಲ್ಪ ದಿನಾಚರಣೆ’ಯಲ್ಲಿ ವಕೀಲ ಪ್ರೊ. ರವಿವರ್ಮ ಕುಮಾರ್ ಮಾತನಾಡಿ, ‘ಒಂದು ಸಾವಿರಕ್ಕೂ ಹೆಚ್ಚು ಸಭೆ ನಡೆಸಿ ಪರಾಮರ್ಶಿಸಿ ಭಾರತದ ಸಂವಿಧಾನ ರಚಿಸಲಾಗಿದೆ. ‘ಈ ಸಂವಿಧಾನಕ್ಕೆ ಭವಿಷ್ಯವಿಲ್ಲ, ಬಹುಮುಖಿ ಸಮಾಜವು ಒಪ್ಪುವಂತಹದ್ದು ಅಲ್ಲ’ ಎಂದು ಆರ್‌ಎಸ್‌ಎಸ್ ಮುಖಂಡರು ಹೇಳಿದ್ದರು. ಅವರ ಭವಿಷ್ಯ ಸುಳ್ಳಾಗಿದೆ. ಬಹುಮುಖಿ ಸಮಾಜದ ಅನಾವರಣ ಮಾಡುವಲ್ಲಿ ಭಾರತದ ಸಂವಿಧಾನ ಅಗ್ರಮಾನ್ಯ ಪಾತ್ರ ವಹಿಸಿದೆ. ಜಗತ್ತಿನ ಬಹಳಷ್ಟು ಸಂವಿಧಾನಗಳು ನೆಲಕಚ್ಚಿವೆ. ಭಾರತದ ಸಂವಿಧಾನ ಸದೃಢವಾಗಿದೆ. ಅದನ್ನು ಅಲುಗಾಡಿಸುವ ಪ್ರಯತ್ನಗಳೂ ವಿಫಲವಾಗಿವೆ’ ಎಂದು ಹೇಳಿದರು.

‘ಬಹುತ್ವದ ಮೇಲೆ ಹಿಂದುತ್ವದ ಯುದ್ಧ’



‘ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಧರ್ಮ ಹಾಗೂ ಜಾತಿಗಳ ನಡುವೆ ಕಂದಕ ತೋಡಿ ಸಂಘರ್ಷವನ್ನು ಉಲ್ಬಣಗೊಳಿಸುತ್ತಿದೆ. ಸಂಘ ಪರಿವಾರದ ಚಾತುರ್ವರ್ಣ ಹಿಂದುತ್ವವು, ಬಹುತ್ವ ಭಾರತದ ಮೇಲೆ ಯುದ್ಧ ಸಾರಿದಂತೆ ಕಾಣಿಸುತ್ತಿದೆ’ ಎಂದು ಸಾಹಿತಿ ದೇವನೂರ ಮಹಾದೇವ ಆತಂಕ ವ್ಯಕ್ತಪಡಿಸಿದರು.

‘ಚಾತುರ್ವರ್ಣ ಹಿಂದುತ್ವದ ದಾಂದಲೆಗೆ ಸಿಲುಕಿ, ವಿಶಾಲ ಹಿಂದೂ ಧರ್ಮವೂ ಸೇರಿ ಅನೇಕ ಧರ್ಮಗಳು, ಪಂಥಗಳು, ನಂಬಿಕೆಗಳು ತತ್ತರಿಸುತ್ತಿವೆ. 2024ರ ಲೋಕಸಭೆ ಚುನಾವಣೆ ಎದುರಿಗಿದೆ. ಸಂಘ ಪರಿವಾರದ ಹಿಂದುತ್ವದ ಬಿಜೆಪಿ ಆಳ್ವಿಕೆಯನ್ನು ಕೊನೆಗಾಣಿಸಬೇಕಿದೆ. ಈಗಿನಿಂದಲೇ ಜನಾಂದೋಲನಗಳು ರೂಪುಗೊಳ್ಳಬೇಕಿದೆ. ಅರಳಿ ಮರದ ಕೆಳಗೆ, ಛಾವಡಿಯಲ್ಲಿ ಮಾತುಕತೆ ಆರಂಭಿಸಬೇಕಾಗಿದೆ. ಭಾರತ ಉಳಿಯಬೇಕು ಅಂದರೆ ಹಿಂದುತ್ವದ ಬಿಜೆಪಿ ಸೋಲಲೇಬೇಕಾಗಿದೆ’ ಎಂದು ಹೇಳಿದರು.

‘ರಾಜ್ಯದ ಕಾಂಗ್ರೆಸ್ ಸರ್ಕಾರವು ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಜನವಿರೋಧಿ ಕೃಷಿ ಕಾಯ್ದೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ರಾಜ್ಯ ಸರ್ಕಾರ ಈ ಕಡೆ ಕಣ್ತೆತ್ತಿ ನೋಡಬೇಕು. ಇಲ್ಲದಿದ್ದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಈಗ ಬಿಜೆಪಿಗೆ ಹೇಳುತ್ತಿರುವ ಮಾತನ್ನೇ ಕಾಂಗ್ರೆಸ್‌ಗೆ ಹೇಳಬೇಕಾಗುತ್ತದೆ’ ಎಂದರು.

ಸಾಹಿತಿ ಪುರುಷೋತ್ತಮ ಬಿಳಿಮಲೆ, ವಿ.ನಾಗರಾಜ್, ಜಿ.ಸಿ.ಬಯ್ಯಾರೆಡ್ಡಿ, ವಿಜಯಮ್ಮ, ಕೆ.ಎನ್.ಉಮೇಶ್, ಬಡಗಲಪುರ ನಾಗೇಂದ್ರ ಇದ್ದರು.

ಬೈಲೂರು ನಿಜಗುಣಾನಂದ ಸ್ವಾಮೀಜಿ ಆತಂಕ

‘ಏನಾದರೂ ಹೇಳಲು ಎದೆ ಧವ ಧವ ಅನ್ನುತ್ತಿದೆ’

ಬಸವಕಲ್ಯಾಣ (ಬೀದರ್): ‘ಬಸವಣ್ಣನವರ ವೈಚಾರಿಕತೆ ಹೇಳುವವರ ಬಾಯಿಗೆ ಬೀಗ ಹಾಕುವ ಹುನ್ನಾರ ನಡೆಯುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದಂತಾಗಿದೆ. ಹೀಗಾಗಿ ಏನಾದರೂ ಹೇಳಬೇಕೆಂದರೆ ಎದೆ ಧವ ಧವ ಅನ್ನುತ್ತಿದೆ’ ಎಂದು ಬೈಲೂರು ನಿಜಗುಣಾನಂದ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಎರಡನೇ ದಿನದ ಅನುಭವ ಮಂಟಪ ಮತ್ತು ಮಹಿಳಾ ಮೀಸಲಾತಿ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಲಿಂಗಾಯತರಲ್ಲಿ ಗಣೇಶನ ಪೂಜೆ ಇಲ್ಲ ಎಂದಿದ್ದಕ್ಕೆ ವಿರೋಧಿಸುತ್ತಿದ್ದಾರೆ. ನಾನು ಸಹ ತಪ್ಪು ಹೇಳದಿದ್ದರೂ ಕೊಲೆ ಬೆದರಿಕೆ ಹಾಕಿದ್ದಾರೆ. ಎಂ.ಎಂ.ಕಲಬುರ್ಗಿಯವರು ಕಲ್ಲು ದೇವರಲ್ಲ ಎಂದಿದ್ದಕ್ಕೆ ಅವರನ್ನು ಕೊಲೆ ಮಾಡಲಾಯಿತು. ಈಗಲೇ ಇಂಥ ಪರಿಸ್ಥಿತಿ ಇದೆ ಎಂದಾಗ 12ನೇ ಶತಮಾನದಲ್ಲಿ ಬಸವಣ್ಣನವರು ಎಷ್ಟು ಚಿತ್ರಹಿಂಸೆ ಅನುಭವಿಸಿರಬೇಕು’ ಎಂದರು.

‘ಬಸವತತ್ವಕ್ಕೆ ಲಿಂಗಾಯತರಲ್ಲಿನ ವೀರಶೈವ ಮನಸ್ಸಿನ ಮನುವಾದಿಗಳು ವಿರೋಧಿಸುತ್ತಿದ್ದಾರೆ. ಅನ್ಯರಿಂದ ಸಮಸ್ಯೆ ಆಗಿಲ್ಲ. ಅನೇಕರು ನನ್ನನ್ನು ಬೈಯುತ್ತಾರೆ. ನನಗೆ ಬೈಯಿರಿ. ಆದರೆ ಬಸವಣ್ಣನವರ ಬಗ್ಗೆ ಏನಾದರೂ ಅಂದರೆ ಸುಮ್ಮನೆ ಕೂಡಲಾರೆ ಎಂದು ಎಚ್ಚರಿಕೆ ಕೊಟ್ಟಿದ್ದೇನೆ’ ಎಂದರು.

ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು, ಶಾಸಕ ಶರಣು ಸಲಗರ, ಪ್ರೊ.ಶಿವಗಂಗಾ ರುಮ್ಮಾ ಇದ್ದರು.

ಇಂದಿರಾ ಹೆಗ್ಗಡೆ, ಆಶಾದೇವಿಗೆ ಎಚ್.ಎಸ್.ಪಾರ್ವತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಇಂದಿರಾ ಹೆಗ್ಗಡೆ

ಆಶಾದೇವಿ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ ಎಚ್.ಎಸ್. ಪಾರ್ವತಿ ದತ್ತಿ ಪ್ರಶಸ್ತಿ ಪ್ರಕಟವಾಗಿದ್ದು, 2022ನೇ ಸಾಲಿಗೆ ಸಂಶೋಧಕಿ ಇಂದಿರಾ ಹೆಗ್ಗಡೆ ಹಾಗೂ 2023ನೇ ಸಾಲಿಗೆ ವಿಮರ್ಶಕಿ ಎಂ.ಎಸ್. ಆಶಾದೇವಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಲೇಖಕಿಯರ ಸಂಘದ ಸ್ಥಾಪಕ ಕಾರ್ಯದರ್ಶಿ, ಬಳಿಕ ಅಧ್ಯಕ್ಷೆಯೂ ಆಗಿದ್ದ ಪಾರ್ವತಿ ತಮ್ಮ ಹೆಸರಿನಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ಲೇಖಕಿ ಡಾ. ವಸುಂಧರಾ ಭೂಪತಿ, ಉಪನ್ಯಾಸಕಿ ವತ್ಸಲಾ ಮೋಹ್ ಅವರಿದ್ದ ಆಯ್ಕೆ ಸಮಿತಿ, ಇಂದಿರಾ ಮತ್ತು ಆಶಾದೇವಿ ಅವರನ್ನು ಆಯ್ಕೆ ಮಾಡಿದೆ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ತಿಳಿಸಿದ್ದಾರೆ.

ಕಾಲ್ತುಳಿತ: ತನಿಖೆಗೆ ಆಯೋಗ

ತಿರುವನಂತಪುರ: ಕೇರಳದ ಕೊಚ್ಚಿಯ ಮಾಹಿತಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ‘ಟೆಕ್ ಫೆಸ್ಟ್’ನಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ನಾಲ್ವರು ವಿದ್ಯಾರ್ಥಿಗಳು ಮೃತಪಟ್ಟಿರುವ ಪ್ರಕರಣದ ತನಿಖೆಗಾಗಿ ಆಯೋಗವನ್ನು ರಚಿಸಲು ಸರ್ಕಾರ ಭಾನುವಾರ ನಿರ್ಧರಿಸಿದೆ.

ಮೂವರು ಸದಸ್ಯರ ಆಯೋಗದಲ್ಲಿ ತಾಂತ್ರಿಕ ಪರಿಣತರು ಕೂಡ ಇರಲಿದ್ದಾರೆ. ಭವಿಷ್ಯದಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಆಯೋಗವು ಸಲಹೆಯನ್ನೂ ನೀಡಲಿದೆ ಎಂದು ಉನ್ನತ ಶಿಕ್ಷಣ ಸಚಿವೆ ಆರ್. ಬಿಂದು ಹೇಳಿದ್ದಾರೆ.

ಕಾರ್ಯಕ್ರಮ ಆಯೋಜಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾಲ್ತುಳಿತದಲ್ಲಿ ಗಾಯಗೊಂಡಿದ್ದರು.

ಆರ್.ಅಶೋಕ ಸಿ.ಎಂ ಇಳಿಸುವ ಸೂತ್ರಧಾರರೇ: ಮಧು ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಗದಗ: ‘ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸಿ.ಎಂ ಇಳಿಸುವ ಸೂತ್ರಧಾರರೇ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಇಳಿಸುವ ವಿಷಯ ಕುರಿತು ಮಾತನಾಡಿದ್ದ ಆರ್.ಅಶೋಕ ಅವರಿಗೆ ಭಾನುವಾರ ನಗರದಲ್ಲಿ ತಿರುಗೇಟು ನೀಡಿದರು.

‘ಬಿಜೆಪಿಯಲ್ಲಿ ಮೂವರು ಸಿಎಂಗಳನ್ನು ಇಳಿಸಿದ್ದರಲ್ಲಾ ಅದಕ್ಕೆ ಆರ್.ಅಶೋಕ ಉಸ್ತುವಾರಿ ವಹಿಸಿದ್ದರೇ? ಬಿಜೆಪಿ ನಾಯಕರು ಅಶೋಕ ಅವರಿಗೆ ಉತ್ತಮ ಸ್ಥಾನ ಕೊಟ್ಟಿದ್ದಾರೆ. ಸರ್ಕಾರದ ಕೆಲಸವನ್ನು ರಚನಾತ್ಮಕವಾಗಿ ಪ್ರಶ್ನಿಸುವ ಮೂಲಕ ಉತ್ತಮ ಕೆಲಸ ಮಾಡಿಕೊಂಡು ಹೋಗಲಿ. ಮುಂದೆ ಲೋಕಸಭಾ ಚುನಾವಣೆ ಇದೆ. ಅದರ ಬಗ್ಗೆ ಯೋಚನೆ ಮಾಡಲಿ’ ಎಂದು ಸಲಹೆ ನೀಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಮೇಲಿನ ಸಿಬಿಐ ತನಿಖೆ ಪ್ರಕರಣ ಹಿಂಪಡೆದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ‘ಕಾನೂನು ಸಚಿವ ಎಚ್.ಕೆ.ಪಾಟೀಲ ಈ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಆದರೂ, ಡಿ.ಕೆ.ಶಿವಕುಮಾರ್ ಅವರನ್ನು ‘ಸೇಫ್’ ಮಾಡಿದ್ದು ಅಂತ ಏಕೆ ಹೇಳ್ತೀರಾ? ಕಾನೂನಿನಲ್ಲಿ ಮಾಡಬಾರದು ಅಂತ ನಿಯಮ ಇದೆಯೇ? ವಿರೋಧ ಪಕ್ಷದವರಿಗೆ ಮಾಡಲು ಕೆಲಸ ಇಲ್ಲ. ಈ ಬಗ್ಗೆ ಹೆಚ್ಚು ಚರ್ಚೆ ಅನಗತ್ಯ’ ಎಂದು ಹೇಳಿದರು.

‘ವರದಿ ಬಿಡುಗಡೆಯಾಗಲಿ, ಆಮೇಲೆ ನೋಡೋಣ’

ಎಸ್‌ಎಸ್ ಮಲ್ಲಿಕಾರ್ಜುನ್

ದಾವಣಗೆರೆ: ‘ಜಾತಿಗಣತಿಗೆ ಸಂಬಂಧಿಸಿದಂತೆ ಎಚ್. ಕಾಂತರಾಜ ಆಯೋಗದ ವರದಿ ಬಿಡುಗಡೆಯಾಗದೇ ಏನೂ ಮಾತನಾಡುವುದು ಬೇಡ. ಒಮ್ಮೆ ವರದಿ ಬಿಡುಗಡೆ ಆಗಲಿ ಅಮೇಲೆ ನೋಡೋಣ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಜಾತಿಗಣತಿ ವರದಿಯಲ್ಲಿ ಏನು ಇದೆ ಎಂಬುದು ಬಿಡುಗಡೆಯಾದ ಬಳಿಕವೇ ಗೊತ್ತಾಗಬೇಕು. ಶನಿವಾರ ನಡೆದ ವೀರಶೈವ ಮಹಾಸಭಾದ ಸಭೆಯಲ್ಲಿ ಈ ಬಗ್ಗೆ ವಿರೋಧ ವ್ಯಕ್ತವಾಗಿದೆ. ಈಗ ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಕ್ಕಲಿಗ, ಲಿಂಗಾಯತ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದಾರೆ. ಜಾತಿ ಗಣತಿ ವರದಿ ಬಿಡುಗಡೆ ಆದ ನಂತರ ಸತ್ಯಾಂಶ ಗೊತ್ತಾಗಲಿದೆ’ ಎಂದರು.

‘ಅನ್ಯಾಯವಾಗುವುದಾದರೆ ವರದಿ ಬಿಡುಗಡೆ ಬೇಡ’

ದಿಂಗಾಲೇಶ್ವರ ಸ್ವಾಮೀಜಿ

ಬಾಗಲಕೋಟೆ: ‘ಯಾವುದಾದರೂ ಸಮಾಜಕ್ಕೆ ಅನ್ಯಾಯವಾಗುತ್ತದೆ ಎನ್ನುವುದಾದರೆ, ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸರ್ಕಾರ ಬಿಡುಗಡೆ ಮಾಡಬಾರದು’ ಎಂದು ಶಿರಹಟ್ಟಿ– ಬಾಲೆಹೊಸೂರಿನ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಒಂದು ಸಮಾಜಕ್ಕೆ ಬೆಣ್ಣೆ, ಒಂದು ಸಮಾಜಕ್ಕೆ ಸುಣ್ಣ ಎಂಬುದು ವರದಿಯಲ್ಲಿ ಇರಬಾರದು’ ಎಂದು ಹೇಳಿದರು.

‘ವರದಿಯಲ್ಲಿ ಏನಿದೆ ಎಂಬುದು ನಮಗೂ ಗೊತ್ತಿಲ್ಲ. ವಿವಿಧ ಸಮಾಜದ ಮುಖಂಡರು ಅಭಿಪ್ರಾಯ ತಿಳಿಸಲು ಸ್ವತಂತ್ರರಾಗಿದ್ದಾರೆ. ಅವರ ಅಭಿಪ್ರಾಯ ಆಲಿಸುವ ಕೆಲಸ ಆಡಳಿತ ದಲ್ಲಿದ್ದವರಿಂದ ಆಗಬೇಕು’ ಎಂದು ಒತ್ತಾಯಿಸಿದರು.

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)
ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

1. ಒಟ್ಟು ಮೊತ್ತ : ರೂ. 3000 ಕೋಟಿ (11 ವರ್ಷಗಳ ಅಧಿಕಾರಾವಧಿ).
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : ನವೆಂಬರ್ 28, 2023.

ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ www.rbi.org.in ವೆಬ್‌ಸೈಟ್ ನಲ್ಲಿ ಲಭ್ಯವಿದೆ.

ಸಹಿ/– (ಡಾ. ರೇಜು ಎಂ.ಟಿ.)
ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ
DIPR/CP/RO/2236/2023-24

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
KARNATAKA INSTITUTE OF MEDICAL SCIENCES, HUBLI-580 022
Phone No:0836-2373348 Fax :0836-2373724
ಸಂ.ಕಿಮ್ಸ್/ಪೂವಿ(6)/ 184 /2023–24 ದಿನಾಂಕ : 24-11-2023

ಇ-ಟೆಂಡರ್ ಪ್ರಕಟಣೆ (ಮಾನವ ಸಂಪನ್ಮೂಲ ಸೇವೆಗಳ ಟೆಂಡರ್)

ಇಂಡೆಂಟ್ ನಂ–01 DME/2023–24/SE0123

2023–24 ನೇ ಸಾಲಿಗೆ ಕಿಮ್ಸ್ ಸಂಸ್ಥೆ ಹಾಗೂ ಎಲ್ಲಾ ಆಸ್ಪತ್ರೆಗಳಿಗೆ ಅಗತ್ಯವಿರುವ (ಪ್ಯಾರಾ ಮೇಡಿಕಲ್ ಸ್ಟಾಫ್) ಶುಶ್ರೂಷಕರ ಅನುಭವಿ ಕೆಲಸಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಟೆಂಡರ್ ಮೂಲಕ ಆಹ್ವಾನಿಸಲಾಗಿದೆ. ರೂ. 10.00 ಲಕ್ಷ ಇ.ಎಂ.ಡಿ. ಯೊಂದಿಗೆ ಈ ಟೆಂಡರ್ ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು ಟೆಂಡರ್ ಶುಲ್ಕ, ಮತ್ತು ಇತ್ಯಾದಿ ವಿವರಗಳನ್ನು https://www.e-proc.karnataka.gov.in ರಲ್ಲಿ ಪಡೆಯಬಹುದು.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ ಸಹಕಾರ ಇಲಾಖೆ

ಮಾರಾಟಾಧಿಕಾರಿಗಳು, ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ ಇವರ ಕಛೇರಿಯಿಂದ

ಸ್ಥಿರಸ್ವತ್ತಿನ ಸಾರ್ವಜನಿಕ ಬಹಿರಂಗ ಹರಾಜು ಇಸ್ತಿಹಾರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕಿನ ಪ್ರಧಾನ ಶಾಖೆ ಶಿವಮೊಗ್ಗ, ಇಲ್ಲಿ ಪಡೆದ ಗ್ರಾಮೀಣ ಗೋದಾಮು ಸಾಲದ ಪ್ರಕರಣದಲ್ಲಿ ಡಿಕ್ರಿಯಾಗಿರುವವರ ಈ ಕೆಳಗೆ ನಮೂದಿಸಿರುವ ಸ್ಥಿರಸ್ವತ್ತುಗಳ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಸ್ಥಿರಾಸ್ತಿಯನ್ನು ಕೊಂಡುಕೊಳ್ಳಲು ಇಚ್ಛೆಯುಳ್ಳವರು ಈ ಕೆಳಗೆ ನಮೂದಿಸಿರುವ ಸ್ಥಳದಲ್ಲಿ ಹಾಜರಿದ್ದು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳನ್ನು ಅನುಸರಿಸಿ, ಮಾರಾಟ ವಾಡಿಕೆಯಲ್ಲಿರುವ ಷರತ್ತಿಗೊಳಪಟ್ಟು ಬಿಡ್ ಮೂಲಕ ಪಡೆಯಬಹುದು.

ಕ್ರ. ಸಂ.	ಬಾಕಿದಾರರ ಹೆಸರು ಮತ್ತು ವಿಳಾಸ	ಇ.ಪಿ ಸಂಖ್ಯೆ	ಹರಾಜು ಆಗುವ ಸ್ವತ್ತಿನ ವಿವರ	ಅಂದಾಜು ವಿಸ್ತೀರ್ಣ & ಚಕ್ಕುಬಂಧಿ	ಬರಬೇಕಾದ ಸಾಲದ ಮೊಬಲಗು
	ಹರಾಜು ದಿ: 06-12-2023ನೇ ಬುಧವಾರ ಸಮಯ : ಬೆಳಿಗ್ಗೆ 11.30 ಘಂಟೆಗೆ ಸ್ಥಳ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಮತ್ತೋಡು ಗ್ರಾಮದ ಸ್ವತ್ತಿನ ಮುಂಭಾಗದಲ್ಲಿ				
1	ಜಿ.ಎಸ್. ನಾಗರಾಜ್ (ಪೌತಿ) ಬಿನ್ ಗಣಪತಿ ಇವರ ವಾರಸುದಾರರು ಶ್ರೀಮತಿ ಪ್ರಭಾವತಿ ನಾಗರಾಜ್ ಮತ್ತು ಮಕ್ಕಳಾದ, 1. ಪ್ರಿಯಾಂಕ ಎನ್. ರಾಜ್ 2. ಪ್ರಕೃತಿ ಎನ್. ರಾಜ್ 3. ಪ್ರತೀಕಾ ಎನ್. ರಾಜ್	ಇ.ಪಿ ನಂ. 18,19,20/ 2017-18 ಡಿಕ್ರಿ ನಂ. 1077,1080, 1079/ 2013-14	1. ಶಿವಮೊಗ್ಗ ತಾ॥ ಹೊಳಲೂರು ಹೋಬಳಿ–1 ಮತ್ತೋಡು ಗ್ರಾಮ ಸ.ನಂ.198/2, 198/3, 198/11, 198/12 ಮತ್ತು 198/13 (ಹಳೇ ಸ.ನಂ.198/ಪಿ9, 198/ಪಿ2, 198/ಪಿ9, 198/ಪಿ.5 ಮತ್ತು 198/ಪಿ3) ರಲ್ಲಿ ಒಟ್ಟು ವಿಸ್ತೀರ್ಣ 11.24 ಎಕರೆ ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಯಾದ ಜಮೀನು ಮತ್ತು ಅದರಲ್ಲಿರುವ ಗೋದಾಮು ಕಟ್ಟಡಗಳನ್ನು ಒಳಗೊಂಡ ಜಮೀನು.	ಸರ್ವೆ ನಂಬರ್. 198/2 2.00 ಎಕರೆ 198/3 2.00 ಎಕರೆ 198/11 5.16 ಎಕರೆ 198/12 1.00 ಎಕರೆ 198/13 1.08 ಎಕರೆ ಒಟ್ಟು 11.24 ಎಕರೆ ಪೂರ್ವ: ಸ.ನಂ.198/1, 198/8 & 198/9 ಪಶ್ಚಿಮ: ಸ.ನಂ.195 & 198/14 ಉತ್ತರ: ಸ.ನಂ.197 & 199 ದಕ್ಷಿಣ: ರಸ್ತೆ & ಸ.ನಂ.198/10	ದಿ: 31-10-2023 ರವರೆಗಿನ ಅಸಲು + ಬಡ್ಡಿ ಸೇರಿ ಒಟ್ಟು ರೂ.40,44,49,064/- ಗಳು ಮತ್ತು ಮುಂದುವರಿದ ಬಡ್ಡಿ ಮತ್ತು ಇತರೇ ವೆಚ್ಚಗಳು.
			2. ಶಿವಮೊಗ್ಗ ತಾ॥ ಹೊಳಲೂರು ಹೋಬಳಿ–1 ಮತ್ತೋಡು ಗ್ರಾಮ ಸ.ನಂ.198/7 (ಹಳೇ ಸ.ನಂ.198/ಪಿ9) ರಲ್ಲಿ ಒಟ್ಟು ವಿಸ್ತೀರ್ಣ 1.00 ಎಕರೆ ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಯಾದ ಜಮೀನು ಮತ್ತು ಅದರಲ್ಲಿರುವ ಗೋದಾಮು ಕಟ್ಟಡಗಳನ್ನು ಒಳಗೊಂಡ ಜಮೀನು.	ಸರ್ವೆ ನಂಬರ್. 198/7 1.00 ಎಕರೆ ಪೂರ್ವ: ಕೆರೆಕೋಡಿ ರಸ್ತೆ & ಸ.ನಂ.198/4 ಪಶ್ಚಿಮ: ಸ.ನಂ.198/1 ಉತ್ತರ: ಸ.ನಂ.200ರ ಕೆರೆ & ರಸ್ತೆ ದಕ್ಷಿಣ: ಸ.ನಂ.198/8	
			3. ಶಿವಮೊಗ್ಗ ತಾಲ್ಲೂಕು, ಹೊಳಲೂರು 1ನೇ ಹೋಬಳಿ, ಅಬ್ಬಲಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟ ಮತ್ತೋಡು ಗ್ರಾಮ ಸ.ನಂ.198/8 ರಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಂಡಿರುವ 0.38 ಗುಂಟೆ ಹಾಗೂ ಅಬ್ಬಲಗೆರೆ ಗ್ರಾಮ ಪಂಚಾಯ್ತಿ ದಾಖಲೆಯಂತೆ ಸ್ವತ್ತಿನ ಸಂಖ್ಯೆ: 198/8 ನಮೂನೆ–11 ಬಿ ರಲ್ಲಿ ಸ್ವತ್ತಿನ ಸಂಖ್ಯೆ: 152400502600421948ರ ಅಳತೆ 3844.51 ಚ.ಮೀ. ಹಾಗೂ ಇದರಲ್ಲಿ ನಿರ್ಮಿಸಿರುವ 3075.61 ಚ.ಮೀ. ಶೀಟು ಹೊದಿಕೆಯ ಕಟ್ಟಡ ಇದಕ್ಕೆ ಸೇರಿರುವ ಸ್ವತ್ತು.	ಸರ್ವೆ ನಂಬರ್. 198/8 0.38 ಗುಂಟೆ ಪೂರ್ವ: ಸ.ನಂ.198/4 ಪಶ್ಚಿಮ: ಸ.ನಂ.198/10 ಉತ್ತರ: ಸ.ನಂ.198/8 ದಕ್ಷಿಣ: ರಸ್ತೆ.	
	ಹರಾಜು ದಿ: 06-12-2023ನೇ ಬುಧವಾರ ಸಮಯ : ಬೆಳಿಗ್ಗೆ 3.00 ಘಂಟೆಗೆ ಸ್ಥಳ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಮತ್ತೋಡು ಗ್ರಾಮದ ಸ್ವತ್ತಿನ ಮುಂಭಾಗದಲ್ಲಿ				
2	ಕು॥ ಪ್ರಿಯಾಂಕ ಎನ್. ರಾಜ್ ಬಿನ್ ದಿ॥ ಜಿ.ಎಸ್. ನಾಗರಾಜ್	ಇ.ಪಿ ನಂ. 21/ 2017-18 ಡಿಕ್ರಿ ನಂ. 1078/ 2013-14	1. ಶಿವಮೊಗ್ಗ ತಾ॥, ಹೊಳಲೂರು ಹೋಬಳಿ–1 ಮತ್ತೋಡು ಗ್ರಾಮ ಸ.ನಂ.198/9 (ಹಳೇ ಸ.ನಂ. 198/1) ರಲ್ಲಿ ಒಟ್ಟು ವಿಸ್ತೀರ್ಣ 2.13 ಎಕರೆ ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಯಾದ ಜಮೀನು ಮತ್ತು ಅದರಲ್ಲಿರುವ ಗೋದಾಮು ಕಟ್ಟಡಗಳನ್ನು ಒಳಗೊಂಡ ಜಮೀನು.	ಸರ್ವೆ ನಂಬರ್. 198/9 2.13 ಎಕರೆ ಪೂರ್ವ: ಸ.ನಂ.198/4 ಪಶ್ಚಿಮ: ಸ.ನಂ.198/10 ಉತ್ತರ: ಸ.ನಂ.198/8 ದಕ್ಷಿಣ: ರಸ್ತೆ.	ದಿ: 31-10-2023 ರವರೆಗಿನ ಅಸಲು + ಬಡ್ಡಿ ಸೇರಿ ಒಟ್ಟು ರೂ.5,08,04,187/- ಗಳು ಮತ್ತು ಮುಂದುವರಿದ ಬಡ್ಡಿ ಮತ್ತು ಇತರೇ ವೆಚ್ಚಗಳು.

ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಮಾರಾಟಾಧಿಕಾರಿಗಳಿಂದ ಪಡೆಯಬಹುದು
ದೂ.ಸಂಖ್ಯೆ: ಪ್ರಧಾನ ಕಛೇರಿ: 08182-222396, ಪ್ರಧಾನ ಶಾಖೆ: 08182-221770.

ಷರತ್ತುಗಳು :–
(1). ಹರಾಜು ಮಾಡಲಾಗುವ ಆಸ್ತಿಯು ಹೇಗಿದೆಯೋ ಹಾಗೇ ಹರಾಜು ಮಾಡಲಾಗುವುದು. ಹರಾಜಿನಲ್ಲಿನ ಯಶಸ್ವಿ ಬಿಡ್‌ದಾರರಿಗೆ ಮಾರಾಟ ಸ್ಥಿರೀಕರಣ ಆದೇಶ / ಸೇಲ್ ಸರ್ಟಿಫಿಕೇಟ್ ನೀಡಿದ ನಂತರ ಯಾವುದೇ ತಂಟೆ–ತಕರಾರುಗಳು ಬಂದಲ್ಲಿ ಬ್ಯಾಂಕು ಹೊಣೆಗಾರರಾಗುವುದಿಲ್ಲ. (2). ಬಹಿರಂಗ ಹರಾಜು (OPEN AUCTION) ಮತ್ತು ಮುಚ್ಚಿದ ಲಕೋಟೆಯ (SEALED COVER) ಮೂಲಕ ಹರಾಜು ನಡೆಸಲಾಗುತ್ತದೆ. ಮುಚ್ಚಿದ ಲಕೋಟೆಯನ್ನು 2 ಸ್ವತ್ತಿನ ಬಹಿರಂಗ ಹರಾಜು ಮುಕ್ತಾಯವಾದ ನಂತರ ತೆರೆಯಲಾಗುವುದು. ಮುಚ್ಚಿದ ಲಕೋಟೆಯನ್ನು ಹರಾಜು ದಿನಾಂಕದ ಬೆಳಿಗ್ಗೆ 11.00 ಘಂಟೆಯ ಒಳಗೆ ಎರಡು ಸ್ವತ್ತುಗಳಿಗೆ ಪ್ರತ್ಯೇಕವಾಗಿ, ಬ್ಯಾಂಕಿನ ಪ್ರಧಾನ ಶಾಖೆಯಲ್ಲಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು. ಟೆಂಡರ್ ಸಲ್ಲಿಸಲು ಇಚ್ಛಿಸುವವರು ಟೆಂಡರ್ ಫಾರಂಗಳನ್ನು ಕಛೇರಿ ವೇಳೆಯಲ್ಲಿ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಸಾಲ ವಸೂಲಾತಿ ವಿಭಾಗದಲ್ಲಿ ಪಡೆಯಬಹುದು. (3). ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು, ಬಹಿರಂಗ ಹರಾಜಿನ ಒಂದು ಘಂಟೆ ಮುಂಚಿತವಾಗಿ ಪ್ರಕರಣ ಸಂಖ್ಯೆ: 01ಕ್ಕೆ ಅಸಲಿನ ಮೊತ್ತದ ಶೇ.10ರಂತೆ ರೂ.1,35,00,000-00 ಹಾಗೂ ಪ್ರಕರಣ ಸಂಖ್ಯೆ: 02ಕ್ಕೆ ಅಸಲಿನ ಮೊತ್ತದ ಶೇ.10ರಂತೆ ರೂ.17,26,000-00 ಇ.ಎಂ.ಡಿ.ಗಳ ಮೊತ್ತವನ್ನು ವ್ಯವಸ್ಥಾಪಕರು, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ನಿ., ಪ್ರಧಾನ ಶಾಖೆ, ಶಿವಮೊಗ್ಗ ಇವರ ಹೆಸರಿಗೆ ಆರ್.ಟಿ.ಜಿ.ಎಸ್/ ಡಿ.ಡಿ./ ಪೇ–ಆರ್ಡರ್ ಮುಖಾಂತರ ಪಾವತಿಸುವುದು ಹಾಗೂ ಬಿಡ್‌ದಾರರು ಪಾನ್ ಕಾರ್ಡ್ ಮತ್ತು ಆಧಾರ ಕಾರ್ಡ್‌ನ ನಕಲು ಪ್ರತಿ ನೀಡುವುದು ಕಡ್ಡಾಯವಾಗಿರುತ್ತದೆ. (4). ಹರಾಜನ್ನು ಪ್ರಸ್ತುತದಲ್ಲಿರುವ ಮಾರುಕಟ್ಟೆ ದರ / ಸರ್ಕಾರಿ ದರಗಳನ್ನು ಗಮನದಲ್ಲಿಟ್ಟುಕೊಂಡು ನಡೆಸಲಾಗುವುದು. ಆದ್ದರಿಂದ ಹರಾಜಿನಲ್ಲಿ ಭಾಗವಹಿಸುವವರು ಸಂಬಂಧಪಟ್ಟ ಆಸ್ತಿಯ ಮಾರುಕಟ್ಟೆ ದರ / ಸರ್ಕಾರಿ ದರಗಳ ಬಗ್ಗೆ ಮಾಹಿತಿ ಪಡೆದು ಭಾಗವಹಿಸತಕ್ಕದ್ದು. (5). . ಹರಾಜಿನ ಬಿಡ್ ನಿಂತ ತಕ್ಷಣ ಯಶಸ್ವಿ ಬಿಡ್‌ದಾರರು ಬಿಡ್ ಮೊಬಲಗಿನ ಶೇ.15ರಷ್ಟು ಹಣವನ್ನು ಪಾವತಿ ಮಾಡುವುದು. ಉಳಿದ ಹಣವನ್ನು ನೋಂದಾವಣಿ ವೆಚ್ಚ ಸಹಿತ 45 ದಿನಗಳೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ, ಬಿಡ್‌ದಾರರು ಪಾವತಿ ಮಾಡಿದ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (6). ಹರಾಜಿಗಿಟ್ಟ ಸ್ಥಿರಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಇರಬಹುದಾದ ಯಾವುದಾದರೂ ವ್ಯತ್ಯಾಸಗಳಿಗೆ ಬ್ಯಾಂಕ್/ಸರ್ಕಾರದವರು ಜವಾಬ್ದಾರರಾಗಿರುವುದಿಲ್ಲ. (7). ಬಿಡ್‌ದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಸಂಬಂಧಪಟ್ಟ ಸದರಿ ನಿವೇಶನ / ಕಟ್ಟಡ / ಯಂತ್ರೋಪಕರಣ ಹಾಗೂ ಇತರೇ ಎಲ್ಲಾ ಸ್ವತ್ತುಗಳನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8). ಬಿಡ್ ಮೊಬಲಗು ಬ್ಯಾಂಕಿಗೆ ಬಾಕಿಯಿರುವ ಒಟ್ಟು ಸಾಲದ ಮೊತ್ತಕ್ಕಿಂತ ಕಡಿಮೆಯಾದಲ್ಲಿ ಸದರಿ ಹರಾಜನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಕೆಸಿಎಸ್ ನಿಯಮದ ಪ್ರಕಾರ, ಮಾರಾಟಾಧಿಕಾರಿಗಳ ವಿವೇಚನೆಗೆ ಬಿಟ್ಟಿರುತ್ತದೆ. ಮಾರಾಟಾಧಿಕಾರಿಗಳು ಯಾವುದೇ ಕಾರಣ ನೀಡದೆ ಸದರಿ ಹರಾಜನ್ನು ರದ್ದುಗೊಳಿಸುವ / ಮುಂದೂಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ. (9). ಕಾನೂನು / ಇನ್ಸಿಡೆಂಟಲ್ ವೆಚ್ಚಗಳಾದ ಸ್ಟ್ಯಾಂಪ್ ವೆಚ್ಚ, ನೋಂದಣಿ ಶುಲ್ಕ, ಲೋಕಲ್ ತೆರಿಗೆ ಹಾಗೂ ಜಿ.ಎಸ್.ಟಿ. ತೆರಿಗೆ, ಇತರೆ ಕಾನೂನು ರೀತಿಯ ಶುಲ್ಕಗಳನ್ನು ಯಶಸ್ವಿ ಬಿಡ್‌ದಾರರು ಭರಿಸತಕ್ಕದ್ದು. (10). ಮಾರಾಟಾಧಿಕಾರಿಗಳು ಈ ಮಾರಾಟ ಪ್ರಕಟಣೆಯ ನಿಯಮ ಮತ್ತು ನಿಬಂಧನೆಗಳಲ್ಲಿ ಯಾವುದೇ ಮುನ್ಸೂಚನೆ ನೀಡದೇ ಬದಲಾವಣೆಗಳನ್ನು ಮಾಡುವ ಅಧಿಕಾರ ಹೊಂದಿರುತ್ತಾರೆ. (11). ಈ ಹರಾಜಿನಲ್ಲಿ ಬಿಡ್‌ದಾರರು ಬಾರದಿದ್ದಲ್ಲಿ ಸ್ಥಿರಾಸ್ತಿಯ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 101(ಬಿ) ಮೇರೆಗೆ ಡಿಕ್ರಿದಾರ ಬ್ಯಾಂಕಿನ ಹೆಸರಿಗೆ ನಿಲ್ಲಿಸಿ ಖಾತೆ ಮತ್ತು ಪಹಣಿಯನ್ನು ವರ್ಗಾವಣೆ ಮಾಡಲು ಕ್ರಮವಿಡಲಾಗುವುದು. (12). ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಆಸ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಕಛೇರಿಯ ಅವಧಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕರು, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ನಿ.,ಶಿವಮೊಗ್ಗ.
ಸಹಿ/– ಮಾರಾಟಾಧಿಕಾರಿ, ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್ ನಿ.,ಶಿವಮೊಗ್ಗ.

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 **NOTICE FOR PRIVATE SALE OF GOLD** 24/11/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2023 as shown below:

Br. Ainapur: Karchi Building, Opposite Pattan Panchayath, Ainapur, Athani, Belgaum, Karnataka- 591 303 Ph No. 08339-254084 :- 14976400009986.
Br. Bagalkot: Prema Arcade, Engineering college circle, Vidyagiri PO, Bagalkot-587 102 Ph no. 08354 233399 :-21966400040777,21966400022668.
Br. Belgaum/Tilakwadi: Near 3rd Railway Gate, Khanapur Road, Tilakwadi, Belgaum- 590 006 Ph no. 0831-2495439 :-
15306400013128,15306400017327,15306400010272,15306400013847,15306400013433,15306400010686,15306400012062,15306400016832,15306400017970,15306400011106,15306400014258,15306400014506,15306400016410,15306600000495,15306600000503,15306400009712,15306600000511,15306400013268,15306400016543,15306400016949.
Br. Belgaum/City: Ground Floor, Vijaylaxmi Arcade, Opp. Khade Bazar Police station, Narvekar Galli, Belgaum- 590002,Ph no. 0831-2423460:-
15096400019817,15096400032257,15096400031168,15096400033453,15096400031705,15096400032588,15096400020179,15096400032000,15096400024502.
Br. Bellary: Modi Chambers, 2nd Cross, Gandhi Nagar, Bellary, Karnataka- 583 103 Ph no. 08392-258667 :-
15896400135947,15896400166827,15896400163196,15896400126326,15896400165423,15896400165548,15896400166546,15896400165589,15896400167767,15896400153700,15896400168062,15896400166413,15896400153726,15896400150698,15896400154443,15896400153718,15896400156372,15896600001063,15896400165969,15896400153841,15896600001071,15896400153684,15896400166223,15896400153676,15896400153395,15896400165456,15896400162867,15896400128157,15896400164889,15896400128637,15896400151068,15896400098483,15896400163311.
Br. Chitradurga: Opp.Vasavi Mahal, Basaveshwara Talkies Road, Chitradurga- 577 501, Ph no. 08194-220931 :- 15946400065014,
15946400067325,15946400068091,15946400075310,15946400061369,15946400067424,15946400063662,15946400070014,15946400052707,15946400067465,15946400063696,15946400076276,15946400065659,15946400050099,15946400054232,15946400062904,15946400062243,15946400067481,15946400055429,15946400075435,15946400066483,15946400058597,15946400028236,15946400069206,15946400058878,15946400059868,15946400064413,15946400064421,15946400059025,15946400067705,15946400062482,15946400069750,15946400066616,15946400071012,15946400066095,15946400076169,15946400055114,15946400071301,15946400075781,15946400073232,15946400066772,15946400072390,15946400076045,15946400066749,15946400067739,15946400055031,15946400054927,15946400069453,15946400075427,15946400067184,15946400066780,15946400035215,15946400067341,15946400066798,15946400075880.
Br. Davanagere: Raghavendra Plaza, No.200/1A & 200/1B, 3rd Main, 7th Cross, 28th Ward, P J Extension, Davangere- 577002 Ph no. 08192-222511 :-
22976400019951,22976400027160,22976400026428,22976400017054,22976400025057,22976400026865,22976400025776,22976400017856,22976400026451,22976400026691,22976400019928,22976400027293,22976400026469,22976400026485,22976400025032,22976400026378,22976400026527. **Br. Ganeshpur: Plot No. 19, BUDA Scheme No 51, Near Military Hospital, Ganeshpur Main Road, Belgaum - 590 009, Ph no. 0831-2446719 :-**14956400017676.
Br. Dharwad: Inamdhar Desai Arcade, Opp Spandhana Hospital, Vivekananda Circle,Saptapur, Dharwad- 580 001, Ph no. 0836-2445280 :-
16386400087719,16386400085432,16386400086786,16386400086778,16386400087461,16386400079914,16386400076803,16386400087032,16386400076969,16386400076951,16386400087677,16386400087404,16386400080847,16386400087016,16386400086638,16386400086653,16386400086646,16386400087594,16386400076753. **Br. Gulbarga: Plot No.7, 1st Floor, Main Road, Super Market, Gulbarga- 585 101 Ph no. 08472-230107 :-**16046400031766,
16046400033325,16046400040254,16046400040569,16046400041427.
Br.Gangawati: Building No 2-12-81,82,83, Malleswara Complex, Koppal road, Gangawati - 583 227 Ph no. 08533-271861 :-
16856400104227,16856400048804,16856400108145,16856400102783,16856400107956,16856400053093,16856400107337,16856400089808,16856400087950,16856400092752,16856400078413,16856400049315,16856400106669,16856400090335,16856400106057,16856400090517,16856400104748.
Br. Hubli: Swastik Central, Niligin Road, New Cotton Market, Hubballi, Dharwad- 580 029,Ph no. 0836-2369449 :-
13386400098131,13386400094221,13386400098180,13386400097570,13386400098164,13386400094940,13386400094023,13386400100614,13386400100325,13386400098115,13386400096333,13386400101828,13386400082853,13386400098172,13386400097422,13386400101802,13386400093801,13386100407038,13386400095178,13386400080337,13386400101893,13386400080352,13386400102966,13386400089965.
Br. Hiriyur: Prashantha Nilaya, Main Road, Hiriyur, Chitradurga Dist, Karnataka :- 577 598, Ph no. 08193271024 :-
19886400046547,19886400065539,19886400052651,19886400065794,19886400071669,19886400070976,19886400071610,19886400072030,19886400071453,19886400071412,19886400039419,19886400061439,19886400058161,19886400071768,19886400050937,19886400049871,19886400064169,19886400063419,19886400072048,19886400062866,19886400070810,19886400065828.
Br. Haveri: C Plot No.30A, Vidya Nagar, P B Road, Haveri Dist, Karnataka- 581110 Ph no. 08375232784 :-
20436400055903,20436400062636,20436400044071,20436400043313,20436400063535,20436400063725,20436400063733,20436400043867,20436400064525,20436400046670,20436400065092,20436400046829,20436400058733,20436400047819,20436400065308,20436400059111,20436400060937,20436400037489,20436400068971,20436400047470,20436400056901,20436400057669.
Br. Kagwad: Athani Road, Kagwad PO, Taluk-Athani, Belgaum- 591 223 Ph:08339264628 :-14806400019315,14806400019323,14806400019372,14806400020230.
Br. Koppal: Kodandappa Complex,Near Kiran Paints, Jawahar Road, Koppal- 583 231, Ph no. 0853-9220606 :-
21176400073675,21176400083799,21176400076892,21176400053156,21176400086842,21176400083351,21176400085349,21176400085356,21176400083773,21176400083245,21176400062181,21176400088392,21176400083310,21176400074186,21176400041516,21176400069210,21176400077965,21176400076884,21176400089853,21176400070366,21176400076462,21176400078294,21176400076546,21176600000932,21176400083609,21176400079086,21176400083401.
Br. Ranebennur: Gungadatti Building, Opp.KEB Office, PB Road, Ranibennur, Haveri- 581 115, Ph no. 08373-262111 :- 21116400027578.
Br. Raichur: Ashwini Complex, Opp. Public Gardens, Ambedkar Circle, Station Road, Raichur- 584101, Ph no. 08532-225091:-
15736400135432,15736400119998,15736400092369,15736400135671,15736400135960,15736400136224.
Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum- 591316, Ph no.8339 272325:-
14996400027689,14996400029909,14996400029511,14996400022367,14996400025717,14996400030410,14996400029768,14996400028158.
Br. Vijayapura: CTS No: 1439, Upuli Burz Road, Opp. Milan Medicals, Near M G Road, Vijayapura- 586101:-
23266400004800,23266400004867,23266400006185.

Bangalore 24-11-2023 Vice President & Zonal Head



ನೆಟ್‌ವರ್ಕ್ ಸಮಸ್ಯೆಯ ನಡುವೆ ಕೋಣಗಳ ರೇಸ್ ಕಣ್ತುಂಬಿಕೊಂಡ ಪ್ರೇಕ್ಷಕರು

ಕಂಬಳಕ್ಕೆ ಹರಿದು ಬಂದ ಜನಸಾಗರ

• ಅಬ್ದುಲ್ ರಹಿಮಾನ್

ಬೆಂಗಳೂರು: ಕರೆಯಲ್ಲಿ ಆಳೆತ್ತರಕ್ಕೆ ನೀರು ಚಿಮ್ಮಿಸಿಕೊಂಡು ವೇಗವಾಗಿ ಓಡುತ್ತಿರುವ ಕೋಣಗಳು, ಜನರಿಂದ ಶಿಳ್ಳೆ, ಚಪ್ಪಾಳೆ, ಮೊಳಗುತ್ತಿರುವ ಚೆಂಡೆ, ವಾದ್ಯ, ಕಹಳೆಗಳ ಸದ್ದು, ಕೋಣಗಳನ್ನು ಸಿಂಗರಿಸಿ ಓಟಕ್ಕೆ ತಯಾರಿ ಮಾಡುತ್ತಿರುವ ಮಾಲೀಕರು, ಸೋತು ನಿರಾಸೆಯಿಂದ ಮರಳುತ್ತಿರುವವರು, ಮೊದಲ ಬಾರಿಗೆ ಕೋಣಗಳ ಓಟವನ್ನು ನೋಡಲು ಆಸೆಗಣ್ಣಿನಿಂದ ಬರುತ್ತಿರುವ ಮಂದಿ...

ಇದು ನಗರದ ಅರಮನೆ ಮೈದಾನದಲ್ಲಿ ನಡೆದ 'ಬೆಂಗಳೂರು ಕಂಬಳ ನಮ್ಮ ಕಂಬಳ'ದ ಎರಡನೇ ಹಾಗೂ ಅಂತಿಮ ದಿನವಾದ ಭಾನುವಾರ ಕಂಡು ಬಂದ ದೃಶ್ಯಾವಳಿ.

ಮೊದಲ ಬಾರಿ ಬೆಂಗಳೂರಿನಲ್ಲಿ ನಡೆದ ಕಂಬಳ ವೀಕ್ಷಿಸಲು ನಗರದ ವಿವಿಧ ದಿಕ್ಕುಗಳಿಂದ ಅರಮನೆ ಮೈದಾನಕ್ಕೆ ಜನಸ್ತೋಮವೇ ಹರಿದುಬಂತು. ಜನಜಂಗುಳಿಯಲ್ಲಿ ಕಂಬಳ ಕಣ್ತುಂಬಿಕೊಳ್ಳಲಾಗದೆ ಸಪ್ಪೆ ಮೋರೆ ಹಾಕಿಕೊಂಡು ಮರಳುತ್ತಿರುವವರು, ಜನರ ನಿಯಂತ್ರಣಕ್ಕೆ ಹರಸಾಹಸ ಪಡುತ್ತಿರುವ ಸ್ವಯಂಸೇವಕರು, ಇವೆಲ್ಲವುಗಳ ನಡುವೆ 'ಅಲೆ ಬುಡಿಯೆರ್...' (ಅಗೋ ಬಿಟ್ಟರು...) ಎಂದು ಮೈಕ್‌ನಲ್ಲಿ ಹೇಳುವಾಗ ಮುಗಿಲು ಮುಟ್ಟುವ ಹರ್ಷೋದ್ಗಾರ, ಲಾರಿ ಸಮೀಪವೇ ಹಾಕಿದ್ದ ಟೆಂಟ್‌ಗಳಲ್ಲಿ ವಿಶ್ರಮಿಸುತ್ತಿದ್ದ ಕೋಣಗಳ ಜೊತೆ ಫೋಟೊ ಹೊಡೆಸಿಕೊಳ್ಳುತ್ತಿದ್ದ ದೃಶ್ಯಗಳೂ ಸಾಮಾನ್ಯ ಎನಿಸಿದವು.

ರಜಾ ದಿನವಾಗಿದ್ದರಿಂದ ಭಾನುವಾರ ಬೆಳಿಗ್ಗೆಯಿಂದಲೇ ಜನ ಅರಮನೆ ಮೈದಾನಕ್ಕೆ ತಂಡತಂಡವಾಗಿ ಬರತೊಡಗಿದರು. ಪರಿಣಾಮ ಜಯಮಹಲ್ ರಸ್ತೆ, ಮೇಕ್ರಿ ಸರ್ಕಲ್, ಸಿ.ವಿ ರಾಮನ್ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಯಿತು. ವಾಹನ ನಿಲುಗಡೆಗೆ ಇದ್ದ ಗೇಟ್ ನಂಬರ್ 1ರಲ್ಲಿ ವಾಹನಗಳ ತುಂಬಿದ್ದವು.

ಇದೇ ಮೊದಲ ಬಾರಿ ಬೆಂಗಳೂರಿನಲ್ಲಿ ಕಂಬಳ ನಡೆದಿದ್ದರಿಂದ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು. ಕಾಂತಾರ ಸಿನಿಮಾದಲ್ಲಿ ಕಂಬಳ ನೋಡಿ ಪ್ರಭಾವಿತರಾದವರು, ಏನಿದು ಕಂಬಳ ಎಂದು ಕುತೂಹಲದಿಂದ ನೋಡಲು ಬಂದವರ ಸಂಖ್ಯೆಯೂ ಹೇರಳವಾಗಿತ್ತು. ಎರಡು ದೊಡ್ಡ ಪರದೆಗಳನ್ನು ಅಳವಡಿಸಲಾಗಿದ್ದರೂ ಅದರಲ್ಲಿ ನೋಡುತ್ತಿದ್ದವರು ಕಡಿಮೆ.

ಅಪಾರ ಜನಸ್ತೋಮ ಇದ್ದಿದ್ದರಿಂದ, ಹಲವು ಮಂದಿ ಸ್ಪರ್ಧೆ ನೋಡಲಾಗದೆ ನಿರಾಶೆಯಿಂದ ಮರಳಿದರು. ಕೆಲವರು ಹರಸಾಹಸ ಪಟ್ಟು ಕಂಬಳವನ್ನು ಕಣ್ತುಂಬಿಕೊಂಡರು. ಪಾಸ್ ವ್ಯವಸ್ಥೆ ಅಸಮರ್ಪಕವಾಗಿದ್ದರಿಂದ ಸಂಘಟಕರು ಹಾಗೂ ಪ್ರೇಕ್ಷಕರ ಮಧ್ಯೆ ಮಾತಿನ ಚಕಮಕಿ ಕಂಡುಬಂತು. ಕೋಣಗಳ ಸಂಚಾರಕ್ಕೆಂದು ನಿರ್ಮಿಸಲಾಗಿದ್ದ ಪಥದಲ್ಲಿ ಜನರು ಸೇರಿದ್ದರಿಂದ, ಕರೆಗೆ ಕೋಣಗಳನ್ನು ಕರೆತರುವುದು ತ್ರಾಸವಾಯಿತು.

'ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಕಂಬಳ ನಡೆದಿದ್ದರಿಂದ ಉತ್ಸಾಹದಿಂದ ಭಾಗವಹಿಸಿದ್ದೇವೆ. ನಮಗೆ ಎಲ್ಲಾ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಪ್ರತಿ ವರ್ಷವೂ ಬೆಂಗಳೂರಿನಲ್ಲಿ ಕಂಬಳ ನಡೆಯಬೇಕು ಎನ್ನುವುದು ನಮ್ಮ ಬಯಕೆ' ಎಂದು ಸುರಬಿ ಗ್ರೂಪ್ ತುಳುನಾಡು ಕೋಣದ ಮಾಲೀಕ ಅಜಯ್ ಪೂಜಾರಿ ಹೇಳಿದರು.

ಕಂಬಳ ವೀಕ್ಷಣೆಗೆ ಹೆಚ್ಚಿನ ವ್ಯವಸ್ಥೆ ಕಲ್ಪಿಸಬೇಕಿತ್ತು, ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹಲವು ಮಂದಿ ಅಭಿಪ್ರಾಯ ವ್ಯಕ್ತಪಡಿಸಿದರು. ಜನಜಂಗುಳಿ ವಿಪರೀತವಾಗಿ ನೆಟ್‌ವರ್ಕ್ ಸಮಸ್ಯೆಯಿಂದ ಜನ ಪರದಾಡಿದರು. ಕರಾವಳಿಯ ಹುಲಿಕುಣಿತ, ಯಕ್ಷಗಾನ, ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಕೂಡ ಗಮನ ಸೆಳೆದವು. ಕರಾವಳಿಯ ಸಂಸ್ಕೃತಿಯನ್ನು ಬಿಂಬಿಸುವ ವಸ್ತು ಪ್ರದರ್ಶನವನ್ನು ಜನ ಆಸಕ್ತಿಯಿಂದ ವೀಕ್ಷಿಸಿದರು. ಕಂಬಳದ ಪ್ರತಿಕೃತಿ, ಕೋಟಿ -ಚನ್ನಯ ಹಾಗೂ ಭಗವಾನ್ ಬಾಹುಬಲಿ ಮೂರ್ತಿ, ವೀರಗಾಸೆಯ ಪ್ರತಿಮೆಯ ಮುಂದೆ ನಿಂತು ಜನ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಆಹಾರ ಮೇಳ

ಆಹಾರ ಮೇಳದಲ್ಲಿ ನೂರಕ್ಕೂ ಹೆಚ್ಚು ಮಳಿಗೆಗಳಲ್ಲಿ ವಿವಿಧ ಖಾದ್ಯಗಳನ್ನು ಜನ ಸವಿದರು. ಕೋರಿ ರೊಟ್ಟಿ, ನೀರು ದೋಸೆ, ಗೋಳಿಬಜೆ, ಬನ್ಸ್, ಶ್ಯಾವಿಗೆ ಮುಂತಾದ ಕರಾವಳಿ ಹಾಗೂ ರಾಜ್ಯದ ವಿವಿಧ ಭಾಗಗಳ ಆಹಾರಗಳೂ ಲಭ್ಯವಿದ್ದರೂ ದುಬಾರಿಯಾಗಿತ್ತು.

ಊಟದ ವ್ಯವಸ್ಥೆ

ಕರಾವಳಿ ಶೈಲಿಯ ಊಟದ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನದ ಊಟಕ್ಕೆ ಕುಚಲಕ್ಕಿ ಅನ್ನ, ವೈಟ್ ರೈಸ್, ಕಡಲೆ ಹಾಗೂ ಬಟಾಣಿ ಸಾರು, ತಿಳಿಸಾರು, ಮೊಸರು ಹಾಗೂ ಕೋಳಿ ಸಾರು ಇತ್ತು. ಕಂಬಳ ನೋಡಲು ಬಂದವರಿಗೆ, ಕೋಣಗಳೊಂದಿಗೆ ಬಂದವರಿಗೆ, ಪೊಲೀಸರಿಗೆ, ಪತ್ರಕರ್ತರಿಗೆ ಒಂದೇ ಕಡೆ ಊಟದ ವ್ಯವಸ್ಥೆ ಮಾಡಿದ್ದರಿಂದ ಅಲ್ಲಿಯೂ ನೂಕುನುಗ್ಗಲು ಉಂಟಾಯಿತು. ಉದ್ದದ ಸಾಲಿನಲ್ಲಿ ನಿಂತು ಜನ ಹೈರಾಣಾದರು.

ಕಂಬಳ ಮುಗಿಸಿ ಹೊರಟ ಕಾರಿಗೆ ಲಾರಿ ಡಿಕ್ಕಿ: ಇಬ್ಬರ ಸಾವು

ಕುಣಿಗಲ್ (ತುಮಕೂರು): ಬೆಂಗಳೂರಿನಲ್ಲಿ ನಡೆದ ಕಂಬಳ ನೋಡಿ ಮಂಗಳೂರಿಗೆ ವಾಪಸ್ ಹೊರಟಿದ್ದ ಕಾರಿಗೆ ಭಾನುವಾರ ಬೆಳಗ್ಗೆ ಕುಣಿಗಲ್ ಬಳಿ ಬೋರ್‌ವೆಲ್ ಲಾರಿ ಡಿಕ್ಕಿ ಹೊಡೆದು ಕಾರಿನಲ್ಲಿದ್ದ ಇಬ್ಬರು ಸಾವನ್ನಪ್ಪಿದ್ದಾರೆ. ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ತಾಲ್ಲೂಕಿನ ರಾಜ್ಯ ಹೆದ್ದಾರಿ 33 ಜಿಗಣಿಪಾಳ್ಯ ಸಮೀಪ ಕಾರಿಗೆ ಬೋರ್‌ವೆಲ್ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಕಾರು ನುಜ್ಜುಗುಜ್ಜಾಗಿದ್ದು, ಅದರಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಬೆಂಜನಪದವಿನ ಕಿಶನ್ ಶೆಟ್ಟಿ (22) ಮತ್ತು ಫಿಲಿಪ್ ಮೇರಿ ಲೋಬೊ (32) ಮೃತಪಟ್ಟಿದ್ದಾರೆ.

ನಿತೀಶ್ ಭಂಡಾರಿ (23), ಪ್ರೀತಿ ಲೋಬೊ (27) ಮತ್ತು ಹರೀಶ್ (30) ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಫಿಲಿಪ್ ಮೇರಿ ಲೋಬೊ ಮತ್ತು ಪ್ರೀತಿ ಲೋಬೊ ಎಂಟು ತಿಂಗಳ ಹಿಂದೆ ಮದುವೆಯಾಗಿದ್ದರು. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಬಳದ ವಿರಾಟ್ ಕೊಹ್ಲಿ...

ಕಾರ್ಕಳದ ನಂದಳಿಕೆಯ ಕಂಬಳದ ಕೋಣ ಈ ಬಾರಿಯ ಆಕರ್ಷಣೆಗಳಲ್ಲಿ ಒಂದು. 21 ವರ್ಷದ ಈ ಕೋಣ 'ಪಾಂಡು' ಓಟಕ್ಕೆ ಬಂದದ್ದಲ್ಲ. ಸನ್ಮಾನ ಸ್ವೀಕರಿಸಲು ಬಂದದ್ದು. ಭಾನುವಾರ ಸಂಜೆ ಜನ ಸಾಗರದ ಮಧ್ಯೆ ಈ ಕೋಣಕ್ಕೆ ಸನ್ಮಾನದ ಯೋಗ.

ನಂದಳಿಕೆ ಶ್ರೀಕಾಂತ್ ಭಟ್ ಇದರ ಯಜಮಾನ. ಏಳು ವರ್ಷ ಚಾಂಪಿಯನ್ ಆಗಿರುವ ಈ 'ಪಾಂಡು' 203 ಪದಕಗಳನ್ನು ಗೆದ್ದ ಸಾಹಸಿ. ಕೆಲ ವರ್ಷಗಳ ಹಿಂದೆ ವೀಕ್ಷಕ ವಿವರಣೆಯ ಸಂದರ್ಭ ಒಬ್ಬರು ಇದನ್ನು 'ಕಂಬಳದ ವಿರಾಟ್ ಕೊಹ್ಲಿ' ಎಂದು ಹೇಳಿದ ಮೇಲೆ ಇದನ್ನು ಹಾಗೆ ಕರೆಯುವ ಕಂಬಳ ಪ್ರಿಯರೇ ಹೆಚ್ಚು. ನಕ್ರೆ ಜಯಕರ ಮಡಿವಾಳ, ಮುಕೇಶ್ ಶಿರಿಕಜೆ, ಕಾರ್ತಿಕ್ ಅವರು ಈ ಕೋಣಗಳನ್ನು ಓಡಿಸಿದ್ದಾರೆ. ಯೂ ಟ್ಯೂಬ್‌ನಲ್ಲೂ 'ಪಾಂಡು'ವಿನ ಬಗ್ಗೆ ವಿಡಿಯೊ ಇದೆ. ಚಾಂಪಿಯನ್ ಕುಟ್ಟಿ ಹೆಸರಿನ ಕೋಣದ ಜೊತೆ 2 ವರ್ಷ ಚಾಂಪಿಯನ್ ಆಗಿತ್ತು. ಕೊಳಚೂರು ಕೊಂಡೊಟ್ಟಿ ಚೆನ್ನ ಜೊತೆ ಒಂದು ವರ್ಷ ಚಾಂಪಿಯನ್ ಆಗಿದೆ. ಇದರ ಜೊತೆಯೂ ಜನರು ಫೋಟೊ ಹೊಡೆಸಿಕೊಳ್ಳುತ್ತಿದ್ದರು.

ವಿವಿಧ ಕಂಬಳಗಳಲ್ಲಿ 200ಕ್ಕೂ ಹೆಚ್ಚು ಪದಕಗಳನ್ನು ಗೆದ್ದಿರುವ ನಂದಳಿಕೆಯ ಶ್ರೀಕಾಂತ್ ಭಟ್ ಒಡೆತನದ ಕೋಣ 'ಪಾಂಡು'ವನ್ನು ಬೆಂಗಳೂರು ಕಂಬಳದಲ್ಲಿ ಭಾನುವಾರ ಸನ್ಮಾನಕ್ಕೆ ಕರೆತಂದ ಕ್ಷಣ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್



ನಾನು ಕಂಬಳ ನೋಡುತ್ತಿರುವುದು ಇದೇ ಮೊದಲು. ಸಾಮಾಜಿಕ ಜಾಲತಾಣದಲ್ಲಿ ಈ ಹಿಂದೆ ನೋಡಿದ್ದೆ. ಕೆಲದಿನಗಳ ಹಿಂದಷ್ಟೇ ಕೆಲಸಕ್ಕೆಂದು ಬೆಂಗಳೂರಿಗೆ ಬಂದಿದ್ದೇನೆ. ಈಗ ಕಂಬಳ ನೋಡಿ ರೋಮಾಂಚಿತನಾಗಿದ್ದೇನೆ

ರಶೀದ್ ಅಹ್ಮದ್, ಚಕ್ಕಮಕ್ಕಿ (ಮೂಡಿಗೆರೆ)



ನಮ್ಮ ಊರಿನ ಸಂಸ್ಕೃತಿ ಇಲ್ಲಿ ಅನಾವರಣಗೊಂಡಿದೆ. ಇಷ್ಟು ಹತ್ತಿರದಿಂದ ಕಂಬಳ ನೋಡುತ್ತಿರುವುದು ಇದೇ ಮೊದಲ ಬಾರಿ. ಕಂಬಳದಲ್ಲಿ ಈ ಪ್ರಮಾಣದ ಜನ ನೋಡಿದ್ದಿಲ್ಲ. ಇಲ್ಲಿನ ಆಹಾರ ಮೇಳ, ಸಾಂಸ್ಕೃತಿಕ ಕಾರ್ಯಕ್ರಮ ಇಷ್ಟವಾಯಿತು.

ಅಪರ್ಣಾ ಶೈಲೇಶ್, ಉಜಿರೆ

ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರಿಂದ ಕಂಬಳವನ್ನು ಸರಿಯಾಗಿ ನೋಡಲಾಗಲಿಲ್ಲ ಎನ್ನುವ ನಿರಾಸೆಯಿದೆ. ಕರಾವಳಿ ಭಾಗದ ನನ್ನ ಸ್ನೇಹಿತರು ಕಂಬಳ, ಯಕ್ಷಗಾನದ ಬಗ್ಗೆ ಹೇಳುತ್ತಿದ್ದರು. ಈಗ ಖುದ್ದು ನೋಡಿ ಸಂಸತಗೊಂಡಿದ್ದೇನೆ. ಕೋರಿ ರೊಟ್ಟಿ, ನೀರುದೋಸೆ ಸವಿದೆ.

ಚೈತ್ರಾ ಬೆಂಗಳೂರು, ಐಟಿ ಉದ್ಯೋಗಿ

ನಮ್ಮ ಊರಿನ ಎಲ್ಲಾ ವಿಧದ ಅಹಾರ ಸವಿದಿದ್ದು ಖುಷಿಯಾಗಿದೆ. ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಿದ್ದಾರೆ. ಸ್ನೇಹಿತರ ಪುನರ್‌ಮಿಲನವೂ ಆಯಿತು.

ಸುಪ್ರೀತಾ ಶೆಟ್ಟಿ, ಕಾರ್ಕಳ

ಪ್ರಾಚೀನ ಪರಿಕರಗಳ ಪ್ರದರ್ಶನ: ಮೆಚ್ಚುಗೆ ವ್ಯಕ್ತಪಡಿಸಿದ ವೀಕ್ಷಕರು

ಕರಾವಳಿಯ ಸಂಸ್ಕೃತಿ ಬಿಂಬಿಸಿದ ವಸ್ತುಪ್ರದರ್ಶನ

ಪ್ರಜಾವಾಣಿ ಚಿತ್ರ: ರಂಜು ಪಿ

• ವಿಠಲ

ಬೆಂಗಳೂರು: ಪುರಾತನ ವಸ್ತುಗಳು ನೋಡಲು ಸಿಗುವುದೇ ಅಪರೂಪ. ಮುಂದಿನ ಜನಾಂಗಕ್ಕೆ ತೋರಿಸಬೇಕಿದ್ದರೆ ಪ್ರದರ್ಶನಗಳು ನಡೆಯಬೇಕು. ಕಲೆ, ಸಂಸ್ಕೃತಿ ಬಗ್ಗೆ ತಿಳಿವಳಿಕೆಗೆ ಇದು ಅಗತ್ಯವೂ ಹೌದು. ಬೆಂಗಳೂರಿನ ಈ ಪ್ರದರ್ಶನದಲ್ಲಿ ನೋಡಿದ ವಸ್ತುಗಳು ನಮ್ಮ ಊರಿನಲ್ಲೇ ಸಿಗುವುದಿಲ್ಲ ಎಂದು ಹುಬ್ಬೇರಿಸಿದವರು ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯ ಕೃಷ್ಣನ್.

ದೈವದ ತಲೆಪಟ್ಟಿ, ಮೊಗ, ಗಗ್ಗರ, ಪಂಜುರ್ಲಿ ಮೊಗ, ಬಟ್ಟಲು ಹಾಗೂ ಪ್ರಾಚೀನ ಕಾಲದಲ್ಲಿ ದೈವಾರಾಧನೆಯಲ್ಲಿ ಬಳಕೆ ಮಾಡಲಾಗುತ್ತಿದ್ದ ಪರಿಕರಗಳನ್ನು ಜೋಪಾನವಾಗಿ ಜೋಡಿಸಿ ಮುಂದಿನ ಪೀಳಿಗೆಗೂ ತಿಳಿಯಪಡಿಸುವ ಕಾರ್ಯವನ್ನು ಬೆಂಗಳೂರಿನ ಕಂಬಳದಲ್ಲಿ ಅಚ್ಚುಕಟ್ಟಾಗಿ ಮಾಡಿದವರು ಉಡುಪಿ ಜಿಲ್ಲೆ ಹಿರ್ಗಾನ ನೆಲ್ಲಿಕಟ್ಟೆಯ ಸುಧಾಕರ ಶೆಟ್ಟಿ.

ಸುಮಾರು 30 ವರ್ಷಗಳಿಂದ ಜೋಪಾನವಾಗಿರಿಸಿದ 10 ಸಾವಿರಕ್ಕೂ ಹೆಚ್ಚಿನ ಕರಾವಳಿ ಸಂಸ್ಕೃತಿ ಬಿಂಬಿಸುವ ಪರಿಕರಗಳನ್ನು ವೀಕ್ಷಕರಿಗೆ ತೆರೆದಿಡಲಾಗಿತ್ತು. ಭೂತಾರಾಧನೆ, ದೇವತಾರಾಧನೆ, ಚರಿತ್ರೆ, ಜನಪದ ಕ್ರೀಡೆ, ಕೃಷಿ, ವಿವಿಧ ಜನಾಂಗದ ಕುಲಕಸುಬು, ಗೃಹ ವಸ್ತುಗಳು, ಯಕ್ಷಗಾನಕ್ಕೆ ಸಂಬಂಧಿಸಿದ ಸಂಗ್ರಹವೇ ಕಣ್ಣೆದುರು ತೆರೆದುಕೊಳ್ಳುತ್ತದೆ.

ಅಡುಗೆ ತಯಾರಿಸಲು ಬಳಸುತ್ತಿದ್ದ ಪಾತ್ರೆಗಳು, ಕೃಷಿ ಬಳಕೆಯಲ್ಲಿರುವ ನೇಗಿಲು, ಹಗ್ಗ, ಕೊಯ್ಲಿನ ಸಾಮಗ್ರಿಗಳು, ಆಯುಧಗಳು ಗಮನ ಸೆಳೆಯುತ್ತವೆ. ಪಲ್ಲಕ್ಕಿ, ವಿವಿಧ ಬಗೆಯ ತೊಟ್ಟಿಲು ನೋಡುಗರನ್ನು ಆಕರ್ಷಿಸಿದವು.

ಕಂಬಳದಲ್ಲಿ ಬಳಕೆ ಮಾಡುವ ಹಳೆಯ ಪರಿಕರ ಮತ್ತು ಇತ್ತೀಚೆಗೆ ಬಳಕೆಯಲ್ಲಿರುವ ವಸ್ತುಗಳನ್ನು ಅಕ್ಕಪಕ್ಕ ಜೋಡಿಸಿ ಇಡಲಾಗಿತ್ತು. ವಿವಿಧ ಬಗೆಯ ಬಟ್ಟಲು, ಲೋಟ, ಸೌಟುಗಳು, ಪಾತ್ರೆಗಳು, ಅಳತೆ ಮಾಡುವ ಸೇರು, ಪಾವು ಮೊದಲಾದ ವಸ್ತುಗಳನ್ನು ಜನರು ಕುತೂಹಲದಿಂದ ವೀಕ್ಷಣೆ ಮಾಡಿ ವಿವರಗಳನ್ನು ಪಡೆದುಕೊಂಡರು.

ಪುರಾತನ ನಾಣ್ಯಗಳ ಸಂಗ್ರಹ, 150ಕ್ಕೂ ಹೆಚ್ಚು ದೇಶಗಳ ನೋಟುಗಳು ನೋಡುಗರನ್ನು ಸೆಳೆದವು. ಅಳುಪರ ಕಾಲದ, ಬೈರವರಸನ ಕಾಲದ ನಾಣ್ಯಗಳಿಂದ ಹಿಡಿದು ಇತ್ತೀಚಿನವರೆಗಿನ ನಾಣ್ಯಗಳೂ ಅಲ್ಲಿದ್ದವು. ಇವುಗಳ ಸಂಗ್ರಹದಲ್ಲಿ ಅಶಿತಾ ಎಸ್.ಕಡಂಬ ಅವರ ಪಾತ್ರ ಹಿರಿದು.

'ಕಳೆದ 30 ವರ್ಷಗಳಿಂದ ವಿವಿಧ ಪ್ರಾಚೀನ ವಸ್ತುಗಳ ಸಂಗ್ರಹದಲ್ಲಿ ತೊಡಗಿದ್ದೇನೆ. ಕೆಲವರು ವಸ್ತುಪ್ರದರ್ಶನದಲ್ಲಿ ಹಳೆ ಕಾಲದ ವಸ್ತುಗಳನ್ನು ನೋಡಿ ಅವರ ಮನೆಯಲ್ಲಿದ್ದರೆ ತಂದುಕೊಡುತ್ತಾರೆ. ಇನ್ನು ಕೆಲವರು ಆಧುನಿಕತೆಗೆ ತಕ್ಕಂತೆ ತಮ್ಮಲ್ಲಿನ ಪ್ರಾಚೀನ ವಸ್ತುಗಳಿಗೆ ಹೊಸತನವನ್ನು ನೀಡಲು ಮುಂದಾಗುತ್ತಾರೆ. ಆಗ ಹಳೆಯ ವಸ್ತುಗಳನ್ನು ಕೊಟ್ಟು ಹೊಸ ವಸ್ತು ತೆಗೆದುಕೊಳ್ಳುತ್ತಾರೆ. ಹಳ್ಳಿಗಳಲ್ಲೇ ನಮಗೆ ಹೆಚ್ಚಿನ ವಸ್ತುಗಳು ಸಿಗುತ್ತವೆ' ಎಂದು ಸುಧಾಕರ ಶೆಟ್ಟಿ ಮಾಹಿತಿ ನೀಡಿದರು.

ಕೆಲವು ಹಳೆ ಕಾಲದ ನಾಣ್ಯ ಸಂಗ್ರಹಕ್ಕೆ ಹಲವರ ಬೆನ್ನು ಬೀಳಬೇಕಾಗುತ್ತದೆ. ಈಗ ಉಚಿತವಾಗಿ ಸಿಗುವ ಕಾಲ ಮುಗಿದುಹೋಯಿತು. ಹಾಗಾಗಿ ಹಳೆಯ ವಸ್ತುಗಳನ್ನು ಕೊಂಡುಕೊಳ್ಳುವಾಗ ಹೆಚ್ಚು ಬೆಲೆ ತೆರಬೇಕಾಗುತ್ತದೆ. ಮಧ್ಯವರ್ತಿಗಳು ಹೇಳಿದ್ದೇ ಬೆಲೆ ಎಂಬಂತಾಗಿದೆ. ಇರುವುದನ್ನು ಉಳಿಸಿಕೊಳ್ಳುವುದು ಮುಖ್ಯ ಎನ್ನುತ್ತಾರೆ ಅವರು.

ಭೂತಾರಾಧನೆಯ ವಿವಿಧ ವಸ್ತುಗಳನ್ನು ಜನ ಕುತೂಹಲದಿಂದ ವೀಕ್ಷಿಸುತ್ತಿದ್ದರು. 'ಕಾಂತಾರ'ದಲ್ಲಿ ಬಳಸಿದ ವಸ್ತುಗಳು ಇವೆಯೇ ಎಂದು ವಿಚಾರಿಸುತ್ತಿದ್ದುದೂ ಕಂಡುಬಂತು. ಹಲವರು ಮಾರಾಟಕ್ಕೆ ಇದೆಯೇ ಎಂದು ವಿಚಾರಿಸುತ್ತಿದ್ದರು.

ಬೆಂಗಳೂರು ಕಂಬಳದ ವಸ್ತು ಪ್ರದರ್ಶನದಲ್ಲಿ ಭಾನುವಾರ ಜನರು ಪುರಾತನ ವಸ್ತುಗಳನ್ನು ಕುತೂಹಲದಿಂದ ವೀಕ್ಷಿಸಿದರು

ಪ್ರಾಚೀನ ವಸ್ತುಗಳನ್ನು ಗುಜರಿ ವಸ್ತುಗಳು ಎಂದು ತಿಳಿದವರೇ ಹೆಚ್ಚು. ಪ್ರಾಚೀನ ವಸ್ತುಗಳ ಬಳಕೆಯ ಮರುಸೃಷ್ಟಿ ಸಾಧ್ಯವಿಲ್ಲವಾದರೂ ಮಕ್ಕಳಿಗೆ, ಯುವಕರಿಗೆ ಹಳೆ ಕಾಲದ ವಸ್ತುಗಳ ಪರಿಚಯ ಮಾಡಿಕೊಡುವುದು ಮುಖ್ಯ. ಜೀವನಶೈಲಿಯೇ ಬದಲಾಗುತ್ತಿರುವ ಕಾಲದಲ್ಲಿ ನಾವೂ ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ

ಸುಧಾಕರ ಶೆಟ್ಟಿ, ನೆಲ್ಲಿಕಟ್ಟೆ

ನಮ್ಮ ಹಿರಿಯರು ಬಳಸಿದ ವಸ್ತುಗಳನ್ನು ಒಂದೆಡೆ ನೋಡಬೇಕೆಂದರೆ ಪ್ರದರ್ಶನಗಳು ಅನಿವಾರ್ಯ. ಮುಂದಿನ ಪೀಳಿಗೆಗೂ ಸಂಸ್ಕೃತಿಯ ತಿಳಿವಳಿಕೆ, ಉಳಿವಿಗೆ ಇದು ಮಹತ್ವದ ಕೊಡುಗೆ ಆಗಬಲ್ಲದು.

ಕೃಷ್ಣನ್, ಮಾಲಾಡಿ

ಮುಂದಿನ ಪೀಳಿಗೆಗೆ ತುಳುನಾಡಿನ ಸಂಸ್ಕೃತಿ ಪರಿಚಯಿಸಲು ಈ ಬಾರಿಯ ಬೆಂಗಳೂರು ಕಂಬಳದಲ್ಲಿ ವ್ಯವಸ್ಥೆ ಮಾಡಿದ್ದು ಖುಷಿ ನೀಡಿತು. ಕಾಂತಾರ ಚಲನಚಿತ್ರದಲ್ಲಿ ಬಳಕೆ ಮಾಡಿದ ಬಹುತೇಕ ಪರಿಕರಗಳನ್ನು ಈ ಬಾರಿಯ ಬೆಂಗಳೂರು ಕಂಬಳದಲ್ಲಿ ವೀಕ್ಷಿಸುವಂತಾಯಿತು ಎಂದು ಬೆಂಗಳೂರಿನ ಜೀವನ್ ಖುಷಿ ವ್ಯಕ್ತಪಡಿಸಿದರು.

ವಸ್ತು ಪ್ರದರ್ಶನದಲ್ಲಿ ಬೆಳಿಗ್ಗಿನಿಂದಲೇ ನೂಕುನುಗ್ಗಲು ಕಂಡುಬಂತು. ಬಹುತೇಕರು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಪಟ್ಟರು.

ಚಲನಚಿತ್ರದಲ್ಲಿ ಬಳಕೆ: ನಮ್ಮ 2ಸಂಗ್ರಹದಲ್ಲಿರುವ ಪ್ರಾಚೀನ ಪರಿಕರಗಳು ಹಲವು ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದೆ. ದೈವದ ಮೊಗ, ಕಡ್ಸಲೆ, ಗಗ್ಗರ, ತಲೆಪಟ್ಟಿ, ಸೊಂಟಪಟ್ಟಿಗಳು ಕಾಂತಾರ ಚಲನಚಿತ್ರದಲ್ಲಿ ಕಾಣಿಸಿಕೊಂಡಿವೆ. ಕೊರಮ, ಕಾರ್ಣಿಕದ ಕಲ್ಲುರ್ಟಿ, ಕಂಬಳಬೆಟ್ಟು ಭಟ್ರೆನ ಮಗಲ್ ಮೊದಲಾದ ಸಿನಿಮಾಗಳಲ್ಲಿ ಕಾಣಿಸಿಕೊಂಡ ಹಲವು ವಸ್ತುಗಳೂ ಈ ಪ್ರದರ್ಶನದಲ್ಲಿ ಕಂಡುಬಂತು.

ಲಂಚ: ರಾಷ್ಟ್ರೀಯ ಯುನಾನಿ ಸಂಸ್ಥೆ ಆಡಳಿತಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಂಟೀನ್ ಮಾಲೀಕರಿಗೆ ಬಿಲ್‌ನ ಬಾಕಿ ಮೊತ್ತ ಪಾವತಿಸಲು ₹50,000 ಲಂಚ ಪಡೆಯುತ್ತಿದ್ದ ಇಲ್ಲಿನ ಕೊಟ್ಟಿಗೆಪಾಳ್ಯದ ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಆಡಳಿತಾಧಿಕಾರಿ ನದೀಂ ಎ. ಸಿದ್ದಿಕ್ಕಿ ಅವರನ್ನು ಸಿಬಿಐ ಶುಕ್ರವಾರ ಬಂಧಿಸಿದೆ.

ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಕಚೇರಿ ಆವರಣದಲ್ಲಿ ನಾರಾಯಣ ಕುಂದಾಪುರ ಎಂಬವರು ಕ್ಯಾಂಟೀನ್ ನಡೆಸುತ್ತಿದ್ದಾರೆ. ಸಂಸ್ಥೆಗೆ ಆಹಾರ ಪೂರೈಸಿದ ಬಾಬ್ತು ₹3 ಲಕ್ಷ ಬಿಲ್ ಬಾಕಿ ಇತ್ತು. ಅದನ್ನು ಪಾವತಿಸಲು ₹1.10 ಲಕ್ಷ ಲಂಚ ನೀಡುವಂತೆ ಆಡಳಿತಾಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಕ್ಯಾಂಟೀನ್ ಮಾಲೀಕರು ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಘಟಕಕ್ಕೆ ದೂರು ಸಲ್ಲಿಸಿದ್ದರು.

ಪ್ರಾಥಮಿಕ ವಿಚಾರಣೆ ನಡೆಸಿದ್ದ ಡಿವೈಎಸ್‌ಪಿ ಸುರೇಶ್ ಕುಮಾರ್, ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಆಡಳಿತಾಧಿಕಾರಿ ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಸಾಕ್ಷ್ಯಗಳಿವೆ ಎಂದು ವರದಿ ಸಲ್ಲಿಸಿದ್ದರು. ವರದಿಯ ಆಧಾರದಲ್ಲಿ ನದೀಂ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಸಿಬಿಐ ಡಿಐಜಿ ಆರ್. ಜಯಲಕ್ಷ್ಮಿ ನಿರ್ದೇಶನ ನೀಡಿದ್ದರು.

ಮೊದಲ ಹಂತದಲ್ಲಿ ₹50 ಸಾವಿರವನ್ನು ಶುಕ್ರವಾರ ಸಂಜೆ ತಲುಪಿಸುವಂತೆ ಆರೋಪಿಯು ಕ್ಯಾಂಟೀನ್ ಮಾಲೀಕರಿಗೆ ಸೂಚಿಸಿದ್ದರು. ತರಕಾರಿ ಇರುವ ಕೈ ಚೀಲದಲ್ಲಿ ಹಣ ಇರಿಸಿ ಮನೆಯೊಳಕ್ಕೆ ತಂದು ಕೊಡುವಂತೆ ಸೂಚನೆ ನೀಡಿದ್ದರು.

ಅದೇ ಪ್ರಕಾರ, ಶುಕ್ರವಾರ ರಾತ್ರಿ ನಾರಾಯಣ ಅವರು ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಆವರಣದಲ್ಲೇ ಇರುವ ಆಡಳಿತಾಧಿಕಾರಿಯ ವಸತಿಗೃಹಕ್ಕೆ ಹಣ ತಲುಪಿಸಿದ್ದರು. ತಕ್ಷಣ ದಾಳಿಮಾಡಿದ ಸಿಬಿಐ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಇನ್‌ಸ್ಪೆಕ್ಟರ್ ಕಿರಣ್ ರಾಜ್ ಮತ್ತು ತಂಡ ಆರೋಪಿಯನ್ನು ಬಂಧಿಸಿದೆ.

₹2 ಲಕ್ಷ ನಗದು ವಶ: ಬಂಧನದ ಬಳಿಕ ಸಿಬಿಐ ಅಧಿಕಾರಿಗಳು ಆರೋಪಿಯ ಮನೆಯಲ್ಲಿ ಶೋಧ ನಡೆಸಿದ್ದಾರೆ. ₹2 ಲಕ್ಷ ನಗದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಾಥಮಿಕ ತನಿಖೆಯ ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಿರುಕುಳ: ಐವರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ತುಮಕೂರು: ಅಕ್ಕಪಕ್ಕದ ಮನೆಯವರ ಕಿರುಕುಳಕ್ಕೆ ಬೇಸತ್ತ ಒಂದೇ ಕುಟುಂಬದ ಐವರು ಭಾನುವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇಲ್ಲಿಯ ಸದಾಶಿವನಗರದ ಗರೀಬ್ ಸಾಬ್ (36) ಪತ್ನಿ ಸುಮಯ್ಯಾ (32), ಮಕ್ಕಳಾದ ಹಜೀರಾ (14), ಮಹ್ಮದ್ ಸುಭಾನ್ (10), ಮಹ್ಮದ್ ಮುನೀರ್ (8) ಮೃತರು. ಗರೀಬ್ ಸಾಬ್ ಶಿರಾ ತಾಲ್ಲೂಕಿನ ಲಕ್ಕನಹಳ್ಳಿಯವರು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವರ್ಷದ ಹಿಂದೆ ಸದಾಶಿವನಗರದಲ್ಲಿ ಮನೆ ಮಾಡಿದ್ದರು. ಜೀವನ ನಿರ್ವಹಣೆಗಾಗಿ ಕಬಾಬ್ ಅಂಗಡಿ ಇಟ್ಟುಕೊಂಡಿದ್ದರು.

'ನಮ್ಮ ಮನೆಯ ಕೆಳಗೆ ಬಾಡಿಗೆಗೆ ಇರುವ ಕಲಂದರ್ ಎಂಬವರು ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಅದನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ. ಅವರೇ ನಮ್ಮ ಸಾವಿಗೆ ಕಾರಣ' ಎಂದು ಸಾವಿಗೂ ಮುನ್ನ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

'ನಮ್ಮ ಆತ್ಮಹತ್ಯೆಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡಬೇಕು. ಅಕ್ಕಪಕ್ಕದ ಮನೆಯವರು ದೌರ್ಜನ್ಯ ಮಾಡುತ್ತಿದ್ದರು. ಬಡವರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ನಮ್ಮ ದೇಹಗಳನ್ನು ವೈದ್ಯಕೀಯ ಪರೀಕ್ಷೆ (ಪೋಸ್ಟ್ ಮಾರ್ಟಮ್) ಮಾಡಬೇಡಿ' ಎಂದು ವಿಡಿಯೊದಲ್ಲಿ ಮನವಿ ಮಾಡಿದ್ದಾರೆ.

ಸ್ಥಳದಲ್ಲಿ ಎರಡು ಪುಟಗಳ ಮರಣ ಪತ್ರ (ಡೆತ್‌ನೋಟ್) ಪತ್ತೆಯಾಗಿದ್ದು, ಅದರಲ್ಲಿ ಅಕ್ಕಪಕ್ಕದವರ ಕಿರುಕುಳ ಮತ್ತು ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.

'ನೇಣು ಬಿಗಿದ ಸ್ಥಿತಿಯಲ್ಲಿ ದಂಪತಿ ಶವ ಪತ್ತೆಯಾಗಿವೆ. ಮಕ್ಕಳ ಮೃತದೇಹಗಳು ಹಾಸಿಗೆ ಮೇಲೆ ಇವೆ. ಮಕ್ಕಳು ಯಾವ ರೀತಿ ಸಾತ್ತಿದ್ದಾರೆ ಎಂಬುವುದು ಗೊತ್ತಾಗಿಲ್ಲ. ಅವರ ಕತ್ತಿನ ಮೇಲೆ ಗುರುತು ಇದೆ. ಆತ್ಮಹತ್ಯೆಗೂ ಮುನ್ನ ದಂಪತಿ ವಾಟ್ಸ್ ಆ್ಯಪ್ ಮೂಲಕ ವಿಡಿಯೊ ಕಳುಹಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ತಿಳಿಸಿದರು.

ಲಕ್ಷ ದೀಪೋತ್ಸವ

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಭಾನುವಾರ ಆಕರ್ಷಕ ಲಕ್ಷ ದೀಪೋತ್ಸವ ನೆರವೇರಿತು

ಮೈಸೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಗಿರಿಜನ ಸುರಕ್ಷಾ ವೇದಿಕೆ ಹಕ್ಕೊತ್ತಾಯ

ಮತಾಂತರಗೊಂಡ ಗಿರಿಜನರ ಎಸ್‌ಟಿಯಿಂದ ಕೈಬಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಮತಾಂತರಗೊಂಡ ಗಿರಿಜನರನ್ನು ಪರಿಶಿಷ್ಟ ಪಂಗಡದ (ಎಸ್‌ಟಿ) ಪಟ್ಟಿಯಿಂದ ಕೈಬಿಡುವಂತೆ ಇಲ್ಲಿ ಭಾನುವಾರ ನಡೆದ ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನದಲ್ಲಿ ಸರ್ಕಾರವನ್ನು ಆಗ್ರಹಿಸಲಾಯಿತು.

ಗಿರಿಜನ ಸುರಕ್ಷಾ ವೇದಿಕೆಯಿಂದ ಆಯೋಜಿಸಿದ್ದ ಮಹಾರಾಜ ಪ್ರೌಢಶಾಲಾ ಮೈದಾನದಲ್ಲಿ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಬುಡಕಟ್ಟು ಸಮುದಾಯದ ಸಾವಿರಾರು ಮಂದಿ ಪಾಲ್ಗೊಂಡು ಶಕ್ತಿ ಪ್ರದರ್ಶಿಸಿದರು.

'ಗಿರಿಜನರು ಹಿಂದೂಗಳಲ್ಲ ಎಂದು ಕೆಲವರು ಹೇಳುತ್ತಾರೆ. ನಮ್ಮ ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಅವಮಾನಿಸುವವರು, ಆಸೆ–ಆಮಿಷ, ಪ್ರಲೋಭನೆ, ಭಯ–ಪ್ರೇರೇಪಣೆ ಮೂಲಕ ಮತಾಂತರಿಸುವವರು ಅಪರಾಧಿಗಳು' ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ವಿಧಾನಪರಿಷತ್ ಸದಸ್ಯ ಶಾಂತಾರಾಂ ಸಿದ್ದಿ ಮಾತನಾಡಿ, 'ಮತಾಂತರ ಎಂದರೆ ರಾಷ್ಟ್ರಾಂತರ. ಬುಡಕಟ್ಟು ಜನರನ್ನು ಮತಾಂತರ ಮಾಡುವುದು ಅಂತರರಾಷ್ಟ್ರೀಯ ಜಾಲದ ಕೆಲಸ. ನಮ್ಮನ್ನು ಹಿಡಿತಕ್ಕೆ ತೆಗೆದುಕೊಳ್ಳುವ, ನಮ್ಮ ಆಚಾರ–ಸಂಸ್ಕೃತಿ ಹಾಳು ಮಾಡುವ ಹುನ್ನಾರ' ಎಂದು ಆರೋಪಿಸಿದರು.

'ನಾವು ರಾಜ್ಯದಲ್ಲಿ 60 ಲಕ್ಷ ಹಾಗೂ ದೇಶದಲ್ಲಿ 12 ಕೋಟಿ ಇದ್ದೇವೆ. 52 ಬುಡಕಟ್ಟುಗಳು ಹಾಗೂ 700 ಜಾತಿಗಳಿವೆ. ನಾವೆಲ್ಲರೂ ಮತಾಂತರದ ವಿರುದ್ಧ ತೊಡೆತಟ್ಟಬೇಕು. ಅಲ್ಪಸಂಖ್ಯಾತ ಧರ್ಮಕ್ಕೆ ಮತಾಂತರಗೊಂಡು ಅಲ್ಲಿ ಸೌಲಭ್ಯ ಪಡೆಯುವವರು ಹಾಗೂ ನಮ್ಮಲ್ಲಿನ ಸೌಲಭ್ಯ ಕಸಿದುಕೊಳ್ಳುವವರನ್ನು ಎದುರಿಸಬೇಕು' ಎಂದರು.

ಸ್ಪಂದಿಸದಿದ್ದರೆ ಹೋರಾಟ: 'ಗಿರಿಜನರನ್ನು ಬಲವಂತದಿಂದ ಮತಾಂತರ ಮಾಡಬಾರದು ಹಾಗೂ ಮತಾಂತರ ಆದವರನ್ನು ಪರಿಶಿಷ್ಟ ಪಂಗಡದ ಸೌಲಭ್ಯದಿಂದ ಹೊರಗಿಡಬೇಕು. ಇದಕ್ಕೆ ಸರ್ಕಾರಗಳು ಸ್ಪಂದಿಸದಿದ್ದರೆ ಹೋರಾಟ ನಡೆಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಕಾಡಿನಲ್ಲಿರುವವರಿಗೆ ಹಕ್ಕುಪತ್ರ ನೀಡಬೇಕು. ಮುಜಾಫರ್ ಅಸ್ಸಾದಿ ವರದಿ ಶಿಫಾರಸು ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದರು.

ಇರುಳಿಗ ಸಮಾಜದ ಪ್ರಮುಖ ಮಹದೇವಯ್ಯ, ಪೊನ್ನಂಪೇಟೆ ಅರಣ್ಯ ಕಾಲೇಜಿನ ಪ್ರೊ. ಜಡೇಗೌಡ, ಮಹಾರಾಷ್ಟ್ರ ಹೈಕೋರ್ಟ್ ವಕೀಲ ಕಿರಣ ಗಬಾಲೆ ಮತ್ತಿತರರು ಇದ್ದರು.

ಮೈಸೂರಿನ ಮಹಾರಾಜ ಪ್ರೌಢಶಾಲೆ ಮೈದಾನದಲ್ಲಿ ಗಿರಿಜನ ಸುರಕ್ಷಾ ವೇದಿಕೆಯಿಂದ ಭಾನುವಾರ ನಡೆದ 'ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನ'ದಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಮತಾಂತರಗೊಂಡು ವಿದೇಶಿ ದೇವರನ್ನು ಪೂಜಿಸುವವರನ್ನು ಸಮುದಾಯದಿಂದ ಹೊರ ಹಾಕಬೇಕು. ನಮ್ಮ ದೇವರು, ಸಂಸ್ಕೃತಿ ತೊರೆದ ಮೇಲೆ ಸೌಲಭ್ಯ ಪಡೆಯುವುದೇಕೆ?

ಶಾಂತಾರಾಂ ಸಿದ್ದಿ, ವಿಧಾನಪರಿಷತ್ ಸದಸ್ಯ

ಪರಿಸರ ಸೂಕ್ಷ್ಮವಲಯ ವ್ಯಾಪ್ತಿ ಮರುನಿಗದಿ

ಒಂದನೇ ಪುಟದಿಂದ...

ಕಸ್ತೂರಿರಂಗನ್ ವರದಿ ಜಾರಿಯ ವಿಷಯದಲ್ಲಿ ರಾಜ್ಯ ಸರ್ಕಾರ ಇದುವರೆಗೂ ಜವಾಬ್ದಾರಿಯುತ ತೀರ್ಮಾನ ತೆಗೆದುಕೊಳ್ಳದೇ ಸಾರಾಸಗಟಾಗಿ ತಿರಸ್ಕರಿಸುತ್ತಾ ಬಂದಿದೆ. ವರದಿಯಿಂದ ತನ್ನ ಭೂಭಾಗ ಕೈಬಿಡುವ ರಾಜ್ಯ ಸರ್ಕಾರದ ವಿನಂತಿಗೆ ಕೇಂದ್ರ ಸರ್ಕಾರ ಸಮ್ಮತಿಯನ್ನೂ ನೀಡಿಲ್ಲ.

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ವ್ಯಾಪ್ತಿಯ 59,940 ಚ.ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಕಸ್ತೂರಿರಂಗನ್ ಸಮಿತಿ ಗುರುತಿಸಿದೆ. ಕರ್ನಾಟಕದ ಶಿವಮೊಗ್ಗ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ, ಹಾಸನ, ಕೊಡಗು, ಮೈಸೂರು, ಚಾಮರಾಜ ನಗರ ಜಿಲ್ಲೆಗಳ 20,668 ಚ.ಕಿ.ಮೀ ಪಶ್ಚಿಮಘಟ್ಟದ ಪ್ರದೇಶ, ಅಲ್ಲಿನ 1,576 ಗ್ರಾಮಗಳು ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಒಳಪಡುತ್ತವೆ.

ಕಸ್ತೂರಿರಂಗನ್ ವರದಿಯಲ್ಲಿ ಶೇ 50ಕ್ಕಿಂತ ಹೆಚ್ಚು ನೈಸರ್ಗಿಕ ಭೂ ಪ್ರದೇಶ ಗಣನೆಗೆ ತೆಗೆದುಕೊಂಡ 858 ಗ್ರಾಮಗಳ ವಿಸ್ತೀರ್ಣ 13.09 ಲಕ್ಷ ಹೆಕ್ಟೇರ್‌ನಷ್ಟಿದೆ. ಕರಡು ಅಧಿಸೂಚನೆಯ ನಂತರ ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಪಟ್ಟಿಯಲ್ಲಿ 594 ಗ್ರಾಮಗಳ 5,94,835 ಹೆಕ್ಟೇರ್‌ಗೂ ಹೆಚ್ಚು ಪ್ರದೇಶವನ್ನು ಪರಿಸರ ಸೂಕ್ಷ್ಮ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಈಗ ಮತ್ತೆ 1,416 ಚ.ದ.ಕೀ ವ್ಯಾಪ್ತಿ ಹಾಗೂ 99 ಹಳ್ಳಿಗಳನ್ನು ಕೈಬಿಡಲಾಗಿದೆ. ವರದಿ ಜಾರಿಯಿಂದ ತೊಂದರೆಗೆ ಒಳಗಾಗಬಹುದು ಗ್ರಾಮಗಳನ್ನು ಪಟ್ಟಿಯಿಂದ ಹೊರಗಿಡಲು, ಜನವಸತಿ ರಹಿತ ಪ್ರದೇಶಗಳನ್ನಷ್ಟೇ ಸೂಕ್ಷ್ಮವಲಯ ವ್ಯಾಪ್ತಿಗೆ ಸೇರಿಸುವ ಕಾರ್ಯ ಮುಂದುವರಿದಿದೆ.

'ಪಶ್ಚಿಮಘಟ್ಟ ಹಲವು ನದಿಮೂಲಗಳನ್ನು ಒಳಗೊಂಡ ಜೀವ ವೈವಿಧ್ಯದ ಅಮೂಲ್ಯ ತಾಣ. ಪಾರಂಪರಿಕವಾದ ಅಲ್ಲಿನ ಜನಜೀವನವೂ ಅಷ್ಟೇ ಮುಖ್ಯ. ವರದಿಯಲ್ಲಿನ ವ್ಯಾಪ್ತಿ ಪರಿಶೀಲಿಸಿ, ಜನಜೀವನಕ್ಕೆ ಧಕ್ಕೆಯಾಗದಂತಹ ಪ್ರದೇಶಗಳನ್ನು ಪಟ್ಟಿ ಮಾಡಿ ಸಲ್ಲಿಸುವುದು ರಾಜ್ಯದ ಕರ್ತವ್ಯ. ಈಗಾಗಲೇ ನೆರೆಯ ಕೇರಳ ಅಂತಹ ಕೆಲಸ ಮಾಡಿದೆ. ಒಂದು ವೇಳೆ ಕೇಂದ್ರ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದರೆ, ವರದಿಯಲ್ಲಿನ ಎಲ್ಲ ಪ್ರದೇಶಗಳೂ ಪರಿಸರ ಸೂಕ್ಷ್ಮ ವ್ಯಾಪ್ತಿಗೆ ಸೇರುತ್ತವೆ. ಆಗ ರಾಜ್ಯ ಸಂಕಷ್ಟಕ್ಕೆ ಸಿಲುಕಲಿದೆ. ಹಾಗಾಗಿ, ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ' ಎನ್ನುತ್ತಾರೆ ಅರಣ್ಯ ಸಚಿವ ಈಶ್ವರ ಖಂಡ್ರೆ.

ಜೀವ ಸಂಕುಲ, ಜನರ ಬದುಕನ್ನು ಗಮನದಲ್ಲಿ ಇಟ್ಟುಕೊಂಡು ಸಂಪುಟ ಉಪ ಸಮಿತಿಯಲ್ಲಿ ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು

ಈಶ್ವರ ಖಂಡ್ರೆ, ಅರಣ್ಯ ಸಚಿವ

‘ಬಂಡಿ’ ಬದಲಾಯ್ತು; ಬಿಜೆಪಿ ಮಂಕಾಯ್ತು

ಚುನಾವಣಾ ಯಾತ್ರೆ
ತೆಲಂಗಾಣ

ಸುದೇಶ ದೊಡ್ಡಪಾಳ್ಯ

ಹೈದರಾಬಾದ್: ‘ನಮಗೆ ಬಂಡಿ ಸಂಜಯ್ ದೊಡ್ಡ ನಾಯಕರು. ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಿ ಹೈಕಮಾಂಡ್ ತಪ್ಪು ಮಾಡಿತು’–ಶಾದ್ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತ ಕೃಷ್ಣಂರಾಜು ಅವರ ಬೇಸರದ ಮಾತಿದು.

ಇದೇ ರೀತಿಯ ಅಭಿಪ್ರಾಯವನ್ನು ತೆಲುಗು ದೇಶಂ ಪಕ್ಷದ (ಟಿಡಿಪಿ) ಕಾರ್ಯಕರ್ತ ಹರೀಶ್‌ಕುಮಾರ್ ಯಾದವ್ ಕೂಡ ವ್ಯಕ್ತಪಡಿಸಿದರು. ಇದು ಟಿಡಿಪಿ–ಬಿಜೆಪಿ ಜೊತೆಯಾಗುವುದರ ಸೂಚನೆ ಇರಬಹುದೇ ಎನ್ನುವ ಅನುಮಾನ ಮೂಡಿತು. ಸಂಗಾರೆಡ್ಡಿ ನಗರದಲ್ಲಿ ಸಿಕ್ಕ ಬಿಜೆಪಿ ಅಭಿಮಾನಿ ಶ್ರೀನಿವಾಸ ಕೋಟ ‘ಬಂಡಿ ಸಂಜಯ್ ಬದಲಾವಣೆ ಉತ್ಸಾಹವನ್ನೇ ಕಸಿದುಕೊಂಡುಬಿಟ್ಟಿದೆ’ ಎಂದು ನೊಂದುಕೊಂಡರು.

‘ಬಂಡಿ ಸಂಜಯ್’ ತೆಲಂಗಾಣದ ಕರೀಂನಗರ ಕ್ಷೇತ್ರದ ಸಂಸದ. ಆರ್‌ಎಸ್‌ಎಸ್ ಸಹವಾಸದಲ್ಲಿ ಇದ್ದು, ಎಬಿವಿಪಿಯಲ್ಲಿ ಬೆಳೆದವರು. ನಂತರ ಕಾರ್ಪೊರೇಟರ್ ಆಗಿದ್ದರು. ಎರಡು ಬಾರಿ ವಿಧಾನಸಭೆಗೆ ಸ್ಪರ್ಧಿಸಿ ಸೋತಿದ್ದರು. ತೆಲಂಗಾಣದಲ್ಲಿರುವ ಪ್ರಮುಖ ಹಿಂದುಳಿದ ಜಾತಿಗಳಲ್ಲಿ ‘ಮುನ್ನೂರುಕಾಪು’ ಕೂಡ ಒಂದು. ‘ಬಂಡಿ’ ಈ ಜಾತಿಗೆ ಸೇರಿದ ನಾಯಕ.

ಕ್ರಿಯಾಶೀಲ ‘ಬಂಡಿ’ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ‘ಪ್ರಜಾಸಂಗ್ರಾಮ ಪಾದಯಾತ್ರೆ’ ನಡೆಸಿದ್ದರು. ಆಗ ರಾಜ್ಯದಲ್ಲಿ ಭಾರತ ರಾಷ್ಟ್ರ ಸಮಿತಿ (ಬಿಎಸ್‌ಆರ್) ಪಕ್ಷವನ್ನು ಕಿತ್ತೊಗೆಯಬೇಕು, ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎನ್ನುವ ಸಂಕಲ್ಪ ಅವರದಾಗಿತ್ತು. ಆ ವೇಳೆಗೆ ಕಾರ್ಯಕರ್ತರು, ಜನರೊಂದಿಗೆ ಒಡನಾಟ ಆಪ್ತವಾಗಿತ್ತು. ಪಕ್ಷದಲ್ಲಿ ‘ಬಂಡಿ’ ಮಾತಿಗೆ ತುಂಬಾ ಬೆಲೆ ಇತ್ತು. ಆದರೆ, ಅದೇ ಸಮಯದಲ್ಲಿ ಮತ್ತೊಂದು ಹಿಂದುಳಿದ ಜಾತಿಯ (ಮುದಿರಾಜ) ನಾಯಕ ಈಟೆಲ ರಾಜೇಂದರ್ ಹಾಗೂ ‘ಬಂಡಿ’ ನಡುವೆ ತಿಕ್ಕಾಟ ಕೂಡ ತೀವ್ರವಾಗುತ್ತಾ ಬಂತು. ಇಬ್ಬರನ್ನೂ ಸಮಾಧಾನಪಡಿಸಲು ಹೈಕಮಾಂಡ್ ‘ಬಂಡಿ’ಯನ್ನು ಬದಲಿಸಿ, ಕೇಂದ್ರ ಸಚಿವ ಕಿಶನ್ ರೆಡ್ಡಿಯನ್ನು ಆ ಜಾಗದಲ್ಲಿ ಪ್ರತಿಷ್ಠಾಪಿಸಿತು.

‘ಬಂಡಿ’ ಬದಲಾವಣೆಗೆ ಆಂತರಿಕ ಕಚ್ಚಾಟ ಕಾರಣ ಎನ್ನುವುದು ಪಕ್ಷದ ಮಾತು. ಆದರೆ, ಜನರ ನಡುವೆ ಹರಿದಾಡುತ್ತಿರುವ ಊಹಾಪೋಹಗಳು ಬೇರೆಯದೇ ಕತೆಗಳನ್ನು ಹೇಳುತ್ತಿವೆ. ಒಂದು, ದೆಹಲಿ ಅಬಕಾರಿ ಹಗರಣದಲ್ಲಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ, ವಿಧಾನಪರಿಷತ್ ಸದಸ್ಯೆ ಕೆ.ಕವಿತಾ ಹೆಸರಿದ್ದು, ಅವರ ಬಂಧನವಾಗುವುದು ಹೆಚ್ಚು ಕಡಿಮೆ ನಿಶ್ಚಿತವಾಗಿತ್ತು. ಆದರೆ, ಕವಿತಾ ಅವರು ಇ.ಡಿ ಬಂಧನದಿಂದ ಬಚಾವ್ ಆದರು. ಇದು ಕೆಸಿಆರ್ ಮತ್ತು ಬಿಜೆಪಿ ನಡುವಿನ ಒಳಒಪ್ಪಂದದ ಫಲಿತಾಂಶ. ಎರಡನೆಯದು, ‘ಬಂಡಿ’ಯಂತಹ ಆಕ್ರಮಣಕಾರಿ ನಾಯಕನಿಂದ ಬಿಆರ್‌ಎಸ್‌ಗೆ ಆಗುವ ಹಾನಿಯನ್ನು ತಪ್ಪಿಸಲು ಅವರನ್ನು ಕಿತ್ತು ಹಾಕಲಾಯಿತು.

ಈ ಕತೆಗಳು ಏನೇ ಇರಲಿ, ಅಧ್ಯಕ್ಷ ಸ್ಥಾನದಿಂದ ‘ಬಂಡಿ’ಯನ್ನು ಕಳಚಿದ ಮೇಲೆ ಸಾಮಾನ್ಯ ಕಾರ್ಯಕರ್ತರ ಉತ್ಸಾಹ ಕಡಿಮೆ ಆಗಿದ್ದಂತೂ ನಿಜ. ಹಿಂದುತ್ವವಾದಿ, ನಿಷ್ಠಾವಂತ ಕಾರ್ಯಕರ್ತರು ಮಾತ್ರ ಇಂದಿಗೂ ಸಕ್ರಿಯರಾಗಿದ್ದಾರೆ.

ಮತ್ತೊಂದು ಮಾತು ಚಾಲ್ತಿಯಲ್ಲಿದೆ. ಬಿಜೆಪಿಗೆ ಬಿಆರ್‌ಎಸ್ ಅನ್ನು ಸೋಲಿಸುವುದು ಈಗಿನ ತುರ್ತು ಅಲ್ಲ. ಅವರ ಗುರಿ ಕಾಂಗ್ರೆಸ್. ಆದ್ದರಿಂದಲೇ ಕೆಸಿಆರ್ ಹೆಗಲ ಮೇಲೆ ಬಂದೂಕು ಇಟ್ಟಿದ್ದಾರೆ. ಇದಕ್ಕೂ ಕಾರಣವಿದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದರೆ, 2024 ರಲ್ಲಿ ನಡೆಯುವ ಲೋಕಸಭೆ ಚುನಾವಣೆ ಕಠಿಣವಾಗುತ್ತದೆ. ಒಂದು ವೇಳೆ ಬಿಆರ್‌ಎಸ್ ಗದ್ದುಗೆಗೆ ಏರಿದರೆ, ಅವರು ಎನ್‌ಡಿಎ ಭಾಗವಾಗುವ ಸಾಧ್ಯತೆಗಳಿವೆ. ಆ ಮೂಲಕವಾದರೂ ಲಾಭ ಆಗುತ್ತದೆ ಎನ್ನುವುದು ಬಿಜೆಪಿ ಲೆಕ್ಕಾಚಾರ.



ಬಂಡಿ ಸಂಜಯ್

ಪಾಲಿಕೆ ಗೆಲುವು ಗತಕಾಲದ ಕತೆಯಂತೆ...

ಮೂರು ವರ್ಷಗಳ ಹಿಂದಿನ ಮಾತು. ಗ್ರೇಟರ್ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ (ಜಿಎಚ್‌ಎಂಸಿ)ಗೆ ಚುನಾವಣೆ ನಡೆದಿತ್ತು. 150 ಸ್ಥಾನಗಳಲ್ಲಿ ಆಡಳಿತಾರೂಢ ಬಿಆರ್‌ಎಸ್ 56, ಬಿಜೆಪಿ 48, ಎಐಎಂಐಎಂ 44, ಕಾಂಗ್ರೆಸ್ 2 ಸ್ಥಾನಗಳಿಸಿದ್ದವು. ಬಿಜೆಪಿಯ ಅಭೂತಪೂರ್ವ ಗೆಲುವು ಪಕ್ಷಕ್ಕೆ ಎಲ್ಲೆಡೆ ಹೊಸ ಹುಮ್ಮಸ್ಸು, ಭರವಸೆಯನ್ನು ಹುಟ್ಟಿಸಿತ್ತು.

ಮಹಾನಗರದಲ್ಲಿ ಎಲ್ಲರೂ ಹುಬ್ಬೇರಿಸುವಂತಹ ಬಿಜೆಪಿ ಪ್ರದರ್ಶನದ ಹಿಂದೆ ರಾಷ್ಟ್ರ ಮಟ್ಟದ ನಾಯಕರ ತಂತ್ರಗಾರಿಕೆ ಇತ್ತು. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸಚಿವೆ ಸ್ಮೃತಿ ಇರಾನಿ ಸೇರಿದಂತೆ ದೊಡ್ಡ ದಂಡೇ ಪ್ರಚಾರದಲ್ಲಿ ತೊಡಗಿತ್ತು. ಸ್ಥಳೀಯ ಸಂಗತಿಗಳಿಗೇ ಮಹತ್ವ ನೀಡಿ ಚರ್ಚೆಯನ್ನು ಹುಟ್ಟುಹಾಕಿದ್ದರು. ಹೈದರಾಬಾದ್‌ಗೆ ಮರುನಾಮಕರಣ ಮಾಡಿ ‘ಭಾಗ್ಯನಗರ’ ಮಾಡುವ ವಾಗ್ದಾನ ನೀಡಿದ್ದರು. ಹಿಂದುತ್ವದ ಭಾವನೆಗಳನ್ನು ಕೆರಳಿಸಿದ್ದರು. ಇದಕ್ಕೆ ಕಳಶವಿಟ್ಟಂತೆ ಕಾಂಗ್ರೆಸ್ ನೆಲಕಚ್ಚಿ ಮಲಗಿತ್ತು. ಮತದಾರರಿಗೆ ಬಿಜೆಪಿ ಪರ್ಯಾಯವಾಗಿ ಕಾಣಿಸತೊಡಗಿತ್ತು.

ಆದರೆ, ಈಗ ಕೇವಲ ಮೂರು ವರ್ಷಗಳ ಹಿಂದಿನ ಪರಿಸ್ಥಿತಿ ಗತಕಾಲದ ಕತೆಯಂತೆ ಭಾಸವಾಗುತ್ತಿತ್ತು.

2014 ರ ವಿಧಾನಸಭೆ ಚುನಾವಣೆಯಲ್ಲಿ ಐದು ಸ್ಥಾನ ಗೆದ್ದಿದ್ದ ಬಿಜೆಪಿ, 2018 ರಲ್ಲಿ ಒಂದು ಸ್ಥಾನ ಜಯಿಸಿತು. ಬಿಜೆಪಿಗೆ ರಾಜ್ಯದಲ್ಲಿ ಮಹತ್ವವನ್ನು ತಂದುಕೊಟ್ಟಿದ್ದು ದುಬ್ಬಾಕ್ ಮತ್ತು ಹುಜುರಾಬಾದ್ ಉಪ ಚುನಾವಣೆಗಳು. ಆಡಳಿತಾರೂಢ ಬಿಆರ್‌ಎಸ್ ಪಕ್ಷವನ್ನು ಹಿಮ್ಮೆಟ್ಟಿಸಿ ಕಮಲ ಅರಳಿತು. ಇದು ರಾಷ್ಟ್ರ ನಾಯಕರ ಗಮನ ತೆಲಂಗಾಣದ ಕಡೆಗೂ ಹರಿಯುವಂತೆಯೂ, ಕಾರ್ಯಕರ್ತರಲ್ಲಿ ನವ ಉತ್ಸಾಹ ಮೂಡುವಂತೆಯೂ ಮಾಡಿತು.

ಹೈದರಾಬಾದ್ ಹೊರತುಪಡಿಸಿದರೆ ರಾಜ್ಯದಲ್ಲಿ ಬಿಜೆಪಿಗೆ ಗಟ್ಟಿನೆಲೆ ಇರುವುದು ಉತ್ತರ ತೆಲಂಗಾಣದ ಅವಿಭಜಿತ ನಿಜಾಮಾಬಾದ್, ಕರೀಂನಗರ ಮತ್ತು ಆದಿಲಾಬಾದ್ ಜಿಲ್ಲೆಗಳಲ್ಲಿ ಮಾತ್ರ. ಹಳೆಯ ನಿಜಾಮಾಬಾದ್ ಜಿಲ್ಲೆ ಬಿಜೆಪಿಯ ಶಕ್ತಿಕೇಂದ್ರ. ಅಲ್ಲಿ ಬಿಆರ್‌ಎಸ್ ಮತ್ತು ಕಾಂಗ್ರೆಸ್‌ಗೆ ತೀವ್ರ ಪೈಪೋಟಿ ಕೊಡುವಷ್ಟರ ಮಟ್ಟಿಗೆ ಅದರ ಬಲವಿದೆ. ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ ಕೆ.ಕವಿತಾ ಅವರು ನಿಜಾಮಾಬಾದ್ ಲೋಕಸಭಾ ಕ್ಷೇತ್ರದ ಸಂಸದೆಯಾಗಿದ್ದರು. ಅವರನ್ನು 2019 ರ ಚುನಾವಣೆಯಲ್ಲಿ ಬಿಜೆಪಿಯ ಡಿ.ಅರವಿಂದ ಸೋಲಿಸಿದರು.

ನೆರೆಯ ಕರೀಂನಗರ ಜಿಲ್ಲೆಯಲ್ಲೂ ಬಿಜೆಪಿಗೆ ನೆಲೆಯಿದೆ. ‘ಬಂಡಿ ಸಂಜಯ್’ ಅಲ್ಲಿಯ ಸಂಸದರು. ಉತ್ತರದ ತುದಿಯಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಾಗಿರುವ ಆದಿಲಾಬಾದ್ ಜಿಲ್ಲೆಯಲ್ಲೂ ಬಿಜೆಪಿ ಕೆಲ ವರ್ಷಗಳಿಂದ ನೆಲೆ ಕಂಡುಕೊಂಡಿದೆ. ನೆರೆಯ ಮಹಾರಾಷ್ಟ್ರದ ಜತೆಗಿನ ಸಂಪರ್ಕದಿಂದಾಗಿ ಈ ಜಿಲ್ಲೆಯ ಪಶ್ಚಿಮ ಪ್ರದೇಶಗಳಲ್ಲಿ ತುಂಬಾ ಹಿಂದಿನಿಂದಲೂ ಕೋಮು ಸಂಘರ್ಷ ಬೇರೂರಿದೆ. ಅಲ್ಲದೆ ಬುಡಕಟ್ಟು ಪ್ರದೇಶಗಳಲ್ಲಿ ಆರ್‌ಎಸ್‌ಎಸ್ ಬಹಳ ವರ್ಷಗಳಿಂದ ಕೆಲಸ ಮಾಡುತ್ತಾ ಹಿಂದುತ್ವದ ಭಾವನೆಯನ್ನು ಮೂಡಿಸುವುದರಲ್ಲಿ ಯಶಸ್ವಿಯಾಗಿದೆ. ಅಲ್ಲಿ 2019ರ ಲೋಕಸಭೆಯಲ್ಲಿ ಬುಡಕಟ್ಟು ಜನಾಂಗದ ಸೋಯಂ ಬಾಪುರಾವು ಆಯ್ಕೆಯಾಗಿದ್ದಾರೆ. ಬಿಜೆಪಿ ಈ ಮೂವರೂ ಸಂಸದರನ್ನು ವಿಧಾನಸಭಾ ಚುನಾವಣಾ ಕಣಕ್ಕಿಳಿಸಿದೆ. ಇವರ ಆಯ್ಕೆ ಬಗೆಗೆ ಆಶಾಭಾವನೆಯನ್ನೂ ಹೊಂದಿದೆ.

ಈ ಚುನಾವಣೆಯಲ್ಲಿ ಬಿಜೆಪಿ ನಾಯಕರು ಪ್ರಮುಖವಾಗಿ ಮೂರು ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಮೊದಲನೆಯದು, ಹಿಂದುಳಿದ ವರ್ಗಗಳ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡುವುದು. ಎರಡನೆಯದು, ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ನೀಡುವುದು. ಮೂರನೆಯದು, ಮುಸ್ಲಿಮರಿಗೆ ಕೊಟ್ಟಿರುವ ಶೇ 4 ರಷ್ಟು ಮೀಸಲಾತಿಯನ್ನು ಹಿಂದಕ್ಕೆ ಪಡೆದು, ಅದನ್ನು ಹಿಂದುಳಿದ ವರ್ಗಗಳಿಗೆ ನೀಡುವುದು.

ಬಿಜೆಪಿ ಕಾರ್ಯಕರ್ತ ಕೃಷ್ಣಂರಾಜು ನನ್ನೊಂದಿಗೆ ಮಾತನಾಡುತ್ತಾ ‘ನೀವು ರಾಜ್ಯ ಮೂಲೆಮೂಲೆ ಸುತ್ತಾಡಿ ಬಂದಿದ್ದೀರಿ. ನನ್ನೊಂದಿಗೆ ನಿಜ ಹೇಳಿ. ಬಂಡಿ ಸಂಜಯ್ ಬದಲಾವಣೆಯಿಂದ ನಾವೇ ನಮ್ಮ ಶಕ್ತಿಯನ್ನು ಕುಂದಿಸಿಕೊಂಡಿದ್ದೇವೆ ಅಲ್ಲವೇ’ ಎಂದು ಕೇಳಿದರು.

ಇದು ನಿಷ್ಠಾವಂತ ಕಾರ್ಯಕರ್ತನೊಬ್ಬನ ಸ್ವಯಂ ವಿಮರ್ಶೆಯಂತೆ ಕಂಡಿತು.

ಈಟೆಲ ರಾಜೇಂದರ್

ನುಡಿ–ಕಿಡಿ

ತೆಲಂಗಾಣದಲ್ಲಿ ಈಗ ಮಾಫಿಯಾ ಆಡಳಿತ ಇದೆ. ರಾಜ್ಯದಲ್ಲಿ ಭೂಮಿ ಮತ್ತು ಗಣಿಗಾರಿಕೆ ಮಾಫಿಯಾ ಅವ್ಯಾಹತವಾಗಿದೆ. ಸಂಘಟಿತ ಅಪರಾಧಗಳೂ ಇಲ್ಲಿ ನಡೆಯುತ್ತಿವೆ. ಮಾಫಿಯಾ ವಿರುದ್ಧ ಎಚ್ಚರಿಕೆ ನೀಡಲು ನಾನು ಬಂದಿದ್ದೇನೆ. 2017ಕ್ಕೂ ಮೊದಲು ಉತ್ತರ ಪ್ರದೇಶದಲ್ಲೂ ಇದೇ ಸ್ಥಿತಿ ಇತ್ತು. ಡಬಲ್ ಎಂಜಿನ್ ಸರ್ಕಾರ ಬಂದ ಬಳಿಕ ಪರಿಸ್ಥಿತಿ ಸುಧಾರಿಸಿತು.

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಮತ ಒಡೆಯುವುದು ಮತ್ತು ಬಿಜೆಪಿ ಹಾಗೂ ಬಿಆರ್‌ಎಸ್‌ಗೆ ಅನುಕೂಲವಾಗುವಂತೆ ಮಾಡುವುದು ಎಐಎಂಐಎಂಗೆ ಪಕ್ಷದ ಉದ್ದೇಶವಾಗಿದೆ. ನನ್ನ ನೆಲದಲ್ಲಿ ನನಗೆ ಬೌನ್ಸರ್ ಎಸೆಯಲು ಅಸಾದುದ್ದೀನ್ ಓವೈಸಿ ಅವರಿಗೆ ಸಾಧ್ಯವಿಲ್ಲ. ಅವರು ಕ್ರಿಕೆಟರ್ ಆಗಲು ಸಾಧ್ಯವಿಲ್ಲ. ಆದರೆ ನಾನು ಏಕಕಾಲದಲ್ಲಿ ಕ್ರಿಕೆಟರ್ ಮತ್ತು ರಾಜಕಾರಣಿ ಆಗಬಲ್ಲೆ ಎಂಬುದನ್ನು ಅವರು ಗಮನದಲ್ಲಿರಿಸಿಕೊಳ್ಳಲಿ.

ಮೊಹಮ್ಮದ್ ಅಜರುದ್ದೀನ್, ಕಾಂಗ್ರೆಸ್ ಅಭ್ಯರ್ಥಿ

ಚುನಾವಣಾ ಕಣದಲ್ಲಿ

- **ಬಿಆರ್‌ಎಸ್‌ಗೆ ನಿರ್ಬಂಧ– ಕಾಂಗ್ರೆಸ್ ಮನವಿ:** ರೈತ ಬಂಧು ಯೋಜನೆ ಅಡಿ ನೀಡಲಾಗುವ ಆರ್ಥಿಕ ನೆರವಿನ ವಿತರಣೆ ಕುರಿತು ಚುನಾವಣಾ ಪ್ರಚಾರಗಳಲ್ಲಿ ಮಾತನಾಡದಂತೆ ಬಿಆರ್‌ಎಸ್‌ಗೆ ಸೂಚನೆ ನೀಡಬೇಕು ಎಂದು ಮುಖ್ಯ ಚುನಾವಣಾ ಆಯುಕ್ತರಿಗೆ ಕಾಂಗ್ರೆಸ್ ಭಾನುವಾರ ಮನವಿ ಮಾಡಿದೆ. ನವೆಂಬರ್ 28ರವರೆಗೆ ನೆರವು ವಿತರಿಸಲು ಚುನಾವಣಾ ಆಯೋಗವು ತೆಲಂಗಾಣ ಸರ್ಕಾರಕ್ಕೆ ನವೆಂಬರ್ 24ರಂದು ಸಮ್ಮತಿ ನೀಡಿತ್ತು. ಆಯೋಗ ನೀಡಿರುವ ಸಮ್ಮತಿಯನ್ನು ಚುನಾವಣಾ ಪ್ರಚಾರಕ್ಕಾಗಿ ಬಿಆರ್‌ಎಸ್ ಬಳಸಿಕೊಳ್ಳುತ್ತಿದೆ ಎಂದು ಪತ್ರದಲ್ಲಿ ಕಾಂಗ್ರೆಸ್ ದೂರಿದೆ
- **ರಾಜೇ ಅವರಿಂದ ಪ್ರಾರ್ಥನೆ:** ವಿಧಾನಸಭೆ ಚುನಾವಣೆಗಳ ಫಲಿತಾಂಶಕ್ಕೆ ಆರು ದಿನಗಳು ಬಾಕಿ ಇರುವಂತೆ, ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರು ರಾಜಸ್ಥಾನದ ಪ್ರತಾಪ್‌ಗಢದ ಗೌತಮೇಶ್ವರ ಮಹಾದೇವ್ ದೇವಸ್ಥಾನ ಮತ್ತು ಬಾನ್ಸ್‌ವಾಡ ಜಿಲ್ಲೆಯ ತ್ರಿಪುರ ಸುಂದರಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ನಿಂಬಾಡೇಡ, ಪ್ರತಾಪಗಢ ಮತ್ತು ಬಾನ್ಸ್‌ವಾಡದ ಬಿಜೆಪಿ ಅಭ್ಯರ್ಥಿಗಳು ರಾಜೇ ಅವರ ಜೊತೆಗೂಡಿದ್ದರು.

ಭದ್ರತಾಲೋಪ: 6 ಪೊಲೀಸ್ ಅಧಿಕಾರಿಗಳ ಅಮಾನತು

ಚಂಡೀಗಢ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷ ಜನವರಿಯಲ್ಲಿ ಪಂಜಾಬ್‌ಗೆ ಭೇಟಿ ನೀಡಿದ್ದ ವೇಳೆ ಉಂಟಾಗಿದ್ದ ಭದ್ರತಾ ವೈಫಲ್ಯ ಸಂಬಂಧ ಕರ್ತವ್ಯ ಲೋಪ ಎಸಗಿದ ಆರೋಪದಡಿ ಆರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಅಮಾನತು ಆದೇಶವನ್ನು ನ.22ರಂದು ಪಂಜಾಬ್ ಗೃಹ ಇಲಾಖೆ ಹೊರಡಿಸಿದೆ. ಅಮಾನತುಗೊಂಡಿರುವ ಈ ಆರು ಮಂದಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಶ್ರೇಣಿಯ ಅಧಿಕಾರಿಗಳೂ ಸೇರಿದ್ದಾರೆ. ಇವರಲ್ಲಿ ಒಬ್ಬರನ್ನು ಶನಿವಾರ ಅಮಾನತುಗೊಳಿಸಲಾಗಿದೆ ಎಂದು ವರದಿಯಾಗಿದೆ.

2022ರ ಜನವರಿ 5ರಂದು ಫಿರೋಜ್‌ಪುರದಲ್ಲಿ ಪ್ರತಿಭಟನಕಾರರು ರಸ್ತೆ ತಡೆದಿದ್ದರಿಂದ ಪ್ರಧಾನಿ ಮೋದಿಯವರ ಬೆಂಗಾವಲು ಪಡೆ ಮೇಲ್ಸೇತುವೆಯಲ್ಲಿ ಸಿಕ್ಕಿಹಾಕಿಕೊಂಡಿತು. ಇದರಿಂದಾಗಿ ಮೋದಿಯವರು ಪಾಲ್ಗೊಳ್ಳಬೇಕಿದ್ದ ರ‍್ಯಾಲಿಯನ್ನು ರದ್ದುಗೊಳಿಸಬೇಕಾಯಿತು. ನಂತರ ಅವರು ಯಾವುದೇ ಕಾರ್ಯಕ್ರಮಕ್ಕೆ ಹಾಜರಾಗದೆ ಪಂಜಾಬ್‌ನಿಂದ ವಾಪಸಾಗಿದ್ದರು.

ಪ್ರಧಾನಿ ಮೋದಿಯವರು ಪಂಜಾಬ್ ಭೇಟಿಯ ಸಂದರ್ಭ ಉಂಟಾದ ಭದ್ರತಾ ಲೋಪದ ಬಗ್ಗೆ ತನಿಖೆ ನಡೆಸಿದ ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯು, ರಾಜ್ಯದ ಪೊಲೀಸ್ ಇಲಾಖೆಯ ಹಲವು ಅಧಿಕಾರಿಗಳ ಮೇಲೆ ದೋಷಾರೋಪಣೆ ಮಾಡಿತ್ತು.

‘ತೆಲಂಗಾಣಕ್ಕೆ ಕೊಡುಗೆ ಏನು ಎಂಬುದನ್ನು ಕೆಸಿಆರ್ ಹೇಳಲಿ’

ಆಂದೋಲೆ (ತೆಲಂಗಾಣ) (ಪಿಟಿಐ): ‘ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಕಾಂಗ್ರೆಸ್ ಪಕ್ಷವು ತೆಲಂಗಾಣಕ್ಕೆ ಏನು ಮಾಡಿದೆ ಎಂಬುದನ್ನು ಪ್ರಶ್ನಿಸುವ ಮೊದಲು, ಅವರು ತೆಲಂಗಾಣಕ್ಕೆ ಏನು ಮಾಡಿದ್ದಾರೆ ಎಂಬುದನ್ನು ಜನರಿಗೆ ತಿಳಿಸಬೇಕು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಒತ್ತಾಯಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪಕ್ಷ ನೀಡಿರುವ ಆರು ಭರವಸೆಗಳನ್ನು ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಕಾನೂನಾಗಿ ಪರಿವರ್ತಿಸಲಾಗುವುದು ಮತ್ತು ಅದನ್ನು ಜಾರಿಗೆ ತರಲಾಗುವುದು ಎಂದು ಅವರು ಚುನಾವಣಾ ರ‍್ಯಾಲಿಯಲ್ಲಿ ಹೇಳಿದರು.

‘ಇಂದು ತೆಲಂಗಾಣದಲ್ಲಿ ಡೋರಾಲಾ ಸರ್ಕಾರ್ (ಊಳಿಗಮಾನ್ಯ ಸರ್ಕಾರ) ಮತ್ತು ಪ್ರಜಲಾ ಸರ್ಕಾರ್ (ಜನರ ಸರ್ಕಾರ) ನಡುವೆ ಹೋರಾಟ ನಡೆಯುತ್ತಿದೆ. ಕಾಂಗ್ರೆಸ್ ಏನು ಮಾಡಿದೆ ಎಂದು ನಿಮ್ಮ ಮುಖ್ಯಮಂತ್ರಿ ಕೇಳುತ್ತಿದ್ದಾರೆ. ಕಾಂಗ್ರೆಸ್ ಏನು ಮಾಡಿದೆ ಎಂಬುದು ಪ್ರಶ್ನೆಯಲ್ಲ, ಕೆಸಿಆರ್ ಏನು ಮಾಡಿದ್ದಾರೆ ಎಂಬುದು ಪ್ರಶ್ನೆ’ ಎಂದರು.

ರಾವ್ ಅವರು ಕೋಟ್ಯಂತರ ರೂಪಾಯಿ ಲೂಟಿ ಮಾಡುತ್ತಿದ್ದಾರೆ ಎನ್ನಲಾದ ಹೈದರಾಬಾದ್ ನಗರವನ್ನು ಅಭಿವೃದ್ಧಿಪಡಿಸಿ, ಐ.ಟಿ. ಕೇಂದ್ರವನ್ನಾಗಿ ಪರಿವರ್ತಿಸಿದ್ದು ಕಾಂಗ್ರೆಸ್ ಎಂದರು.

ತೆಲಂಗಾಣ ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಹೈದರಾಬಾದ್‌ನಲ್ಲಿ ವೃದ್ಧೆಯೊಬ್ಬರು ಅಪ್ಪಿಕೊಂಡರು —ಪಿಟಿಐ ಚಿತ್ರ

ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

‘ಇಂಡಿಯಾ’ ಮೈತ್ರಿಕೂಟಕ್ಕೆ ಸೋಲು

ಹೈದರಾಬಾದ್ (ಪಿಟಿಐ): ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ‘ಇಂಡಿಯಾ’ ಮೈತ್ರಿಕೂಟವು ಹೇಳಹೆಸರಿಲ್ಲದಂತೆ ಆಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದರು. ಈ ಮೂರು ರಾಜ್ಯಗಳಲ್ಲಿ ಮತದಾನ ಪ್ರಕ್ರಿಯೆಯು ಈಚೆಗಷ್ಟೇ ಮುಗಿದಿದೆ.

ತೆಲಂಗಾಣದ ತೂಪ್ರಾನ್‌ನಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮೋದಿ ಅವರು, ಈ ಮೂರು ರಾಜ್ಯಗಳಲ್ಲಿ ತಾವು ನಡೆಸಿದ ಚುನಾವಣಾ ಪ್ರಚಾರ ಕಾರ್ಯದ ಬಗ್ಗೆ ಉಲ್ಲೇಖಿಸಿದರು.

‘ಮೂರು ರಾಜ್ಯಗಳಲ್ಲಿ ‘ಇಂಡಿಯಾ’ ಮೈತ್ರಿಕೂಟವು ಹೇಳಹೆಸರಿಲ್ಲದಂತೆ ಆಗಲಿದೆ ಎಂಬುದನ್ನು ನಾನು ಕಂಡಿದ್ದೇನೆ. ಆ ರಾಜ್ಯಗಳಲ್ಲಿ ಮಹಿಳೆಯರು ಮತ್ತು ರೈತರು ಕಾಂಗ್ರೆಸ್ ಪಕ್ಷವನ್ನು ಬೇರುಸಹಿತ ಕಿತ್ತುಹಾಕಲಿದ್ದಾರೆ’ ಎಂದರು.

ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಜನರನ್ನು ಭೇಟಿ ಮಾಡದ ಮುಖ್ಯಮಂತ್ರಿ ರಾಜ್ಯಕ್ಕೆ ಬೇಕೇ’ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಹಾಗೂ ಬಿಆರ್‌ಎಸ್ ಪಕ್ಷದ ಹೆಗ್ಗುರುತು ಅಂದರೆ ಭ್ರಷ್ಟಾಚಾರ, ಪರಿವಾರವಾದ ಮತ್ತು ಕಾನೂನು ಸುವ್ಯವಸ್ಥೆಯನ್ನು ಹಾಳುಮಾಡುವುದು. ಈ ಎರಡೂ ಪಕ್ಷಗಳು ಒಂದೇ ರೀತಿಯಲ್ಲಿ ಇವೆ ಎಂದು ಮೋದಿ ಅವರು ಆರೋಪಿಸಿದರು.

‘ಕಾಂಗ್ರೆಸ್ ಮತ್ತು ಕೆಸಿಆರ್ ಅವರು ಒಂದೇ ಬಗೆ. ಇಬ್ಬರಿಂದಲೂ ಜನ ದೂರ ಇರಬೇಕು’ ಎಂದು ಕರೆ ನೀಡಿದರು.

ತೆಲಂಗಾಣದ ಗಜ್ವೇಲ್‌ನಲ್ಲಿ ಭಾನುವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು —ಪಿಟಿಐ ಚಿತ್ರ

ಆರ್ಥಿಕ ನೆರವು ಹೆಚ್ಚಳ: ಕೆಸಿಆರ್ ಭರವಸೆ

ಖಾನಾಪುರ (ಪಿಟಿಐ): ತೆಲಂಗಾಣದಲ್ಲಿ ಈ ಬಾರಿಯೂ ಬಿಆರ್‌ಎಸ್ ಪಕ್ಷವೇ ಸರ್ಕಾರ ರಚಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್, ಹಲವಾರು ಯೋಜನೆಗಳ ಅಡಿ ಜನರಿಗೆ ನೀಡುತ್ತಿರುವ ಆರ್ಥಿಕ ನೆರವಿನ ಮೊತ್ತವನ್ನು ಹೆಚ್ಚಿಸುವುದಾಗಿ ಭಾನುವಾರ ಭರವಸೆ ನೀಡಿದರು.

ಇಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಹಿಂದಿನ ಹೈದರಾಬಾದ್ ರಾಜ್ಯದ ಜೊತೆ ಆಂಧ್ರಪ್ರದೇಶವನ್ನು ಜನರ ಒಪ್ಪಿಗೆ ಇಲ್ಲದೇ ಕಾಂಗ್ರೆಸ್ ವಿಲೀನ ಮಾಡಿತು. ಇದರಿಂದಾಗಿ ಜನ 58 ವರ್ಷಗಳ ಕಾಲ ಯಾತನೆ ಅನುಭವಿಸಬೇಕಾಯಿತು’ ಎಂದು ಆರೋಪಿಸಿದರು.

ರಾಜ್ಯದಲ್ಲಿ 50 ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ನೀಡಿದ್ದ ಕಲ್ಯಾಣ ಕಾರ್ಯಕ್ರಮಗಳ ಜೊತೆ ಇಂದಿನ ಬಿಆರ್‌ಎಸ್ ಸರ್ಕಾರ ನೀಡಿರುವ ಕಾರ್ಯಕ್ರಮಗಳನ್ನು ಹೋಲಿಸಿ ನೋಡುವಂತೆ ಅವರು ಜನರಿಗೆ ಹೇಳಿದರು. ಕಾಂಗ್ರೆಸ್ ಆಡಳಿತದಲ್ಲಿ ಮಾಸಿಕ ಪಿಂಚಣಿ ₹200 ಇತ್ತು. ಅದನ್ನು ಬಿಆರ್‌ಎಸ್ ₹2,000ಕ್ಕೆ ಏರಿಸಿದೆ. ಇನ್ನು ಮುಂದೆ ಹಂತಹಂತವಾಗಿ ₹5,000ಕ್ಕೆ ಏರಿಸಲಾಗುವುದು. ರೈತ ಬಂಧು ಯೋಜನೆ ಅಡಿ ನೀಡಲಾಗುವ ₹10,000 ನೆರವನ್ನು ಹಂತಹಂತವಾಗಿ ₹16,000ಕ್ಕೆ ಏರಿಸಲಾಗುವುದು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತ ಬಂಧು ಯೋಜನೆ ಮತ್ತು ಧರಣಿ ಪೋರ್ಟಲ್ ಸೇವೆಯನ್ನು ಸ್ಥಗಿತಗೊಳಿಸಲಿದೆ ಎಂದರು.

ಅದೇ ದಿನ ಜಗಿತ್ಯಾಲದಲ್ಲಿ ರ‍್ಯಾಲಿ ನಡೆಸಿದ ಅವರು, ತೆಲಂಗಾಣ ರಾಜ್ಯ ರಚನೆ ವಿಳಂಬವಾಗಲು ಕಾಂಗ್ರೆಸ್ ಕಾರಣ. 1969ರಲ್ಲಿ ನಡೆದ ತೆಲಂಗಾಣ ಹೋರಾಟದಲ್ಲಿ 400 ಮಂದಿ ಮೃತಪಟ್ಟರು. ಆಂಧ್ರ ಜನರಿಗಿಂತ ತೆಲಂಗಾಣ ಕಾಂಗ್ರೆಸ್ ನಾಯಕರೇ ತೆಲಂಗಾಣದ ಜನರಿಗೆ ಮೋಸ ಮಾಡಿದ್ದು ಎಂದು ದೂರಿದರು.

‘ನನಗೆ 70 ವರ್ಷ ವಯಸ್ಸಾಗಿದೆ. ಜನರ ಆಶೀರ್ವಾದದಿಂದ 10 ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವ ಕುರಿತು ತೃಪ್ತಿ ಇದೆ. ಕೇರಳದಂತೆ ನಮ್ಮ ರಾಜ್ಯವೂ ಶೇ 100ರಷ್ಟು ಸಾಕ್ಷರತೆ ಸಾಧಿಸಬೇಕು. ಬಡತನ ಸಂಪೂರ್ಣವಾಗಿ ನಿರ್ಮೂಲನೆ ಆಗಬೇಕು ಎಂಬುದು ನನ್ನ ಬಯಕೆ. ಅದಕ್ಕಾಗಿ ಹೋರಾಡುತ್ತಿದ್ದೇನೆಯೇ ಹೊರತು ಯಾವುದೇ ಹುದ್ದೆ ಮೇಲೆ ನನಗೆ ಆಸೆಯಿಲ್ಲ’ ಎಂದರು.

ಬಿಆರ್‌ಎಸ್ ಸರ್ಕಾರವು 3,600 ತಾಂಡಾಗಳನ್ನು ಗ್ರಾಮ ಪಂಚಾಯತಿಗಳನ್ನಾಗಿ ಮಾರ್ಪಾಡು ಮಾಡಿದೆ. ರಾಜ್ಯದಲ್ಲಿ ಈಗ 3 ಕೋಟಿ ಟನ್ ಭತ್ತ ಬೆಳೆಯಲಾಗುತ್ತಿದೆ. ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಬಿಳಿ ಪಡಿತರ ಚೀಟಿ ಹೊಂದಿರುವವರಿಗೆ ಉತ್ತಮ ಗುಣಮಟ್ಟದ ಅಕ್ಕಿ ವಿತರಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಹಿಂದೂ ಸಂಘಟನೆಗಳಲ್ಲಿ ಒಗ್ಗಟ್ಟು: ವಿಶ್ವ ಹಿಂದೂ ಸಮಾವೇಶ ನಿರ್ಣಯ

ಬ್ಯಾಂಕಾಕ್ (ಪಿಟಿಐ): ಹಿಂದೂ ಸಂಘಟನೆಗಳಲ್ಲಿ ಒಗ್ಗಟ್ಟು ಮೂಡಿಸಲು ಹಾಗೂ ಸನಾತನ ಧರ್ಮದ ವಿರುದ್ಧದ ದ್ವೇಷವನ್ನು ಪರಿಣಾಮಕಾರಿಯಾಗಿ ಪ್ರತಿರೋಧಿಸಬೇಕೆಂಬ ನಿರ್ಣಯಗಳನ್ನು ಇಲ್ಲಿ ಭಾನುವಾರ ಸಮಾಪನವಾದ ಮೂರು ದಿನಗಳ ವಿಶ್ವ ಹಿಂದೂ ಸಮಾವೇಶದಲ್ಲಿ (ಡಬ್ಲ್ಯುಎಚ್‌ಸಿ) ಕೈಗೊಳ್ಳಲಾಗಿದೆ.

ಡಬ್ಲ್ಯುಎಚ್‌ಸಿಯ ವೇಳೆ ನಡೆದ ಸಮಾನಾಂತರ ಅಧಿವೇಶನಗಳಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು, ವಿದೇಶಗಳಲ್ಲಿ ಚುನಾಯಿತರಾದ ಹಿಂದೂ ಜನಪ್ರತಿನಿಧಿಗಳನ್ನು ಬೆಂಬಲಿಸಲು ಮತ್ತು ಅವರ ವಿರುದ್ಧ ನಡೆಯುವ ರಾಜಕೀಯ ಷಡ್ಯಂತ್ರಗಳನ್ನು ಎದುರಿಸಲು ಹೋರಾಟ ನಡೆಸಲು ನಿರ್ಧರಿಸಿದರು.

ಸಂಘಟಕರ ಪ್ರಕಾರ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಶುಕ್ರವಾರ ಉದ್ಘಾಟಿಸಿದ ಸಮ್ಮೇಳನದಲ್ಲಿ 61 ದೇಶಗಳಿಂದ 2,100 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಆಧ್ಯಾತ್ಮಿಕ ನಾಯಕಿ ಮಾತಾ ಅಮೃತಾನಂದಮಯಿ ದೇವಿ ಅವರು ಭಾನುವಾರ ಸಮಾರೋಪ ಭಾಷಣ ಮಾಡಿದರು.

‘ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಹಿಂದೂಗಳನ್ನು ಸಂಪರ್ಕಿಸುವ ಪ್ರಕ್ರಿಯೆ ನಿಧಾನವಾಯಿತು. ನಾವು ಈಗ ಆ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತಿದ್ದೇವೆ’ ಎಂದು ವಿಶ್ವ ಹಿಂದೂ ಕಾಂಗ್ರೆಸ್ ಸಂಸ್ಥಾಪಕ ಸ್ವಾಮಿ ವಿಜ್ಞಾನಾನಂದ ಅವರು ಹೇಳಿದ್ದಾರೆ.

ಕಾಲೇಜು ಮತ್ತಿತರ ಸಂಸ್ಥೆಗಳನ್ನು ನಿರ್ಮಿಸಿರುವ ಕ್ರೈಸ್ತ ಸಂಘಟನೆಗಳ ಹಿಡಿತದಲ್ಲಿರುವ ದೇವಸ್ಥಾನದ ಭೂಮಿಯನ್ನು ವಾಪಸ್ ಪಡೆಯುವ ಬಗ್ಗೆಯೂ ಗಮನ ಹರಿಸಲಾಗುವುದು. ಇವು ದೇವಸ್ಥಾನದ ಜಮೀನುಗಳಾಗಿದ್ದು, ಗುತ್ತಿಗೆ ಅವಧಿ ಮುಗಿದಿವೆ ಎಂದು ಅವರು ಹೇಳಿದರು.

ಮುಂದಿನ ವಿಶ್ವ ಹಿಂದೂ ಕಾಂಗ್ರೆಸ್ 2026ಕ್ಕೆ ಮುಂಬೈನಲ್ಲಿ ನಡೆಯಲಿದೆ ಎಂದು ಸಂಘಟಕರು ಘೋಷಿಸಿದರು.

ರಕ್ಷಣಾ ಕಾರ್ಯಕ್ಕೆ ಸೇನೆ

ಒಂದನೇ ಪುಟದಿಂದ...

ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿಲ್ಲ. ದುರಸ್ತಿ ಕೆಲಸ ನಡೆಯುತ್ತಿದೆ. ಡ್ರಿಲ್ ಯಂತ್ರದ ಒಂದು ಭಾಗವನ್ನು ಬೆಟ್ಟದ ಮೇಲೆ ಲಂಬವಾಗಿ ಕೊರೆಯಲು ಕಳುಹಿಸಲಾಗಿದೆ ಎಂದರು.

ಕೊರೆಯುವ ಯಂತ್ರದ ಬ್ಲೇಡ್‌ಗಳು ಪೈಪ್‌ಗೆ ಬಡಿದ ಕಾರಣ ಶುಕ್ರವಾರ ರಕ್ಷಣಾ ಕಾರ್ಯವನ್ನು ನಿಲ್ಲಿಸಲಾಗಿತ್ತು. ಈ ಬ್ಲೇಡ್‌ಗಳು ಅವಶೇಷಗಳ ಅಡಿ ಸಿಲುಕಿಕೊಂಡಿವೆ. ಹಾನಿಯಾಗಿರುವ ಭಾಗಗಳನ್ನು 34 ಮೀಟರ್ ವರೆಗೆ ಹೊರತೆಗೆಯಲಾಗಿದೆ. ಇನ್ನೂ ಸುಮಾರು 13 ಮೀಟರ್‌ನಷ್ಟು ಹೊರಗೆ ತರಬೇಕಿದೆ. ರಾತ್ರಿ ವೇಳೆಗೆ ಅವುಗಳನ್ನು ಹೊರತರುವ ನಿರೀಕ್ಷೆ ಇದೆ. ಆ ಭಾಗಗಳನ್ನು ಕತ್ತರಿಸಿ ತೆಗೆದುಹಾಕಲು ಭಾನುವಾರ ಹೈದರಾಬಾದ್‌ನಿಂದ ಪ್ಲಾಸ್ಮಾ ಕಟ್ಟರ್ ತರಲಾಗಿದೆ.

‘ಯಂತ್ರ ಸಂಪೂರ್ಣವಾಗಿ ಹೊರಬಂದ ಬಳಿಕ, 15 ಮೀಟರ್ ಉದ್ದದಷ್ಟು ಸುರಂಗವನ್ನು ಕಾರ್ಮಿಕರು ಅಗೆಯಬೇಕಿದೆ. ಈ ಮೊದಲು, ನಾವು ಗಂಟೆಗೆ 4-5 ಮೀಟರ್ ವೇಗದಲ್ಲಿ ಕೊರೆಯುತ್ತಿದ್ದೆವು. ಆದರೆ, ಈಗ ಅದು ಆಗುವುದಿಲ್ಲ’ ಎಂದು ಹಸ್ನೈನ್ ಹೇಳಿದರು.

ಆರು ಇಂಚು ಪೈಪ್ ಮೂಲಕ ಆಹಾರ, ಔಷಧ ಹಾಗೂ ಇತರೆ ಅಗತ್ಯ ವಸ್ತುಗಳನ್ನು ಕಾರ್ಮಿಕರಿಗೆ ರವಾನಿಸಲಾಗುತ್ತಿದೆ. ಕಾರ್ಮಿಕರು ತಮ್ಮ ಕುಟುಂಬದ ಸದಸ್ಯರೊಂದಿಗೆ ನಿತ್ಯ ಮಾತನಾಡಲು ಸೌಲಭ್ಯ ಕಲ್ಪಿಸಲಾಗಿದೆ.

‘ಹೊರಬಂದ ಬಳಿಕ ಮತ್ತೆ ಕಳುಹಿಸುವುದಿಲ್ಲ’

ಉತ್ತರಕಾಶಿ (ಪಿಟಿಐ): ‘ಸುರಂಗದಿಂದ ಸುರಕ್ಷಿತವಾಗಿ ಹೊರಬಂದ ಬಳಿಕ ಮತ್ತೆ ಆ ಕೆಲಸ ಮಾಡಲು ಮಗನನ್ನು ಕಳುಹಿಸುವುದಿಲ್ಲ’ ಎಂದು ಪುತ್ರನಿಗಾಗಿ ಕಾಯುತ್ತಿರುವ ತಂದೆ ಚೌಧರಿ ಭಾನುವಾರ ಹೇಳಿದರು.

ಈ ಹಿಂದೆ ಮುಂಬೈನಲ್ಲಿ ನಡೆದ ಅಪಘಾತದಲ್ಲಿ ಒಬ್ಬ ಮಗನನ್ನು ಕಳೆದುಕೊಂಡಿರುವ ಉತ್ತರ ಪ್ರದೇಶದ ಲಖಿಂಪುರ್ ಖೇರಿಯ ಕೃಷಿ ಕಾರ್ಮಿಕ ಚೌಧರಿ, ಈಗ ತಮ್ಮ ಎರಡನೇ ಮಗ ಸುರಕ್ಷಿತವಾಗಿ ಹೊರಬರಲಿ ಎಂದು ಪ್ರಾರ್ಥಿಸುತ್ತಿದ್ದಾರೆ.

‘ಒಬ್ಬನೇ ಮಗ ಮಂಜೀತ್‌ಗೆ ಏನಾದರೂ ಸಂಭವಿಸಿದರೆ, ನಾನು ಮತ್ತು ಪತ್ನಿ ಹೇಗೆ ಬದುಕುವುದು’ ಎಂದು ಪ್ರಶ್ನಿಸಿದರು. ಸುರಂಗದೊಳಗೆ ಸಿಲುಕಿರುವ 41 ಕಾರ್ಮಿಕರ ಪೈಕಿ 22 ವರ್ಷ ವಯಸ್ಸಿನ ಮಂಜೀತ್ ಕೂಡ ಒಬ್ಬರು.

‘ನನ್ನ ಮಗ ಆರೋಗ್ಯವಾಗಿದ್ದಾನೆ. ರಕ್ಷಣಾ ಕಾರ್ಯಾಚರಣೆ ವಿಳಂಬದಿಂದಾಗಿ ನಾನು ಸ್ವಲ್ಪ ಒತ್ತಡದಲ್ಲಿದ್ದೇನೆ. ಇದು ಯುದ್ಧ. ಹೆದರಬಾರದು ಎಂದು ಅವನಿಗೆ ಹೇಳಿದ್ದೇನೆ. ನಮ್ಮದು ಬಡ ಕುಟುಂಬ. ಪತ್ನಿಯ ಆಭರಣಗಳ ಮೇಲೆ ₹9 ಸಾವಿರ ಸಾಲ ಪಡೆದು ಇಲ್ಲಿಗೆ ಬಂದಿದ್ದೇವೆ. ಇಲ್ಲಿನ ಆಡಳಿತವು ಜಾಕೆಟ್ ಮತ್ತು ಬೂಟುಗಳನ್ನು ನೀಡಿದೆ. ನನ್ನ ಸಾಲವನ್ನೂ ಮರುಪಾವತಿಸಿದೆ’ ಎಂದು ಹೇಳಿದರು.

‘ಮನ್ ಕಿ ಬಾತ್’ ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಹೇಳಿಕೆ

‘ಭಯೋತ್ಪಾದನೆಯನ್ನು ಭಾರತ ಹತ್ತಿಕ್ಕುತ್ತಿದೆ’

ನವದೆಹಲಿ(ಪಿಟಿಐ): ‘26/11ರ ಮುಂಬೈ ಭಯೋತ್ಪಾದಕ ದಾಳಿಯು ಭಾರತ ಎದುರಿಸಿದ ಅತ್ಯಂತ ಭಯಾನಕ ಭಯೋತ್ಪಾದಕ ದಾಳಿಯಾಗಿದೆ. ಇದು ದೇಶವನ್ನು ಬೆಚ್ಚಿಬೀಳಿಸಿತು. ಈ ಘಟನೆಯ ನಂತರ ದೇಶವು ತನ್ನೆಲ್ಲ ಸಾಮರ್ಥ್ಯದಿಂದ ಚೇತರಿಸಿಕೊಂಡಿದ್ದು ಮಾತ್ರವಲ್ಲದೆ, ಭಯೋತ್ಪಾದನೆಯನ್ನು ಸಮರ್ಥವಾಗಿ ಹತ್ತಿಕ್ಕುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

2008ರ ಮುಂಬೈ ದಾಳಿಯ ವರ್ಷಾಚರಣೆ ವೇಳೆ ‘ಮನ್ ಕಿ ಬಾತ್’ ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಅವರು ಮುಂಬೈ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಎಲ್ಲರಿಗೂ ಶ್ರದ್ಧಾಂಜಲಿ ಸಲ್ಲಿಸಿದರು.

‘ನಾವು ನವೆಂಬರ್ 26 ಅನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಈ ದಿನ ದೇಶದಲ್ಲಿ ಅತ್ಯಂತ ಘೋರ ಭಯೋತ್ಪಾದಕ ದಾಳಿ ನಡೆಯಿತು. ಭಯೋತ್ಪಾದಕರು ಮುಂಬೈ ಮತ್ತು ಇಡೀ ದೇಶವನ್ನು ಬೆಚ್ಚಿಬೀಳಿಸಿದರು. ಆದರೆ, ಆ ದಾಳಿಯಿಂದ ನಾವು ಚೇತರಿಸಿಕೊಂಡಿರುವುದು ದೇಶದ ಸಾಮರ್ಥ್ಯವನ್ನು ತೋರಿಸುತ್ತದೆ. ಭಯೋತ್ಪಾದನೆಯನ್ನು ಸಂಪೂರ್ಣ ಧೈರ್ಯದಿಂದ ಹತ್ತಿಕ್ಕುತ್ತಿದೆ’ ಎಂದು ಮೋದಿ ಹೇಳಿದರು.

ಪಾಕಿಸ್ತಾನದಿಂದ ಸಮುದ್ರ ಮಾರ್ಗವಾಗಿ ನುಸುಳಿದ ಲಷ್ಕರ್‌–ಎ–ತಯಬಾ ಸಂಘಟನೆಯ 10 ಮಂದಿ ಭಯೋತ್ಪಾದಕರು ಮುಂಬೈನಲ್ಲಿ ಗುಂಡಿನ ದಾಳಿ ನಡೆಸಿ, 18 ಮಂದಿ ಭದ್ರತಾ ಸಿಬ್ಬಂದಿ ಸೇರಿ 166 ಜನರನ್ನು ಕೊಂದಿದ್ದರು. ಹಲವು ಮಂದಿ ಗಾಯಗೊಂಡಿದ್ದರು.

ನ.20 ಮತ್ತೊಂದು ಕಾರಣಕ್ಕಾಗಿ ಮುಖ್ಯ: 1949ರ ನವೆಂಬರ್ 26 ರಂದು ಸಂವಿಧಾನ ರಚನಾ ಸಭೆಯು ಭಾರತದ ಸಂವಿಧಾನವನ್ನು ಅಂಗೀಕರಿಸಿತು. ಹಾಗಾಗಿ, ಈ ದಿನ ನಮಗೆ ಮತ್ತೊಂದು ಕಾರಣಕ್ಕಾಗಿ ಮುಖ್ಯವಾಗಿದೆ ಎಂದು ಪ್ರಧಾನಿ ಗಮನ ಸೆಳೆದರು.

ಮನದ ಮಾತು

ಮೋದಿ ಹೇಳಿದ್ದು...

- ಕೆಲವು ಕುಟುಂಬಗಳು ವಿದೇಶದಲ್ಲಿ ಮದುವೆಗಳನ್ನು ಆಯೋಜಿಸುವ ಪದ್ಧತಿ ರೂಢಿಸಿಕೊಂಡಿವೆ. ಇದು ಸರಿಯಲ್ಲ, ಇಂತಹ ಆಚರಣೆಗಳನ್ನು ದೇಶದೊಳಗೆ ನಡೆಸಿದರೆ ದೇಶದ ಹಣವು ತನ್ನ ಗಡಿಯೊಳಗೆ ಉಳಿಯುತ್ತದೆ
- ಭಾರತೀಯ ಪೇಟೆಂಟ್‌ಗಳ ಅನುಮೋದನೆಯು 10 ವರ್ಷಗಳಲ್ಲಿ 10 ಪಟ್ಟು ಏರಿದೆ. ತಮ್ಮ ಸರ್ಕಾರ ತಂದ ಆಡಳಿತಾತ್ಮಕ ಮತ್ತು ಕಾನೂನು ಸುಧಾರಣೆಗಳು ವಿವಿಧ ಕ್ಷೇತ್ರಗಳಲ್ಲಿ ಆವಿಷ್ಕಾರಕ್ಕೆ ಹೆಚ್ಚಿನ ಯುವಕರಿಗೆ ಉತ್ತೇಜನವನ್ನು ನೀಡಿದೆ
- ಪ್ರತಿಯೊಬ್ಬರೂ ಒಟ್ಟಾಗಿ ತಮ್ಮ ಕರ್ತವ್ಯಗಳಿಗೆ ಆದ್ಯತೆ ನೀಡಿ, ದೇಶವನ್ನು ಅಭಿವೃದ್ಧಿಪಡಿಸುವ ಸಂಕಲ್ಪವನ್ನು ಖಂಡಿತವಾಗಿ ಸಾಧಿಸಲಿದ್ದಾರೆ
- ಸದ್ಯ, ಸಾಮಾಜಿಕ ಮಾಧ್ಯಮಗಳ ಶಕ್ತಿ ಅಪಾರವಾಗಿದೆ. ತಂತ್ರಜ್ಞಾನ ಮತ್ತು ಮೊಬೈಲ್ ಪ್ರತಿ ಮನೆಗೂ ತಲುಪಿದೆ. ನಿಮ್ಮ ಸ್ಥಳೀಯ ಹಬ್ಬಗಳಿರಲಿ, ಉತ್ಪನ್ನಗಳಿರಲಿ, ಅವುಗಳನ್ನು ಜಾಗತಿಕಗೊಳಿಸಬಹುದು
- ಸರ್ಕಾರದ ‘ಅಮೃತ ಸರೋವರ’ ಅಭಿಯಾನದ ಭಾಗವಾಗಿ ದೇಶದಾದ್ಯಂತ 65,000ಕ್ಕೂ ಹೆಚ್ಚು ಕೊಳ ನಿರ್ಮಿಸಲಾಗಿದೆ. ಇದು ಮುಂಬರುವ ಪೀಳಿಗೆಗೆ ಪ್ರಯೋಜನ ನೀಡಲಿದೆ
- ನಗದು ವಹಿವಾಟು ಕ್ಷೀಣಿಸುತ್ತಿದೆ. ಒಂದು ತಿಂಗಳ ಕಾಲ ಯುಪಿಐ ಅಥವಾ ಇನ್ನಾವುದೇ ಡಿಜಿಟಲ್ ಮಾಧ್ಯಮದ ಮೂಲಕ ಮಾತ್ರ ಪಾವತಿಸಿ, ಒಂದು ತಿಂಗಳು ಮುಗಿದ ನಂತರ, ದಯವಿಟ್ಟು ನಿಮ್ಮ ಅನುಭವಗಳನ್ನು ನಿಮ್ಮ ಫೋಟೊ ಸಹಿತ ನನ್ನೊಂದಿಗೆ ಹಂಚಿಕೊಳ್ಳಿ

ಬಂಡುಕೋರರ ಜತೆ ಶಾಂತಿ ಮಾತುಕತೆ: ಮಣಿಪುರ ಸಿ.ಎಂ

ಇಂಫಾಲ್ (ಪಿಟಿಐ): ಇಂಫಾಲ್ ಕಣಿವೆ ಮೂಲದ ಬಂಡುಕೋರರ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿರುವ ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು, ಶೀಘ್ರವೇ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ತಿಳಿಸಿದ್ದಾರೆ.

ಭಾನುವಾರ ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, ಮಾತುಕತೆ ಪ್ರಗತಿಯಲ್ಲಿದ್ದು, ಶೀಘ್ರವೇ ಶಾಂತಿ ಒಪ್ಪಂದ ಏರ್ಪಡಲಿದೆ ಎಂದರು. ಆದರೆ, ಬಂಡುಕೋರರ ಸಂಘಟನೆ ಹೆಸರನ್ನು ಪ್ರಸ್ತಾಪಿಸಲಿಲ್ಲ.

ಮಣಿಪುರದಲ್ಲಿ ಕುಕಿ ಮತ್ತು ಮೈತೇಯಿ ಸಂಘಟನೆಗಳ ನಡುವಿನ ಜನಾಂಗೀಯ ಸಂಘರ್ಷದ ಬಳಿಕ ಸರ್ಕಾರವು ಬಂಡುಕೋರರ ಜೊತೆ ಶಾಂತಿ ಮಾತುಕತೆ ನಡೆಸುತ್ತಿದೆ ಎಂಬುದನ್ನು ಮುಖ್ಯಮಂತ್ರಿ ಅವರೇ ಮೊದಲ ಬಾರಿಗೆ ಖಚಿತಪಡಿಸಿದಂತಾಗಿದೆ.

ಸುಭಾಷಿತ

ಜೀವನದಲ್ಲಿ ಎಲ್ಲ ಸಂಗತಿಗಳೂ ಸುಲಭವಾಗಿ ಘಟಿಸುವುದಿಲ್ಲ; ಮನುಷ್ಯನು ಮಾನವನಾಗುವುದಕ್ಕೂ ಹೆಣಗುತ್ತಾನೆ.

–ಮಿರ್ಜಾ ಗಾಲಿಬ್

ರಕ್ತಹೀನತೆ, ಅಪೌಷ್ಟಿಕತೆ ನಿವಾರಣೆಗೆ ಬೇಕು ದೃಢಸಂಕಲ್ಪ

ರಕ್ತಹೀನತೆ ಮತ್ತು ಅಪೌಷ್ಟಿಕತೆ ಭಾರತವನ್ನು ದೀರ್ಘಕಾಲದಿಂದ ಕಾಡುತ್ತಿರುವ ಪ್ರಮುಖ ನ್ಯೂನತೆಗಳು. ಹಸಿವಿನ ಸೂಚ್ಯಂಕದಲ್ಲಿ ಭಾರತವು ವಿಶ್ವದ 125 ರಾಷ್ಟ್ರಗಳಲ್ಲಿ 111ನೇ ಸ್ಥಾನದಲ್ಲಿದೆ ಎಂದು ಇತ್ತೀಚೆಗೆ ಪ್ರಕಟವಾದ ಜಾಗತಿಕ ಹಸಿವು ಸೂಚ್ಯಂಕದ (ಜಿಎಚ್‌ಐ) ವರದಿ ಹೇಳಿದೆ. ಹಸಿವಿಗೂ ಅಪೌಷ್ಟಿಕತೆಗೂ ನೇರ ಸಂಬಂಧ ಇದೆ. ಅದನ್ನು ಈ ವರದಿ ದೃಢಪಡಿಸುತ್ತದೆ. ಇವೆರಡೂ ದೇಶದ ಜನರಲ್ಲಿ ರಕ್ತಹೀನತೆಗೆ (ಅನೀಮಿಯ) ಕಾರಣವಾಗುತ್ತಿವೆ. ಕರ್ನಾಟಕವೂ ಇದಕ್ಕೆ ಹೊರತಲ್ಲ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)–5 ವರದಿಯ ಪ್ರಕಾರ, ಕರ್ನಾಟಕದಲ್ಲಿ 6ರಿಂದ 59 ತಿಂಗಳವರೆಗಿನ ಮಕ್ಕಳಲ್ಲಿ ಶೇಕಡ 65.5ರಷ್ಟು ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. 15ರಿಂದ 49 ವರ್ಷ ವಯಸ್ಸಿನ ಮಹಿಳೆಯರಲ್ಲಿ ಈ ಪ್ರಮಾಣ ಶೇ 47.8ರಷ್ಟಿದ್ದರೆ, ಗರ್ಭಿಣಿಯರಲ್ಲಿ ಶೇ 45.7ರಷ್ಟು ಮಂದಿಯಲ್ಲಿ ರಕ್ತಹೀನತೆ ಪತ್ತೆಯಾಗಿತ್ತು. 15ರಿಂದ 19 ವರ್ಷ ವಯಸ್ಸಿನ ಯುವತಿಯರ ಪೈಕಿ ಶೇ 49.4ರಷ್ಟು ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದರೆ, ಇದೇ ವಯಸ್ಸಿನ ಯುವಕರ ಪೈಕಿ ಶೇ 26.5ರಷ್ಟು ಜನರಲ್ಲಿ ರಕ್ತಹೀನತೆ ಇದೆ ಎಂದು ವರದಿ ಹೇಳಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆಯ ನಿವಾರಣೆಗೆ ದಶಕಗಳಿಂದಲೂ ಪ್ರಯತ್ನ ನಡೆಯುತ್ತಿದೆ. ಪೌಷ್ಟಿಕ ಆಹಾರದ ಪೂರೈಕೆ, ವಿಟಮಿನ್ ಮತ್ತು ಖನಿಜಾಂಶಯುಕ್ತ ಗುಳಿಗೆಗಳು, ಔಷಧಿ ವಿತರಣೆಯ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಇಂತಹ ಕಾರ್ಯಕ್ರಮಗಳ ಅನುಷ್ಠಾನದ ಹೊಣೆ ಹೊತ್ತಿವೆ. ಕೆಲವು ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆಯ ಮೂಲಕವೂ ಜಾರಿಗೊಳಿಸಲಾಗಿದೆ. ಇಷ್ಟಾದರೂ ಅಪೌಷ್ಟಿಕತೆ ಮತ್ತು ರಕ್ತಹೀನತೆಯ ನಿವಾರಣೆ ಸಾಧ್ಯವಾಗಿಲ್ಲ ಎಂಬುದನ್ನು ಎನ್‌ಎಫ್‌ಎಚ್‌ಎಸ್ ವರದಿಯಲ್ಲಿನ ಅಂಕಿಅಂಶಗಳು ನಿರೂಪಿಸುತ್ತಿವೆ.

ಅಪೌಷ್ಟಿಕತೆ ಮತ್ತು ರಕ್ತಹೀನತೆ ನಿವಾರಣೆಗೆ ಸರ್ಕಾರ ಮತ್ತಷ್ಟು ಬದ್ಧತೆಯಿಂದ ಕೆಲಸ ಮಾಡಬೇಕು. ಸಮಸ್ಯೆ ತೀವ್ರವಾಗಿರುವ ಪ್ರದೇಶಗಳ ಮೇಲೆ ವಿಶೇಷ ನಿಗಾ ವಹಿಸಬೇಕು

ಯಾದಗಿರಿ, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಗದಗ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಅಪೌಷ್ಟಿಕತೆ ಹಾಗೂ ರಕ್ತಹೀನತೆ ಹೆಚ್ಚು ಪ್ರಮಾಣದಲ್ಲಿವೆ. ಈ ಭಾಗದಲ್ಲಿ ವಿಶೇಷ ಯೋಜನೆಗಳು ಜಾರಿಯಲ್ಲಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಈ ನ್ಯೂನತೆಗಳನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಈಗ ಕೇಂದ್ರ ಸರ್ಕಾರದ ‘ರಕ್ತಹೀನತೆ ಮುಕ್ತ ಭಾರತ’ ಯೋಜನೆಯ ಅಡಿಯಲ್ಲಿ ‘ರಕ್ತಹೀನತೆಮುಕ್ತ ಕರ್ನಾಟಕ’ ಯೋಜನೆಗೆ ಚಾಲನೆ ನೀಡಲಾಗಿದೆ. ಆರು ಹಂತಗಳಲ್ಲಿ ಅನುಷ್ಠಾನಗೊಳ್ಳುವ ಈ ಯೋಜನೆಗೆ ₹ 185.74 ಕೋಟಿ ಅನುದಾನ ಒದಗಿಸಲಾಗಿದೆ. ರಕ್ತಹೀನತೆ ಮತ್ತು ಅಪೌಷ್ಟಿಕತೆ ಪತ್ತೆ ಮಾಡಲು ಸಾಮೂಹಿಕ ತಪಾಸಣೆ, ಮಕ್ಕಳಿಗೆ ವಿಟಮಿನ್ ‘ಎ’ ಗುಳಿಗೆ ವಿತರಣೆ, ಗರ್ಭಿಣಿಯರ ತಪಾಸಣೆ, ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲದ ಗುಳಿಗೆ ವಿತರಣೆಯಂತಹವು ಯೋಜನೆಯಲ್ಲಿ ಸೇರಿವೆ. ಆಯ್ದ 102 ತಾಲ್ಲೂಕುಗಳಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಪೋಷಕಾಂಶಯುಕ್ತ ಊಟ ಒದಗಿಸುವುದೂ ಈ ಯೋಜನೆಯ ಭಾಗವಾಗಿದೆ. ‘ಅನೀಮಿಯಮುಕ್ತ ಕರ್ನಾಟಕ’ ಯೋಜನೆಯು ಪ್ರಚಾರಕ್ಕೆ ಸೀಮಿತವಾಗದೆ, ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು. ರಕ್ತಹೀನತೆ ಮತ್ತು ಅಪೌಷ್ಟಿಕತೆಯು ಮಕ್ಕಳು ಹಾಗೂ ಮಹಿಳೆಯರ ಆರೋಗ್ಯಕ್ಕೆ ಸವಾಲೇ ಹೌದು. ಮಕ್ಕಳ ಬೆಳವಣಿಗೆ ಕುಂಠಿತವಾಗುವುದು, ಕಲಿಕೆಯಲ್ಲಿನ ನ್ಯೂನತೆಗೂ ಕಾರಣವಾಗುತ್ತವೆ. ಅಪೌಷ್ಟಿಕತೆ ಮತ್ತು ರಕ್ತಹೀನತೆಗೆ ನೇರವಾದ ಸಂಬಂಧವಿದೆ. ಔಷಧಿ, ಗುಳಿಗೆಗಳ ವಿತರಣೆಯಿಂದಷ್ಟೇ ಈ ಸಮಸ್ಯೆಗೆ ಪರಿಹಾರ ಕಷ್ಟಸಾಧ್ಯ. ಜನರು ಅಗತ್ಯ ಪ್ರಮಾಣದ ಪೋಷಕಾಂಶ ಮತ್ತು ಖನಿಜಾಂಶಯುಕ್ತ ಆಹಾರ ಸೇವಿಸಿದರೆ ಈ ಸಮಸ್ಯೆಗೆ ತ್ವರಿತವಾಗಿ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ದಿಸೆಯಲ್ಲಿ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ನ್ಯೂನತೆಯ ತೀವ್ರತೆಗೆ ತಕ್ಕಂತೆ ಜನರಿಗೆ ಪೌಷ್ಟಿಕ ಆಹಾರ ಒದಗಿಸಬೇಕು. ನ್ಯೂನತೆಗೆ ಒಳಗಾದ ಎಲ್ಲರಿಗೂ ಪೌಷ್ಟಿಕ ಆಹಾರ ತಲುಪುತ್ತಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವಂತಹ ವ್ಯವಸ್ಥೆಯೊಂದನ್ನು ರೂಪಿಸಬೇಕು. ಸಮಸ್ಯೆ ತೀವ್ರವಾಗಿರುವ ಜಿಲ್ಲೆ, ತಾಲ್ಲೂಕುಗಳ ಮೇಲೆ ವಿಶೇಷ ನಿಗಾ ಇಡಬೇಕು. ಈ ನ್ಯೂನತೆಗಳನ್ನು ಮೂಲೋತ್ಪಾಟನೆ ಮಾಡುವ ಉದ್ದೇಶದ ಕಾರ್ಯಕ್ರಮಗಳನ್ನು ಅತ್ಯಂತ ಬದ್ಧತೆಯಿಂದ ಅನುಷ್ಠಾನಕ್ಕೆ ತರಬೇಕಾದ ಹೊಣೆ ರಾಜ್ಯ ಸರ್ಕಾರದ ಮೇಲಿದೆ.

ತೆಲಂಗಾಣದಲ್ಲಿ ಯಾವುದೇ ಪಕ್ಷದ ಪರ ಅಲೆ ಇರುವಂತೆ ಕಾಣುತ್ತಿಲ್ಲ

ಕೆಸಿಆರ್ ದಾಖಲೆ ಬರೆಯುವರೇ?

ವಿಶ್ಲೇಷಣೆ

ಬಿ.ಎಸ್. ಅರುಣ್

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ದಾಖಲೆಯೊಂದನ್ನು ಬರೆಯುವ ಹೊಸ್ತಿಲಲ್ಲಿ ಇದ್ದಾರೆ. ದೇಶದ ಕೆಲವೇ ಕೆಲವು ಮುಖ್ಯಮಂತ್ರಿಗಳು ಇಂತಹ ದಾಖಲೆ ಬರೆದಿದ್ದಾರೆ. ಕೆಸಿಆರ್ ಅವರ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷವು ತೆಲಂಗಾಣದಲ್ಲಿ ಸತತ ಮೂರನೆಯ ಜಯ ದಾಖಲಿಸಲು ಹವಣಿಸುತ್ತಿದೆ. ಕಿರಿಯ ವಯಸ್ಸಿನ ಈ ರಾಜ್ಯದಲ್ಲಿ ಈ ಸಾಧನೆಯನ್ನು ಕೆಸಿಆರ್ ಮಾಡಬಲ್ಲರೇ ಅಥವಾ ಅಲ್ಲಿ ಮತ್ತೆ ಪ್ರವರ್ಧಮಾನಕ್ಕೆ ಬರುತ್ತಿರುವ ಕಾಂಗ್ರೆಸ್ ಪಕ್ಷವು ಕೆಸಿಆರ್ ಅವರಿಗೆ ಸೋಲುಣಿಸಲಿದೆಯೇ?

ಬಿಆರ್‌ಎಸ್ (ಹಿಂದಿನ ಚುನಾವಣೆ ಸಂದರ್ಭದಲ್ಲಿ ಟಿಆರ್‌ಎಸ್) ಕಳೆದ ವಿಧಾನಸಭಾ ಚುನಾವಣೆಯಲ್ಲಿ 119 ಸ್ಥಾನಗಳ ಪೈಕಿ 88ರಲ್ಲಿ ಗೆಲುವು ಕಂಡಿತ್ತು (ಶೇ 46.87ರಷ್ಟು ಮತ ಪಡೆಯಿತು). ಕಾಂಗ್ರೆಸ್ ಪಕ್ಷವು 19 ಸ್ಥಾನಗಳೊಂದಿಗೆ (ಶೇ 28.43ರಷ್ಟು ಮತ) ಎರಡನೆಯ ಸ್ಥಾನ ಪಡೆದಿತ್ತು. ಎಐಎಂಐಎಂ ಪಕ್ಷ 7 ಸ್ಥಾನ (ಶೇ 2.71ರಷ್ಟು ಮತ), ಬಿಜೆಪಿ 1 ಸ್ಥಾನ (ಶೇ 6.98ರಷ್ಟು ಮತ) ಪಡೆದಿದ್ದವು. ಇತರರು 4 ಸ್ಥಾನ (ಶೇ 15.01ರಷ್ಟು ಮತ) ಪಡೆದಿದ್ದರು.

ತೆಲಂಗಾಣದಲ್ಲಿ ಯಾವುದೇ ಪಕ್ಷದ ಪರವಾಗಿ ಅಲೆ ಇರುವಂತೆ ಕಾಣುತ್ತಿಲ್ಲ. ಆದರೆ ಚುನಾವಣಾ ಹಣಾಹಣಿಯು ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ಇದೆ. ಬಿಜೆಪಿಯು ಒಂದು ಡಜನ್‌ಗೂ ಹೆಚ್ಚಿನ ಸ್ಥಾನಗಳಲ್ಲಿ ತೀವ್ರ ಪೈಪೋಟಿ ನೀಡುತ್ತಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಹಾಗೂ 2020ರ ಗ್ರೇಟರ್ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ (ಜಿಎಚ್‌ಎಂಸಿ) ಚುನಾವಣೆಯಲ್ಲಿ ಭರವಸೆಯ ಸಾಧನೆ ತೋರಿದ್ದ ಬಿಜೆಪಿ, ಬಿಆರ್‌ಎಸ್ ಪಕ್ಷಕ್ಕೆ ಪ್ರಮುಖ ಸ್ಪರ್ಧಿಯಾಗುವಂತೆ ಕಂಡುಬಂದಿತ್ತು. ಪರಿಸ್ಥಿತಿ ಅದೇ ರೀತಿ ಮುಂದುವರಿದಿದೆ ಎಂದು ಕೆಲವು ತಿಂಗಳ ಹಿಂದಿನವರೆಗೂ ಹಲವರು ಹೇಳುತ್ತಿದ್ದರು. ಆದರೆ ಈಗ ಪಕ್ಷ ಮುಂಚೂಣಿಯಲ್ಲಿ ಇಲ್ಲ. ಹೀಗಿದ್ದರೂ ಬಿಜೆಪಿಯು ಹೈದರಾಬಾದ್ ಹಾಗೂ ಅದರ ಸುತ್ತಲಿನ ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್‌ಗೆ ಕಠಿಣ ಸವಾಲು ಒಡ್ಡುವ ನಿರೀಕ್ಷೆ ಇದೆ. ಬಿಜೆಪಿಯು ಈ ಸ್ಥಾನಗಳ ಮೇಲೆ ಮಾತ್ರ ಹೆಚ್ಚು ಗಮನ ನೀಡಿದೆ ಎನ್ನಲಾಗಿದೆ. ಪಕ್ಷವು 10 ಸ್ಥಾನ ಪಡೆದರೂ ಅದು ಬಿಆರ್‌ಎಸ್ ಮತ್ತು ಕಾಂಗ್ರೆಸ್‌ನ ಲೆಕ್ಕಾಚಾರಗಳ ಮೇಲೆ ಪರಿಣಾಮ ಬೀರಬಹುದು.

ಬಿಆರ್‌ಎಸ್ ಪಕ್ಷವು 10 ವರ್ಷಗಳಿಂದ ತೆಲಂಗಾಣವನ್ನು ಆಳುತ್ತಿದೆ. ಅಂದರೆ ರಾಜ್ಯದ ರಚನೆ ಆದಾಗಿನಿಂದಲೂ ಅಲ್ಲಿ ಸರ್ಕಾರ ರಚಿಸುತ್ತ ಬಂದಿದೆ. ತನ್ನ ಆಡಳಿತ ಅವಧಿಯಲ್ಲಿ ರಾಜ್ಯವು ಹಲವು ಕ್ಷೇತ್ರಗಳಲ್ಲಿ ಬೆಳವಣಿಗೆ ಸಾಧಿಸಿದೆ ಎಂದು ಪಕ್ಷವು ಹೇಳುತ್ತಿದೆ ಯಾದರೂ ಶಾಸಕರ ವಿರುದ್ಧ ಜನರಲ್ಲಿ ಮೂಡುವ ಆಡಳಿತ ವಿರೋಧಿ ಭಾವನೆ, ಭ್ರಷ್ಟಾಚಾರವು ದೊಡ್ಡ ಮಟ್ಟದಲ್ಲಿ ನಡೆದಿದೆ ಎಂಬ ಆರೋಪವು ಪಕ್ಷಕ್ಕೆ ಹಾನಿ ಉಂಟುಮಾಡಬಹುದು. ಸಮಾಜದ ಬೇರೆ ಬೇರೆ ವರ್ಗಗಳಿಗೆ ಅಭಿವೃದ್ಧಿ ಯೋಜನೆಗಳನ್ನು ಬಿಆರ್‌ಎಸ್ ಮತದಾರರ ಮುಂದಿಡುತ್ತಿದೆ. ಮೂಲಸೌಕರ್ಯ ಯೋಜನೆಗಳನ್ನು, ಆರೋಗ್ಯಸೇವಾ ಯೋಜನೆಗಳನ್ನು, ರೈತರಿಗೆ ನಿರಂತರ ವಿದ್ಯುತ್ ಪೂರೈಕೆಯನ್ನು ತನ್ನ ಸಾಧನೆಗಳು ಎಂದು ಬಿಂಬಿಸುತ್ತಿದೆ. ಇದೇ ಸಂದರ್ಭದಲ್ಲಿ ಗ್ಯಾರಂಟಿಗಳ ವಿಚಾರದಲ್ಲಿ ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಕರ್ನಾಟಕದಲ್ಲಿ ಘೋಷಿಸಿದ್ದ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಪಕ್ಷವು ತೆಲಂಗಾಣದಲ್ಲಿಯೂ ಭರವಸೆಯ ರೂಪದಲ್ಲಿ ಮತದಾರರ ಮುಂದೆ ಇರಿಸಿದೆ. ಈ ಕೆಲಸದಲ್ಲಿ ಬಿಆರ್‌ಎಸ್ ಕೂಡ ಹಿಂದೆ ಬಿದ್ದಿಲ್ಲ.

ಆಗಸ್ಟ್‌ನಲ್ಲಿಯೇ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಿದ್ದು ಬಿಆರ್‌ಎಸ್ ಪಕ್ಷಕ್ಕೆ ಅನುಕೂಲ ಮಾಡಿಕೊಟ್ಟಿದೆ. ಅಲ್ಲದೆ, ತೆಲಂಗಾಣ ರಚನೆಗೆ ನಡೆದ ಹೋರಾಟದಲ್ಲಿ ಕೆಸಿಆರ್ ಅವರು ಮುಂಚೂಣಿಯಲ್ಲಿ ಇದ್ದರು. ರಾಜ್ಯ ರಚನೆಗಾಗಿ ಹೋರಾಟ ಮಾಡಿದ ಸಾವಿರಾರು ಮಂದಿ ಕೆಸಿಆರ್ ಅವರನ್ನು ಕಳೆದ ಎರಡು ಚುನಾವಣೆಗಳಲ್ಲಿ ಬೆಂಬಲಿಸಿದರು. ಆದರೆ ಈ ಬಾರಿ ಅವರು ಬಿಆರ್‌ಎಸ್‌ನಿಂದ ದೂರವಾಗಿ, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿದ್ದಾರೆ ಎನ್ನಲಾಗಿದೆ.

ಕಳೆದ ಎರಡು ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಹೇಳಿಕೊಳ್ಳುವಂತಹ ಸಾಧನೆ ತೋರದೇ ಇದ್ದುದು, ಸಂಘಟನಾತ್ಮಕವಾಗಿ ಪಕ್ಷದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಿದೆ. ಅದರಲ್ಲೂ ಮುಖ್ಯವಾಗಿ ನಗರಗಳ ಆಚೆಗೆ ಇದು ದೊಡ್ಡ ಪರಿಣಾಮ ಉಂಟುಮಾಡಿದೆ. ಆದರೆ ಬಿಆರ್‌ಎಸ್ ಪಕ್ಷವು ರಾಜ್ಯದಲ್ಲಿ ಬಹಳ ಗಟ್ಟಿಯಾದ ಕಾರ್ಯಕರ್ತರ ನೆಲೆಯನ್ನು ಹೊಂದಿದೆ. ಕಾಂಗ್ರೆಸ್ ಪಕ್ಷವು ಕರ್ನಾಟಕದಲ್ಲಿ ಘೋಷಿಸಿ, ಅನುಷ್ಠಾನಕ್ಕೆ ತಂದಿರುವ ಗ್ಯಾರಂಟಿ ಯೋಜನೆಗಳು ತೆಲಂಗಾಣ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಲೂಬಹುದು.

ಈ ಬಾರಿಯ ಚುನಾವಣೆಯಲ್ಲಿ ಟಿಡಿಪಿ ಸ್ಪರ್ಧಿಸುತ್ತಿಲ್ಲ. 2018ರ ಚುನಾವಣೆಯಲ್ಲಿ ಪಕ್ಷವು ಶೇ 1.68ರಷ್ಟು ಮತಗಳನ್ನು ಪಡೆದಿತ್ತು. ಈ ಬಾರಿ ಟಿಡಿಪಿಯ ಮತಗಳು ಕಾಂಗ್ರೆಸ್ ಪರ ವಾಲಬಹುದು. ಅಲ್ಲದೆ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಅವರು ಈ ಮೊದಲು ಟಿಡಿಪಿ ನಾಯಕರಾಗಿದ್ದವರು. ಮುಸ್ಲಿಮರು ಕೂಡ ಕಾಂಗ್ರೆಸ್ಸಿಗೆ ಪ್ರಮುಖವಾಗಿ ನೆರವಿಗೆ ಬರಬಹುದು. ಹೈದರಾಬಾದ್‌ನಲ್ಲಿ ಮುಸ್ಲಿಮರು ಎಐಎಂಐಎಂ ಪಕ್ಷವನ್ನು ಬೆಂಬಲಿಸುತ್ತಾರಾದರೂ ಈ ಪಕ್ಷವು 9 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸುತ್ತಿದೆ. ಈ ಸ್ಥಾನಗಳ ಪೈಕಿ 7 ಸ್ಥಾನಗಳು ಹೈದರಾಬಾದ್‌ನಲ್ಲಿಯೇ ಇವೆ. ಕಾಂಗ್ರೆಸ್ ಪಕ್ಷವು 5 ಮಂದಿ ಮುಸ್ಲಿಮರಿಗೆ ಟಿಕೆಟ್ ನೀಡಿದೆ. ಬಿಆರ್‌ಎಸ್ ಪಕ್ಷವು ಮೂವರು ಮುಸ್ಲಿಮರಿಗೆ ಟಿಕೆಟ್ ನೀಡಿದೆ. ಬಿಜೆಪಿಯ ಹಲವು ಮುಖಂಡರು ಕಾಂಗ್ರೆಸ್ ಸೇರಿರುವುದು ಕಾಂಗ್ರೆಸ್ಸಿಗೆ ಬಲ ತಂದುಕೊಟ್ಟಿದೆ. ಹಿರಿಯ ನಟಿ ವಿಜಯಶಾಂತಿ, ಬಿಜೆಪಿಯ ಕಾರ್ಯತಂತ್ರ ಪರಿಣತ ಜಿ. ವಿವೇಕಾನಂದ ಕಾಂಗ್ರೆಸ್ ಸೇರಿರುವ ಪ್ರಮುಖರ ಸಾಲಿನಲ್ಲಿ ಇದ್ದಾರೆ.

ಪಕ್ಷದ ಸಾಧನೆ ಚೆನ್ನಾಗಿರುವುದಿಲ್ಲ ಎಂಬುದನ್ನು ಅಂದಾಜಿಸಿದ ನಂತರ ಬಿಜೆಪಿಯ ರಾಜ್ಯಸಭಾ ಸದಸ್ಯ ಜಿ.ವಿ.ಎಲ್. ನರಸಿಂಹ ರಾವ್ ಅವರು, ರಾಜ್ಯದಲ್ಲಿ ಅತಂತ್ರ ವಿಧಾನಸಭೆ ರಚನೆಯಾಗಬಹುದು ಎಂದು ಹೇಳಿದ್ದಾರೆ. ಬಿಜೆಪಿಯು ಅಧಿಕಾರಕ್ಕೆ ಬಂದಲ್ಲಿ, ಹಿಂದುಳಿದ ವರ್ಗಕ್ಕೆ ಸೇರಿದವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆದರೆ ಅವರ ಭರವಸೆಯು ಜನರಲ್ಲಿ ಸಂಚಲನ ಸೃಷ್ಟಿಸಿಲ್ಲ. ಮೋದಿ ಅವರು ಚುನಾವಣಾ ವೇದಿಕೆಯಲ್ಲಿ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ನಾಯಕ ಕೃಷ್ಣ ಮಾದಿಗ ಅವರನ್ನು ಅಪ್ಪಿಕೊಂಡಿದ್ದಾರೆ, ಪರಿಶಿಷ್ಟ ಜಾತಿಗಳ ವರ್ಗೀಕರಣಕ್ಕಾಗಿ ಆಯೋಗವೊಂದನ್ನು ರಚಿಸುವುದಾಗಿ ಹೇಳಿದ್ದಾರೆ. ಪರಿಶಿಷ್ಟ ಜಾತಿಗಳಲ್ಲಿ ಇನ್ನೊಂದು ಉಪ ಪಂಗಡವಾದ ಮಾಳರಿಗಿಂತ ಮಾದಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರಾದರೂ, ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಮೀಸಲಾತಿ ಸೌಲಭ್ಯ ದೊರೆಯುತ್ತಿಲ್ಲ ಎಂಬ ಸಿಟ್ಟು ಅವರಲ್ಲಿದೆ. ರಾಜ್ಯದ 33 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಮಾಳ ಸಮುದಾಯದ ಜನಸಂಖ್ಯೆಗಿಂತ ಮಾದಿಗ ಸಮುದಾಯದವರ ಜನಸಂಖ್ಯೆಯೇ ಹೆಚ್ಚಿದೆ. ರಾಜ್ಯದಲ್ಲಿ ದಲಿತರ ಜನಸಂಖ್ಯಾ ಪ್ರಮಾಣ ಶೇ 18ರಷ್ಟಿದೆ.

ಹಿಂದುಳಿದ ವರ್ಗಗಳ ನಾಯಕ ಹಾಗೂ ಬಿಆರ್‌ಎಸ್‌ನ ಕಡು ಟೀಕಾಕಾರ ಬಂಡಿ ಸಂಜಯ್ ಕುಮಾರ್ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ತೆಗೆದಿರುವುದು ಬಿಜೆಪಿ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು. ಜಿಎಚ್‌ಎಂಸಿ ಚುನಾವಣೆಯಲ್ಲಿ ಪಕ್ಷ ಒಳ್ಳೆಯ ಸಾಧನೆ ತೋರಿದ್ದು ಬಂಡಿ ಅವರ ನಾಯಕತ್ವದ ಕಾರಣದಿಂದಾಗಿ ಎನ್ನಲಾಗಿತ್ತು. ಅವರನ್ನು ತೆಗೆದಿರುವುದು, ಬಿಜೆಪಿ ಮತ್ತು ಬಿಆರ್‌ಎಸ್ ನಡುವೆ ಒಳಒಪ್ಪಂದ ನಡೆದಿದೆ ಎಂಬ ಮಾತುಗಳಿಗೆ ಕಾರಣವಾಗಿದೆ. ಆದರೆ ಇದನ್ನು ಎರಡೂ ಪಕ್ಷಗಳು ಅಲ್ಲಗಳೆದಿವೆ. ಹಿಂದುಳಿದ ವರ್ಗಗಳ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿ ಶೇ 56ರಷ್ಟು ಇದೆ. ಇವರಲ್ಲಿ 134 ಉಪಜಾತಿಗಳು ಇವೆ. ಪವನ್ ಕಲ್ಯಾಣ್ ಅವರ ಜನಸೇನಾ ಪಕ್ಷವು ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದು 9 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಕೆಸಿಆರ್ ಅವರಿಗೆ ಸಮನಾಗಿ ನಿಲ್ಲುವ ಸ್ಥಳೀಯ ನಾಯಕ ಬಿಜೆಪಿಯಲ್ಲಿ ಇಲ್ಲದಿರುವುದು ದೊಡ್ಡ ಕೊರತೆ.

ತೆಲಂಗಾಣ ಚಳವಳಿಯ ಹೀರೊ, 2009ರಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿ ಹೊಸ ರಾಜ್ಯ ರಚನೆಗೆ ಕೇಂದ್ರವು ಆದೇಶಿಸುವಂತೆ ಮಾಡಿದ ಕೆಸಿಆರ್ ಅವರು 2014 ಮತ್ತು 2018ರ ಸಾಧನೆಯನ್ನು ಪುನರಾವರ್ತಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ನವೆಂಬರ್ 30ರ ಮತದಾನದಲ್ಲಿ ಉತ್ತರ ಸಿಗಲಿದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಎಲ್ಲಿದೆ ಶಕುನದ ಹಕ್ಕಿ?

• ಸುಮಂಗಲಾ

ಬೆಳಿಗ್ಗೆ ಬೇಂದ್ರೆಯವರ ‘ಶುಭ ನುಡಿಯೇ ಶಕುನದ ಹಕ್ಕಿ’ ಹಾಡನ್ನು ಗುನುಗುನಿಸುತ್ತಿದ್ದೆ. ಬೆಕ್ಕಣ್ಣ ತಾನೂ ಈ ಹಾಡು ಗುನುಗುತ್ತ ಏನೋ ಕೆಲಸವಿದೆಯೆಂದು ಹೊರಗೆ ಹೋಯಿತು. ಒಂದೇ ನಿಮಿಷದಲ್ಲಿ ಧುಮುಧುಮು ಗುಡುತ್ತ ಓಡಿಬಂದಿತು. ‘ಇಷ್ಟ್ ಬೇಗ ನಿನ್ ಕೆಲಸ ಮುಗಿತೇನಲೇ?’ ಎಂದೆ ಅಚ್ಚರಿಯಿಂದ.

‘ನಾ ಹಿಂಗೆ ರಸ್ತೇಲಿ ಹೊಂಟಿದ್ನಾ, ಆ ಮೂಲಿಮನಿ ಅಂಕಲ್ಲು, ಆಂಟಿ ಎದುರಿಗೆ ಬಂದ್ರು. ನನ್ ನೋಡಿದವರೇ, ಅಯ್ಯೋ, ಈ ಮನೆಹಾಳು ಬೆಕ್ಕು ಈಗಲೇ ಬರಬೇಕಾ, ಅಪಶಕುನ ಅಂತ ಸಿಟ್ಟಾಗಿ ವದರಿಕೋತ ತಮ್ ಮನಿವಳಗೆ ವಾಪಸು ಹೋದ್ರು’ ಎಂದು ಧುಮುಗುಡುತ್ತಲೇ ಹೇಳಿತು.

‘ಅವ್ರು ವಾಪಸು ಹೋದ್ರೆ ಹೋಗಲಿ, ನೀ ನಿನ್ ಕೆಲಸಕ್ಕೆ ಹೋಗಬೇಕಿಲ್ಲೋ?’ ಎಂದೆ.

‘ನನ್ ಮುಖ ನೋಡಿದ್ರೆ ಅವ್ರಿಗೆ ಹೆಂಗೆ ಅಪಶಕುನವೋ ಹಂಗೇ ನಂಗೂ ಅವ್ರ ಮುಖ ನೋಡಿ ಅಪಶಕುನ’ ಎಂದು ಗುರುಗುಟ್ಟಿತು.

‘ಜರಾ ವೈಜ್ಞಾನಿಕ ಚಿಂತನೆ ಬೆಳೆಸ್ಕೊಳಲೇ. ಮುಖ ನೋಡಿದ್ರೆ ಅಪಶಕುನ ಅನ್ನೂದೆಲ್ಲ ಬಿಡು’.

‘ನನಗೇನು ಹೇಳ್ತೀ... ಮದ್ಲು ಆ ಮೂಲಿಮನಿಯವ್ರಿಗೆ ಹೇಳು. ಮೋದಿಮಾಮ ಅಪಶಕುನ ಅಂದನಲ್ಲ ಆ ರಾಹುಲಂಕಲ್, ಅಂವಂಗೂ ಹೇಳು’ ಬೆಕ್ಕಣ್ಣ ಗುರ್ರೆಂದಿತು.

‘ಭಾರತ್ ಜೋಡೊ ಮಾಡಿ, ಜರಾ ಒಳ್ಳೆಬುದ್ಧಿ ಬಂದೈತಿ ಅಂದ್ಕೊಳದ್ರಗೆ ಹಿಂಗೆ ಏನಾದ್ರೂ ಬಾಯಿ ತುರಿಕೆ ಮಾತು ಹೇಳತಾನ ಅಂವಾ. ಎಂದೂ ಸುಧಾರಿಸಂಗಿಲ್ಲೇಳು’ ಎಂದೆ.

‘ಹಂಗೆ ನೋಡಿದರ ಎಲ್ಲಾ ರಾಜಕಾರಣಿಗಳು ಅಪಶಕುನವೇ. ನೀವು ಬಡಪಾಯಿ ಮತದಾರರು ಬ್ಯಾರೆ ದಾರಿಯಿಲ್ಲದೇ ಅವ್ರಿನ್ನ ಆರಿಸಿ ಕಳಿಸತೀರಿ’ ಎಂದು ಲೊಚಗುಟ್ಟಿತು.

‘ಅಭಿವೃದ್ಧಿ ಕುರಿತು ಚರ್ಚೆ, ವಿಶ್ಲೇಷಣೆ ಇಂತಾ ಪದಗಳೇ ಗೊತ್ತಿಲ್ಲದ ರಾಜಕಾರಣಿಗಳ ನಾಲಿಗೆಗೆ ಲಗಾಮು ಹಾಕೂದು ಹೆಂಗೆ?’

‘ಮೊದಲು ಮತದಾರರು ನಿಮ್ಮ ಶಕುನದ ಹಕ್ಕಿಗಳನ್ನು ನೀವೇ ಹುಡುಕಿಕೊಳ್ಳಿ. ಇನ್ ಮ್ಯಾಲಾದ್ರೂ ಶಾಣೇರಾಗ್ರಿ!’ ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ದಿನದ ಟ್ವೀಟ್

ನ್ಯಾಯ ದೊರಕಲು ಇನ್ನೆಷ್ಟು ದಿನ?

10 ಮಂದಿ ಪಾಕಿಸ್ತಾನೀಯರಿಂದ ನಡೆದ 26/11 ಮುಂಬೈ ದಾಳಿಯ ವರ್ಷಾಚರಣೆಯನ್ನು ನೋಡಿ ಸಾಕಾಗಿದೆ. ಈ ಕೃತ್ಯದ ಹಿಂದಿದ್ದ ಪಾಕಿಸ್ತಾನಿ ಸೂತ್ರಧಾರರಲ್ಲಿ ಯಾರೊಬ್ಬರಿಗೂ ಶಿಕ್ಷೆ ವಿಧಿಸಲು ಸಾಧ್ಯವಾಗಿಲ್ಲ. 2008ರಿಂದ ಆಡಳಿತದಲ್ಲಿರುವ ಯುಪಿಎ ಮತ್ತು ಎನ್‌ಡಿಎ ಸರ್ಕಾರಗಳು ಈ ವಿಷಯದಲ್ಲಿ ವಿಫಲ ಆಗಿರುವುದು ನಾಚಿಕೆಗೇಡು. ಈ ನಡುವೆ, ಪಾಕಿಸ್ತಾನದೊಂದಿಗೆ ಕ್ರಿಕೆಟ್ ಪಂದ್ಯ ಆಯೋಜಿಸಬೇಕೆಂದು ಕೆಲವು ಭಾರತೀಯರು ಬಯಸುತ್ತಾರೆ.

ಮಿನ್ಹಾಜ್ ಮರ್ಚಂಟ್, ಪತ್ರಕರ್ತ, ಲೇಖಕ

ಕಿಡಿನುಡಿ

ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್ಸಿನ ಏಕೈಕ ಸಂಸದ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಡಿ.ಕೆ.ಸುರೇಶ್ ಅವರನ್ನು ಎದುರಿಸುವ ಸಂಬಂಧ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಕಾರ್ಯತಂತ್ರ ಹೆಣೆಯಲಾಗುವುದು. ರಾಜ್ಯದಿಂದ ಕಾಂಗ್ರೆಸ್‌ನ ಒಬ್ಬ ಸಂಸದನೂ ಆಯ್ಕೆ ಆಗಬಾರದು ಎಂಬುದು ನಮ್ಮ ಗುರಿ. ದೇಶ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಬಿಜೆಪಿಯು ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 27-11-1998

• ಲೂಧಿಯಾನ ಬಳಿ ರೈಲುಗಳ ನಡುವೆ ಡಿಕ್ಕಿ: 160 ಸಾವು

ಲೂಧಿಯಾನ, ನ. 26 (ಪಿಟಿಐ, ಯುಎನ್‌ಐ)– ಇಲ್ಲಿಗೆ ಸಮೀಪದ ಕೌರಿ ಪಿಂಡ್ ಹಳ್ಳಿಯ ಬಳಿ ಜಮ್ಮು–ಸಿಯಾಲ್ದಾ ಎಕ್ಸ್‌ಪ್ರೆಸ್ ರೈಲು ಇಂದು ಮುಂಜಾನೆ, 3 ಬೋಗಿಗಳು ಹಳಿ ತಪ್ಪಿದ್ದ ‘ಫ್ರಾಂಟಿಯರ್ ಗೋಲ್ಡನ್ ಟೆಂಪಲ್ ಮೇಲ್’ಗೆ ಡಿಕ್ಕಿ ಹೊಡೆದ ಕಾರಣ, 21 ಮಹಿಳೆಯರು ಮತ್ತು 5 ಮಕ್ಕಳು ಸೇರಿದಂತೆ ಕನಿಷ್ಠ 160 ಜನ ಸತ್ತು 250ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಮುಂಬೈನಿಂದ ಅಮೃತಸರಕ್ಕೆ ಬರುತ್ತಿದ್ದ ಫ್ರಾಂಟಿಯರ್ ಮೇಲ್, ಖನ್ನಾ ನಿಲ್ದಾಣದಿಂದ ಬೆಳಗಿನ ಜಾವ 3.10ಕ್ಕೆ ಹೊರಟಿದ್ದು, ಅದರ ಇಂಜಿನ್ ಮತ್ತು ಬೋಗಿಗಳ ನಡುವಿನ ಕೊಂಡಿ ಕಳಚಿದ್ದರಿಂದ ಮೂರು ಬೋಗಿಗಳು ಕೌರಿ ಪಿಂಡ್ ಹಳ್ಳಿಯ ಬಳಿ ಹಳಿ ತಪ್ಪಿದವು. ತಕ್ಷಣ ಅಲ್ಲಿದ್ದ ರೈಲ್ವೆ ಕಾವಲುಗಾರನೊಬ್ಬ ಖನ್ನಾ ರೈಲು ನಿಲ್ದಾಣಕ್ಕೆ ಸುದ್ದಿ ಮುಟ್ಟಿಸಿದ. ಆದರೆ ಆ ಸಮಯಕ್ಕಾಗಲೇ ಲೂಧಿಯಾನ ನಿಲ್ದಾಣದಿಂದ ನಿರ್ಗಮಿಸಿದ್ದ ಸಿಯಾಲ್ದಾ ಎಕ್ಸ್‌ಪ್ರೆಸ್ ರೈಲು ಈ ಬೋಗಿಗಳಿಗೆ ಡಿಕ್ಕಿ ಹೊಡೆಯಿತು.

• ಕೃಪಾಂಕ: ತೀರ್ಪಿನ ವಿರುದ್ಧ ಮೇಲ್ಮನವಿಗೆ ನಿರ್ಧಾರ

ಬೆಂಗಳೂರು, ನ. 26– ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 10ರಷ್ಟು ಕೃಪಾಂಕ ನೀಡುವುದು ಸಂವಿಧಾನಬಾಹಿರ ಎಂದು ಹೈಕೋರ್ಟ್ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಇಂದು ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 27-11-1973

• ಹುಬ್ಬಳ್ಳಿ ಆಸ್ಪತ್ರೆಗೆ ಬಂದ ‘ಅಪರೂಪ ಹಳ್ಳಿಗ’

ಹುಬ್ಬಳ್ಳಿ, ನ. 26– ಆರೋಗ್ಯ ಸಚಿವ ಎಚ್. ಸಿದ್ಧವೀರಪ್ಪ ಅವರು ನಿನ್ನೆ ಬೆಳಗಿನ ಜಾವ 5 ಗಂಟೆ ಸಮಯದಲ್ಲಿ ವೇಷ ಮರೆಸಿಕೊಂಡು ಹುಬ್ಬಳ್ಳಿಯ ಕೆ.ಎಂ.ಸಿ ಆಸ್ಪತ್ರೆಗೆ ಭೇಟಿ ನೀಡಿದರು.

ಸಚಿವರು ತಲೆಗೆ ಮಫ್ಲರ್ ಸುತ್ತಿಕೊಂಡು ಸಾಮಾನ್ಯ ಹಳ್ಳಿಗನಂತೆ ಆಸ್ಪತ್ರೆಗೆ ಪ್ರವೇಶಿಸಿದಾಗ ರೋಗಿಗಳಾಗಲಿ ಅಥವಾ ಆಸ್ಪತ್ರೆಯ ಸಿಬ್ಬಂದಿಯಾಗಲಿ ಅವರನ್ನು ಗುರುತಿಸಲಿಲ್ಲ. ಆಸ್ಪತ್ರೆಯ ದ್ವಾರದಲ್ಲಿ ಕಾವಲುಗಾರ ಅವರನ್ನು ಸ್ವಲ್ಪ ಕಾಲ ತಡೆದಿದ್ದು, ನಂತರ ಒಳಗೆ ಹೋಗಲು ಬಿಟ್ಟನು. ಸಚಿವರು ವಾರ್ಡ್‌ಗಳಲ್ಲಿ ವಿಚಾರಿಸಿಕೊಳ್ಳಲು ಆರಂಭಿಸಿದ ಸುಮಾರು ಅರ್ಧಗಂಟೆಯ ನಂತರ ಅವರ ಪರಿಚಯದ ಸುಳಿವು ದೊರೆತ ಆಸ್ಪತ್ರೆ ಸಿಬ್ಬಂದಿಯವರು ಜಾಗ್ರತರಾದರು. ಸಿದ್ಧವೀರಪ್ಪ ಅವರು ಆಸ್ಪತ್ರೆಯ ಕೆಲವು ನ್ಯೂನತೆಗಳ ಬಗ್ಗೆ ತಿಳಿಸಿ, ಕೆಲವು ವಿಭಾಗಗಳ ಸುಧಾರಣೆಗೆ ಸೂಚನೆಯಿತ್ತರು.

ಸಂಗತ

ಸಂವಿಧಾನ ಸಾಕ್ಷರರಾಗೋಣ

ನಾವು ಈಗ ‘ಪ್ರಜೆ’ಗಳಲ್ಲ ‘ನಾಗರಿಕರು’ ಎಂಬುದನ್ನು ಅರಿಯೋಣ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

‘ಭಾರತದ ಸಂವಿಧಾನದಲ್ಲಿ ಪ್ರಸ್ತಾವನೆಯು ಚಿಕ್ಕ ಆದರೆ ಬಹಳ ಮಹತ್ವಪೂರ್ಣವಾದ ಭಾಗ. ಅದು, ‘ಭಾರತದ ಜನತೆಯಾದ ನಾವು, ನಮಗೆ ನಾವೇ ಈ ಸಂವಿಧಾನವನ್ನು ಕೊಟ್ಟುಕೊಂಡಿದ್ದೇವೆ’ ಎಂದು ಹೇಳುತ್ತದೆ. ಇದು, ಭಾರತದ ಜನರು ‘ಪ್ರಜೆಗಳು’ ಎನ್ನುವ ಸ್ಥಿತಿಯಿಂದ ‘ನಾಗರಿಕರು’ ಎನ್ನುವ ಸ್ಥಾನಕ್ಕೆ ಆದ ಪರಿವರ್ತನೆಯನ್ನು ಸೂಚಿಸುತ್ತದೆ’– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ನಾಗಪುರದಲ್ಲಿ ಮಹಾರಾಷ್ಟ್ರ ನ್ಯಾಷನಲ್ ಲಾ ಯೂನಿವರ್ಸಿಟಿಯ ಮೊದಲ ಪದವಿ ಪ್ರದಾನ ಸಮಾರಂಭದಲ್ಲಿ ಹೇಳಿದ ಮಾತಿದು.

ನಿಜ, ನಾವು ಪ್ರಜೆಗಳಲ್ಲ, ನಾಗರಿಕರು. ‘ಪ್ರಜೆ’ ಎಂದರೆ, ಇನ್ನೊಬ್ಬ ಆಳರಸನಿಗೆ ಅಧೀನನಾಗಿರುವ ಪರತಂತ್ರ ವ್ಯಕ್ತಿ. ಭಾರತದ ಇತಿಹಾಸದಲ್ಲಿ ಶತ ಶತಮಾನಗಳ ಕಾಲ ನಾವು ಚಕ್ರವರ್ತಿಗಳು, ರಾಜಮಹಾರಾಜರು, ಸುಲ್ತಾನರು, ನವಾಬರ ವಿಧೇಯ ಪ್ರಜೆಗಳಾಗಿದ್ದೆವು. ಆದರೆ ಕೊನೆಯದಾಗಿ, ವಸಾಹತುಶಾಹಿ ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ನಾವು ಯಾರ ಪ್ರಜೆಯೂ ಆಗಿಲ್ಲ. ನಾವು ಈ ದೇಶದ ನಾಗರಿಕರು.

ಇನ್ನೊಂದು ಗಮನಾರ್ಹ ಅಂಶವಿದೆ. ನಮಗೆ ಸ್ವಾತಂತ್ರ್ಯ ದೊರೆತಿದ್ದು 1947ರ ಆಗಸ್ಟ್ 15ರಂದು ಎಂದು ನಾವು ಅಂದುಕೊಳ್ಳುತ್ತೇವೆ. ಆದರೆ, ಆಗಲೂ ನಾವು ಪೂರ್ಣ ಸ್ವತಂತ್ರರಾಗದೆ, ಭಾರತೀಯ ಸ್ವಾತಂತ್ರ್ಯ ಕಾಯ್ದೆ– 1947ರ ಅಡಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕಾಮನ್‌ವೆಲ್ತ್‌ಗೆ ಸೇರಿದ ಒಂದು ಡೊಮಿನಿಯನ್ ದೇಶವಾಗಿದ್ದೆವು. ಆಗಲೂ ಬ್ರಿಟಿಷ್ ಚಕ್ರವರ್ತಿಯ ಕಡೆಯಿಂದ ಮೌಂಟ್ ಬ್ಯಾಟನ್ ನಮ್ಮ ಗವರ್ನರ್ ಜನರಲ್ ಆಗಿದ್ದರು. 1950ರ ಜನವರಿ 26ರಂದು ನಮ್ಮದೇ ಆದ ಭಾರತ ಸಂವಿಧಾನ ಜಾರಿಗೆ ಬಂದ ನಂತರವಷ್ಟೇ ನಮ್ಮದು ಸಾರ್ವಭೌಮ (ಸರ್ವತಂತ್ರ ಸ್ವತಂತ್ರ) ಗಣರಾಜ್ಯವಾಗಿದ್ದು. ಪ್ರಜೆಗಳಾಗಿದ್ದ ನಾವು ಅಧಿಕೃತವಾಗಿ ನಾಗರಿಕರು ಎಂಬ ಸ್ಥಾನವನ್ನು ಪಡೆದಿದ್ದು ಅಂದಿನಿಂದಲೇ.

ಶತಮಾನಗಳಿಂದ ಅನೇಕ ಬಗೆಯ ಪ್ರಭುಗಳ ಆಳ್ವಿಕೆಯ ಅಡಿಯಾಳಾಗಿ ಬದುಕಿದ ನಮಗೆ ಈಗಲೂ ನಮ್ಮನ್ನು ನಾವು ಪ್ರಜೆ ಎಂದು ಕರೆದುಕೊಳ್ಳುವ ದೌರ್ಬಲ್ಯ. ಎಷ್ಟರಮಟ್ಟಿಗೆ ಎಂದರೆ, ಶಾಲೆಗಳಲ್ಲಿ ಕಡ್ಡಾಯವಾಗಿ ಅಳವಡಿಸಬೇಕೆಂದು ಶಿಕ್ಷಣ ಇಲಾಖೆ ನೀಡಿರುವ ಆದೇಶದ ಅನುಸಾರ ಇರುವ ಸಂವಿಧಾನದ ಪ್ರಸ್ತಾವನೆಯಲ್ಲಿಯೂ ‘ವಿ ದ ಪೀಪಲ್ ಆಫ್ ಇಂಡಿಯಾ’ ಎಂಬುದಕ್ಕೆ ಕನ್ನಡದಲ್ಲಿ ‘ಭಾರತದ ಪ್ರಜೆಗಳಾದ ನಾವು’ ಎಂದೇ ಇದೆ. ಡೆಮಾಕ್ರಸಿ ಎಂಬುದಕ್ಕೆ ‘ಪ್ರಜಾಪ್ರಭುತ್ವ’ ಎಂಬ ಪದವನ್ನು ಬಳಸುತ್ತೇವೆ. ಈಗಲೂ ಚುನಾಯಿತ ಪ್ರತಿನಿಧಿಯೊಬ್ಬರು ಲೋಕತಾಂತ್ರಿಕ ಸ್ಥಾನವನ್ನು ವಹಿಸಿಕೊಳ್ಳುವುದನ್ನು ‘ಪಟ್ಟಾಭಿಷೇಕ’ ಎನ್ನುತ್ತೇವೆ. ಅಂಥವರ ಮಗನನ್ನು ಯುವರಾಜ ಎಂದು ಕರೆಯುತ್ತೇವೆ... ಹಳೆಯ ಚಾಳಿ ಸುಟ್ಟರೂ ಹೋಗದು!

ಭಾಷಾ ಮನೋವಿಜ್ಞಾನದ ಪ್ರಕಾರ, ನಾವು ಬಳಸುವ ಪದಗಳು ನಮ್ಮ ಮನಃಸ್ಥಿತಿ, ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತವೆ. ಹಾಗೆಯೇ ನಾವು ಬಳಸುವ ಪದಗಳು ನಮ್ಮ ಮನೋವೃತ್ತಿಯನ್ನು ರೂಪಿಸುತ್ತವೆ ಕೂಡ. ಆದ್ದರಿಂದ ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರದ ಮೂಲವಾಗಿರುವ ನಮ್ಮನ್ನು ಪಟ್ಟಭದ್ರ ಹಿತಾಸಕ್ತಿಗಳು ಈಗಲೂ ಪರಾಧೀನವಾದ ಪ್ರಜೆಗಳ ಸ್ಥಿತಿಯಲ್ಲಿಯೇ ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತಿರುವ ಹುನ್ನಾರವನ್ನು ಅರ್ಥ ಮಾಡಿಕೊಳ್ಳಬೇಕು.

ಗ್ರಾಮ ಪಂಚಾಯಿತಿ ಸದಸ್ಯರಿಂದ ಹಿಡಿದು ಪ್ರಧಾನಿಯವರೆಗೆ ಸ್ಥಾನ ದೊರಕಿರುವುದು ಜನರ ಆಯ್ಕೆಯ ದೆಸೆಯಿಂದಾಗಿ. ಅವರೂ ಮತ್ತು ಸರ್ಕಾರಿ ಅಧಿಕಾರಿಗಳು ಜನರ ಸೇವೆಗಾಗಿ ಜನರೇ ಸಂಬಳ, ಸಾರಿಗೆ, ಮನೆ, ಆಳುಕಾಳು ಒದಗಿಸಿ ನೇಮಿಸಿರುವ ಜನಸೇವಕರು. ಇದು ಲೋಕತಂತ್ರದ ಮೂಲ ಸೆಲೆಯಾಗಬೇಕು. ಈ ಸ್ಥಿತಿಯ ಅರಿವು ಬಿ.ಆರ್. ಅಂಬೇಡ್ಕರ್ ಅವರಿಗಿಂತ ಗಹನವಾಗಿ ಇನ್ಯಾರಿಗೆ ಇರಲು ಸಾಧ್ಯ? ಅವರು ಹೇಳುತ್ತಾರೆ, ‘ನಮ್ಮ ದೇಶದಲ್ಲಿ ಲೋಕತಂತ್ರದ ಮೌಲ್ಯವು ಹುಟ್ಟಿನಿಂದಲೇ ಪಡೆದುಬರುವ ನೈಜವಾದ ಸಂವೇದನೆಯಲ್ಲ. ಮೂಲಭೂತವಾಗಿ ಅಸಮಾನವಾದ ಸಮಾಜದಲ್ಲಿ ಇದು ಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಳ್ಳಬೇಕಾದ ಪರಿಕಲ್ಪನೆ, ಪ್ರವೃತ್ತಿ’. 70 ವರ್ಷಗಳ ಹಿಂದೆ ಅವರು ವ್ಯಕ್ತಪಡಿಸಿದ್ದ ಈ ಅಭಿಪ್ರಾಯವು ಈಗಲೂ, ಬಹುಶಃ ಇನ್ನೂ ಹೆಚ್ಚು ಸಂಗತವಾಗಿದೆ.



ಮೂಲಭೂತವಾಗಿ ವಿಶ್ವಮಾನವನಾಗಿ ಹುಟ್ಟಿದ ಮಗುವನ್ನು ಕೆಲವೇ ಸಮಯದಲ್ಲಿ ಅದಕ್ಕೆ ‘ನಾಮಕರಣ’ ಮಾಡುವ ಮೂಲಕ ಒಂದು ಜಾತಿ, ಧರ್ಮಕ್ಕೆ ಸೀಮಿತಗೊಳಿಸಲಾಗುತ್ತದೆ. ನಂತರ ಬೆಳೆಯುವ ಕುಟುಂಬ, ಸಮುದಾಯ, ಮಠ, ಮಸೀದಿ, ಗುರುದ್ವಾರ, ಚರ್ಚು, ಧರ್ಮಗುರುಗಳು, ಶಾಲೆಗಳು, ಸರ್ಕಾರಗಳ ಕೃಪೆಯಿಂದಾಗಿ ನಮ್ಮ ಮಕ್ಕಳು ಜನತಂತ್ರದ ಕಟ್ಟಾಳುಗಳಾಗಿ ಬೆಳೆಯುವ ಬದಲು ಹಲವಾರು ಭೇದಭಾವ, ತಾರತಮ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯುತ್ತವೆ. ನಾವು ವಯಸ್ಕರಂತೂ ಇಂಥ ಅಸಾಂವಿಧಾನಿಕ ಮೌಲ್ಯಗಳಲ್ಲಿ ಮುಳುಗಿ ತೇಲುತ್ತಿರುತ್ತೇವೆ. ಇಂಥ ‘ನಾಗರಿಕ’ರಿಂದ ಲೋಕತಂತ್ರದ ಯಶಸ್ಸು ಹೇಗೆ ಸಾಧ್ಯ? ಶತಮಾನಗಳ ನಂತರ ‘ನಾಗರಿಕ’ರಾಗಿದ್ದ ನಮ್ಮನ್ನು ಮತ್ತೊಮ್ಮೆ ‘ವಿಧೇಯ ಪ್ರಜೆ’ಗಳನ್ನಾಗಿ ಮಾಡಲಾಗುತ್ತಿದೆ.

ಸಂವಿಧಾನ ರಚನಾ ಸಭೆಯಲ್ಲಿ ಸಂವಿಧಾನ ಅಂಗೀಕಾರವಾಗಿದ್ದ ಕಾರಣಕ್ಕಾಗಿ ನ. 26ನ್ನು ‘ರಾಷ್ಟ್ರೀಯ ಸಂವಿಧಾನ ದಿನ’ ಎಂದು ಆಚರಿಸುತ್ತೇವೆ. ಈ ಸಂದರ್ಭದಲ್ಲಿ ಲೋಕತಂತ್ರ ಹಾಗೂ ಅದರಲ್ಲಿ ನಮ್ಮ ಸ್ಥಾನ ಮತ್ತು ಮಾನವು ಅಪಾಯಕ್ಕೆ ಒಳಗಾಗಿರುವ ಕುರಿತು ಗಂಭೀರವಾಗಿ ಚಿಂತಿಸೋಣ. ಸಂವಿಧಾನ ಸಾಕ್ಷರರಾಗೋಣ, ಇತರರಲ್ಲಿಯೂ ಸಂವಿಧಾನ ಸಾಕ್ಷರತೆಯನ್ನು ಪಸರಿಸೋಣ!

ವಾಚಕರ ವಾಣಿ

ಸರ್ಕಾರಿ ಆಸ್ಪತ್ರೆ: ಶುಲ್ಕವೂ ಇರಲಿ

ಸರ್ಕಾರಿ ವೈದ್ಯಕೀಯ ವ್ಯವಸ್ಥೆಯ ಸುಧಾರಣೆಗೆ ನಾಡಿನ ತಜ್ಞರು ಹಲವು ಸಲಹೆಗಳನ್ನು ನೀಡಿದ್ದು (ಪ್ರ.ವಾ., ನ. 26), ಇದರಲ್ಲಿ ಇನ್ನೊಂದು ಮುಖ್ಯವಾದ ಅಂಶವನ್ನು ಸೇರಿಸಬೇಕಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳು ಹೆಚ್ಚಾಗಿ ಬಡವರೇ ಆಗಿರುವುದರಿಂದ ಉಚಿತ ಸೇವೆಯನ್ನು ನೀಡುತ್ತಿರುವುದು ಸರಿ. ಆದರೆ ತಜ್ಞ ವೈದ್ಯರ ಲಭ್ಯತೆ, ಕಡಿಮೆ ವೆಚ್ಚ ಮತ್ತು ಕೆಲವು ಸೌಲಭ್ಯಗಳ ಕಾರಣಕ್ಕೆ, ಆರ್ಥಿಕವಾಗಿ ಸಬಲರಾದವರೂ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಅವರು ಸೇವೆಗೆ ಹಣ ನೀಡಲೂ ಸಿದ್ಧರಿರುತ್ತಾರೆ. ಸರ್ಕಾರಿ ವ್ಯವಸ್ಥೆಯಲ್ಲಿ ಅದಕ್ಕೆ ಅವಕಾಶ ಇಲ್ಲದ್ದರಿಂದ ಅವರು ಉಚಿತ ಸೇವೆಗಳನ್ನು ಪಡೆಯುತ್ತಾರೆ. ಇದರಿಂದ ಆಸ್ಪತ್ರೆಗಳಿಗೆ ನಷ್ಟವಾಗುತ್ತದೆ.

ಬಿಪಿಎಲ್ ಕಾರ್ಡ್‌ದಾರರನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ, ಖಾಸಗಿ ಆಸ್ಪತ್ರೆಯಷ್ಟಲ್ಲದಿದ್ದರೂ ಕನಿಷ್ಠ ಶುಲ್ಕವನ್ನಾದರೂ ನಿಗದಿಪಡಿಸಬೇಕು. ಇದರಿಂದ ಸಂಗ್ರಹವಾಗುವ ಹಣವನ್ನು ಆಸ್ಪತ್ರೆಗಳ ಸುಧಾರಣೆಗೇ ಬಳಸಬೇಕು. ಚಿಕಿತ್ಸೆ ಫಲಕಾರಿಯಾದ ರೋಗಿಗಳು ಆಸ್ಪತ್ರೆಗೆ ದೇಣಿಗೆ ಕೊಡಲು ಬಯಸಿದರೆ ಅದನ್ನೂ ಸ್ವೀಕರಿಸುವ ವ್ಯವಸ್ಥೆ ಇರಬೇಕು. ಈ ಸೂತ್ರವನ್ನು ಆಸ್ಪತ್ರೆ ಮಾತ್ರವಲ್ಲದೆ ಸರ್ಕಾರಿ ಶಾಲೆಗಳಿಗೂ ಅನ್ವಯಿಸಬಹುದು.

ಎನ್.ಎಂ.ಕುಲಕರ್ಣಿ, ಹೆಗ್ಗೋಡು

ದಲಿತ ಯುವಕನ ಮೇಲೆ ದೌರ್ಜನ್ಯ ಅಕ್ಷಮ್ಯ

ಸಂಬಳ ಕೇಳಿದ್ದಕ್ಕೆ ದಲಿತ ಯುವಕನ ಬಾಯಿಗೆ ಚಪ್ಪಲಿ ತುರುಕಿ ದೌರ್ಜನ್ಯ ಎಸಗಿರುವ ಪ್ರಕರಣ ಗುಜರಾತ್‌ನಲ್ಲಿ ನಡೆದಿರುವುದು ದುರದೃಷ್ಟಕರ. ಅದರಲ್ಲೂ ಒಬ್ಬ ಹೆಣ್ಣುಮಗಳು ಇಂತಹ ಹೀನಕೃತ್ಯ ಎಸಗಿರುವುದು ವಿಷಾದದ ಸಂಗತಿ. ದುಡಿಮೆಗೆ ಸಂಬಳ ಕೇಳುವುದೂ ಅಪರಾಧವೇ? ಅಂತಹ ಕಾರ್ಮಿಕರ ಶ್ರಮದಿಂದ ತಾನೆ ಕಂಪನಿಗಳೋ ಕೈಗಾರಿಕೆಗಳೋ ಸಂಸ್ಥೆಗಳೋ ಆರ್ಥಿಕವಾಗಿ ಮುಂದುವರಿಯುವುದು?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಸುರಂಗ ಕೊರೆತ: ಪ್ರಕೃತಿ ಮುಂದೆ ಕುಬ್ಜನಾದ ಮಾನವ

ಉತ್ತರಾಖಂಡದ ಉತ್ತರಕಾಶಿಯ ಸಿಲ್ಕ್ಯಾರಾ ಸುರಂಗದಲ್ಲಿ 41 ಕಾರ್ಮಿಕರು ಸಿಲುಕಿ ಹದಿನೈದು ದಿನ ಕಳೆದವು. ಇಂದು, ನಾಳೆ ಹೊರಬರಬಹುದು ಎಂದು ಪತ್ರಿಕೆಯಲ್ಲಿ ಓದಿ, ಓದಿ ನಿರಾಸೆಯಾಗಿದೆ. ಅಂತರರಾಷ್ಟ್ರೀಯ ತಜ್ಞರೂ ಪ್ರಕೃತಿಯ ಮುಂದೆ ಕೈ ಕಟ್ಟಿ ನಿಲ್ಲುವಂತಾಗಿದೆ. ಚಂದ್ರನವರೆಗೂ ತಲುಪಿದ ನಮ್ಮ ವಿಜ್ಞಾನ ಬರೀ 12 ಮೀಟರ್ ದೂರದಲ್ಲಿರುವ ನಮ್ಮ ನತದೃಷ್ಟ ಕಾರ್ಮಿಕರನ್ನು ತಲುಪದಾಗಿದೆ! ಮತ್ತೆ ಮಾನವ ಶಕ್ತಿಯಿಂದ ಅಗೆಯಲು ಪ್ರಯತ್ನಗಳು ಸಾಗಿವೆ.

ಪ್ರಕೃತಿಯ ಗಟ್ಟಿತನ, ವಿಸ್ಮಯ ಮತ್ತು ನಿಗೂಢತೆಯನ್ನು ಮೆಟ್ಟಿ ನಿಲ್ಲಲು ಮಾನವ ಮತ್ತೊಮ್ಮೆ ಸೋತಿದ್ದಾನೆ. ಸಿಲುಕಿದ ಕಾರ್ಮಿಕರ ಜೀವಕ್ಕೇನೂ ಅಪಾಯವಿಲ್ಲ ಎಂದುಕೊಂಡರೂ ಅವರು ಖಿನ್ನತೆಯಿಂದ ಬಳಲಿ ಬೆಂಡಾಗುವಂತಾಗಿದೆ. ಸ್ಥಳೀಯ ಗ್ರಾಮಸ್ಥರು ದೇವರ ಮೊರೆ ಹೋಗಿದ್ದಾರೆ. ಏನೇ ಆಗಲಿ ಎಲ್ಲ ಕಾರ್ಮಿಕರೂ ಸುರಕ್ಷಿತವಾಗಿ ಹೊರಬರುವಂತಾಗಲಿ.

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

ಕೋಣನ ಮುಂದೆ...!

ದಿನಬೆಳಗಾದರೆ ನಮ್ಮ ಜನನಾಯಕರು
ಕೆಸರುಗದ್ದೆಯಲ್ಲಿ ಓಡದೆಯೂ
ಯಮದೂತನ ವಾಹನ ಬಳಸದೆಯೂ
ಬಾಯಲ್ಲಿ ಕೆಸರೆರಚಾಡುವುದನ್ನು
ನೋಡುತ್ತಿದ್ದೇವೆ ಮಾರಾಯ್ರೆ!
ಆದರೆ ಈಗ ಕಾಣೆ, ಬೆಂಗಳೂರಿಗರು ನಿಜ
ಕೋಣನ ಕಂಬಳದಲ್ಲಿ ‘ಕೆಸರೆರಚಾಟ’
ಕಂಡು ಅದಕ್ಕಿಂತ ಇದೇ ಅಡ್ಡಿಯಿಲ್ಲ
ಎಂದುಕೊಳ್ಳುತ್ತಿದ್ದಾರೆ!
ಬಟ್ಟೆಗೆ ಮೆತ್ತಿಕೊಂಡ ಕೆಸರನ್ನು
ಹೇಗಾದರೂ ತೊಳೆಯಬಹುದು,
ಮನಸ್ಸಿಗೆ ಮೆತ್ತಿಕೊಂಡಿದ್ದು
ತೊಳೆಯಲು ಅಸಾಧ್ಯ!
‘ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ’
ಅನ್ನುವಂತಾಗಿದೆ.

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಇ– ಖಾತೆ ಪುನರಾರಂಭವಾಗಲಿ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 14.6.2013ರ ಈಚೆಗೆ ರಿಜಿಸ್ಟರ್ ಆದ ನಿವೇಶನಗಳಿಗೆ ಇ– ಖಾತೆ ಮಾಡುತ್ತಿಲ್ಲ. ಕಂದಾಯ ವಸೂಲಾತಿಯನ್ನೂ ಸ್ಥಗಿತಗೊಳಿಸಲಾಗಿದೆ. ಇದರಿಂದ ಮನೆ, ನಿವೇಶನಗಳನ್ನು ಮಾರುವುದು, ಆ ಕುರಿತು ವ್ಯವಹರಿಸುವುದು ಸಾಧ್ಯವಾಗದೆ ಹತ್ತು ವರ್ಷಗಳಿಂದಲೂ ಬವಣೆ ಪಡುವಂತಾಗಿದೆ. ಸಂಬಂಧಪಟ್ಟ ಇಲಾಖೆ ಈ ಬಗ್ಗೆ ಶೀಘ್ರ ಕ್ರಮ ಕೈಗೊಂಡು ನಿವೇಶನದಾರರ ಹಿತ ಕಾಪಾಡಬೇಕಿದೆ.

ಬಿ.ಎಸ್.ಭಗವಾನ್, ಬೆಂಗಳೂರು

ಧರ್ಮನಿರಪೇಕ್ಷತೆ ಪದಕ್ಕೆ ಅರ್ಥವಿದೆಯೇ?

ಮತ್ತೆ ಅಧಿಕಾರಕ್ಕೆ ಬಂದರೆ ಮುಸ್ಲಿಂ ಯುವಕರಿಗಾಗಿ ವಿಶೇಷ ಐ.ಟಿ. ಪಾರ್ಕ್ ನಿರ್ಮಿಸುವುದಾಗಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಚುನಾವಣಾ ರ್‍ಯಾಲಿಯಲ್ಲಿ ಹೇಳಿರುವುದು (ಪ್ರ.ವಾ., ನ. 24) ಆತಂಕಕಾರಿಯಷ್ಟೇ ಅಲ್ಲ ಮತ ಗಳಿಕೆಗಾಗಿ ಅವರ ಓಲೈಕೆ ವಿಧಾನವನ್ನೂ ತೋರಿಸುತ್ತದೆ. ಇದರ ಜೊತೆಗೆ ತಾವು ಜೀವಂತ ಇರುವವರೆಗೂ ತೆಲಂಗಾಣ ರಾಜ್ಯ ಧರ್ಮನಿರಪೇಕ್ಷವಾಗಿ ಉಳಿಯಲಿದೆ ಎಂದು ಹೇಳಿರುವುದು ಸೋಜಿಗದ ಹಾಗೂ ಅವರ ದ್ವಂದ್ವ ನಿಲುವನ್ನು ಬಿಂಬಿಸುತ್ತದೆ. ಈಗ ಮುಸ್ಲಿಂ ಸಮುದಾಯಕ್ಕೆ ವಿಶೇಷ ಸೌಲಭ್ಯ, ನಾಳೆ ಮತ್ತೊಂದು ಪಂಗಡಕ್ಕೆ... ಹೀಗಾದರೆ ದೇಶದ ಸಂವಿಧಾನದಲ್ಲಿರುವ ಧರ್ಮನಿರಪೇಕ್ಷತೆ ಪದಕ್ಕೆ ಅರ್ಥವಾದರೂ ಏನು?!

ತೆಲಂಗಾಣದ ಮುಖ್ಯಮಂತ್ರಿ ಬಾಯಿಯಿಂದ ಈ ಮಾತು ಹೊರಡಬೇಕಾದರೆ, ಆ ರಾಜ್ಯದಲ್ಲಿ ಮುಸ್ಲಿಂ ಯುವಕರ ನೇಮಕಾತಿಯಲ್ಲಿ ಅಲ್ಲಿನ ಉದ್ಯಮಗಳು ಸರ್ಕಾರ ಹಾಗೂ ಸಂವಿಧಾನದ ಸೂಚನೆಗಳನ್ನು ಪಾಲಿಸುತ್ತಿಲ್ಲ ಎಂದು ಅರ್ಥವೇ? ಇಂತಹ ರಾಜಕೀಯ ಮಿಳಿತ ಹೇಳಿಕೆಗಳಿಂದಾಗಿ ರಾಜ್ಯದ, ದೇಶದ ರಾಜಕಾರಣ ಎತ್ತ ಸಾಗಲಿದೆ ಎಂಬುದನ್ನು ಊಹಿಸಬಹುದು. ಒಂದು ಸಮುದಾಯಕ್ಕಾಗಿ ಬೇರೆಯೇ ವ್ಯವಸ್ಥೆ ಇರಲಿ ಎಂದಾದರೆ, ದೇಶದಲ್ಲಿ ಜಾತ್ಯತೀತವಾಗಿ, ಮತಾತೀತವಾಗಿ ಎಲ್ಲರನ್ನೂ ಒಗ್ಗೂಡಿಸುವುದು ಮರೀಚಿಕೆಯಲ್ಲವೇ ಮತ್ತು ಸಂವಿಧಾನದ ಆಶೋತ್ತರಗಳನ್ನು ಧಿಕ್ಕರಿಸಿದಂತೆ ಅಲ್ಲವೇ?!

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆರ್‌ಟಿಐ ವ್ಯಾಪ್ತಿಯಿಂದ ಸಿಇಆರ್‌ಟಿ ಇನ್ ಹೊರಕ್ಕೆ

ಭಾರತೀಯ ಕಂಪ್ಯೂಟರ್ ತುರ್ತು ಸ್ಪಂದನ ತಂಡವನ್ನು (ಸಿಇಆರ್‌ಟಿ ಇನ್) ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಡುವ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ. ಈ ಹಿಂದೆ ಯುಪಿಎ ಸರ್ಕಾರ ಕೂಡ ಕೆಲವು ಸಂಸ್ಥೆಗಳನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಡುವ ಕೆಲಸ ಮಾಡಿತ್ತು. ಭಾರತದಲ್ಲಿ ಜನರ ಖಾಸಗಿ ಮಾಹಿತಿಗಳು ಸೋರಿಕೆಯಾಗುತ್ತಿರುವ, ವಿರೋಧ ಪಕ್ಷಗಳ ನಾಯಕರ ಮೊಬೈಲ್‌ಗಳಲ್ಲಿ ಕುತಂತ್ರಾಂಶವನ್ನು ಅಳವಡಿಸಲಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಿರುವ ಈ ಹೊತ್ತಿನಲ್ಲಿ ಸೈಬರ್ ಭದ್ರತೆಯ ನೋಡಲ್ ಸಂಸ್ಥೆಯಾದ ಸಿಇಆರ್‌ಟಿ ಇನ್ ಅನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ

• ಸುಕೃತ ಎಸ್.

ವಿರೋಧ ಪಕ್ಷಗಳ ನಾಯಕರ ಫೋನ್‌ಗಳನ್ನು ಇಣುಕಿ ನೋಡುವ ಪ್ರಕರಣಗಳು ಒಂದಾದಮೇಲೊಂದು ನಡೆಯುತ್ತಲೇ ಇವೆ. ವಿರೋಧ ಪಕ್ಷಗಳ ನಾಯಕರ ಖಾಸಗಿ ಮಾಹಿತಿ ಪಡೆದುಕೊಳ್ಳುವ ಸಲುವಾಗಿ ಅವರ ಮೊಬೈಲ್‌ಗಳಲ್ಲಿ ಕೇಂದ್ರ ಸರ್ಕಾರವೇ ಖುದ್ದು ಕುತಂತ್ರಾಂಶಗಳನ್ನು ಅಳವಡಿಸುತ್ತಿದೆ ಎನ್ನುವುದು ವಿರೋಧ ಪಕ್ಷಗಳ ಗಂಭೀರ ಆರೋಪ. ಆ್ಯಪಲ್ ಕಂಪನಿ ನೀಡಿದ 'ಎಚ್ಚರಿಕೆ ಸಂದೇಶ'ದಂಥ ಪ್ರಕರಣ ಇದಕ್ಕೆ ಉದಾಹರಣೆಯಾಗಿದೆ. ಮೊದಲು ಪೆಗಾಸಸ್ ಕುತಂತ್ರಾಂಶವನ್ನು ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಹಲವು ಮಂದಿಯ ವ್ಯಾಟ್ಸ್‌ಆ್ಯಪ್‌ಗಳಲ್ಲಿ ಅಳವಡಿಸಲಾಗಿತ್ತು ಎಂಬ ಆರೋಪ ಕೇಳಿ ಬಂದಿತ್ತು. ನವೆಂಬರ್ ಮೊದಲ ವಾರದಲ್ಲಿ ಇಂಥದ್ದೆ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿತ್ತು. ಆ್ಯಪಲ್ ಕಂಪನಿಯು ವಿರೋಧ ಪಕ್ಷಗಳ ಹಲವು ನಾಯಕರಿಗೆ ಎಚ್ಚರಿಕೆ ಸಂದೇಶವೊಂದನ್ನು ಕಳುಹಿಸಿತ್ತು. 'ಸರ್ಕಾರಿ ಪ್ರಚೋದಿತ ದಾಳಿ'ಯೊಂದು ನಿಮ್ಮ ಮೇಲೆ ನಡೆಯುತ್ತಿದೆ ಎಂದು ಅದು ಹೇಳಿತ್ತು. ಪ್ರಜಾಪ್ರಭುತ್ವ ದೇಶವೊಂದಕ್ಕೆ ಹೆಚ್ಚು ಮಾರಕವಾಗುವ ಪ್ರಕರಣಗಳು ಎಂದೇ ಇವನ್ನು ವಿಶ್ಲೇಷಿಸಲಾಗುತ್ತಿದೆ.

ಜನರ ದತ್ತಾಂಶ ಸೋರಿಕೆ ಸೇರಿದಂತೆ, ಪೆಗಾಸಸ್ ಹಾಗೂ ಆ್ಯಪಲ್‌ನ 'ಎಚ್ಚರಿಕೆ ಸಂದೇಶ'ದ ಪ್ರಕರಣಗಳ ತನಿಖೆಯನ್ನು ಭಾರತೀಯ ಕಂಪ್ಯೂಟರ್ ತುರ್ತು ಸ್ಪಂದನ ತಂಡ (ಸಿಇಆರ್‌ಟಿ ಇನ್) ನಡೆಸುತ್ತಿದೆ. ಇಂಥ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರವು ಸಿಇಆರ್‌ಟಿ ಇನ್ ಅನ್ನು ಮಾಹಿತಿ ಹಕ್ಕು ಕಾಯ್ದೆಯಿಂದ (ಆರ್‌ಟಿಐ) ಹೊರಗಿಟ್ಟು ಅಧಿಸೂಚನೆ ಹೊರಡಿಸಿದೆ. ಇದು ಅಪಾಯಕಾರಿ ಬೆಳವಣಿಗೆ ಎನ್ನುವುದು ಆರ್‌ಟಿಐ ಕಾರ್ಯಕರ್ತರ, ಸೈಬರ್ ಅಪರಾಧ ತಡೆಗಟ್ಟುವಲ್ಲಿ ತೊಡಗಿಸಿಕೊಂಡಿರುವ ಸಂಘ–ಸಂಸ್ಥೆಗಳ ಆರೋಪವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರವು ಆರ್‌ಟಿಐಗೆ ತಿದ್ದುಪಡಿಗಳನ್ನು ತಂದು ಕೆಲವು ಸಂಸ್ಥೆಗಳನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಈ ಪ್ರವೃತಿಯನ್ನು ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಕೂಡ ಮಾಡಿತ್ತು. ರಾಷ್ಟ್ರೀಯ ಭದ್ರತಾ ಮಂಡಳಿ ಕಾರ್ಯಾಲಯ, ಸಿಬಿಐ ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆಯನ್ನು ಯುಪಿಎ ಸರ್ಕಾರವು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಟ್ಟಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಈ ಪ್ರವೃತ್ತಿಯನ್ನು ಮುಂದುವರಿಸಿದೆ. 2016ರಲ್ಲಿ ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್ ಅನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಈಗ ಸಿಇಆರ್‌ಟಿ ಇನ್ ಅನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಡಲು ಅಧಿಸೂಚನೆ ಹೊರಡಿಸಿದೆ.

ಏನಿದು ಸಿಇಆರ್‌ಟಿ ಇನ್?: ಗಣಕಯಂತ್ರದ ಭದ್ರತೆ ಕುರಿತು ರಾಷ್ಟ್ರೀಯ ನೋಡಲ್ ಸಂಸ್ಥೆ ಇದು. 2004ರ ಜನವರಿಯಿಂದ ಇದು ತನ್ನ ಕಾರ್ಯಾಚರಣೆಯನ್ನು ಆರಂಭಿಸಿದೆ. ಸೈಬರ್ ಅಪರಾಧಗಳ ಕುರಿತು ಎಚ್ಚರಿಕೆ ನೀಡುವುದು, ಸೂಕ್ತ ಮಾರ್ಗಸೂಚಿ, ಸಲಹೆಗಳನ್ನು ನೀಡುವುದು, ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವುದು ಸೇರಿದಂತೆ ಸೈಬರ್ ಅಪರಾಧಗಳ ಕುರಿತು ತನಿಖೆ ನಡೆಸುವುದು ಇದರ ಕೆಲಸವಾಗಿದೆ.

ನಡೆದಿದ್ದು ಏನು?

'ಸಿಇಆರ್‌ಟಿ ಇನ್ ಅನ್ನು ಮಾಹಿತಿ ಹಕ್ಕು ಕಾಯ್ದೆಯ ಎರಡನೇ ಪರಿಚ್ಛೇದಕ್ಕೆ ಸೇರಿಸುವ ಕುರಿತು ಪರಾಮರ್ಶೆ ನಡೆಸಲಾಗುತ್ತಿದೆ' ಎಂದು ಐಟಿ ಸಚಿವಾಲಯದ ರಾಜ್ಯ ಖಾತೆ ಸಚಿವ ರಾಜೀವ್ ಚಂದ್ರಶೇಖರ್ ಅವರು ಇದೇ ಮಾರ್ಚ್‌ನಲ್ಲಿ ರಾಜ್ಯಸಭೆಗೆ ಮಾಹಿತಿ ನೀಡಿದ್ದರು. ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಸಿಇಆರ್‌ಟಿ ಇನ್ ಅನ್ನು ನಿರ್ವಹಿಸುತ್ತದೆ. ಸಿಬ್ಬಂದಿ ಹಾಗೂ ತರಬೇತಿ ಸಚಿವಾಲಯವು ಆರ್‌ಟಿಐ ಅನ್ನು ನಿರ್ವಹಿಸುತ್ತದೆ. ಸಿಇಆರ್‌ಟಿ ಇನ್ ಅನ್ನು ಆರ್‌ಟಿಐ ಕಾಯ್ದೆಯಿಂದ ಹೊರಗಿಡುವ ಕುರಿತು ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಸಿಬ್ಬಂದಿ ಹಾಗೂ ತರಬೇತಿ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಅಂತೆಯೇ, ನವೆಂಬರ್ 24ರಂದು ಕೇಂದ್ರ ಸರ್ಕಾರವು ಸಿಇಆರ್‌ಟಿ ಇನ್ ಅನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಟ್ಟು ಅಧಿಸೂಚನೆ ಹೊರಡಿಸಿದೆ.

ಆರ್‌ಟಿಐ ಕಾಯ್ದೆ ಏನು ಹೇಳುತ್ತದೆ?

ಗುಪ್ತಚರ ಹಾಗೂ ಭದ್ರತಾ ಸಂಸ್ಥೆಗಳ ಕುರಿತು ಮಾಹಿತಿ ಹಕ್ಕು ಕಾಯ್ದೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಈ ಬಗ್ಗೆ ಕಾಯ್ದೆಯ ಸೆಕ್ಷನ್ 24 ಚರ್ಚಿಸುತ್ತದೆ. 2005ರಲ್ಲಿ ಕಾಯ್ದೆ ರೂಪುಗೊಂಡ ಸಮಯದಲ್ಲಿ ಒಟ್ಟು 18 ಇಂಥ ಸಂಸ್ಥೆಗಳನ್ನು ಪಟ್ಟಿ ಮಾಡಲಾಗಿತ್ತು. ಈಗ ಈ ಪಟ್ಟಿಯಲ್ಲಿ ಒಟ್ಟು 26 ಸಂಸ್ಥೆಗಳು ಸೇರ್ಪಡೆಯಾಗಿವೆ. ಸಿಇಆರ್‌ಟಿ ಇನ್ ಈ ಪಟ್ಟಿಯ 27ನೇ ಸಂಸ್ಥೆಯಾಗಲಿದೆ.

'ಈ ಸೆಕ್ಷನ್ ಅಡಿಯಲ್ಲಿ ಬರುವ ಎರಡನೇ ಪರಿಚ್ಛೇದದಲ್ಲಿ ಪಟ್ಟಿ ಮಾಡಲಾಗಿರುವ ಕೇಂದ್ರ ಸರ್ಕಾರದ ಸಂಸ್ಥೆಗಳು ಗುಪ್ತಚರ ಹಾಗೂ ಭದ್ರತಾ ಸಂಸ್ಥೆಗಳಾಗಿರುತ್ತವೆ. ಈ ಸಂಸ್ಥೆಗಳು ಆರ್‌ಟಿಐ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ಸಂಸ್ಥೆಗಳು ಸರ್ಕಾರಕ್ಕೆ ನೀಡಿದ ಮಾಹಿತಿಯನ್ನು ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕರು ಕೇಳುವಂತಿಲ್ಲ' ಎಂದು ಮಾಹಿತಿ ಹಕ್ಕು ಕಾಯ್ದೆಯ 24ನೇ ಸೆಕ್ಷನ್ ವಿವರಿಸುತ್ತದೆ. 'ಎರಡನೇ ಪರಿಚ್ಛೇದದಿಂದ ಯಾವುದೇ ಸಂಸ್ಥೆಯನ್ನು ಹೊರಗಿಡಲು ಅಥವಾ ಸೇರಿಸಲು ಸರ್ಕಾರವು ಅಧಿಸೂಚನೆಯನ್ನು ಹೊರಡಿಸಬೇಕು. ಜೊತೆಗೆ, ಈ ಅಧಿಸೂಚನೆಯನ್ನು ಸಂಸತ್ತಿನ ಮುಂದಿಡಬೇಕು' ಎಂದೂ ಈ ಸೆಕ್ಷನ್ ವಿವರಿಸುತ್ತದೆ. ಆದ್ದರಿಂದ, ಸಿಟಿಆರ್‌ಟಿ ಅನ್ನು ಕಾಯ್ದೆಯಿಂದ ಹೊರಗಿಟ್ಟಿರುವ ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಸಂಸತ್ತಿನ ಮುಂದಿಡಬೇಕಾಗುತ್ತದೆ.

ಭಾರತದಲ್ಲಿ ಸೈಬರ್ ಅಪರಾಧ

CERT-In — Handling Computer Security Incidents

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಸೈಬರ್ ಸಂಬಂಧಿತ ದಾಳಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿದೆ. ಹಲವು ಸಂಸ್ಥೆಗಳು ಈ ಬಗ್ಗೆ ಮಾಹಿತಿ ನೀಡಿವೆ. ಇಂಟರ್‌ನೆಟ್ ಫ್ರೀಡಂ ಫೌಂಡೇಷನ್ ಪ್ರಕಾರ, 2004ರಿಂದ ಈಚೆಗೆ ಒಟ್ಟು 29.20 ಕೋಟಿ ದತ್ತಾಂಶ ಸೋರಿಕೆ ಪ್ರಕರಣಗಳು ನಡೆದಿವೆ. ಅಂದರೆ, ಒಂದು ಲಕ್ಷ ಜನರಿಗೆ 9,904 ಪ್ರಕರಣಗಳು ವರದಿಯಾಗಿವೆ. 2018ರಿಂದ 2022ರವರೆಗೆ ಜಗತ್ತಿನಾದ್ಯಂತ ಸುಮಾರು 5 ಕೋಟಿ ಜನರ ದತ್ತಾಂಶಗಳು ಸೋರಿಕೆಯಾಗಿವೆ. ಇದರಲ್ಲಿ ಭಾರತದ 6 ಲಕ್ಷ ಜನರು ಇದ್ದಾರೆ. ಒಬ್ಬ ವ್ಯಕ್ತಿಯ ಮಾಹಿತಿಗೆ ₹450ರಂತೆ ಬಾಟ್ ಮಾರುಕಟ್ಟೆಯಲ್ಲಿ ಬಿಕರಿಯಾಗಿವೆ. ಇವು ವೈಯಕ್ತಿಕ ನೆಲೆಗಳಲ್ಲಿ ಆಗುತ್ತಿರುವ ದತ್ತಾಂಶ ಸೋರಿಕೆಯ ವರದಿಗಳು. ಭಾರತ ಸರ್ಕಾರದ ವೆಬ್‌ಸೈಟ್‌ಗಳಿಂದಲೂ ಜನರ ಖಾಸಗಿ ಮಾಹಿತಿಗಳು ಸೋರಿಕೆಯಾಗುತ್ತಿವೆ. 2023ರ ಮೊದಲ ಆರು ತಿಂಗಳಲ್ಲಿ ಕೇಂದ್ರ ಸರ್ಕಾರ ಹಾಗೂ ವಿವಿಧ ರಾಜ್ಯ ಸರ್ಕಾರಗಳ ಸುಮಾರು 36 ವೆಬ್‌ಸೈಟ್‌ಗಳು ಹ್ಯಾಕ್ ಆಗಿವೆ. ಈ ಮಾಹಿತಿಯನ್ನು ಕೇಂದ್ರ ಸರ್ಕಾರವೇ ಸಂಸತ್ತಿಗೆ ನೀಡಿದೆ.

- 2018ರಲ್ಲಿ ಆಧಾರ್ ಕಾರ್ಡ್‌ನ ಮಾಹಿತಿಗಳು ಸೋರಿಕೆಯಾಗಿದ್ದವು. ಸುಮಾರು ಒಂದು ಕೋಟಿ ಭಾರತೀಯರ ಖಾಸಗಿ ಮಾಹಿತಿಗಳು ಸೋರಿಕೆಯಾಗಿದ್ದವು. ಇದು ದೊಡ್ಡ ಮಟ್ಟದ ಸುದ್ದಿಯಾಗಿತ್ತು
- ದೆಹಲಿಯ ಏಮ್ಸ್‌ನ ಸರ್ವರ್ ಅನ್ನು 2022ರಲ್ಲಿ ಹ್ಯಾಕ್ ಮಾಡಲಾಗಿತ್ತು. ಹಲವು ದಿನಗಳ ವರೆಗೆ ಆಸ್ಪತ್ರೆಯ ಇಂಟರ್‌ನೆಟ್ ಸೇವೆಯು ಸ್ಥಗಿತಗೊಂಡಿತ್ತು. ಈ ಬಗ್ಗೆ ಸಿಇಆರ್‌ಟಿ ಇನ್ ತನಿಖೆ ನಡೆಸುತ್ತಿದೆ. ವ್ಯಕ್ತಿಯೊಬ್ಬರನ್ನು ಈ ಸಂಬಂಧ ಬಂಧಿಸಲಾಗಿದೆ
- 2022ರಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ (ಐಸಿಎಂಆರ್) ವೆಬ್‌ಸೈಟ್ ಅನ್ನು ಕೇವಲ 24 ತಾಸುಗಳಲ್ಲಿ 6 ಸಾವಿರ ಬಾರಿ ಹ್ಯಾಕ್ ಮಾಡಲು ಯತ್ನಿಸಿದ್ದರು ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿತ್ತು
- 2023ರ ಜೂನ್ ಹೊತ್ತಿಗೆ ಕೋವಿನ್ ಪೋರ್ಟಲ್‌ನಲ್ಲಿದ್ದ ಕೋಟ್ಯಂತರ ಭಾರತೀಯರ ಖಾಸಗಿ ಮಾಹಿತಿಗಳು ಸೋರಿಕೆಯಾಗಿದ್ದವು. ಈ ಬಗ್ಗೆ ದೊಡ್ಡ ಮಟ್ಟದ ವಿವಾದ ಸೃಷ್ಟಿಯಾಗಿತ್ತು

ಖಾಸಗೀತನಕ್ಕೆ ಧಕ್ಕೆ ಆಗುವ ಅಪಾಯಗಳು

ಭಾರತದಲ್ಲಿ ಸೈಬರ್ ಪ್ರಕರಣಗಳು ಹೆಚ್ಚಾಗ ತೊಡಗಿದಂತೆ ಸಿಇಆರ್‌ಟಿ ಇನ್ ಹಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತ್ತು. 2022ರಲ್ಲಿ ಈ ಸಂಸ್ಥೆ ನೀಡಿದ ಮಾರ್ಗಸೂಚಿಗಳಲ್ಲಿ ಜನರ ಖಾಸಗಿತನಕ್ಕೆ ಧಕ್ಕೆ ಬರುವ ಅಪಾಯವಿದೆ ಎಂದು ಇಂಟರ್‌ನೆಟ್ ಫ್ರೀಡಂ ಫೌಂಡೇಷನ್ ಆರೋಪಿಸಿತ್ತು. ಈ ಬಗ್ಗೆ ಅದು ದೆಹಲಿ ಹೈಕೋರ್ಟ್ ಮೆಟ್ಟಿಲನ್ನೂ ಏರಿತ್ತು.

'ವರ್ಚುವಲ್ ಪ್ರೈವೆಟ್ ಸರ್ವೀಸಸ್ (ವಿಪಿಎಸ್), ಕ್ಲೌಡ್ ಸರ್ವಿಸ್ ಹಾಗೂ ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್ಸ್ (ವಿಪಿಎನ್) ಕಂಪನಿಗಳಿಗೆ ಸಿಇಆರ್‌ಟಿ ಇನ್ ಕೆಲವು ಮಾರ್ಗಸೂಚಿಗಳನ್ನು ನೀಡಿತ್ತು. 'ಈ ಕಂಪನಿಗಳ ಬಳಕೆದಾರರ ಪೂರ್ತಿ ಮಾಹಿತಿಗಳನ್ನು ಸಿಇಆರ್‌ಟಿ ಇನ್ ಕೇಳಿದಾಗ ಅದಕ್ಕೆ ನೀಡಬೇಕು. ಒಂದೊಮ್ಮೆ ಬಳಕೆದಾರರು ಈ ಕಂಪನಿಗಳ ಸೇವೆಯನ್ನು ಪಡೆದುಕೊಳ್ಳುವುದನ್ನು ನಿಲ್ಲಿಸಿದರೂ ಈ ಕಂಪನಿಗಳು ಅಂಥ ಬಳಕೆದಾರರ ಮಾಹಿತಿಗಳನ್ನು 180 ದಿನಗಳ ವರೆಗೆ ತಮ್ಮ ಬಳಿಯೇ ಇಟ್ಟುಕೊಳ್ಳಬೇಕು' ಎನ್ನುವುದು ಮಾರ್ಗಸೂಚಿಯಲ್ಲಿದ್ದ ಅಂಶಗಳು. ಈ ಮಾಹಿತಿಗಳನ್ನು ಯಾವುದಕ್ಕಾಗಿ ಬಳಸಿಕೊಳ್ಳಲಾಗುತ್ತದೆ, ಯಾರಿಗೆ ನೀಡುತ್ತದೆ ಎಂಬುದನ್ನು ತನ್ನ ಮಾರ್ಗಸೂಚಿಯಲ್ಲಿ ಸಿಇಆರ್‌ಟಿ ಇನ್ ಹೇಳಿರಲಿಲ್ಲ. ಇದನ್ನು ಪಾಲಿಸಲಿಲ್ಲವಾದರೆ, ಒಂದು ವರ್ಷದ ವರೆಗೆ ಶಿಕ್ಷೆ ವಿಧಿಸಬಹುದಿತ್ತು. ಈ ಕಾರಣದಿಂದ ಹಲವು ವಿಪಿಎನ್ ಕಂಪನಿಗಳು ಭಾರತವನ್ನು ಬಿಟ್ಟು ಹೋಗಿವೆ' ಎಂದು ಫೌಂಡೇಷನ್ ಹೇಳಿದೆ.

'ಇನ್ನೊಂದು ಮುಖ್ಯ ವಿಷಯವೂ ಇದೆ. ಕೇಂದ್ರ ಸರ್ಕಾರವು ಡಿಜಿಟಲ್ ಖಾಸಗಿ ದತ್ತಾಂಶ ರಕ್ಷಣೆ ಕಾಯ್ದೆ, 2023 ಅನ್ನು ಜಾರಿಗೆ ತಂದಿದೆ. ಈ ಕಾಯ್ದೆಯ 15 (ಸಿ) ಸೆಕ್ಷನ್, ದತ್ತಾಂಶಗಳನ್ನು ಸರ್ಕಾರಕ್ಕೆ ನೀಡುವ ಕುರಿತು ಜನರ ಕರ್ತವ್ಯವನ್ನು ವಿವರಿಸುತ್ತದೆ. ಸರ್ಕಾರವೊಂದು ಬಯಸಿದರೆ, ಜನರು ಸರ್ಕಾರಕ್ಕೆ ತನ್ನ ಮಾಹಿತಿಗಳನ್ನು ನೀಡಲೇಬೇಕು. ಸರ್ಕಾರವು ಈ ಮಾಹಿತಿಗಳನ್ನು ರಕ್ಷಿಸುತ್ತದೆ ಎಂದಷ್ಟೇ ಹೇಳುತ್ತದೆ ಹೊರತು, ಈ ಮಾಹಿತಿಗಳನ್ನು ಸರ್ಕಾರ ಹೇಗೆ ಬಳಸಿಕೊಳ್ಳುತ್ತದೆ ಅಥವಾ ಸರ್ಕಾರಕ್ಕೆ ಇಂಥ ಕೆಲವು ಮಾಹಿತಿಗಳು ಯಾಕಾಗಿ ಬೇಕು ಎನ್ನುವುದನ್ನು ಕಾಯ್ದೆಯಲ್ಲಿ ವಿವರಿಸಲಾಗಿಲ್ಲ. ಈ ಎಲ್ಲಾ ಕಾರಣಗಳಿಂದ ಸಿಇಆರ್‌ಟಿ ಇನ್ ಅನ್ನು ಆರ್‌ಟಿಐನಿಂದ ಹೊರಗಿಟ್ಟಿರುವುದು ಅನುಮಾನಕ್ಕೆ ಎಡೆಮಾಡಿಕೊಡುತ್ತದೆ' ಎಂದೂ ಅದು ಎಚ್ಚರಿಸಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಸಿಇಆರ್‌ಟಿ ಇನ್ ವೆಬ್‌ಸೈಟ್, ಮಾಹಿತಿ ಹಕ್ಕು ಕಾಯ್ದೆ 2005, ಎಕ್ಸ್ ಖಾತೆಗಳ ಪೋಸ್ಟ್‌ಗಳು

ಪ್ರಾರಂಭವಾಯ್ತು 'ಸುವರ್ಣ Jackpot'

ಅನುಪಮಾ ಗೌಡ

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಹೊಸ ಗೇಮ್ ಶೋ 'ಸುವರ್ಣ Jackpot' ನ.26ರಿಂದ ಪ್ರಾರಂಭಗೊಂಡಿದೆ. ಈ ಕಾರ್ಯಕ್ರಮ ಪ್ರತಿ ಭಾನುವಾರ ರಾತ್ರಿ 7 ಗಂಟೆಗೆ ವಾಹಿನಿಯಲ್ಲಿ ಪ್ರಸಾರಗೊಳ್ಳಲಿದೆ. 'ಇದೊಂದು ವಿಭಿನ್ನ ಪರಿಕಲ್ಪನೆ ಹೊಂದಿರುವ ಶೋ. ಇಲ್ಲಿ ಭಾಗವಹಿಸುವ ಪ್ರತಿ ಸೆಲೆಬ್ರಿಟಿಗಳು ಆಟದ ಜೊತೆ ₹50 ಲಕ್ಷ ಬೆಲೆಬಾಳುವ ಟಿವಿ, ಫ್ರಿಡ್ಜ್ ಮುಂತಾದ ಗೃಹೋಪಯೋಗಿ ವಸ್ತುಗಳನ್ನು ಪಡೆಯುವ ಅವಕಾಶ ಗಳಿಸುತ್ತಾರೆ. ನೀಡಿರುವ ಮಂತ್ರವನ್ನು ಸರಿಯಾಗಿ ಹೇಳಿದರೆ ಮಾತ್ರ ಅವರು ಆಯ್ಕೆ ಮಾಡಿದ ವಸ್ತುಗಳನ್ನು ಗೆಲ್ಲುತ್ತಾರೆ. ಇದೊಂದು ರೀತಿ ತಾರೆಯರಿಗೆ ಆಟದ ಜೊತೆ ನೆನಪಿನ ಶಕ್ತಿಗೆ ಸವಾಲೊಡ್ಡುವ ಗೇಮ್ ಶೋ. ಪ್ರತಿ ವಾರ 2 ತಂಡಗಳು ಭಾಗವಹಿಸುತ್ತವೆ' ಎಂದು ವಾಹಿನಿ ಹೇಳಿದೆ. 'ಬಾಗ್ಲು ತೆಗಿಯೇ ಸೇಸಮ್ಮ' ಎಂಬ ಅಡಿಬರಹವಿದೆ. ನಟಿ, ನಿರೂಪಕಿ ಅನುಪಮ ಗೌಡ ಈ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ❖

ಅನೀಶ್ ತೇಜೇಶ್ವರ್, ಶ್ರಾವ್ಯ ರಾವ್

'ಮಾಯಾನಗರಿ'ಯ ಹಾಡು

ಹಾರರ್, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಮಾಯಾನಗರಿ' ಚಿತ್ರದ 'ಲಚ್ಚಿ ಲಚ್ಚಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅನೀಶ್ ತೇಜೇಶ್ವರ್ ಹಾಗೂ ಶ್ರಾವ್ಯ ರಾವ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರಕ್ಕೆ ಶಂಕರ್ ಆರಾಧ್ಯ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

''ಈ ಹಾಡು ನಮ್ಮ ಚಿತ್ರಕ್ಕೆ ಟ್ರಂಪ್ ಕಾರ್ಡ್ ಆಗುತ್ತದೆ ಎಂದು ಕಲರ್‌ಫುಲ್ ಆಗಿಯೇ ಶೂಟ್ ಮಾಡಿದ್ದೇವೆ. ಆರು ದಿನಗಳ ಕಾಲ ಇದನ್ನು ಚಿತ್ರೀಕರಿಸಿದ್ದೆವು. ಚಿತ್ರದಲ್ಲಿ ನಾಯಕ ಶಂಕರ್‌ನಾಗ್ ಅಭಿಮಾನಿ. ಚಿತ್ರರಂಗದಲ್ಲಿ ದೊಡ್ಡ ನಿರ್ದೇಶಕನಾಗಬೇಕೆಂದು ಹೋರಾಟ ನಡೆಸುವ ಆತ 'ಮಾಯಾನಗರಿ' ಎಂಬ ಸ್ಥಳಕ್ಕೆ ಹೋಗಬೇಕಾಗುತ್ತದೆ. ಮುಂದೇನಾಗುತ್ತದೆ ಎಂಬುದೇ ಚಿತ್ರದ ಕಥೆ'' ಎಂದರು ನಿರ್ದೇಶಕರು.

ಬೆಂಗಳೂರು, ಶಿವಮೊಗ್ಗ, ಸಾಗರ, ಚಿಕ್ಕಮಗಳೂರು, ಭದ್ರಾವತಿ ಸುತ್ತಮುತ್ತ ಸುಮಾರು 65 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ವಿಜಯ್ ಎಂ. ಕುಮಾರ್ ಸಂಕಲನ, ಶ್ರೀನಿವಾಸ್ ಕ್ಯಾಮೆರಾ ಕೆಲಸವಿದೆ. ಶರತ್ ಲೋಹಿತಾಶ್ವ, ಅವಿನಾಶ್, ಸುಚೇಂದ್ರ ಪ್ರಸಾದ್ ಮೊದಲಾದವರು ತಾರಬಳಗದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಭಾರತ ಮಾತೆ ಯಾರು, ಭಾರತ ಮಾತೆ ಅಂದರೆ ಏನು?' ಎಂದು ಕಾಂಗ್ರೆಸ್ ಸಂಸದ ರಾಹುಲ್ ಕೇಳಿದ್ದಾರೆ ಎಂಬಂತೆ ಬಿಂಬಿಸುವ 18 ಸೆಕೆಂಡ್‌ಗಳ ವಿಡಿಯೊವೊಂದನ್ನು ಬಿಜೆಪಿಯ ಅಧಿಕೃತ 'ಎಕ್ಸ್' ಖಾತೆಯಲ್ಲಿ (@ಬಿಜೆಪಿ4ಇಂಡಿಯಾ) ಪ್ರಕಟಿಸಲಾಗಿದೆ. ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಮುಖಂಡ ನವೀನ್ ಕುಮಾರ್ ಜಿಂದಾಲ್ ಅವರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ವಿದೇಶಿ ಮಹಿಳೆಯ ಹೊಟ್ಟೆಯಲ್ಲಿ ಹುಟ್ಟಿದವರು ಮಾತ್ರ 'ಭಾರತ ಮಾತೆ ಯಾರು' ಎಂದು ಕೇಳಬಹುದು ಎಂದು ಅವರು ಹೇಳಿದ್ದಾರೆ. ಬಿಜೆಪಿ ವಕ್ತಾರೆ ಅನುಜಾ ಕಪೂರ್ ಅವರು ರಾಹುಲ್ ಗಾಂಧಿಯನ್ನು ದೇಶದ್ರೋಹಿ ಎಂದು ಕರೆದಿದ್ದಾರೆ. ಆದರೆ ಈ ವಿಡಿಯೊವನ್ನು ತಪ್ಪಾಗಿ ಬಿಂಬಿಸಲಾಗಿದೆ.

✓ **ಆಲ್ಟ್ ನ್ಯೂಸ್** ಈ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿದೆ. ರಾಹುಲ್ ಗಾಂಧಿ ಮಾತನಾಡಿದ ಸಂದರ್ಭ ಯಾವುದು ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ರಾಹುಲ್ ಮಾತನಾಡಿದ ಕಾರ್ಯಕ್ರಮಕ್ಕೆ ಸಂಬಂಧಿಸಿ ಅಮರ್ ಉಜಾಲಾದಲ್ಲಿ ನವೆಂಬರ್ 19ರಂದು ವರದಿ ಪ್ರಕಟವಾಗಿದೆ. ರಾಜಸ್ಥಾನದ ಬುಂದಿಯಲ್ಲಿ ರಾಹುಲ್ ಮಾತನಾಡಿದ್ದಾರೆ. 'ಭಾರತ ಮಾತೆ ಯಾರು' ಎಂದು ಅವರು ಕೇಳುತ್ತಾರೆ. ಬಳಿಕ, ದೇಶದ ಜನರೆಲ್ಲರೂ ಸೇರಿಯೇ ಭಾರತ ಮಾತೆ ರೂಪುಗೊಳ್ಳುತ್ತಾಳೆ. ಈ ಭೂಮಿಯೇ ಭಾರತ ಮಾತೆ. ಈ ಘೋಷಣೆಗೆ ಪ್ರತಿಧ್ವನಿಯಾಗುವ ಪ್ರತಿಯೊಬ್ಬರು ಸೇರಿಯೇ ಭಾರತ ಮಾತೆ ರೂಪುಗೊಳ್ಳುತ್ತಾಳೆ ಎಂದು ರಾಹುಲ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಗುಂಡಣ್ಣ

ಹಿರಿಯರನ್ನು ಸದಾ ಗೌರವಿಸೋಣ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ರೈತನೊಬ್ಬ ತುಂಬಾ ಮುದುಕನಾಗಿದ್ದ. ಅವನಿಗೆ ಈಗ ಮೊದಲಿನಂತೆ ಹೊಲದಲ್ಲಿ ದುಡಿಯುವುದು ಸಾಧ್ಯವಾಗುತ್ತಿರಲಿಲ್ಲ. ಅವನ ಮಗ ಹೊಲದಲ್ಲಿ ಕೆಲಸ ಮಾಡುವಾಗ ಅಲ್ಲಿಯೇ ಸುಮ್ಮನೆ ನೋಡುತ್ತಾ ಕುಳಿತಿರುತ್ತಿದ್ದ. ಇದನ್ನು ನೋಡಿ ಮಗನಿಗೆ ತುಂಬಾ ಸಿಟ್ಟು ಬರುತ್ತಿತ್ತು 'ಈ ಮುದುಕ ಅಪ್ರಯೋಜಕನಾಗಿಬಿಟ್ಟಿದ್ದಾನೆ' ಎಂದು ದಿನವೂ ಬೈಯುತ್ತಿರುತ್ತಿದ್ದ. ಅವನಿಗೆ ದನಿಗೂಡಿಸುತ್ತಿದ್ದ ಅವನ ಹೆಂಡತಿ ಸಹ ದಿನವೂ 'ಈ ಮುದುಕನಿಗೊಂದು ಗತಿ ಕಾಣಿಸಿ ಬಿಡಿ' ಎಂದು ಹೇಳುತ್ತಿದ್ದಳು.

ಒಂದು ದಿನ ಯುವಕನ ಸಹನೆಯ ಕಟ್ಟೆಯೊಡೆಯಿತು. ಅವನು ಒಂದು ಮರದ ಶವಪೆಟ್ಟಿಗೆಯನ್ನು ಸಿದ್ಧಪಡಿಸಿದ. ಅಪ್ಪನ ಬಳಿ ಹೋಗಿ 'ಇದರೊಳಗೆ ಮಲಗಿಕೋ' ಎಂದು ಆಜ್ಞಾಪಿಸಿದ. ಮರು ಮಾತಾಡದೆ ಮುದುಕ ಅದರೊಳಗೆ ಮಲಗಿಕೊಂಡ. ಮಗ ಶವಪೆಟ್ಟಿಗೆಯನ್ನು ದರದರನೆ ಎಳೆದುಕೊಂಡು ತನ್ನ ಹೊಲದ ಪಕ್ಕದಲ್ಲಿದ್ದ ಬೆಟ್ಟವನ್ನೇರಿದ. ಬೆಟ್ಟದ ನೆತ್ತಿಯಿಂದ ಪೆಟ್ಟಿಗೆ ಸಮೇತ ಅಪ್ಪನನ್ನು ಕೆಳಗೆ ಎಸೆಯುವುದು ಅವನ ಉದ್ದೇಶವಾಗಿತ್ತು. ಇನ್ನೇನು ಆ ಕೆಲಸವನ್ನು ಅವನು ಮಾಡಬೇಕು ಎನ್ನುವಷ್ಟರಲ್ಲಿ ಒಳಗಿದ್ದ ಅಪ್ಪ, ಶವಪೆಟ್ಟಿಗೆ ಮುಚ್ಚಳವನ್ನು ನಿಧಾನವಾಗಿ ಬಡಿಯಲಾರಂಭಿಸಿದ.

ಮುಚ್ಚಳ ತೆಗೆದು ಮಗ ಏನೆಂದು ಕೇಳಿದಾಗ, ಹಾಗೆಯೇ ಅಲ್ಲಿಯೇ ಮಲಗಿದ್ದ ಅಪ್ಪ, ಶಾಂತಚಿತ್ತತೆಯಿಂದಲೇ ಹೀಗೆಂದ 'ಮಗಾ, ಈಗ ನೀನು ನನ್ನನ್ನು ಕೆಳಗೆ ಎಸಿಯುತ್ತಿ ಎಂಬುದು ನನಗೆ ಚೆನ್ನಾಗಿ ಗೊತ್ತು. ಆದರೆ ನನ್ನದೊಂದು ಸಲಹೆ ಇದೆ ಹೇಳಲೇ?' ಎಂದು ಕೇಳಿದ. ಮಗ ಹೇಳು ಅಂದಾಗ ಅಪ್ಪ ಹೀಗೆಂದ 'ಅಪ್ರಯೋಜಕನಾದ ನನ್ನನ್ನು ಮಾತ್ರ ಕೆಳಗೆ ಎಸೆ. ಚೆನ್ನಾಗಿರುವ ಈ ಮರದ ಶವಪೆಟ್ಟಿಗೆಯನ್ನು ಏಕೆ ಎಸೆಯುತ್ತೀ? ಅದು ಮುಂದೆ ನಿನ್ನ ಮಕ್ಕಳ ಉಪಯೋಗಕ್ಕೆ ಬರಬಹುದು' ಎಂದು ಹೇಳಿದ.

ಖ್ಯಾತ ನಾಟಕಕಾರ ಮಾಸ್ಟರ್ ಹಿರಣ್ಣಯ್ಯನವರು ತಮ್ಮ ಜನಪ್ರಿಯ ನಾಟಕ ಒಂದರಲ್ಲಿ ಹೀಗೆನ್ನುತ್ತಿದ್ದರು 'ನಾವು ನಮ್ಮ ಅಪ್ಪ ಅಮ್ಮಂದಿರಿಗೆ ಏನನ್ನು ಮಾಡುತ್ತೇವೋ ಮುಂದೆ ಅದನ್ನೇ ನಮ್ಮ ಮಕ್ಕಳು ನಮಗೆ ಮಾಡುತ್ತಾರೆ' ಎಂದು. ಮನೆಯಲ್ಲಿರುವ ವಯಸ್ಸಾದ ವೃದ್ಧರನ್ನು ನಿಷ್ಪ್ರಯೋಜಕರಂತೆ ಕಾಣುವ ಮಕ್ಕಳು, ಮುಂದೊಂದು ದಿನ ತಮಗೂ ಈ ಸ್ಥಿತಿ ಒದಗಿ ಬರುವುದೆಂದು ಖಂಡಿತ ಆಲೋಚಿಸಬೇಕು. ಬದುಕಿನುದ್ದಕ್ಕೂ ತಮ್ಮ ಸುಖ ಸಂತೋಷಗಳನ್ನು ಬಲಿಕೊಟ್ಟು ಮಕ್ಕಳ ಭವಿಷ್ಯಕ್ಕಾಗಿಯೇ ಹಗಲಿರುಳು ದುಡಿದ ಮಂದಿಯನ್ನು ಅವರ ವೃದ್ಧಾಪ್ಯದಲ್ಲಿ, ಅಸಹಾಯಕರಾಗಿರುವ ಬಾಳಿನ ಸಂಧ್ಯಾ ಸಮಯದಲ್ಲಿ, ಮಕ್ಕಳು ಪ್ರೀತಿ ಗೌರವ, ಸಹಾನುಭೂತಿಗಳಿಂದ ಖಂಡಿತ ನೋಡಬೇಕು. ಜೀವನವೆಂಬ ಚಕ್ರದಲ್ಲಿ ನಮ್ಮ ಹಿರಿಯರಿಗೆ ಬಂದ ಸ್ಥಿತಿ ನಮಗೂ ಬಂದೇ ಬರುತ್ತದೆ ಎಂಬ ಅರಿವು ನಮ್ಮಲ್ಲಿ ಇರಲೇಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪೂರ್ಣಿಮಾ ಗಂ. 14-46 ನಕ್ಷತ್ರ: ಕೃತ್ತಿಕಾ ಗಂ. 13-36 ಯೋಗ: ಶಿವ ಗಂ 23-38 ಕರಣ: ಬವ ಗಂ 14-46, ವೃಶ್ಚಿಕ ಮಾಸದ 11 ನೇ ದಿನ, ಮಳೆನಕ್ಷತ್ರ: ಅನುರಾಧ 3.
ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-39 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 12 ಜುಮಾದುಲ್ಲಾವಲ್ ದಿನ ವಿಶೇಷ : ಗುರುನಾನಕ್ ಜಯಂತಿ, ಪುಷ್ಕರ ಉತ್ಸವ, ಹುತ್ತರಿ - 3
ದಿನ ಅದೃಷ್ಟ ಸಂಖ್ಯೆ : 2, 8

ಮೇಷ: ಯಾವುದೇ ಆತುರ ಮತ್ತು ಗಾಬರಿಗೊಳ್ಳದೆ ನಿಮ್ಮ ಪರಿಸ್ಥಿತಿಯನ್ನು ಮೇಲಧಿಕಾರಿಗೆ ಸ್ಪಷ್ಟವಾಗಿ ತೆರೆದಿಡಿ. ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಲಭಿಸಲಿದೆ.

ವೃಷಭ: ಇನ್ನೊಬ್ಬರ ತಪ್ಪಿಗೆ ನೀವು ಹೊಣೆಗಾರರಾಗಲಿದ್ದೀರಿ. ಆ ತಪ್ಪನ್ನು ನೀವು ಸರಿಪಡಿಸಬೇಕಾಗುವುದು. ಬಣ್ಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಅಧಿಕವಾಗಲಿದೆ. ಹಾಲು ಮಾರಾಟಗಾರರಿಗೆ ಲಾಭ ಬರುವುದು.

ಮಿಥುನ: ಕೈಗಾರಿಕೋದ್ಯಮಿಗಳಿಗೆ ವೃತ್ತಿಯಲ್ಲಿ ನಾಯಕತ್ವ ಹೊಂದುವ ಅವಕಾಶ ಪಡೆಯುವಿರಿ. ನಿಮ್ಮ ಮನಸ್ಸಿನ ಮಾತಿಗೆ ಬೆಲೆ ಕೊಡುವುದು ಈ ದಿನ ಬಹಳ ಮುಖ್ಯ. ಔಷಧಿ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಹಣಕಾಸಿನ ವಿಷಯದಲ್ಲಿ ತೊಂದರೆಗಳು ಎದುರಾಗಬಹುದು. ನಿಮ್ಮ ಸಂಗಾತಿಯೊಂದಿಗೆ ಮರೆಯಲಾಗದ ಘಟನೆ ನಡೆಯಲಿದೆ. ಸ್ನೇಹಿತರಿಂದ ದೂರ ಉಳಿಯುವ ಅನಿವಾರ್ಯತೆ ಬರಲಿದೆ.

ಸಿಂಹ: ನೆರೆಹೊರೆಯವರೊಂದಿಗಿನ ಸಂಬಂಧಗಳು ಉತ್ತಮಗೊಳ್ಳುವುದು. ನೀವು ಆಡಿದ ರಾಜಕಾರಣದ ರಹಸ್ಯ ಮಾತುಕತೆ ಬಹಿರಂಗವಾಗಿ ತೊಂದರೆ ಎದುರಾಗಬಹುದು. ಅಗ್ನಿಯಿಂದ ಅಪಾಯವಾಗುವ ಭೀತಿ ಇದೆ.

ಕನ್ಯಾ: ಕೃಷಿಗೆ ಸಂಬಂಧಿಸಿದ ಯಂತ್ರಗಳು ಅಥವಾ ವಾಹನ ಖರೀದಿಸಬಹುದು. ಈ ದಿನ ನಿಮ್ಮ ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಪುಣ್ಯಕ್ಷೇತ್ರ ದರ್ಶನದಿಂದ ನೆಮ್ಮದಿ ಇರಲಿದೆ.

ತುಲಾ: ಕಿರುತೆರೆ ಮತ್ತು ಸಿನೆಮಾ ಕಲಾವಿದರಿಗೆ ವಿಶೇಷ ಮಾನ್ಯತೆ ದೊರೆಯಲಿದೆ. ನೂತನ ದಂಪತಿಗಳಿಗೆ ಸಂಸಾರದಲ್ಲಿ ಸಂತೋಷದ ಅನುಭವ ಸಿಗಲಿದೆ. ನಿಮ್ಮ ಬದುಕಿಗೆ ಹಿರಿಯರಿಂದ ಆಶೀರ್ವಾದ ಸಿಗಲಿದೆ.

ವೃಶ್ಚಿಕ: ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ನಡೆದುಕೊಳ್ಳುವುದರಿಂದ ನಿಮಗೇ ಅನುಕೂಲ. ಗಣ್ಯವ್ಯಕ್ತಿಯ ಭೇಟಿಯಿಂದ ಅನುಕೂಲವಾಗಲಿದೆ. ದಾಖಲೆಗಳ ಹುಡುಕಾಟದಲ್ಲಿ ಸಮಯ ವ್ಯಯವಾಗುವುದು.

ಧನು: ಬ್ಯಾಂಕ್ ಉನ್ನತ ಅಧಿಕಾರಿಗಳಿಗೆ ಹೊರ ರಾಜ್ಯಗಳಿಗೆ ವರ್ಗಾವಣೆಯಾಗುವ ಸಾಧ್ಯತೆ ಇದೆ. ಈ ದಿನ ನಿಮ್ಮ ಬಾಲ್ಯದ ಕನಸು ಈಡೇರಲಿದೆ. ರೇಷ್ಮೆ ವಸ್ತುಗಳ ಮಾರಾಟದಿಂದ ಅಧಿಕ ಲಾಭ ಪಡೆಯುವಿರಿ.

ಮಕರ: ಉತ್ತಮವಾದ ವಾಕ್ ಸಾಮರ್ಥ್ಯ ಹೊಂದಿರುವ ನಿಮಗೆ ಜನರ ಮನಸ್ಸಿನಲ್ಲಿ ಸ್ಥಾನ ಪಡೆಯುವುದು ಕಷ್ಟದ ವಿಚಾರವೇನಲ್ಲ. ಆಹಾರ ವ್ಯತ್ಯಾಸದಿಂದ ಪಿತ್ತೋದ್ರೇಕ ಸಂಬಂಧಿ ಅನಾರೋಗ್ಯ ಎದುರಾಗಲಿದೆ.

ಕುಂಭ: ಹಣವಂತರ ಸಹಾಯ ಹಸ್ತ ನಿಮ್ಮ ಮೇಲಿದೆ. ಆದ್ದರಿಂದ ಮನೆಯ ಮಂಗಳ ಕಾರ್ಯಗಳಿಗೆ ಹೆದರುವ ಅಗತ್ಯವಿಲ್ಲ. ನಿಮ್ಮ ಉತ್ಸಾಹ ಹೆಚ್ಚಿಸಿಕೊಳ್ಳುವ ಸಮಯವಿದು. ಮನೆಯಲ್ಲಿ ವಿವಾಹ ಸಿದ್ಧತೆಗಳು ಭರದಿಂದ ಸಾಗಲಿದೆ.

ಮೀನ: ಕಾನೂನಿನ ವ್ಯವಹಾರ ಶೀಘ್ರದಲ್ಲಿ ಇತ್ಯರ್ಥವಾಗದ ಸಮಸ್ಯೆಯಾಗಿದೆ. ಇಂದು ಯಾರಿಗೂ ವಿಶ್ವಾಸದಲ್ಲಿ ಸಾಲದ ರೂಪ ಹಣ ನೀಡುವುದು ಸರಿಯಲ್ಲ. ಅನಗತ್ಯ ವಿಷಯಗಳತ್ತ ಗಮನಹರಿಸುವುದು ಬೇಡ.

ಪದಬಂಧ 5512 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಶ್ರೇಷ್ಠವಾದ ನೆಲೆ (4)
3. ಇತರರಿಗೆ ವಹಿಸಿಕೊಡುವುದು (4)
5. ಮೌನವನ್ನು ಹೀಗೆನ್ನಿ (3)
6. ಬೇರೆಯ ದೇಹವಿದು (4)
8. ಶುಕ್ರವಾರದ ಮರುದಿನ (4)
10. ನಗರದಲ್ಲಿನ ಸುಸಂಸ್ಕೃತ (4)
12. ಕತ್ತು ಬಗ್ಗಿಸಿ ಹಾಕಿದ ಸಹಿ (4)
13. ಬೆಳ್ಳುಳ್ಳಿಯಿದು (3)
16. ಕನ್ನಡಿಗನಿರುವ ಎಕ್ಸ್ಟ್ರಿಯನ್ಸ್! (4)
17. ಪಾಲುದಾರ ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ
1. ಅತ್ತೆ ಹೇಳಿದ ವಿಳಾಸ ಇಲ್ಲಿದೆ (2)
2. ಗೌರವಕ್ಕೆ ಪಾತ್ರನಾದವನು (4)
3. ಅನ್ಯರ ಅಧೀನದಲ್ಲಿರುವಿಕೆ (4)
4. ಕಣ್ಣಿನ ಎವೆ (2)
7. ತಿರುಗಿದಾಗ ಕಾಣಿಸಿದ ಚರಂಡಿ (3)
9. ವಾದ್ಯವನ್ನು ನುಡಿಸುವವನು (3)
11. ಮಧುರವಾದ ಧ್ವನಿಯಿದು (4)
12. ಈತ ದನ ಕಾಯುವವನು (4)
14. ಮಾವನ ಹೆಂಡತಿ ತಿರುಗಿದ್ದಾಳಲ್ಲಾ! (2)
15. ತೀರಾ ದೂರದಲ್ಲಿರುವ ದಡ! (2)

1			2	■	3			4
	■	■		■		■	■	
■	■	■	5			■	■	■
6	7			■	8		9	
■		■	■	■	■	■		■
10			11	■	12			
■	■	■	13			■	■	■
14	■	■		■		■	■	15
16				■	17			

5511 ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಲೋಹಚುಂಬಕ 3.ಗಡಸು 5.ಪವನಸುತ 7.ವಿಮಾನ 8.ಆದಿತ್ಯವಾರ 10.ಕದನ 11.ಮೂಕರೋದನೆ 14.ಠರಾವು 15. ರಾವುಕನ್ನಡಿ

ಮೇಲಿನಿಂದ ಕೆಳಕ್ಕೆ
1.ಲೋಲುಪ 2.ಚುಂಬನ 4.ಸುದಿನ 6.ಸುರದಿ 7.ವಿಧುರ 8.ಆನನ 9.ವಾಚಕ 10.ಕರ್ಮಠ 12.ರೋಚಕ 13.ನೆಗಡಿ

ಸುಡೊಕು 5898

	6				7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5897 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಉಕ್ಕು ಉತ್ಪಾದನೆ 21 ಕೋಟಿ ಟನ್‌ಗೆ ಹೆಚ್ಚಳ: ಸ್ಟೀಲ್‌ಮಿಂಟ್

2030ಕ್ಕೆ ದೇಶದ ಉಕ್ಕು ಬೇಡಿಕೆ 19 ಕೋಟಿ ಟನ್‌ಗೆ ಏರಿಕೆ

ನವದೆಹಲಿ (ಪಿಟಿಐ): ಭಾರತದ ಉಕ್ಕು ಬೇಡಿಕೆ, ವಾರ್ಷಿಕ ಸಂಯುಕ್ತ ಬೆಳವಣಿಗೆ ದರದ (ಸಿಎಜಿಆರ್) ಪ್ರಕಾರ 2030ರ ವೇಳೆಗೆ ಶೇ 7ರಷ್ಟು ಏರಿಕೆಯಾಗಿ, 19 ಕೋಟಿ ಟನ್‌ಗೆ ಬೆಳೆಯುವ ನಿರೀಕ್ಷೆ ಇದೆ ಎಂದು ಸ್ಟೀಲ್‌ಮಿಂಟ್ ಇಂಡಿಯಾ ಸಂಸ್ಥೆ ವರದಿ ತಿಳಿಸಿದೆ.

ನಿರ್ಮಾಣ ಮತ್ತು ಮೂಲಸೌಕರ್ಯ ವಲಯಗಳು ಬೇಡಿಕೆ ಹೆಚ್ಚಳಕ್ಕೆ ಶೇ 60–65ರಷ್ಟು ಕೊಡುಗೆ ನೀಡುತ್ತಿವೆ ಎಂದು ವರದಿ ತಿಳಿಸಿದೆ.

2030ರಲ್ಲಿ ಭಾರತದ ಉಕ್ಕಿನ ಬೇಡಿಕೆಯು ವಾರ್ಷಿಕ ಶೇ 7ರಷ್ಟು ಸಿಎಜಿಆರ್ ಆಧಾರದ ಮೇಲೆ 19 ಕೋಟಿ ಟನ್‌ಗೆ ತಲುಪುತ್ತದೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಇದು 2030ರ ವೇಳೆಗೆ 23 ಕೋಟಿ ಟನ್‌ಗೆ ತಲುಪಬಹುದು ಎಂದು 'ಭಾರತದ ಉಕ್ಕು ಮತ್ತು ಕೋಕಿಂಗ್ ಕಲ್ಲಿದ್ದಲು ಬೇಡಿಕೆ 2030' ವರದಿ ಹೇಳಿದೆ.

ಆಟೊ ಮತ್ತು ಎಂಜಿನಿಯರಿಂಗ್ ವಲಯವು ಬೇಡಿಕೆಯನ್ನು ಹೆಚ್ಚಿಸುತ್ತಿವೆ. ಜನಸಂಖ್ಯೆ ಹೆಚ್ಚಳ, ನಗರೀಕರಣದ ಬೆಳವಣಿಗೆ, ಸರ್ಕಾರದ ಉಪಕ್ರಮಗಳು ಪ್ರಮುಖವಾಗಿ ಬೇಡಿಕೆ ಹೆಚ್ಚಲು ಕಾರಣವಾದ ಅಂಶಗಳಾಗಿವೆ. 2023ರ ಅಂತ್ಯದ ವೇಳೆಗೆ ಬೇಡಿಕೆ 12 ಕೋಟಿ ಟನ್ ತಲುಪುವ ನಿರೀಕ್ಷೆಯಿದೆ ಮತ್ತು ಉತ್ಪಾದನೆ 13.6 ಕೋಟಿ ಟನ್ ಆಗಲಿದೆ ಎಂದು ತಿಳಿಸಿದೆ.

2030ರ ವೇಳೆಗೆ ಭಾರತದ ಕಚ್ಚಾ ಉಕ್ಕು ಉತ್ಪಾದನೆ 21 ಕೋಟಿ ಟನ್ ಆಗುವ ನಿರೀಕ್ಷೆಯಿದ್ದು, ಇದು 2023ರ ಉತ್ಪಾದನಾ ಮಟ್ಟಕ್ಕಿಂತ ಶೇ 45ರಷ್ಟು ಹೆಚ್ಚಾಗಿದೆ. ಚೀನಾ ಸೇರಿದಂತೆ ಹಲವು ದೇಶಗಳು ತಮ್ಮ ಪ್ರಸ್ತುತ ಉಕ್ಕು ಉತ್ಪಾದನಾ ಮಟ್ಟಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಇಳಿಕೆಯನ್ನು ತೋರಿಸುತ್ತವೆ ಎಂದು ಹೇಳಿದೆ.

ಮುಂಬರುವ ದಿನಗಳಲ್ಲಿ ಭಾರತವು ಸಮುದ್ರ ಮಾರ್ಗದ ಮೂಲಕ ಸಾಗಿಸುವ ಕಲ್ಲಿದ್ದಲಿನ ಅತಿದೊಡ್ಡ ಆಮದುದಾರನಾಗಿ ಹೊರಹೊಮ್ಮಲಿದೆ, ಇದು ಮಾರುಕಟ್ಟೆಯ ಶೇ 30ರಷ್ಟು ಪಾಲನ್ನು ಹೊಂದಲಿದೆ. 2030ರ ವೇಳೆಗೆ ದೇಶಕ್ಕೆ 35 ಕೋಟಿ ಟನ್ ಕಬ್ಬಿಣದ ಅದಿರು ಅಗತ್ಯವಿರುತ್ತದೆ. 2030ರ ವರ್ಷವು ದೇಶೀಯ ಉಕ್ಕು ಉದ್ಯಮಕ್ಕೆ ಮಹತ್ವದ್ದಾಗಿದ್ದು, ಈ ವೇಳೆಗೆ ಸರ್ಕಾರವು ಭಾರತದ ಸ್ಥಾಪಿತ ಉಕ್ಕು ತಯಾರಿಕೆ ಸಾಮರ್ಥ್ಯವನ್ನು 30 ಕೋಟಿ ಟನ್‌ಗೆ ಹೆಚ್ಚಿಸುವ ಮಹತ್ವಾಕಾಂಕ್ಷೆಯ ಗುರಿ ಹೊಂದಿದೆ ಎಂದು ವರದಿ ಹೇಳಿದೆ.

'ದೇಶದ ಬಾಹ್ಯಾಕಾಶದ ಆರ್ಥಿಕತೆ ₹33 ಸಾವಿರ ಕೋಟಿಗೆ ತಲುಪಲಿದೆ'

ತಿರುವನಂತಪುರಂ (ಪಿಟಿಐ): ಭಾರತದ ಬಾಹ್ಯಾಕಾಶ ಆರ್ಥಿಕತೆ 2040ರ ವೇಳೆಗೆ ₹33 ಸಾವಿರ ಕೋಟಿಗೆ ತಲುಪಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಹೇಳಿದರು.

2040ರ ವೇಳೆಗೆ ₹85 ಸಾವಿರ ಕೋಟಿಗೆ ಏರಬಹುದು ಎಂದು ಎಡಿಯಂತಹ ಕೆಲವು ವಿದೇಶಿ ಸಂಸ್ಥೆಗಳು ಭವಿಷ್ಯ ನುಡಿದಿವೆ. ಪ್ರಸ್ತುತ ನಮ್ಮ ಬಾಹ್ಯಾಕಾಶ ಆರ್ಥಿಕತೆಯು ಉತ್ತೇಜನಕಾರಿಯಾಗಿಲ್ಲ. ಆದರೂ ಅಭಿವೃದ್ಧಿಯಲ್ಲಿ ವೇಗ ಸಾಧಿಸಿದ್ದೇವೆ. ಯುರೋಪ್‌ನ ಉಪಗ್ರಹಗಳ ಉಡಾವಣೆಯಿಂದ ₹21 ಸಾವಿರ ಕೋಟಿ ಹಾಗೂ ಅಮೆರಿಕ ಉಪಗ್ರಹಗಳ ಉಡಾವಣೆಯಿಂದ ₹15 ಸಾವಿರ ಕೋಟಿವರೆಗೆ ಗಳಿಸಿದ್ದೇವೆ ಎಂದರು.

ಅಮೆರಿಕದಂತೆ ಭಾರತದಲ್ಲಿ ಸ್ಥಾಪಿಸಿರುವ ಅನುಸಂಧಾನ್ ರಾಷ್ಟ್ರೀಯ ಸಂಶೋಧನಾ ಫೌಂಡೇಷನ್‌ನಂತಹ ಸಂಸ್ಥೆಗಳಿಂದ ಬಾಹ್ಯಾಕಾಶ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಇಂತಹ ಕ್ರಮಗಳಿಂದ ನಮ್ಮ ಬಾಹ್ಯಾಕಾಶ ಕ್ಷೇತ್ರಕ್ಕೆ ಶೇ 70ರಷ್ಟು ಸರ್ಕಾರೇತರ ಅನುದಾನ ಬರಲಿದೆ ಎಂದು ಸಚಿವರು ಹೇಳಿದರು.

ಹಡಗು ಮುಳುಗಡೆ: ಭಾರತೀಯರೂ ಸೇರಿ 13 ಮಂದಿ ನಾಪತ್ತೆ

ಅಥೇನ್ಸ್ (ರಾಯಿಟರ್ಸ್): ಉಪ್ಪು ಸಾಗಿಸುತ್ತಿದ್ದ ಹಡಗೊಂದು ಭಾನುವಾರ ಗ್ರೀಸ್‌ನ ಲೆಸ್‌ಬೋಸ್ ದ್ವೀಪದ ಬಳಿ ಮುಳುಗಡೆಯಾಗಿದೆ. ಅದರಲ್ಲಿದ್ದ 14 ಸಿಬ್ಬಂದಿಯ ಪೈಕಿ ಒಬ್ಬರನ್ನು ಹೊರತುಪಡಿಸಿ ಇನ್ನೆಲ್ಲರೂ ಕಾಣೆಯಾಗಿದ್ದಾರೆ ಎಂದು ಗ್ರೀಸ್‌ನ ಕರಾವಳಿ ಕಾವಲುಪಡೆ ಹೇಳಿದೆ.

ಸಿಬ್ಬಂದಿ ಪೈಕಿ 8 ಮಂದಿ ಈಜಿಪ್ಟ್‌ನವರಾದರೆ, ಮಿಕ್ಕವರು ಸಿರಿಯಾ, ಭಾರತೀಯರಾಗಿದ್ದರು ಎಂದು ಹೇಳಲಾಗಿದೆ.

'ರ್‍ಯಾಪ್ಟರ್' ಹೆಸರಿನ ಈ ಹಡಗು ಈಜಿಪ್ಟ್‌ನ ಎಲ್ ದೆಖೈಲಾ ಬಂದರಿನಿಂದ ಇಸ್ತಾಂಬುಲ್‌ಗೆ ಯಾನ ಕೈಗೊಂಡಿತ್ತು. ಈ ವೇಳೆ ತಾಂತ್ರಿಕ ತೊಂದರೆ ಉಂಟಾದ ಬಗ್ಗೆ ಹಡಗಿನ ಸಿಬ್ಬಂದಿ ಹೇಳಿದ್ದರು. ನಂತರ, ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿರುವುದಾಗಿ ಹೇಳಿದ್ದಾಗಿಯೂ ಕಾವಲುಪಡೆ ತಿಳಿಸಿದೆ. ಒಬ್ಬ ಸಿಬ್ಬಂದಿಯನ್ನು ರಕ್ಷಿಸಿದ್ದೇವೆ ಎಂದು ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹285-463
ದ್ವಿತಳಿ (ಬಿ.ವಿ)	₹300-608

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹550

ಚಿನ್ನದ ಮೇಲಿನ ಹೂಡಿಕೆ ಎಲ್ಲಿ ಮಾಡಬೇಕು?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ನಮ್ಮ ಬಳಿ ಹೂಡಿಕೆಗೆ ನೂರು ರೂಪಾಯಿ ಇದೆ ಎಂದಾದರೆ ಅದರಲ್ಲಿ ಹತ್ತರಿಂದ ಹನ್ನೆರಡು ರೂಪಾಯಿಯನ್ನು ಚಿನ್ನದ ಮೇಲೆ ತೊಡಗಿಸಬೇಕು ಎನ್ನುವುದು ಒಂದು ಲೆಕ್ಕಾಚಾರ. ನಮ್ಮ ಪೂರ್ವಜರಿಗೆ ಚಿನ್ನದ ಮೇಲಿನ ಹೂಡಿಕೆಗೆ ವಿವಿಧ ಆಯ್ಕೆಗಳಿರಲಿಲ್ಲ. ಹಾಗಾಗಿ ಅವರು ಚಿನ್ನವನ್ನು ನಾಣ್ಯ, ಗಟ್ಟಿ, ಆಭರಣಗಳ ರೂಪದಲ್ಲಿ ಖರೀದಿಸುತ್ತಿದ್ದರು. ಹೊಸ ತಲೆಮಾರಿನವರಿಗೆ ಚಿನ್ನದ ಮೇಲಿನ ಹೂಡಿಕೆಗೆ ಹಲವು ಅಯ್ಕೆಗಳಿವೆ. ಸಾವರಿನ್ ಗೋಲ್ಡ್ ಬಾಂಡ್, ಗೋಲ್ಡ್ ಮ್ಯೂಚುಯಲ್ ಫಂಡ್, ಗೋಲ್ಡ್ ಇಟಿಎಫ್, ಡಿಜಿಟಲ್ ಗೋಲ್ಡ್ ಮತ್ತು ಘನ ರೂಪದ ಚಿನ್ನದ ಮೇಲೆ ಹೂಡಿಕೆದಾರರು ಹಣ ತೊಡಗಿಸಬಹುದಾಗಿದೆ. ಇಷ್ಟೆಲ್ಲಾ ಆಯ್ಕೆಗಳಿರುವಾಗ ನಿಮಗೆ ಸಹಜವಾಗೇ ಯಾವುದರಲ್ಲಿ ಹೂಡಿಕೆ ಮಾಡಿದರೆ ಸೂಕ್ತ ಎನ್ನುವ ಪ್ರಶ್ನೆ ಎದುರಾಗುತ್ತದೆ. ಈ ಲೇಖನದಲ್ಲಿ ನಾವು ಸಾವರಿನ್ ಗೋಲ್ಡ್ ಬಾಂಡ್, ಗೋಲ್ಡ್ ಇಟಿಎಫ್ ಮತ್ತು ಘನ ಚಿನ್ನ ಖರೀದಿಯ ಸಾಧಕ – ಬಾಧಕಗಳ ಬಗ್ಗೆ ವಿವರವಾಗಿ ತಿಳಿಯೋಣ.

ಚಿನ್ನದ ಮೇಲೆ ಯಾಕೆ ಹೂಡಿಕೆ ಮಾಡಬೇಕು: ಯಾವೆಲ್ಲಾ ಸಂದರ್ಭಗಳಲ್ಲಿ ಹಣದುಬ್ಬರ (ಬೆಲೆ ಏರಿಕೆ) ಜಾಸ್ತಿಯಾಗುತ್ತಾ ಸಾಗಿದೆಯೋ ಆಗೆಲ್ಲಾ ಚಿನ್ನದ ಬೆಲೆಯೂ ಏರುಗತಿಯಲ್ಲೇ ಸಾಗಿದೆ. ಇನ್ನು ಷೇರು ಮಾರುಕಟ್ಟೆ ಕುಸಿತದ ಹಾದಿಯಲ್ಲಿರುವಾಗ ಚಿನ್ನದ ಮೇಲಿನ ಹೂಡಿಕೆ ಪುಟಿದೇಳುತ್ತಾ ಹೋಗುತ್ತದೆ. 1992 ರ ಆರ್ಥಿಕ ಬಿಕ್ಕಟ್ಟಿರಬಹುದು (ಕರೆನ್ಸಿ ಕ್ರೈಸಿಸ್), 2008 ರ ಜಾಗತಿಕ ಆರ್ಥಿಕ ಕುಸಿತವಿರಬಹುದು, 2002 ರ ಡಾಟ್ ಕಾಂ ಬಬಲ್ ಇರಬಹುದು ಅಥವಾ 2020 ರ ಕೋವಿಡ್ ಸ್ಥಿತಿ ಇರಬಹುದು ಅಥವಾ ಸದ್ಯದ ರಷ್ಯಾ– ಉಕ್ರೇನ್ ಯುದ್ಧವಿರಬಹುದು. ಈ ಎಲ್ಲಾ ಸಂದರ್ಭಗಳಲ್ಲೂ ಬಂಗಾರದ ಮೇಲಿನ ಹೂಡಿಕೆ ಹೆಚ್ಚು ಸ್ಥಿರ ಎನಿಸಿಕೊಂಡಿದೆ. ದೀರ್ಘಾವಧಿಯಲ್ಲಿ ಚಿನ್ನದ ಮೇಲಿನ ಹೂಡಿಕೆ ಉತ್ತಮ ಲಾಭಾಂಶವನ್ನೂ ತಂದುಕೊಟ್ಟಿದೆ. ಕಳೆದ 9 ವರ್ಷಗಳ ಅವಧಿಯಲ್ಲಿ ಚಿನ್ನದ ಮೇಲಿನ ಹೂಡಿಕೆ ಸರಾಸರಿ ಶೇ 9.6 ರಷ್ಟು ಗಳಿಕೆ ತಂದುಕೊಟ್ಟಿದೆ.

ಘನ ಚಿನ್ನ, ಗೋಲ್ಡ್ ಇಟಿಎಫ್ ಮತ್ತು ಸಾವರಿನ್ ಗೋಲ್ಡ್ ಬಾಂಡ್ ಪರಿಚಯ: ಆಭರಣ ಖರೀದಿ, ಗೋಲ್ಡ್ ಕಾಯಿನ್ ಖರೀದಿ, ಗೋಲ್ಡ್ ಬಿಸ್ಕಿಟ್ ಖರೀದಿ ಇವೆಲ್ಲವೂ ಘನ ರೂಪದ ಚಿನ್ನದ ಖರೀದಿಗಳಾಗುತ್ತವೆ. ಇನ್ನು ಗೋಲ್ಡ್ ಇಟಿಎಫ್, ಕಾಮಾಡಿಟಿ ಅಧಾರಿತ ಮ್ಯೂಚುಯಲ್ ಫಂಡ್ ಆಗಿದ್ದು ಇಲ್ಲಿ ಚಿನ್ನದ ಮೇಲೆ ಹೂಡಿಕೆ ಮಾಡಲಾಗುತ್ತದೆ. ಷೇರುಪೇಟೆಯಲ್ಲಿ ಲಿಸ್ಟ್ ಆಗಿರುವ ಇಟಿಎಫ್‌ಗಳ ಮೂಲಕವೂ ಚಿನ್ನದ ಮೇಲೆ ಹೂಡಿಕೆ ಮಾಡಬಹುದು. ಆದರೆ ಈ ಹೂಡಿಕೆ ಮಾಡಲು ನಿಮ್ಮ ಬಳಿ ಡಿ-ಮ್ಯಾಟ್ ಖಾತೆ ಇರಬೇಕು. ಚಿನ್ನದ ಮೌಲ್ಯ ಹೆಚ್ಚಾದಂತೆ ಗೋಲ್ಡ್ ಇಟಿಎಫ್ ಮೌಲ್ಯ ವೃದ್ಧಿಸುತ್ತದೆ. ಬಂಗಾರದ ಮೌಲ್ಯ ಕುಸಿದಂತೆ ಇಟಿಎ ಮೌಲ್ಯವೂ ಇಳಿಕೆ ಕಾಣುತ್ತದೆ. ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ ಭಾರತೀಯ ರಿಸರ್ವ ಬ್ಯಾಂಕ್ (ಆರ್‌ಬಿಐ) ನೀಡುವ ಬಾಂಡ್‌ಗಳನ್ನು ಸಾವರಿನ್ ಗೋಲ್ಡ್ ಬಾಂಡ್ ಎನ್ನುತ್ತಾರೆ. ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಸರ್ಕಾರದ ಪರವಾಗಿ ಆರ್‌ಬಿಐ ವಿತರಿಸುತ್ತದೆ.

ಕನಿಷ್ಠ ಹೂಡಿಕೆ: ಘನ ರೂಪದ ಚಿನ್ನ ಅಂದ್ರೆ ಚಿನ್ನದ ನಾಣ್ಯ, ಬಿಸ್ಕಿಟ್ ಅಥವಾ ಆಭರಣದ ಖರೀದಿಗೆ ಯಾವುದೇ ಮಿತಿ ಇಲ್ಲ. ನಿಮ್ಮ ಅಗತ್ಯಕ್ಕೆ ತಕ್ಕಂತೆ ಅದನ್ನು ಖರೀದಿಸಬಹುದು. ಗೋಲ್ಡ್ ಇಟಿಎಫ್‌ಗಳನ್ನು ಒಂದು ಯುನಿಟ್ ಲೆಕ್ಕದಲ್ಲಿ ಖರೀದಿಸಬಹುದು. 1 ಗೋಲ್ಡ್ ಇಟಿಎಫ್‌ನ ಯುನಿಟ್ ಸಾಮಾನ್ಯವಾಗಿ 0.01 ಗ್ರಾಂ ಚಿನ್ನಕ್ಕೆ ಸಮ. ಇನ್ನು ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಗ್ರಾಂಗಳ ಲೆಕ್ಕದಲ್ಲಿ ಖರೀದಿಸಬಹುದು. ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಒಂದು ವರ್ಷದಲ್ಲಿ ಗರಿಷ್ಠ 4 ಕೆ.ಜಿ. ಮಾತ್ರ ಖರೀದಿಸಬಹುದಾಗಿದೆ.

ಹೂಡಿಕೆ ರಿಸ್ಕ್: ಘನ ರೂಪದ ಚಿನ್ನ ಇಟ್ಟುಕೊಳ್ಳುವಾಗ ರಿಸ್ಕ್ ಜಾಸ್ತಿ ಇರುತ್ತದೆ. ಚಿನ್ನದ ಕಳ್ಳತನ, ಗುಣಮಟ್ಟ ಖಾತರಿ, ಮೇಕಿಂಗ್ ಚಾರ್ಜಸ್‌ನ ಹೊರೆ ಘನ ರೂಪದ ಬಂಗಾರದ ಮೇಲಿರುತ್ತದೆ. ಗೋಲ್ಡ್ ಇಟಿಎಫ್ ಖರೀದಿಸುವಾಗ ನೀವು ಗುಣಮಟ್ಟದ ತಲೆನೋವಿಲ್ಲದೆ ಡಿಜಿಟಲ್ ರೂಪದಲ್ಲಿ ಚಿನ್ನ ಖರೀದಿಸುತ್ತೀರಿ. ಗೋಲ್ಡ್ ಇಟಿಎಫ್ ಗಳನ್ನು ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಿಯಂತ್ರಿಸುವುದರಿಂದ ಇದರಲ್ಲಿ ಘನ ರೂಪದ ಚಿನ್ನಕ್ಕಿಂತ ಕಡಿಮೆ ರಿಸ್ಕ್ ಇರುತ್ತದೆ. ಇನ್ನು ಸಾವರಿನ್ ಗೋಲ್ಡ್ ಬಾಂಡ್ ಹೂಡಿಕೆಯಲ್ಲಿ ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ, ಆರ್‌ಬಿಐ ಗೋಲ್ಡ್ ಬಾಂಡ್ ಗಳನ್ನು ವಿತರಿಸುತ್ತದೆ. ಕೇಂದ್ರ ಸರ್ಕಾರದ ಪರವಾಗಿ ಆರ್‌ಬಿಐ ಇಲ್ಲಿ ಬಾಂಡ್ ಗಳನ್ನು ವಿತರಿಸುವುದರಿಂದ ರಿಸ್ಕ್ ಇರುವುದಿಲ್ಲ.

ವೆಚ್ಚ: ಘನರೂಪದ ಚಿನ್ನ ಖರೀದಿಸಿದಾಗ ಮೇಕಿಂಗ್ ಚಾರ್ಜಸ್, ವೇಸ್ಟೇಜ್ ಜಾರ್ಜಸ್, ಜಿಎಸ್‌ಟಿ, ಬ್ಯಾಂಕ್ ಲಾಕರ್ ವೆಚ್ಚ ಸೇರಿ ಅನೇಕ ಖರ್ಚುಗಳು ಬರುತ್ತವೆ. ಗೋಲ್ಡ್ ಇಟಿಎಫ್ ಖರೀದಿಸುವಾಗ ಬ್ರೋಕರೇಜ್ ಶುಲ್ಕ ಮತ್ತು ಇಟಿಎಫ್ ನಿರ್ವಹಣಾ ಶುಲ್ಕ (ಎಕ್ಸ್ ಪೆನ್ಸ್ ರೇಶಿಯೊ) ಶೇ 0.5 ರಿಂದ ಶೇ 1 ರ ವರೆಗೆ ಇರುತ್ತದೆ. ಆದರೆ ಸಾವರಿನ್ ಗೋಲ್ಡ್ ಬಾಂಡ್ ಖರೀದಿಗೆ ಯಾವುದೇ ವೆಚ್ಚ ಇರುವುದಿಲ್ಲ. ಅಲ್ಲದೆ ಆನ್‌ಲೈನ್ ಮೂಲಕ ಖರೀದಿಸಿದರೆ ಕೊಂಚ ರಿಯಾಯಿತಿ ಕೂಡ ಸಿಗುತ್ತದೆ.

ಹೂಡಿಕೆ ಮೇಲಿನ ಗಳಿಕೆ: ಉದಾಹರಣೆಗೆ ಚಿನ್ನದ ಮೇಲಿನ ಹೂಡಿಕೆಯ ವಾರ್ಷಿಕ ಗಳಿಕೆ ಸರಾಸರಿ ಶೇ 10ರಷ್ಟಿದೆ ಎಂದುಕೊಳ್ಳೋಣ. ಘನ ರೂಪದ ಚಿನ್ನ ಖರೀದಿಸಿದಾಗ ಶೇ 25 ರಿಂದ ಶೇ 35 ರಷ್ಟು ಹಣ ಮೇಕಿಂಗ್ ಚಾರ್ಜಸ್, ಜಿಎಸ್‌ಟಿ ಮತ್ತು ಲಾಕರ್ ನಿರ್ವಹಣೆ ವೆಚ್ಚದಲ್ಲೇ ಹೋಗುವುದರಿಂದ ಘನ ರೂಪದ ಚಿನ್ನದ ವಾರ್ಷಿಕ ಸರಾಸರಿ ಗಳಿಕೆ ಶೇ 6 ರಷ್ಟು ಎಂದುಕೊಳ್ಳಬಹುದು. ಇನ್ನು ಗೋಲ್ಡ್ ಇಟಿಎಫ್‌ನಲ್ಲಿ ನಿರ್ವಹಣಾ ವೆಚ್ಚ ಶೇ 1 ರಷ್ಟು ಕಳೆದಾಗ ಶೇ 9 ರಷ್ಟು ಲಾಭಾಂಶ ಸಿಗುತ್ತದೆ. ಆದರೆ ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಯಾವುದೇ ವೆಚ್ಚವಿರದ ಕಾರಣ ಹೆಚ್ಚು ಲಾಭ ಸಿಗುತ್ತದೆ. ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಶೇ 10 ರಷ್ಟು ಮೌಲ್ಯ ವೃದ್ಧಿ ಲಾಭದ ಜೊತೆಗೆ ಹೂಡಿಕೆ ಮೇಲಿನ ಮೊತ್ತದ ಮೇಲೆ ಶೇ 2.5 ರಷ್ಟು ಬಡ್ಡಿ ಲಾಭವೂ ಸಿಗುತ್ತದೆ. ಹಾಗಾಗಿ ಸಾವರಿನ್ ಗೋಲ್ಡ್ ಬಾಂಡ್‌ಗಳಲ್ಲಿ ದೀರ್ಘಾವಧಿಗೆ ಶೇ 12.5 ರಷ್ಟು ಲಾಭಾಂಶ ನಿರೀಕ್ಷಿಸಬಹುದು.

ನಗದೀಕರಣ: ಘನ ರೂಪದ ಚಿನ್ನದ ನಗದೀಕರಣ ಸುಲಭ. ಅಗತ್ಯ ಬಿದ್ದಾಗ ಚಿನ್ನ ಮಾರಾಟ ಮಾಡಿ ಹಣ ಪಡೆಯಬಹುದು. ಇನ್ನು ಗೋಲ್ಡ್ ಇಟಿಎಫ್‌ಗಳು ಷೇರು ಮಾರುಕಟ್ಟೆಯಲ್ಲಿ ವಹಿವಾಟಿಗೆ ಒಳಪಡುವುದರಿಂದ ನಗದೀಕರಣಕ್ಕೆ ಅವಕಾಶವಿದೆ. ಆದರೆ ಸಾವರಿನ್ ಗೋಲ್ಡ್ ಬಾಂಡ್‌ಗಳಲ್ಲಿ 8 ವರ್ಷಗಳ ಲಾಕಿನ್ ಅವಧಿ ಇರುತ್ತದೆ. 5 ವರ್ಷಗಳ ಬಳಿಕ ಅವಧಿಪೂರ್ವ ನಗದೀಕರಣಕ್ಕೆ ಅವಕಾಶವಿದೆ. ಇದಲ್ಲದೆ ಬಾಂಡ್ ಗಳ ಮೇಲೆ ಸಾಲ ಪಡೆಯುವ ಅವಕಾಶವೂ ಇದೆ.

ಕೊನೆಯ ಮಾತು: ಆಭರಣದ ಕಾರಣಕ್ಕಾಗಿ ಘನರೂಪದ ಚಿನ್ನ ಖರೀದಿಸಿದರೆ ತೊಂದರೆಯಿಲ್ಲ. ಆದರೆ ಹೂಡಿಕೆಗೆ ಅಂತ ಘನ ರೂಪದ ಚಿನ್ನ ಖರೀದಿಸಿದ್ರೆ ಪ್ರಯೋಜನವಿಲ್ಲ. ಚಿನ್ನದ ಮೇಲೆ ಹೂಡಿಕೆ ಅಂತ ಬಂದಾಗ ಸಾವರಿನ್ ಗೋಲ್ಡ್ ಬಾಂಡ್ ಮೊದಲನೇ ಅತ್ಯುತ್ತಮ ಆಯ್ಕೆ. ಎರಡನೆಯದ್ದು ಗೋಲ್ಡ್ ಇಟಿಎಫ್.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ: ಸತತ ನಾಲ್ಕನೇ ವಾರವೂ ಗಳಿಕೆ

ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಗಳಿಕೆ ದಾಖಲಿಸಿವೆ. ನವೆಂಬರ್ 24ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಗಳಿಕೆ ಕಂಡಿವೆ. ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.26 ರಷ್ಟು ಗಳಿಸಿಕೊಂಡಿದೆ. ನಿಫ್ಟಿ ಶೇ 0.31 ರಷ್ಟು ಜಿಗಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ತೈಲ ಬೆಲೆ ಇಳಿಕೆ, ಬಾಂಡ್ ಗಳಿಕೆ ಇಳಿಕೆ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಭವಿಷ್ಯದಲ್ಲಿ ಬಡ್ಡಿ ದರ ಹೆಚ್ಚಳ ಸಾಧ್ಯತೆ ಕಡಿಮೆ ಎಂಬ ಮುನ್ಸೂಚನೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1.5 ರಷ್ಟು ಹೆಚ್ಚಳ ಕಂಡಿದೆ. ಲೋಹ , ತೈಲ ಮತ್ತು ಅನಿಲ ಹಾಗೂ ಫಾರ್ಮಾ ಸೂಚ್ಯಂಕಗಳು ತಲಾ ಶೇ 1 ರಷ್ಟು ಜಿಗಿದಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.7 ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 0.4 ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಎಲ್‌ಐಸಿ, ಅದಾನಿ ವಿಲ್ಮರ್, ಹಿರೋ ಮೋಟೊ ಕಾರ್ಪ್, ಹಿಂದುಸ್ತಾನ್ ಏರೋನಾಟಿಕ್ಸ್, ಬಜಾಜ್ ಆಟೊ ಮತ್ತು ಭಾರತ್ ಪೆಟ್ರೋಲಿಯಂ ಗಳಿಸಿಕೊಂಡಿವೆ. ಜೊಮೆಟೊ, ಇನ್ಫೊ ಎಡ್ಜ್ ಇಂಡಿಯಾ, ಸಿಪ್ಲಾ, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಆಯಿಲ್ ಆ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ ಕುಸಿದಿವೆ.

ಮುನ್ನೋಟ: ಈ ವಾರ ಪೊದ್ದಾರ್ ಹೌಸಿಂಗ್ ಆ್ಯಂಡ್ ಡೆವಲಪ್‌ಮೆಂಟ್ ಲಿ., ಸೀಮನ್ಸ್ ಲಿ., ಬಿನ್ನಿ, ಮಂಜೀರಾ ಕನ್‌ಸ್ಟ್ರಕ್ಷನ್ ಲಿ. ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು, ಐದುರಾಜ್ಯಗಳ ಚುನಾವಣಾ ಫಲಿತಾಂಶ ಸೇರಿ ಕೆಲ ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

'ಟಿವಿಎಸ್‌ನ ಇ.ವಿ. ಬೈಕ್ ವಿಸ್ತರಿಸುವ ಗುರಿ'

ನವದೆಹಲಿ (ಪಿಟಿಐ): ಟಿವಿಎಸ್ ಮೋಟರ್ ಕಂಪನಿಯು ಮುಂದಿನ ಒಂದು ವರ್ಷದಲ್ಲಿ ತನ್ನ ವಿದ್ಯುತ್ ಚಾಲಿತ (ಇ.ವಿ) ದ್ವಿಚಕ್ರ ವಾಹನಗಳ ವಿಧಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ವಿವಿಧ ದರಗಳಲ್ಲಿ ಗ್ರಾಹಕರಿಗೆ ವಾಹನ ಪೂರೈಸುವುದು ತಮ್ಮ ಉದ್ದೇಶ ಎಂದು ಕಂಪನಿಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚೆನ್ನೈ ಮೂಲದ ಕಂಪನಿಯು, ಪ್ರಸ್ತುತ ಎರಡು ಇ-ಸ್ಕೂಟರ್ ಗಳನ್ನು ಹೊಂದಿದೆ. ಮುಂದೆ ತನ್ನ ಎಲೆಕ್ಟ್ರಿಕ್ ವಾಹನ ಮಾರಾಟ ಮೂಲಸೌಕರ್ಯ ವಿಸ್ತರಿಸಲು ಯೋಜಿಸಿದೆ.

ಮುಂದಿನ ವರ್ಷದಲ್ಲಿ 5–25 ಕಿಲೋ ವ್ಯಾಟ್ ಶ್ರೇಣಿಯ ವಾಹನಗಳನ್ನು ಬಿಡುಗಡೆ ಮಾಡಲು ಯೋಜಿಸುತ್ತಿದ್ದೇವೆ ಎಂದು ಟಿವಿಎಸ್ ಮೋಟರ್ ಕಂಪನಿಯ ನಿರ್ದೇಶಕ ಮತ್ತು ಸಿಇಒ ಕೆ.ಎನ್.ರಾಧಾಕೃಷ್ಣನ್ ತಿಳಿಸಿದ್ದಾರೆ.

ಕಂಪನಿಯು ಎಲೆಕ್ಟ್ರಿಕ್ ಸ್ಕೂಟರ್ ಐಕ್ಯೂಬ್‌ನ ಉತ್ಪಾದನಾ ಸಾಮರ್ಥ್ಯವನ್ನು ತಿಂಗಳಿಗೆ 25 ಸಾವಿರಕ್ಕೆ ಹೆಚ್ಚಿಸಿದ್ದು, ಅದನ್ನು ಮತ್ತಷ್ಟು ಹೆಚ್ಚಿಸುವ ಯೋಜನೆ ಇದೆ ಎಂದರು.

ಟಿವಿಎಸ್ ತನ್ನ ಹೊಸ ಎಲೆಕ್ಟ್ರಿಕ್ ಸ್ಕೂಟರ್ ಟಿವಿಎಸ್ ಎಕ್ಸ್ ಮಾರಾಟವನ್ನು ಪ್ರಸಕ್ತ ತ್ರೈಮಾಸಿಕದಲ್ಲಿ ಪ್ರಾರಂಭಿಸಲು ಯೋಜಿಸಿದೆ ಎಂದ ಅವರು ಕಂಪನಿಯು ವಿದ್ಯುತ್ ಚಾಲಿತ ತ್ರಿಚಕ್ರ ವಾಹನವನ್ನು ಸಿದ್ಧಪಡಿಸುತ್ತಿದೆ ಎಂದು ಹೇಳಿದರು.

ವಾರ್ಷಿಕ ಬೆಳವಣಿಗೆ ದರ ಕರ್ನಾಟಕದಲ್ಲೇ ಹೆಚ್ಚು: ಕೇಂದ್ರ ಸರ್ಕಾರ

23 ಕೋಟಿ ಟನ್ ಹಾಲು ಉತ್ಪಾದನೆ

ನವದೆಹಲಿ (ಪಿಟಿಐ): ದೇಶದಲ್ಲಿ ಹಾಲು ಉತ್ಪಾದನೆ 2022–23ರಲ್ಲಿ ಶೇ 4ರಷ್ಟು ಹೆಚ್ಚಳವಾಗಿ 23.58 ಕೋಟಿ ಟನ್‌ಗೆ ತಲುಪಿದೆ. ಮೊಟ್ಟೆ ಉತ್ಪಾದನೆ ಶೇ 7ರಷ್ಟು ಏರಿಕೆಯಾಗಿ 13,838 ಕೋಟಿಗೆ ತಲುಪಿದೆ ಎಂದು ಸರ್ಕಾರ ಭಾನುವಾರ ತಿಳಿಸಿದೆ.

ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ಪರ್ಶೋತ್ತಮ್ ರೂಪಾಲಾ ಅವರು ಗುವಾಹಟಿಯಲ್ಲಿ ನಡೆದ ರಾಷ್ಟ್ರೀಯ ಹಾಲು ದಿನದ ಕಾರ್ಯಕ್ರಮದಲ್ಲಿ 2023ರ (ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆ) ಪಶುಸಂಗೋಪನೆ ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದರು.

ದೇಶದಲ್ಲಿ ಒಟ್ಟು ಹಾಲು ಉತ್ಪಾದನೆ 2022–23ರಲ್ಲಿ 23.58 ಕೋಟಿ ಟನ್ ಎಂದು ಅಂದಾಜಿಸಲಾಗಿದೆ. 2021–22ರ ಅಂದಾಜಿಗಿಂತ ಶೇ 3.83ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಸಚಿವರು ತಿಳಿಸಿದರು.

ವಾರ್ಷಿಕ ಬೆಳವಣಿಗೆ ದರ 2018–19ರಲ್ಲಿ ಶೇ 6.47, 2019–20ರಲ್ಲಿ ಶೇ 5.69, 2020–21ರಲ್ಲಿ ಶೇ 5.81 ಮತ್ತು 2021–22ರಲ್ಲಿ ಶೇ 5.77 ಇತ್ತು ಎಂದು ಮಾಹಿತಿ ತಿಳಿಸಿದೆ.

2022-23ರಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸಿದ ರಾಜ್ಯ ಉತ್ತರ ಪ್ರದೇಶವಾಗಿದ್ದು, ಒಟ್ಟು ಹಾಲು ಉತ್ಪಾದನೆಯಲ್ಲಿ ಶೇ 15.72ರಷ್ಟು ಪಾಲು ಹೊಂದಿದೆ. ನಂತರ ರಾಜಸ್ಥಾನ (ಶೇ. 14.44), ಮಧ್ಯಪ್ರದೇಶ (ಶೇ. 8.73), ಗುಜರಾತ್ (ಶೇ. 7.49), ಮತ್ತು ಆಂಧ್ರಪ್ರದೇಶ (ಶೇ. 6.70) ಇವೆ.

ಕರ್ನಾಟಕದಲ್ಲಿ ಬೆಳವಣಿಗೆ ದರ ಹೆಚ್ಚು: ಹಿಂದಿನ ವರ್ಷಕ್ಕೆ ಹೋಲಿಸಿದರೆ ವಾರ್ಷಿಕ ಬೆಳವಣಿಗೆ ದರದಲ್ಲಿ, ಕರ್ನಾಟಕವು ಶೇ 8.76 ಅತ್ಯಧಿಕ ದರವನ್ನು ಹೊಂದಿದೆ. ಪಶ್ಚಿಮ ಬಂಗಾಳ (ಶೇ 8.65) ಮತ್ತು ಉತ್ತರ ಪ್ರದೇಶ (ಶೇ 6.99) ನಂತರದ ಸ್ಥಾನಗಳಲ್ಲಿ ಇವೆ. ಮೊಟ್ಟೆಯ ಉತ್ಪಾದನೆಯು 2022-23ರಲ್ಲಿ 13,838 ಕೋಟಿ ಎಂದು ಅಂದಾಜಿಸಿದ್ದು, 2018-19ರಲ್ಲಿ 10,380 ಕೋಟಿ ಇತ್ತು.

ಮೊಟ್ಟೆಯ ಉತ್ಪಾದನೆಯು 2021-22ಕ್ಕಿಂತ 2022-23 ರಲ್ಲಿ ಶೇ 6.77ರಷ್ಟು ಹೆಚ್ಚಾಗಿದೆ. ಆಂಧ್ರಪ್ರದೇಶ ಹೆಚ್ಚು ಮೊಟ್ಟೆ ಉತ್ಪಾದಿಸಿದ (ಶೇ 20.13) ರಾಜ್ಯವಾಗಿದೆ. ತಮಿಳುನಾಡು (ಶೇ 15.58), ತೆಲಂಗಾಣ (ಶೇ 12.77), ಪಶ್ಚಿಮ ಬಂಗಾಳ (ಶೇ 9.94) ಮತ್ತು ಕರ್ನಾಟಕ (ಶೇ 6.51) ನಂತರದ ಸ್ಥಾನಗಳಲ್ಲಿ ಇವೆ. 2022-23ರಲ್ಲಿ ಭಾರತದ ಉಣ್ಣೆ ಉತ್ಪಾದನೆಯು ಶೇ 2ರಷ್ಟು ಏರಿಕೆಯಾಗಿ 3.36 ಕೋಟಿ ಕೆಜಿಗೆ ತಲುಪಿದೆ. ಹಿಂದಿನ ವರ್ಷಕ್ಕಿಂತ 2022-23ರಲ್ಲಿ ಮಾಂಸ ಉತ್ಪಾದನೆಯು ಶೇ 5 ರಷ್ಟು ಏರಿಕೆಯಾಗಿ 97 ಲಕ್ಷ ಟನ್‌ಗೆ ತಲುಪಿದೆ.

ಈ ಅಂಕಿ ಅಂಶವು ಪ್ರಾಣಿಗಳ ಸಮಗ್ರ ಮಾದರಿ ಸಮೀಕ್ಷೆ (2022ರ ಮಾರ್ಚ್–2023 ಫೆಬ್ರವರಿ) ಆಧಾರಿತವಾಗಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ವೆಸ್ಟ್‌ಬ್ಯಾಂಕ್‌ನಲ್ಲಿ ನಡೆದ ಹಮಾಸ್–ಇಸ್ರೇಲ್ ಸೇನೆ ನಡುವೆ ಘರ್ಷಣೆ • ಎಂಟು ಪ್ಯಾಲೆಸ್ಟೀನಿಯರ ಹತ್ಯೆ

ಹಮಾಸ್ ಕಮಾಂಡರ್, ನಾಲ್ವರು ನಾಯಕರ ಹತ್ಯೆ

ಗಾಜಾಪಟ್ಟಿ (ಎ.ಪಿ): ಇಸ್ರೇಲ್ ಜೊತೆಗೆ ನಡೆದ ಯುದ್ಧದಲ್ಲಿ ತನ್ನ ಸೇನಾ ಪಡೆಯ ಉನ್ನತ ಕಮಾಂಡರ್ ಅಹ್ಮದ್ ಅಲ್ ಫಂಡೌರ್ ಮತ್ತು ಇತರೆ ನಾಲ್ವರು ನಾಯಕರು ಹತರಾಗಿದ್ದಾರೆ ಎಂದು ಹಮಾಸ್ ಭಾನುವಾರ ಪ್ರಕಟಿಸಿದೆ.

ಎಲ್ಲಿ, ಯಾವಾಗ ಹತರಾದರು ಎಂಬ ವಿವರ ನೀಡಿಲ್ಲ. ಹತ್ಯೆಗೀಡಾದ ಫಂಡೌರ್ ಅವರು ಹಮಾಸ್ ಮಿಲಿಟರಿ ಕೌನ್ಸಿಲ್‌ನ ಸದಸ್ಯರಾಗಿದ್ದರು ಎಂದು ಹಮಾಸ್‌ನ ಎಜೆಡ್ಡೈನ್ ಅಲ್ ಖಾಸಂ ಬ್ರಿಗೇಡ್ ಹೇಳಿಕೆಯನ್ನು ನೀಡಿದೆ.

ಉಳಿದಂತೆ ರಾಕೆಟ್ ವಿಭಾಗದ ಮುಖ್ಯಸ್ಥ ಅಯ್ಮಾನ್ ಸಿಯ್ಯಾಂ, ವೆಸ್ಟ್‌ಬ್ಯಾಂಕ್ ಶಾಖೆ ಮುಖ್ಯಸ್ಥ ಸೇರಿ ನಾಲ್ವರು ನಾಯಕರು ಮೃತಪಟ್ಟಿದ್ದಾರೆ. ಐವರು ಕಮಾಂಡರ್‌ಗಳ ಹತ್ಯೆಯಾಗಿದೆ ಎಂದು ಇಸ್ರೇಲ್ ಸೇನೆಯು ದೃಢಪಡಿಸಿದೆ.

ಇಸ್ರೇಲ್ ಸೇನೆಯ ಪ್ರಕಾರ, ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದಿದ್ದ ದಾಳಿ ಮುಂಚೂಣಿಯಲ್ಲಿ ಫಂಡೌರ್ ಇದ್ದರು. ಅಂದು ಹಮಾಸ್ ನಡೆಸಿದ್ದ ಕ್ಷಿಪಣಿ ದಾಳಿಯಲ್ಲಿ ಇಸ್ರೇಲ್‌ನ ಸುಮಾರು 1,200 ಜನರು ಸತ್ತಿದ್ದರು.

ಹಮಾಸ್‌ನ ಭಯೋತ್ಪಾದನೆ ಕೃತ್ಯಗಳಿಗೆ ಇವರು ನಿರ್ದೇಶನ ನೀಡುತ್ತಿದ್ದರು. ಗುಂಡಿನ ದಾಳಿ, ಬಾಂಬ್ ದಾಳಿ, ರಾಕೆಟ್ ಉಡಾವಣೆಗೂ ನೆರವಾಗುತ್ತಿದ್ದರು. ವೆಸ್ಟ್‌ಬ್ಯಾಂಕ್‌ನಲ್ಲಿ ನಡೆದ ದಾಳಿಯಲ್ಲಿ ಇವರ ಪಾತ್ರವಿತ್ತು ಎಂದಿದೆ.

ಹಿಂದೆ 2002ರಲ್ಲಿ ಇಸ್ರೇಲ್ ನಡೆಸಿದ್ದ ಮೂರು ದಾಳಿಗಳಲ್ಲಿ ಫಾಂಡೌರ್ ಸಾವಿನಿಂದ ಪಾರಾಗಿದ್ದರು ಎಂದು ವಾಷಿಂಗ್ಟನ್‌ನಲ್ಲಿ ನೆಲೆ ಹೊಂದಿರುವ ಹಮಾಸ್‌ನ ಸಲಹಾ ಸಮೂಹದ ಮೂಲಗಳು ತಿಳಿಸಿವೆ.

ಹತ್ಯೆಗೀಡಾಗಿರುವ ಸಿಯ್ಯಾಂ, ಹಮಾಸ್‌ನ ರಾಕೆಟ್ ವಿಭಾಗವನ್ನು 15 ವರ್ಷದಿಂದ ಮುನ್ನಡೆಸುತ್ತಿದ್ದರು. ಮೃತ ಮತ್ತೊಬ್ಬ ನಾಯಕ ವಾಯೆಲ್ ರಜಬ್ ಆಗಿದ್ದು, ಹಮಾಸ್ ಸೇನಾ ಪಡೆಯ ಉಪನಾಯಕರಾಗಿದ್ದರು. ಅಲ್ಲದೆ ಖಾಸಂ, ಗಾಜಾ ಸಿಟಿ ಬ್ರಿಗೆಡ್‌ನ ಹಿರಿಯ ನಿರ್ವಾಹಕ ರಾಫತ್ ಸಲ್ಮಾನ್, ಹಮಾಸ್ ವೆಸ್ಟ್‌ಬ್ಯಾಂಕ್ ಮುಖ್ಯ ಕಚೇರಿಯ ನಿರ್ವಾಹಕ ಫರ್ಸಾನ್ ಖಾಲಿಫಾ ಮೃತರಲ್ಲಿ ಸೇರಿದ್ದಾರೆ ಎಂದು ತಿಳಿಸಿದೆ.

ಉತ್ತರಗಾಜಾದಲ್ಲಿಹಮಾಸ್‌ನಸುಮಾರು 24 ಬೆಟಾಲಿಯನ್‌ಗಳನ್ನು ಅಸ್ಥಿರಗೊಳಿಸಲಾಗಿದೆ. ನೂರಾರು ಬಂಡುಕೋರರ ಹತ್ಯೆಯಾಗಿದೆ ಎಂದು ಇಸ್ರೇಲ್‌ನ ಸೇನೆ ತಿಳಿಸಿದೆ.

ಎಂಟು ಪ್ಯಾಲೆಸ್ಟೀನಿಯರ ಹತ್ಯೆ: ವೆಸ್ಟ್‌ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಇಸ್ರೇಲ್ ಸೇನೆಯು ಕಳೆದ 24 ಗಂಟೆಗಳಲ್ಲಿ ಬಾಲಕ ಸೇರಿದಂತೆ ಕನಿಷ್ಠ ಎಂಟು ಮಂದಿ ಪ್ಯಾಲೆಸ್ಟೀನಿಯರನ್ನು ಹತ್ಯೆ ಮಾಡಿದ್ದಾರೆ.

ಪ್ಯಾಲೆಸ್ಟೀನ್ ಆರೋಗ್ಯ ಇಲಾಖೆ ಪ್ರಕಾರ, ಶನಿವಾರದಿಂದ ಜೆನಿನ್‌ನಲ್ಲಿ ಐವರು, ವೆಸ್ಟ್‌ಬ್ಯಾಂಕ್‌ನಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಸತ್ತಿದ್ದಾರೆ.

ಇಸ್ರೇಲ್ ಮೂಲದ ಟ್ಯಾಂಕರ್ ವಶ

ದುಬೈ (ಎ.ಪಿ): ಇಸ್ರೇಲ್‌ನ 'ಸೆಂಟ್ರಲ್ ಪಾರ್ಕ್' ಟ್ಯಾಂಕರ್ ಅನ್ನು ದಾಳಿಕೋರರು ಯಮನ್‌ನ ಕರಾವಳಿಯಲ್ಲಿ ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯಾವುದೇ ಗುಂಪು ಈ ಕೃತ್ಯದ ಹೊಣೆ ಹೊತ್ತುಕೊಂಡಿಲ್ಲ.

ಜೋಡಿಯಾಕ್ ಮೆರಿಟೈಮ್ ಸಂಸ್ಥೆಯ ನಿರ್ವಹಣೆಯ ಟ್ಯಾಂಕರ್‌ನಲ್ಲಿ 22 ಸಿಬ್ಬಂದಿ ಇದ್ದರು. ಇವರಲ್ಲಿ ಭಾರತ, ರಷ್ಯಾ, ಬಲ್ಗೇರಿಯಾ, ಫಿಲಿಪಿನೊ ಪ್ರಜೆಗಳು ಸೇರಿದ್ದಾರೆ. ಟ್ಯಾಂಕರ್‌ನಲ್ಲಿ ಫೋಸ್‌ಫೋರಿಕ್ ಆ್ಯಸಿಡ್ ಅನ್ನು ಸಾಗಣೆ ಮಾಡಲಾಗುತ್ತಿತ್ತು ಎಂದು ಎಂದು ಅಮೆರಿಕದ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಭಾನುವಾರ ಉತ್ತರ ಗಾಜಾದತ್ತ ವಲಸೆ ಹೊರಟಿದ್ದ ಪ್ಯಾಲೆಸ್ಟೀನಿಯರ ಸಮೂಹ (ಮೊದಲ ಚಿತ್ರ) ಹಮಾಸ್ ಬಿಡುಗಡೆ ಮಾಡಿದ್ದ ಇಸ್ರೇಲ್‌ನ ಬಾಲಕಿ ಆಸ್ಪತ್ರೆಯಲ್ಲಿ ತನ್ನ ತಂದೆಯನ್ನು ಭೇಟಿಯಾಗಿ ಅಪ್ಪಿಕೊಂಡ ಸಂದರ್ಭ –ಎಎಫ್‌ಪಿ ಚಿತ್ರಗಳು

ಮತ್ತೆ 17 ಒತ್ತೆಯಾಳುಗಳ ಬಿಡುಗಡೆ

ಜೆರುಸಲೇಂ (ಎಎಫ್‌ಪಿ): ಕದನವಿರಾಮ ಒಪ್ಪಂದದಂತೆ ಹಮಾಸ್‌ನ ಬಂಡುಕೋರರು ಭಾನುವಾರ 14 ಇಸ್ರೇಲಿ ಒತ್ತೆಯಾಳುಗಳು, ಮೂವರು ವಿದೇಶಿ ಪ್ರಜೆಗಳನ್ನು ಬಿಡುಗಡೆ ಮಾಡಿದ್ದಾರೆ.

ಒತ್ತೆಯಾಳುಗಳನ್ನು ಗಾಜಾಪಟ್ಟಿಯಲ್ಲಿನ ರೆಡ್‌ಕ್ರಾಸ್ ಪ್ರತಿನಿಧಿಗಳಿಗೆ ಒಪ್ಪಿಸಲಾಗಿದೆ ಎಂದು ಇಸ್ರೇಲ್‌ನ ಸೇನೆ ಹೇಳಿಕೆ ನೀಡಿದೆ. ಪ್ರತಿಯಾಗಿ ಇಸ್ರೇಲ್ ಕೂಡಾ 39 ಪ್ಯಾಲೆಸ್ಟೀನಿ ಕೈದಿಗಳನ್ನು ಬಿಡುಗಡೆ ಮಾಡಿದೆ ಎಂದು ಗೊತ್ತಾಗಿದೆ.

ಒಪ್ಪಂದಕ್ಕೆ ಮಧ್ಯಸ್ಥಿಕೆ ವಹಿಸಿದ್ದ ದೇಶಗಳಲ್ಲಿ ಒಂದಾಗಿದ್ದ ಈಜಿಪ್ಟ್‌ಗೆ ಎರಡೂ ಕಡೆಯಿಂದ ಬಿಡುಗಡೆ ಆಗುವವರ ಪಟ್ಟಿ ಬಂದಿದೆ ಎಂದು ಈಜಿಪ್ಟ್‌ನ ಮಾಹಿತಿ ಸೇವೆಯ ಮುಖ್ಯಸ್ಥ ದಿಯಾ ರಾಶ್ವಾನ್ ಇದಕ್ಕೆ ಮೊದಲು ತಿಳಿಸಿದ್ದರು.

ಕದನವಿರಾಮ ಪ್ರಕ್ರಿಯೆ ತೊಡಕುಗಳಿಲ್ಲದೆ ನಡೆದಿದೆ. ಮಾನವೀಯ ನೆರವು ಹೊತ್ತ 120 ಲಾರಿಗಳು ಈಜಿಪ್ಟ್‌ನಿಂದ ಗಾಜಾ ಪ್ರವೇಶಿಸಿವೆ. ಇದರಲ್ಲಿ ಎರಡು ಇಂಧನ, ಒಂದು ಅಡುಗೆ ಅನಿಲ ಟ್ಯಾಂಕರ್ ಇವೆ ಎಂದು ಹೇಳಿಕೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಕಂಪನಿಯ ನೇರನೇಮಕಾತಿ, ಪ್ಯಾಕಿಂಗ್,ಪಿಕ್ಕಿಂಗ್ ಸ್ಕ್ಯಾನಿಂಗ್,ಆಪರೇಟರ್ ಟೆಲಿಕಾಲಿಂಗ್,ಡೆಲಿವರಿ ಆಫೀಸ್ ಹಾಗೂ,ಶೋರೂಂ ಬ್ಯಾಂಕಿಂಗ್ ಹುದ್ದೆಗಳಿಗೆ ಬೇಕಾಗಿದ್ದಾರೆ. ಸಂಬಳ:16,000 ರಿಂದ36,000 ಊಟ,ವಸತಿ ವಾಹನ ಸೌಲಭ್ಯವಿದೆ 9611237045 8861430488

Multiple Vacancy

ವೆಜ್ ಹೋಟೆಲ್ಗೆ ದೋಸ ಮಾಸ್ಟರ್, ಟೀ ಮಾಸ್ಟರ್, ಸೌತ್ ಚೆಫ್ ಅಸಿಸ್ಟೆಂಟ್, ಕಟಿಂಗ್, ಗ್ರೈಂಡಿಂಗ್, ಕ್ಲೀನರ್ಸ್, ಕೌಂಟರ್ಸ್ ಬೇಕಾಗಿದ್ದಾರೆ. ಸ್ಥಳ: ಜಯನಗರ, ಬೆಂಗಳೂರು. +91 7019299055/ 8861453552

REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ASTRO YATRA



ಕೇರಳ–ಕೊಳ್ಳೇಗಾಲದ ಪ್ರಸಿದ್ಧ ಜ್ಯೋತಿಷ್ಯರು
ಫೋನಿನ ಮೂಲಕ ಪರಿಹಾರ
ಸ್ತ್ರೀ ಪುರುಷ, ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ರುಂಡ ಮಾಲಿನಿ ಪೂಜಾ ಶಕ್ತಿಯಿಂದ ಕೆಲವೇ ದಿನದಲ್ಲಿ ಪರಿಹಾರ
ಸಂಪರ್ಕಿಸಿ : ಪಂಡಿತ್ ಸುರೇಶ್ ಭಟ್ 9686330981

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000- 17,000. 8951315839, 9141634619

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

ಪ್ರವಾಸ

Travel

17.12.2023 ರಿಂದ ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ,ಮಹಾಕಾಳೇಶ್ವರ, 14.02.2024 ಕಾಶಿ,ಬುದ್ಧಗಯಾ ಬೈದ್ಯನಾಥ್,ಅಯೋಧ್ಯಾ, 02.03.2024 ಮಹಾಶಿವರಾತ್ರಿ ಪ್ರಯುಕ್ತ ನೇಪಾಳ ಪಶುಪತಿನಾಥ ದರ್ಶನ. 24.12.2023 ಪಂಚರಾಮ ಕ್ಷೇತ್ರಗಳು,ಶಕ್ತಿಪೀಠ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 8431888138

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
ರಿಯಲ್ ಎಸ್ಟೇಟ್
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 | +91 9845114560 | +91 9901641752 | +91 9886213331 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಆಸ್ಟ್ರೇಲಿಯಾ ವಿರುದ್ಧದ ಎರಡನೇ ಟಿ–20 ಪಂದ್ಯ: ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿದ ಆತಿಥೇಯರು

ಪ್ರಸಿದ್ಧಕೃಷ್ಣ, ರವಿ ಮಿಂಚು: ಭಾರತಕ್ಕೆ ಜಯ

ತಿರುವನಂತಪುರ: ಪ್ರಮುಖ ಬ್ಯಾಟರ್‌ಗಳ ಭರ್ಜರಿ ಅರ್ಧಶತಕಗಳ ನಂತರ ಮಧ್ಯಮ ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಮತ್ತು ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ತಲಾ ಮೂರು ವಿಕೆಟ್‌ಗಳನ್ನು ಪಡೆದು ಭಾರತ ತಂಡ, ಭಾನುವಾರ ನಡೆದ ಎರಡನೇ ಟಿ–20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಮೇಲೆ 44 ರನ್‌ಗಳ ಸುಲಭ ಗೆಲುವು ಪಡೆಯಲು ನೆರವಾದರು.

ಇದರೊಂದಿಗೆ ಭಾರತ 5 ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆಯಿತು. ಟಾಸ್ ಸೋತರೂ ಬ್ಯಾಟಿಂಗ್ ಮಾಡುವ ಅವಕಾಶ ಪಡದ ಭಾರತ 20 ಓವರುಗಳಲ್ಲಿ 4 ವಿಕೆಟ್‌ಗೆ 235 ರನ್‌ಗಳ ಭರ್ಜರಿ ಮೊತ್ತ ಗಳಿಸಿತು. ಈ ಸವಾಲಿ ಎದುರು ಪರದಾಡಿದ ಆಸ್ಟ್ರೇಲಿಯಾ ತಂಡ 20ನೇ ಓವರ್‌ನಲ್ಲಿ 9 ವಿಕೆಟ್‌ಗೆ 191 ರನ್ ಗಳಿಸಲು ಮಾತ್ರ ಶಕ್ತವಾಯಿತು.

ಮಧ್ಯಮ ಕ್ರಮಾಂಕದಲ್ಲಿ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ (25ಎಸೆತಗಳಲ್ಲಿ 45), ಟಿಮ್ ಡೇವಿಡ್ (37) ಮತ್ತು ನಾಯಕ ಮ್ಯಾಥ್ಯೂ ವೇಡ್ (23 ಎಸೆತಗಳಲ್ಲಿ 42) ಮಾತ್ರ ಹೋರಾಟ ತೋರಿದರು. ಮ್ಯಾಥ್ಯೂ ಶಾರ್ಟ್ (19) ಮತ್ತು ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದ ವಿಕೆಟ್ ಕೀಪರ್ ಜೋಶ್ ಇಂಗ್ಲಿಸ್ ಅವರ ವಿಕೆಟ್‌ಗಳನ್ನು ಪಡೆದ ಬಿಷ್ಣೋಯಿ ಆರಂಭದಲ್ಲೇ ಪೆಟ್ಟು ನೀಡಿದರು. ಪ್ರಸಿದ್ಧ ಕೃಷ್ಣ ಇನ್ನೊಬ್ಬ ಆರಂಭ ಆಟಗಾರ ಸ್ಮಿತ್ ವಿಕೆಟ್ ಪಡೆದರು. ನಂತರ ಆಸ್ಟ್ರೇಲಿಯಾದ ಗುರಿ ಕಠಿಣವಾಗುತ್ತ ಹೋಯಿತು. ಮಧ್ಯಮ ಕ್ರಮಾಂಕದಲ್ಲಿ ಕೊಂಚ ಪ್ರತಿರೋಧ ಎದುರಾಗಿದ್ದು ಬಿಟ್ಟರೆ, ಉಳಿದಂತೆ ಭಾರತದ ಮೇಲುಗೈ ಸ್ಪಷ್ಟವಾಗಿತ್ತು. ಇದಕ್ಕೆ ಮೊದಲು ಆಸ್ಟ್ರೇಲಿಯಾದ ಬೌಲರ್‌ಗಳನ್ನು ದಂಡಿಸಿದ ಯಶಸ್ವಿ ಜೈಸ್ವಾಲ್ (25 ಎಸೆತಗಳಲ್ಲಿ 53), ಇಶಾನ್ ಕಿಶನ್ (32 ಎಸೆತಗಳಲ್ಲಿ 52) ಮತ್ತು ಋತುರಾಜ್ ಗಾಯಕವಾಡ್ (43 ಎಸೆತಗಳಲ್ಲಿ 58) ಅವರ ಅರ್ಧ ಶತಕಗಳ ನೆರವಿನಿಂದ ಭಾರತ ತಂಡ 4 ವಿಕೆಟ್‌ಗೆ 235 ರನ್‌ಗಳ ಭಾರಿ ಮೊತ್ತ ಗಳಿಸಿತ್ತು.

ಭಾರತ ತಂಡದ ಯಶಸ್ವಿ ಜೈಸ್ವಾಲ್ ಅವರು ಬ್ಯಾಟಿಂಗ್ ಪರಿ –ಪಿಟಿಐ ಚಿತ್ರ

ಆಸ್ಟ್ರೇಲಿಯಾ ಬೌಲರ್‌ಗಳು ಪರಿಣಾಮಕಾರಿಯಾಗಿರಲಿಲ್ಲ. ಸರಿಯಾದ ನೇರ ಮತ್ತು ಲೆಂಗ್ತ್ ಪಾಲಿಸದೇ ಬ್ಯಾಟರ್‌ಗಳಿಗೆ ಮನಬಂದಂತೆ ದಂಡಿಸಲು ಅವಕಾಶ ಮಾಡಿಕೊಟ್ಟರು. ವೇಗದ ಬೌಲರ್ ಸೀನ್ ಅಬೋಟ್ ಮಾಡಿದ ಇನಿಂಗ್ಸ್‌ನ ನಾಲ್ಕನೆ ಓವರ್‌ನಲ್ಲಿ ಜೈಸ್ವಾಲ್ ಅಮೋಘ ಹೊಡೆತಗಳನ್ನು ಪ್ರದರ್ಶಿಸಿ 24 ರನ್ (4,4,4,6,6) ಬಾಚಿದರು. ಸ್ಕ್ವೇರ್‌ಕಟ್, ಲೇಟ್ ಕಟ್, ಪುಲ್‌ಗಳ ಮೂಲಕ ರಂಜಿಸಿದರು.

ಪವರ್‌ಪ್ಲೇ ಆಟದಲ್ಲೇ ಭಾರತದ ಆಟಗಾರರು 71 ರನ್ ದೋಚಿದರು. 24 ಎಸೆತಗಳಲ್ಲಿ ಅರ್ಧ ಶತಕ ದಾಟಿದ ಜೈಸ್ವಾಲ್ ನಂತರ ಹೆಚ್ಚು ಹೊತ್ತು ಆಡದೇ ಎಲ್ಲಿಸ್‌ಗೆ ವಿಕೆಟ್ ನೀಡಿದರು. ಆದರೆ ಅದರಿಂದ ಏನೂ ಪರಿಣಾಮ ಆಗಲಿಲ್ಲ.

ಗಾಯಕವಾಡ್ ಜೊತೆಗೂಡಿದ ಇಶಾನ್ ಕಿಶನ್ ಸತತ ಎರಡನೇ ಅರ್ಧಶತಕ ಬಾರಿಸಿ ಪ್ರವಾಸಿ ತಂಡವನ್ನು ಕಾಡಿದರು. ಎಡಗೈ–ಬಲಗೈ ಆಟಗಾರರ ಜೊತೆಯಾಟದಲ್ಲಿ ಆಸ್ಟ್ರೇಲಿಯಾದ ದಾಳಿ ದಿಕ್ಕುತಪ್ಪಿತು. 10 ಓವರುಗಳಲ್ಲೇ ತಂಡ 1 ವಿಕೆಟ್‌ಗೆ 101 ರನ್ ಬಾರಿಸಿತ್ತು. ಎರಡನೇ ವಿಕೆಟ್ ಜೊತೆಯಾಟದಲ್ಲಿ 87 ರನ್‌ಗಳು ಹರಿದುಬಂದವು.

ಸ್ಪಿನ್ನರ್‌ಗಳಾದ ಜಂಪಾ ಮತ್ತು ತನ್ವೀರ್ ಸಂಘಾ ಭಾರತದ ನಾಗಾಲೋಟಕ್ಕೆ ಒಂದಿಷ್ಟು ತಡೆಹಾಕಿದರು. ಸಂಘಾ ಬೌಲಿಂಗ್‌ನಲ್ಲಿ ಮಿಡ್ ವಿಕೆಟ್ ಮೇಲೆ ಭರ್ಜರಿ ಸಿಕ್ಸರ್ ಎತ್ತಿದ ಕಿಶನ್ 29 ಎಸೆತಗಳಲ್ಲಿ ಅರ್ಧ ಶತಕ ದಾಟಿದರು. ಕೆಲವೇ ಎಸೆತಗಳ ನಂತರ ಗಾಯಕವಾಡ ಕೂಡ ಅರ್ಧ ಶತಕ ಪೂರೈಸಿದರು. ಆದರೆ ಇಬ್ಬರೂ ದೊಡ್ಡ-ಹೊಡೆತಗಳಿಗೆ ಯತ್ನಿಸಿ ಕ್ಯಾಚಿತ್ತರು.

ರಿಂಕು ಸಿಂಗ್ ಕೇವಲ 9 ಎಸೆತಗಳಲ್ಲಿ 31 ರನ್ ಗಳಿಸಿ ತಂಡದ ಮೊತ್ತ 200 ದಾಟಿಸಿದರು. ಅಬಾಟ್ ಅವರ ಒಂದೇ ಓವರ್ (ಇನಿಂಗ್ಸ್‌ನ 19ನೇ)ನಲ್ಲಿ ರಿಂಕು 25 ರನ್ ಸೂರೆಮಾಡಿದರು.

ಸ್ಕೋರ್ ಕಾರ್ಡ್

ಭಾರತ 4ಕ್ಕೆ235 (20 ಓವರ್‌ಗಳಲ್ಲಿ)
ಯಶಸ್ವಿ ಸಿ ಜಂಪಾ ಬಿ ನೇಥನ್ 53 (25ಎ, 4X9, 6X2)
ಋತುರಾಜ್ ಸಿ ಟಿಮ್ ಬಿ ನೇಥನ್ 58 (43ಎ, 4X3, 6X2)
ಇಶಾನ್ ಸಿ ನೇಥನ್ ಬಿ ಸ್ಟೋಯಿನಿಸ್ 52 (32ಎ, 4X3, 6X4)
ಸೂರ್ಯಕುಮಾರ್ ಸಿ ಸ್ಟೋಯಿನಿಸ್ ಬಿ ನೇಥನ್ 19 (10ಎ, 6X2)
ರಿಂಕು ಔಟಾಗದೆ 31 (9ಎ, 4X4, 6X2)
ವರ್ಮಾ ಔಟಾಗದೆ 7 (2ಎ, 6X1)
ಇತರೆ: 15 (ಲೆಗ್‌ಬೈ 2, ವೈಡ್ 12, ನೋಬಾಲ್ 1)
ವಿಕೆಟ್ ಪತನ: 1-77 (ಯಶಸ್ವಿ ಜೈಸ್ವಾಲ್;5.5), 2-164 , ಇಶಾನ್; 15.2), 3-189 (ಸೂರ್ಯಕುಮಾರ್ ಯಾದವ್; 17.4), 4-221 (ಋತುರಾಜ್ ಗಾಯಕವಾಡ್; 19.2)
ಬೌಲಿಂಗ್: ಮಾರ್ಕಸ್ ಸ್ಟೋಯಿನಿಸ್ 3-0-27-1, ನೇಥನ್ ಎಲಿಸ್ 4-0-45-3, ಗ್ಲೆನ್ ಮ್ಯಾಕ್ಸ್‌ವೆಲ್ 2-0-38-0, ಸೀನ್ ಅಬಾಟ್ 3-0-56-0, ಆ್ಯಡಂ ಜಂಪಾ 4-0-33-0, ತನ್ವೀರ್ ಸಂಘಾ 4-0-34-0

ಆಸ್ಟ್ರೇಲಿಯಾ: 9ಕ್ಕೆ 191 (20 ಓವರುಗಳಲ್ಲಿ)
ಸ್ಮಿತ್ ಸಿ ಜೈಸ್ವಾಲ್ ಬಿ ಪ್ರಸಿದ್ಧ 19 (16ಎ, 4x1, 6x1)
ಶಾರ್ಟ್ ಬಿ ಬಿಷ್ಣೋಯಿ 19 (10ಎ, 4x3)
ಇಂಗ್ಲಿಸ್ ಸಿ ವರ್ಮಾ ಬಿ ಬಿಷ್ಣೋಯಿ 2(4ಎ)
ಮ್ಯಾಕ್ಸ್‌ವೆಲ್ ಸಿ ಜೈಸ್ವಾಲ್ ಬಿ ಪಟೇಲ್ 12 (8ಎ, 4x1, 6x1)
ಸ್ಟೋಯಿನಿಸ್ ಸಿ ಪಟೇಲ್ ಬಿ ಮುಕೇಶ್ 45 (25ಎ, 4x2, 6x4)
ಡೇವಿಡ್ ಸಿ ಗಾಯಕವಾಡ ಬಿ ಬಿಷ್ಣೋಯಿ 37 (22ಎ, 4x4, 6x2)
ವೇಡ್ ಔಟಾಗದೇ 42(23ಎ, 4x1, 6x4)
ಅಬಾಟ್ ಬಿ ಪ್ರಸಿದ್ಧ 1 (2ಎ)
ಎಲ್ಲಿಸ್ ಬಿ ಪ್ರಸಿದ್ಧ 1 (4ಎ)
ಜಂಪಾ ಬಿ ಅರ್ಷದೀಪ್ 1 (3ಎ)
ಸಂಘಾ ಔಟಾಗದೇ 2 (4ಎ)
ಇತರೆ: 10 (ಲೆಗ್‌ಬೈ 4, ನೋಬಾಲ್ 5, ವೈಡ್ 1)
ವಿಕೆಟ್ ಪತನ: 1-35 (ಮ್ಯಾಥ್ಯೂ ಶಾರ್ಟ್, 2.5), 2-39 (ಜೋಶ್ ಇಂಗ್ಲಿಸ್, 4.2), 3-53 (ಮ್ಯಾಕ್ಸ್‌ವೆಲ್, 5.5), 4-58 (ಸ್ಟೀವನ್ ಸ್ಮಿತ್, 7.2), 5-139 (ಟಿಮ್ ಡೇವಿಡ್, 13.3), 6-148 (ಮಾರ್ಕಸ್ ಸ್ಟೋಯಿನಿಸ್, 14.4), 7-149 (ಸೀನ್ ಅಬೋಟ್, 15.1), 8-152 (ನಥಾನ್ ಎಲ್ಲಿಸ್, 15.6), 9-155 (ಆ್ಯಡಂ ಜಂಪಾ, 16.5)
ಬೌಲಿಂಗ್: ಅರ್ಷದೀಪ್ ಸಿಂಗ್ 4-0-46-1, ಪ್ರಸಿದ್ಧ ಕೃಷ್ಣ 4-0-41-3, ರವಿ ಬಿಷ್ಣೋಯಿ 4-0-32-3, ಅಕ್ಷರ್ ಪಟೇಲ್ 4-0-25-1, ಮುಕೇಶ್ ಕುಮಾರ್ 4-0-43-1
ಪಂದ್ಯದ ಆಟಗಾರ: ಯಶಸ್ವಿ ಜೈಸ್ವಾಲ್

ಫಲಿತಾಂಶ: ಭಾರತಕ್ಕೆ 44 ರನ್ ಜಯ

ರನ್ನರ್ ಅಪ್ ಆದ ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ (ಎಡ) ಹಾಗೂ ಪ್ರಶಸ್ತಿ ಗೆದ್ದ ಚೀನಾದ ಲಿಯಾಂಗ್ ವೀ ಕೆಂಗ್– ವಾಂಗ್ ಚಾಂಗ್ –ಎಎಫ್‌ಪಿ ಚಿತ್ರ

ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ರನ್ನರ್ ಅಪ್

ಶೆನ್‌ಝೆನ್ (ಚೀನಾ), (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ ಭಾನುವಾರ ಚೀನಾದ ಲಿಯಾಂಗ್ ವೀ ಕೆಂಗ್- ವಾಂಗ್ ಚಾಂಗ್ ಜೋಡಿ ಎದುರು ತೀವ್ರ ಹೋರಾಟದ ನಂತರ ಸೋಲನುಭವಿಸಿದರು.

ಹ್ವಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಚಿನ್ನ ಗೆದ್ದಿದ್ದ ಭಾರತದ ಆಟಗಾರರು 19-21, 21-18, 19-21ರಲ್ಲಿ ವಿಶ್ವದ ಅಗ್ರ ಕ್ರಮಾಂಕದ ಜೋಡಿಯಾದ ಲಿಯಾಂಗ್- ವಾಂಗ್ ಎದುರು ಪರಾಜಿತರಾದರು. ಈ ಋತುವಿನಲ್ಲಿ ಆಡಿದ ಆರು ಫೈನಲ್ ಪಂದ್ಯಗಳಲ್ಲಿ ಇದು ಭಾರತದ ಆಟಗಾರರಿಗೆ ಮೊದಲ ಸೋಲು ಎನಿಸಿತು.

ಆದರೆ ಒಂದು ಗಂಟೆ 11 ನಿಮಿಷಗಳ ಪಂದ್ಯದಲ್ಲಿ ಚಿರಾಗ್-ಸಾತ್ವಿಕ್ ಸೋಲುವ ಮೊದಲು ಕೆಚ್ಚೆದೆ ಪ್ರದರ್ಶಿಸಿದರು. ಅಂತಿಮ ಗೇಮ್‌ನಲ್ಲಿ 1-8 ರಿಂದ ಹಿಂದೆಯಿದ್ದ ಭಾರತದ ಜೋಡಿ ಚೇತರಿಕೆಯ ಆಟವಾಡಿತು. ಮತ್ತೊಮ್ಮೆ 13-20ರಲ್ಲಿ ಹಿಂದೆಯಿದ್ದಾಗ ಅಂತರವನ್ನು 19-20ಕ್ಕೆ ಇಳಿಸಿತು. ಆದರೆ ಸಕಾಲಕ್ಕೆ ಚೀನಾದ ಜೋಡಿ ಅಮೂಲ್ಯ ಪಾಯಿಂಟ್‌ಗಳನ್ನು ಪಡೆಯಿತು.

ಇದು ಎಂಟು ವರ್ಷಗಳಲ್ಲಿ ಚೀನಾ ಮಾಸ್ಟರ್ಸ್ ಡಬಲ್ಸ್‌ನಲ್ಲಿ ಆತಿಥೇಯ ತಂಡಕ್ಕೆ ಮೊದಲ ಪ್ರಶಸ್ತಿ ಎನಿಸಿತು. ಈ ಪ್ರಶಸ್ತಿ ಗೆದ್ದರೆ ವರ್ಷದ ಎರಡನೇ ಬಿಡಬ್ಲ್ಯುಎಫ್ ಸೂಪರ್ 750 ಸರಣಿಯಲ್ಲಿ ಗೆಲುವನ್ನು ಪಡೆದಂತೆ ಆಗುತಿತ್ತು.

ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್: ಮತ್ತೆ ಮಿಂಚಿದ ಶ್ರೀಹರಿ

ಚಿನ್ನದ ಹೊನಲು ಹರಿಸಿದ ಲಿಖಿತ್, ಹರ್ಷಿತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೀನಾದಲ್ಲಿ ಈಚೆಗೆ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಲಿಖಿತ್ ಎಸ್.ಪಿ ಇಲ್ಲಿ ನಡೆದ ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಚಿನ್ನ ಡಬಲ್ ಸಾಧನೆ ಮಾಡಿದರು. ಮಹಿಳೆಯರ ವಿಭಾಗದಲ್ಲಿ ಹರ್ಷಿತಾ ಜಯರಾಮ್ ಕೂಡ ಸ್ವರ್ಣ ಸಂಭ್ರಮ ಆಚರಿಸಿದರು.

ಆತಿಥೇಯ ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್ (ಎನ್‌ಎಸಿ) ಪ್ರತಿನಿಧಿಸುವ ಲಿಖಿತ್ 100 ಮೀ ಬ್ರೆಸ್ಟ್‌ಸ್ಟ್ರೋಕ್ ಮತ್ತು 50 ಮೀ ಬ್ರೆಸ್ಟ್‌ಸ್ಟ್ರೋಕ್ ಸ್ಕಿನ್ಸ್ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಜಯಿಸಿದರು. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಅವರು ಎಸ್. ಸುನೀಶ್ ಮತ್ತು ಮಣಿಕಂಠ ಲಕ್ಷ್ಮಣ್ ಸವಾಲು ಮೀರಿದರು.

ಸ್ಕಿನ್ಸ್‌ನಲ್ಲಿ ಅವರಿಗೆ ವಿದಿತ್ ಎಸ್. ಶಂಕರ್ ಮತ್ತು ಎಸ್ ಸುನೀಶ್ ನಿಕಟ ಪೈಪೋಟಿಯೊಡ್ಡಿದರು. ಲಿಖಿತ್, ಏಷ್ಯನ್ ಕ್ರೀಡಾಕೂಟದಲ್ಲಿ ಪುರುಷರ 100 ಮೀ ಬ್ರೆಸ್ಟ್‌ಸ್ಟ್ರೋಕ್ ಫೈನಲ್‌ನಲ್ಲಿ ಏಳನೇ ಸ್ಥಾನ ಪಡೆದಿದ್ದರು.

ಮಹಿಳೆಯರ ವಿಭಾಗದ ಹರ್ಷಿತಾ ಜಯರಾಮ್ ಅವರು 100 ಮೀ ಬ್ರೆಸ್ಟ್‌ಸ್ಟ್ರೋಕ್ ಮತ್ತು 50 ಮೀ ಸ್ಕಿನ್ಸ್‌ನಲ್ಲಿ ಮೊದಲಿಗರಾದರು. 100 ಮೀ ಫ್ರೀಸ್ಟೈಲ್‌ನಲ್ಲಿಯೂ ಹರ್ಷಿತಾ ಪಾರಮ್ಯ ಮೆರೆದರು.

ಶ್ರೀಹರಿ, ಸಜನ್ ಮಿಂಚು: ಒಲಿಂಪಿಯನ್ ಈಜುಪಟುಗಳಾದ ಶ್ರೀಹರಿ ನಟರಾಜ್ ಮತ್ತು ಸಜನ್ ಪ್ರಕಾಶ್ ಅವರ ಪದಕ ಬೇಟೆ ಸ್ಪರ್ಧೆಯ ಕೊನೆಯ ದಿನವೂ ನಡೆಯಿತು.

ಪುರುಷರ 50 ಮೀ ಫ್ರೀಸ್ಟೈಲ್ ಸ್ಕಿನ್ಸ್‌ನಲ್ಲಿ ಡಾಲ್ಫಿನ್ ಅಕ್ವಾಟಿಕ್ಸ್‌ನ ಶ್ರೀಹರಿ ನಟರಾಜನ್ ಪ್ರಥಮ ಹಾಗೂ ಸಜನ್ ಪ್ರಕಾಶ್ ದ್ವಿತೀಯ ಸ್ಥಾನ ಪಡೆದರು.

ಫಲಿತಾಂಶಗಳು: ಪುರುಷರು: 100 ಮೀ ಬ್ರೆಸ್ಟ್‌ಸ್ಟ್ರೋಕ್: ಲಿಖಿತ್ ಎಸ್.ಪಿ (ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್; 1ನಿ,04.15ಸೆ)-1, ಎಸ್. ಸುನೀಶ್ (ಜಿಎಸ್‌ಸಿ; 1ನಿ,-6.19ಸೆ)-2, ಮಣಿಕಂಠ ಲಕ್ಷ್ಮಣ್ (ಬಿಎಸಿ;1ನಿ,7.99ಸೆ)-3

ಬೆಂಗಳೂರಿನ ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್‌ನಲ್ಲಿ ಭಾನುವಾರ ಮುಕ್ತಾಯವಾದ ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್‌ನಲ್ಲಿ ನಡೆದ ಪುರುಷರ 50 ಮೀಟರ್ಸ್ ಫ್ರೀಸ್ಟೈಲ್, ಸ್ಕಿನ್ಸ್ ಸ್ಪರ್ಧೆ (ಎಡದಿಂದ ಬಲಕ್ಕೆ) ತರುಣ್ ಅರುಣ್ ಗೌಡದ (ಬಿಎಸಿ), ಝೇವಿಯರ್ ಡಿಸೋಜಾ (ಜೈನ್ ವಿವಿ), ಶಿವ ಶ್ರೀಧರ್ (ಬಿಎಸಿ), ಶ್ರೀಹರಿ ನಟರಾಜ್ (ಡಾಲ್ಫಿನ್), ಸಜನ್ ಪ್ರಕಾಶ್ (ಬಿಎಸಿ), ಧ್ಯಾನ್ (ಜಿಎಸ್‌ಸಿ), ಪ್ರಥಮ್ ಶರ್ಮಾ (ಡಾಲ್ಫಿನ್), ಎಸ್. ಉನ್ನಿಕೃಷ್ಣನ್ (ಜಿಎಸ್‌ಸಿ) (ಎಡಚಿತ್ರ). ಮಹಿಳೆಯರ 50 ಮೀಟರ್ ಫ್ರೀಸ್ಟೈಲ್ ಸ್ಕಿನ್ಸ್‌ನಲ್ಲಿ ಜಯಿಸಿದವರು; ಚಿನ್ನ ಗೆದ್ದ ವಿಹಿತಾ ನಯನಾ (ಮಧ್ಯ), ಬೆಳ್ಳಿ ಪದಕ ಗಳಿಸಿದ ಎಸ್. ಖುಜುಲಾ(ಎಡ) ಮತ್ತು ಕಂಚು ಗಳಿಸಿದ ಶಾಲಿನಿ ಆರ್ ದೀಕ್ಷಿತ್ –ಪ್ರಜಾವಾಣಿ ಚಿತ್ರಗಳು/ ಎಸ್‌.ಕೆ. ದಿನೇಶ್

400 ಮೀ ಫ್ರೀಸ್ಟೈಲ್: ಶಿವಾಂಕ್ ವಿಶ್ವನಾಥ್ (ಬಿಎಸಿ; 4ನಿ,10.30ಸೆ)-1, ಅನಿಕೇತ್ ಚವ್ಹಾಣ್ (ಡಾಲ್ಫಿನ್; 4ನಿ,23.84ಸೆ)-2, ಧ್ಯಾನ್ ಬಾಲಕೃಷ್ಣ (ಬಿಎಸಿ;4ನಿ,25.90ಸೆ)-3

50 ಮೀ ಬ್ರೆಸ್ಟ್‌ಸ್ಟ್ರೋಕ್, ಸ್ಕಿನ್ಸ್: ಎಸ್.ಪಿ. ಲಿಖಿತ್ (ಎನ್‌ಎಸಿ; 28.40ಸೆ)-1, ವಿದಿತ್ ಎಸ್ ಶಂಕರ್ (ಡಾಲ್ಫಿನ್;29.02ಸೆ)-2, ಎಸ್. ಸುನೀಶ್ (ಜಿಎಸ್‌ಸಿ; 30.16ಸೆ)-3: 100 ಮೀ ಫ್ರೀಸ್ಟೈಲ್: ಎ.ಎಸ್. ಆನಂದ್ (ಡಾಲ್ಫಿನ್; 53.03ಸೆ)-1, ಝೇವಿಯರ್ ಡಿಸೋಜಾ (ಜೈನ್ ವಿವಿ; 54.02ಸೆ)-2, ಎಸ್. ಉನ್ನಿಕೃಷ್ಣನ್ (ಜಿಎಸ್‌ಸಿ; 54.75ಸೆ)-3

50 ಮೀ ಫ್ರೀಸ್ಟೈಲ್ ಸ್ಕಿನ್ಸ್: ಶ್ರೀಹರಿ ನಟರಾಜ್ (ಡಾಲ್ಫಿನ್;23.06ಸೆ)-1, ಸಜನ್ ಪ್ರಕಾಶ್ (ಬಿಎಸಿ; 23.52ಸೆ)-2, ಝೇವಿಯರ್ ಡಿಸೋಜಾ (ಜೈನ್ ವಿವಿ; 25.28ಸೆ)-3:

ಗುಂಪು ಒಂದು: 100 ಮೀ ಬ್ರೆಸ್ಟ್‌ಸ್ಟ್ರೋಕ್: ಅಭಿನಂದನ್ ಖಂಡೇಲವಾಲ (ಡಾಲ್ಫಿನ್; 1ನಿ,08.52ಸೆ)-1, ವಿದಿತ್ ಎಸ್ ಶಂಕರ್ (ಡಾಲ್ಫಿನ್; 1ನಿ,08.64ಸೆ)-2, ಶ್ರೇಯಸ್ ಮಂಜುನಾಥ್ (ಬಿಎಸಿ; 1ನಿ,11.91ಸೆ)-3

100 ಮೀ ಫ್ರೀಸ್ಟೈಲ್: ಕಾರ್ತಿಕೇಯನ್ ನಾಯರ್ (ಡಾಲ್ಫಿನ್; 54.47ಸೆ)-1, ಆಕಾಶ್ ಮಣಿ (ಬಿಎಸಿ; 54.51ಸೆ)-2, ರಿಷಭ್ ಸಿಂಗ್ ಧಡವಾಲ್ (ಡಾಲ್ಫಿನ್; 55.24ಸೆ)-3

ಗುಂಪು ಎರಡು: 200 ಮೀ ವೈಯಕ್ತಿಕ ಮೆಡ್ಲೆ: ಪೃಥ್ವಿರಾಜ್ ಮೆನನ್ (ಬಿಎಸಿ;2ನಿ,22.39ಸೆ)-1, ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 2ನಿ,22.40ಸೆ)-2, ಮೊನಿಷ್ ಪಿ.ವಿ. (ಬಿಎಸಿ;2ನಿ,26.99ಸೆ)-3: 100 ಮೀ ಬ್ರೆಸ್ಟ್‌ಸ್ಟ್ರೋಕ್: ಆಯುಷ್ ಶಿವರಾಜು ಮೇಗನಹಳ್ಳಿ (ಡಾಲ್ಫಿನ್; 1ನಿ,11.22ಸೆ)-1, ಡ್ಯಾನಿಲ್ ಪಾಲ್ (ಬಿಎಸಿ; 1ನಿ,15.10ಸೆ)-2, ದಕ್ಷ್ ಮಟ್ಟಾ (ಬಿಎಸಿ; 1ನಿ,19.59ಸೆ)-3:

200 ಮೀ ಫ್ರೀಸ್ಟೈಲ್: ಇದಾಂತ್ ಚತುರ್ವೇದಿ (ಪಿ.ಎಂ. ಈಜುಕೇಂದ್ರ; 2ನಿ,06.82ಸೆ)-1, ಮೊನಿಷ್ ಪಿವಿ (ಬಿಎಸಿ;2ನಿ,06.83ಸೆ)-2, ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 2ನಿ, 7.01ಸೆ)-3: 100 ಮೀ ಫ್ರೀಸ್ಟೈಲ್: ಮೊನಿಷ್ ಪಿವಿ (ಬಿಎಸಿ; 57.19ಸೆ)-1, ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 57.47ಸೆ)-2, ಇದಾಂತ್ ಚತುರ್ವೇದಿ (ಪಿಎಂ ಈಜುಕೇಂದ್ರ; 57.76ಸೆ)-3

ಮಹಿಳೆಯರು: 100 ಮೀ ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಜಿಎಸ್‌ಸಿ;1ನಿ,20.97ಸೆ)-1, ಝರಾ ವಿಲಿಯಮ್ಸ್ (ಡಾಲ್ಫಿನ್; 1ನಿ,21.98ಸೆ)-2, ಶೃಂಗಿ ರಾಜೇಶ್ ಬಾಂದೇಕರ್ (ಜೈನ್ ವಿವಿ;1ನಿ,30.81ಸೆ)-3

400 ಮೀ ಫ್ರೀಸ್ಟೈಲ್: ಅನುಮತಿ ಚೌಗುಲೆ (ಬಿಎಸಿ; 4ನಿ,56.42ಸೆ)-1, ಅನ್ನಾ ಸ್ಫೂರ್ತಿ ತೆರೇಸಾ (ಬಿಎಸಿ; 5.12.88ಸೆ)-2, ತಿತೀಕ್ಷಾ ಹನುಮಂತರಾಜು (ಜಿಎಸ್‌ಸಿ; 5ನಿ,19.69ಸೆ)-3.

50 ಮೀ ಬ್ರೆಸ್ಟ್‌ಸ್ಟ್ರೋಕ್ ಸ್ಕಿನ್ಸ್: ಹರ್ಷಿತಾ ಜಯರಾಮ್ (ಜಿಎಸ್‌ಸಿ; 34.73ಸೆ)-1, ಎಸ್. ತಾನ್ಯಾ (ಡಾಲ್ಫಿನ್; 35ಸೆ)-2, ಅನುಷ್ಕಾ ಎಸ್ ಪಾಟೀಲ (ಡಾಲ್ಫಿನ್; 35.75ಸೆ)-3

100 ಮೀ ಫ್ರೀಸ್ಟೈಲ್: ಹರ್ಷಿತಾ ಜಯರಾಮ್ (ಜಿಎಸ್‌ಸಿ;1ನಿ,04.75ಸೆ)-1, ಕೆ.ಆರ್. ಧೃತಿ (ಜಿಎಸ್‌ಸಿ; 1ನಿ,04.76ಸೆ)-2, ಅನುಮತಿ ಚೌಗುಲೆ (ಬಿಎಸಿ; 1ನಿ,05.27ಸೆ)-3

50 ಮೀ ಫ್ರೀಸ್ಟೈಲ್ ಸ್ಕಿನ್ಸ್: ವಿನಿತಾ ನಯನಾ (ಬಿಎಸಿ; 27.79ಸೆ)-1, ಎಸ್. ಖುಜುಲಾ (ಡಾಲ್ಫಿನ್; 27.91ಸೆ)-2, ಶಾಲಿನಿ ಆರ್ ದಿಕ್ಷಿತ್ (ಡಾಲ್ಫಿನ್; 28.09ಸೆ)-3

ಗುಂಪು 1: 100 ಮೀ ಬ್ರೆಸ್ಟ್‌ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ; 1ನಿ,17.60ಸೆ)-1, ಅನುಷ್ಕಾಎಸ್ ಪಾಟೀಲ (ಡಾಲ್ಫಿನ್; 1ನಿ,20.41ಸೆ)-2, ಚಾರು ಹಂಸಿನಿ ಎಸ್.ಪಿ (ಎನ್‌ಎಸಿ; 1ನಿ,23.94ಸೆ)-3

100 ಮೀ ಫ್ರೀಸ್ಟೈಲ್: ಎಸ್. ಖುಜುಲಾ (ಡಾಲ್ಫಿನ್; 1ನಿ,01.37ಸೆ)-1, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್; 1ನಿ,02.68ಸೆ)-2 ಅದಿತಿ ಎನ್ ಮೂಲ್ಯಾ (ಬಿಎಸಿ; 1ನಿ,03.88ಸೆ)-3

ಗುಂಪು ಎರಡು: 200 ಮೀ ವೈಯಕ್ತಿಕ ಮೆಡ್ಲೆ: ಮೀನಾಕ್ಷಿ ಮೆನನ್ (ಬಿಎಸಿ; 2ನಿ,33.76ಸೆ)-1, ಎಸ್. ತಾನ್ಯಾ (ಡಾಲ್ಫಿನ್; 2ನಿ,33.81)-2, ನೈಷಾ (ಬಿಎಸಿ; 2ನಿ,36.24ಸೆ) -3

100 ಮಿ ಬ್ರೆಸ್ಟ್‌ಸ್ಟ್ರೋಕ್: ಎಸ್. ತಾನ್ಯಾ (ಡಾಲ್ಫಿನ್; 1ನಿ,16.77ಸೆ)-1, ತಿಸ್ಯಾ ಸೋನಾರ್ (ಪಿಎಂ ಈಜುಕೇಂದ್ರ; 1ನಿ,21. 50ಸೆ)-2, ಶ್ರೀಚರಣಿ ತುಮು (ಜಿಎಸ್‌ಸಿ; 1ನಿ,24. 23ಸೆ)-3

200 ಮೀ ಫ್ರೀಸ್ಟೈಲ್: ಶ್ರೀಚರಣಿ ತುಮು (ಜಿಎಸ್‌ಸಿ; 2ನಿ,13.63ಸೆ)-1, ಮೀನಾಕ್ಷಿ ಮೆನನ್ (ಬಿಎಸಿ; 2ನಿ,14.93ಸೆ)-2, ನೈಷಾ (ಬಿಎಸಿ;2ನಿ, 16,34ಸೆ)-3: 100 ಮೀ ಫ್ರೀಸ್ಟೈಲ್: ಶ್ರೀಚರಣಿ ತುಮು (ಜಿಎಸ್‌ಸಿ; 1ನಿ,01.72ಸೆ)-1, ತಿಸ್ಯಾ ಸೋನಾರ್ (ಪಿಎಂ ಈಜುಕೇಂದ್ರ, 1ನಿ,02. 64ಸೆ)-2, ನೈಶಾ (ಬಿಎಸಿ; 1ನಿ,04.05ಸೆ)-3

ಸಂಕ್ಷಿಪ್ತ ಸುದ್ದಿ

ಕರ್ನಾಟಕಕ್ಕೆ ದೆಹಲಿ ಸವಾಲು ಇಂದು

ಅಹಮದಾಬಾದ್: ಅನುಭವಿ ಆಟಗಾರ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡಕ್ಕೆ ಯುವನಾಯಕ ಯಶ್ ಧುಳ್ ಅವರ ದೆಹಲಿ ತಂಡವು ಸೋಮವಾರ ಸವಾಲೊಡ್ಡಲಿದೆ.

ಇಲ್ಲಿ ನಡೆಯುತ್ತಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಮೂರನೇ ಪಂದ್ಯದಲ್ಲಿ 'ಗೆಲುವಿನ ಹ್ಯಾಟ್ರಿಕ್' ಮೇಲೆ ಕರ್ನಾಟಕ ಕಣ್ಣಿದೆ. ಜಮ್ಮು–ಕಾಶ್ಮೀರ ಹಾಗೂ ಉತ್ತರಾಖಂಡ ತಂಡಗಳ ಮಣಿಸಿರುವ ಕರ್ನಾಟಕವು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ ಬಿಹಾರ ಮತ್ತು ಮಿಜೋರಾಂ ತಂಡಗಳನ್ನು ಹೆಚ್ಚು ನೆಟ್ ರನ್‌ರೇಟ್‌ನಿಂದ ಸೋಲಿಸಿರುವ ದೆಹಲಿ ಅಗ್ರಸ್ಥಾನದಲ್ಲಿದೆ.

ಆದ್ದರಿಂದ ಈ ಪಂದ್ಯದಲ್ಲಿ ಗೆದ್ದರೆ ಅಗ್ರಸ್ಥಾನಕ್ಕೇರುವ ಅವಕಾಶ ಮಯಂಕ್ ಬಳಗಕ್ಕೆ ಸಿಗಲಿದೆ. ಮೊದಲೆರಡೂ ಪಂದ್ಯಗಳಲ್ಲಿ ಈ ತಂಡಗಳು ದುರ್ಬಲ ಎದುರಾಳಿಗಳ ವಿರುದ್ಧ ಆಡಿವೆ.

ಪಂದ್ಯ ಆರಂಭ: ಬೆಳಿಗ್ಗೆ 9

ಭಾರತ ಪರಿಹಾರ ನೀಡಲಿ: ಪಿಸಿಬಿ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಆತಿಥ್ಯದ ಹಕ್ಕುಗಳಿಗೆ ಸಂಬಂಧಿಸಿದಂತೆ ಐಸಿಸಿಯು ತನ್ನ ಜೊತೆ ಒಪ್ಪಂದಕ್ಕೆ ಸಹಿಹಾಕಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಒತ್ತಾಯಿಸಿದೆ. ರಾಜಕೀಯ ಮತ್ತು ಭದ್ರತೆಯ ಕಾರಣಗಳನ್ನು ಮುಂದಿಟ್ಟು ಭಾರತ ಒಂದೊಮ್ಮೆ ಪಾಕಿಸ್ತಾನದಲ್ಲಿ ಆಡಲು ನಿರಾಕರಿಸಿದಲ್ಲಿ ಪಿಸಿಬಿಗೆ ಪರಿಹಾರ ನೀಡಬೇಕು ಎಂದೂ ಆಗ್ರಹಿಸಿದೆ.

ಪಾಕಿಸ್ತಾನಕ್ಕೆ ಚಾಂಪಿಯನ್ಸ್ ಟ್ರೋಫಿಯ ಆತಿಥ್ಯವನ್ನು ಐಸಿಸಿಯ ಈಗಾಗಲೇ ವಹಿಸಿದೆ. ಆದರೆ ಅತಿ ಮಹತ್ವದ ಒಪ್ಪಂದಕ್ಕೆ ಐಸಿಸಿ ಇನ್ನೂ ಅಂಕಿತ ಹಾಕಿಲ್ಲ ಎಂದು ವಿಶ್ವಸನೀಯ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

2025ರ ಫೆಬ್ರುವರಿ –ಮಾರ್ಚ್‌ನಲ್ಲಿ ಈ ಟೂರ್ನಿ ನಡೆಯಬೇಕಾಗಿದೆ. ಆತಿಥ್ಯಕ್ಕೆ ಸಂಬಂಧಿಸಿ ಪಿಸಿಬಿ ಅಧ್ಯಕ್ಷ ಝಕಾ ಅಶ್ರಫ್ ಮತ್ತು ಸಿಒಒ ಸಲ್ಮಾನ್ ನಸೀರ್ ಅವರು ಅಹಮದಾಬಾದಿನಲ್ಲಿ ಐಸಿಸಿ ಕಾರ್ಯಕಾರಿ ಮಂಡಳಿ ಜೊತೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಭಾರತ, ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಪಾಕ್ ಆತಿಥ್ಯದಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಆ ದೇಶಕ್ಕೆ ಹೋಗಿ ಆಡಲು ನಿರಾಕರಿಸಿತ್ತು. ಹೀಗಾಗಿ ಭಾರತದ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಲಾಗಿತ್ತು. ಈಗ ಮತ್ತೊಮ್ಮೆ ಭಾರತ ಹಾಗೆ ಮಾಡಬಹುದು ಎಂಬುದು ಪಾಕಿಸ್ತಾನದ ಯೋಚನೆಯಾಗಿದೆ.

ಮಂಗಳೂರು ವಿವಿಗೆ ಪ್ರಶಸ್ತಿ

ಉಡುಪಿ: ಮಂಗಳೂರು ವಿಶ್ವವಿದ್ಯಾಲಯ ತಂಡ, 33 ವರ್ಷಗಳ ಬಳಿಕ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಕಬಡ್ಡಿ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಆತಿಥೇಯ ತಂಡ, ಇಲ್ಲಿನ ಪೂರ್ಣಪ್ರಜ್ಞ ಕಾಲೇಜು ಆವರಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಚೈನ್ನೈನ ವಿಇಎಲ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಟೆಕ್ನಾಲಜಿ ಅಂಡ್ ಅಡ್ವಾನ್ಸ್ಡ್ ಸ್ಟಡೀಸ್ ತಂಡದ ವಿರುದ್ಧ 47–15ರಲ್ಲಿ ಗೆಲುವು ಸಾಧಿಸಿತು. ಸೆಮಿಫೈನಲ್‌ನಲ್ಲಿ ಮಂಗಳೂರು ವಿವಿ 49–35ರಲ್ಲಿ ಬನ್ಸಿಲಾಲ್ ವಿವಿ ತಂಡವನ್ನು ಮತ್ತು ವಿಇಎಸ್‌ಎಸ್ 49–42ರಲ್ಲಿ ರೋಹ್ತಕ್‌ನ ಮಹರ್ಷಿ ದಯಾನಂದ ವಿವಿ ತಂಡವನ್ನು ಸೋಲಿಸಿದ್ದವು.

ಐಪಿಎಲ್: ಫ್ರಾಂಚೈಸಿಗಳಿಂದ ಕೆಲ ಆಟಗಾರರ ಬಿಡುಗಡೆ

ಟೈಟಾನ್ಸ್ ತಂಡದಲ್ಲೇ ಉಳಿದ ಪಾಂಡ್ಯ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡ್ ಆಟಗಾರ ಹಾರ್ದಿಕ್ ಪಾಂಡ್ಯ ಮುಂದಿನ ಐಪಿಎಲ್ ಆವೃತ್ತಿಯಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ತೊರೆದು ಮುಂಬೈ ಇಂಡಿಯನ್ಸ್ ಸೇರಲಿದ್ದಾರೆ. ಗುಜರಾತ್ ಫ್ರಾಂಚೈಸಿಯಿಂದ ಭಾನುವಾರ ಅಧಿಕೃತ ಮಾಹಿತಿ ಹೊರಬಿದ್ದಿದ್ದು, ಪಾಂಡ್ಯ ಅವರೇ ತಂಡವನ್ನು ಮುನ್ನಡೆಸಲಿದ್ದಾರೆ.

ಪಾಂಡ್ಯ ಅವರು 2022ರಲ್ಲಿ ಟೈಟಾನ್ಸ್ ನಾಯಕರಾಗಿ ನೇಮಕಗೊಂಡು, ಮೊದಲ ಋತುವಿನಲ್ಲೇ ತಂಡಕ್ಕೆ ಪ್ರಶಸ್ತಿ ತಂದುಕೊಟ್ಟಿದ್ದರು. 2023ರ ಆವೃತ್ತಿಯಲ್ಲೂ ಉತ್ತಮ ಪ್ರದರ್ಶನ ನೀಡಿ ತಂಡವು ರನ್ನರ್ ಅಪ್ ಸ್ಥಾನ ಪಡೆದಿತ್ತು. ಚೆನ್ನೈ ಸೂಪರ್ ಕಿಂಗ್ಸ್ ಚಾಂಪಿಯನ್ ಆಗಿತ್ತು.

ಪಾಂಡ್ಯ ಅವರು ಎರಡು ವರ್ಷಗಳಿಂದ ಟೈಟಾನ್ಸ್ ತಂಡದಲ್ಲಿ ಆಡಿದ್ದಾರೆ.

ಮತ್ತೊಂದೆಡೆ ಮುಂಬೈ ತಂಡವು 2024ರ ಐಪಿಎಲ್‌ಗೆ ರೋಹಿತ್ ಶರ್ಮಾ ಅವರನ್ನು ನಾಯಕರನ್ನಾಗಿ ಮುಂದುವರಿಸಿದೆ. ಆದರೆ ತಂಡದಲ್ಲಿದ್ದ ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಅವರನ್ನು ಬಿಡುಗಡೆ ಮಾಡದೆ. ಆರ್ಚರ್ ಮೊಣಕೈ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿದ್ದಾರೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶ್ರೀಲಂಕಾದ ಲೆಗ್‌ಸ್ಪಿನ್ನರ್ ವನಿಂದು ಹಸರಂಗ, ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್, ಇಂಗ್ಲೆಂಡ್‌ನ ಎಡಗೈ ಬ್ಯಾಟರ್ ಡೇವಿಡ್ ವಿಲಿ ಅವರನ್ನು ಬಿಡುಗಡೆ ಮಾಡಿದೆ.

ಐಪಿಎಲ್ ಮುಂದಿನ ಆವೃತ್ತಿಗೆ ಡಿಸೆಂಬರ್ 19ರಂದು ಬಿಡ್ಡಿಂಗ್ ನಡೆಯಲಿದ್ದು, ಅದಕ್ಕೂ ಮುಂಚಿತವಾಗಿ ಫ್ರಾಂಚೈಸಿಗಳು ಹಲವು ಆಟಗಾರರನ್ನು ಉಳಿಸಿಕೊಂಡು, ಮತ್ತೆ ಕೆಲವರನ್ನು ಬಿಡುಗಡೆ ಮಾಡಿವೆ.

ಹಾರ್ದಿಕ್ ಪಾಂಡ್ಯ

ಟ್ರೇಡ್ ವಿಂಡೊ: ಲಖನೌಗೆ ಪಡಿಕ್ಕಲ್

ಟ್ರೇಡ್ ವಿಂಡೋ ನಿಯಮದಡಿಯಲ್ಲಿ ಆರ್‌ಸಿಬಿ ತಂಡದಲ್ಲಿದ್ದ ಶಹಬಾಜ್ ಅಹಮದ್ ಮತ್ತು ಸನ್‌ರೈಸರ್ಸ್ ತಂಡದಲ್ಲಿದ್ದ ಮಯಾಂಕ್ ಡಾಗರ್ ಅವರನ್ನು ಫ್ರಾಂಚೈಸಿಗಳು ಪರಸ್ಪರ ವಿನಿಮಯ ಮಾಡಿಕೊಂಡಿವೆ.

ಲಖನೌ ತಂಡದಲ್ಲಿ ರೊಮಾರಿಯೋ ಶೆಫರ್ಡ್ ಮತ್ತು ಅವೇಶ್ ಖಾನ್ ಅವರನ್ನು ಬಿಡುಗಡೆ ಮಾಡಲಾಗಿದೆ. ಶೆಫರ್ಡ್ ಮುಂಬೈ ತಂಡವನ್ನು ಹಾಗೂ ಆವೇಶ್ ರಾಜಸ್ಥಾನ ತಂಡವನ್ನು ಸೇರಿಕೊಳ್ಳಲಿದ್ದಾರೆ.

ರಾಜಸ್ತಾನ ತಂಡದಲ್ಲಿದ್ದ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರು ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಮುಂಬೈಗೆ ಮರಳಲು ಹಾರ್ದಿಕ್ ಸಜ್ಜು

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಮುಂದಿನ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಮರಳುವ ಸಾಧ್ಯತೆ ದಟ್ಟವಾಗಿದೆ. ಏಕಬಾರಿಯ ನಗದು ಪಾವತಿಯ ಈ ಒಪ್ಪಂದ ಅಂತಿಮಗೊಳ್ಳುವ ಹಂತದಲ್ಲಿದೆ.

ಮುಂದಿನ ಐಪಿಎಲ್‌ಗೆ ಗುಜರಾತ್ ಟೈಟಾನ್ಸ್ ತಂಡ ಉಳಿಸಿಕೊಂಡಿರುವ ಆಟಗಾರರ ಪಟ್ಟಿಯಲ್ಲಿ ಭಾನುವಾರ ಪಾಂಡ್ಯ ಅವರ ಹೆಸರೂ ಉಲ್ಲೇಖವಾಗಿದೆ. ಉಳಿಸಿಕೊಳ್ಳುವ ಮತ್ತು ಕೈಬಿಡುವ ಆಟಗಾರರ ಪಟ್ಟಿ ಪ್ರಕಟಿಸಲು ಭಾನುವಾರ ಕೊನೆಯ ದಿನವಾಗಿತ್ತು.

ಆದರೆ 'ಟ್ರೇಡಿಂಗ್ ವಿಂಡೊ' ಡಿಸೆಂಬರ್ 12ರವರೆಗೆ ಮುಕ್ತವಾಗಿದೆ. 'ಮಿನಿ ಹರಾಜು' ಡಿಸೆಂಬರ್ 19ರಂದು ದುಬೈನಲ್ಲಿ ನಿಗದಿಯಾಗಿದೆ.

ತಂಡದಲ್ಲಿ ಉಳಿದ ಮತ್ತು ಬಿಡುಗಡೆಯಾದ ಆಟಗಾರರು

1 ರಾಯಲ್ ಚಾಲೆಂಜರ್ಸ್ ಬೆಂಗಳೂರು: ಫಾಫ್ ಡು ಪ್ಲೆಸಿ, ಗ್ಲೆನ್ ಮ್ಯಾಕ್ಸ್‌ವೆಲ್, ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ಅನುಜ್ ರಾವತ್, ದಿನೇಶ್ ಕಾರ್ತಿಕ್, ಸುಯೇಶ್ ಪ್ರಭುದೇಸಾಯಿ, ವಿಲ್ ಜಾಕ್ಸ್, ಮಹಿಪಾಲ್ ಲೊಮ್ರೋರ್, ಕರಣ್ ಶರ್ಮಾ, ಮನೋಜ್ ಭಾಂಡಗೆ, ವೈಶಾಕ್ ವಿಜಯ್‌ಕುಮಾರ್, ಆಕಾಶ್ ದೀಪ್, ಮೊಹಮ್ಮದ್ ಸಿರಾಜ್, ರೀಸ್ ಟೋಪ್ಲಿ, ಹಿಮಾಂಶು ಶರ್ಮಾ, ರಾಜನ್ ಕುಮಾರ್.
ಬಿಡುಗಡೆಯಾದವರು: ವನಿಂದು ಹಸರಂಗ, ಹರ್ಷಲ್ ಪಟೇಲ್, ಜೋಶ್ ಹ್ಯಾಜಲ್‌ವುಡ್, ಫಿನ್ ಅಲೆನ್, ಮೈಕೆಲ್ ಬ್ರೇಸ್‌ವೆಲ್, ಡೇವಿಡ್ ವಿಲ್ಲಿ, ವೇಯ್ನ್ ಪಾರ್ನೆಲ್, ಸೋನು ಯಾದವ್, ಅವಿನಾಶ್ ಸಿಂಗ್, ಸಿದ್ಧಾರ್ಥ್ ಕೌಲ್, ಕೇದಾರ್ ಜಾಧವ್

2 ಮುಂಬೈ ಇಂಡಿಯನ್ಸ್: ರೋಹಿತ್ ಶರ್ಮಾ (ನಾಯಕ), ಡೆವಾಲ್ಡ್ ಬ್ರೆವಿಸ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ತಿಲಕ್ ವರ್ಮಾ, ಟಿಮ್ ಡೇವಿಡ್, ವಿಷ್ಣು ವಿನೋದ್, ಅರ್ಜುನ್ ತೆಂಡೂಲ್ಕರ್, ಕ್ಯಾಮರೂನ್ ಗ್ರೀನ್, ಶಮ್ಸ್ ಮುಲಾನಿ, ನೇಹಲ್ ವಧೇರಾ, ಜಸ್‌ಪ್ರೀತ್ ಬೂಮ್ರಾ, ಕುಮಾರ್ ಕಾರ್ತಿಕೇಯ, ಪಿಯೂಷ್ ಚಾವ್ಲಾ, ಆಕಾಶ್ ಮೊಧ್ವಾಲ್, ಜೇಸನ್ ಬೆಹ್ರೆನ್‌ಡಾರ್ಫ್, ರೊಮಾರಿಯೊ ಶೆಫರ್ಡ್.
ಬಿಡುಗಡೆಯಾದವರು: ಅರ್ಷದ್ ಖಾನ್, ರಮಣದೀಪ್ ಸಿಂಗ್, ಹೃತಿಕ್ ಶೋಕೀನ್, ರಾಘವ್ ಗೋಯಲ್, ಜೋಫ್ರಾ ಆರ್ಚರ್, ಟ್ರಿಸ್ಟಾನ್ ಸ್ಟಬ್ಸ್, ಡುವಾನ್ ಜಾನ್ಸೆನ್, ಜೇ ರಿಚರ್ಡ್ಸನ್, ರಿಲೆ ಮೆರೆಡಿತ್, ಕ್ರಿಸ್ ಜೋರ್ಡಾನ್, ಸಂದೀಪ್ ವಾರಿಯರ್

3 ಗುಜರಾತ್ ಟೈಟಾನ್ಸ್: ಹಾರ್ದಿಕ್ ಪಾಂಡ್ಯ (ನಾಯಕ), ಡೇವಿಡ್ ಮಿಲ್ಲರ್, ಶುಭಮನ್ ಗಿಲ್, ಮ್ಯಾಥ್ಯೂ ವೇಡ್, ವೃದ್ಧಿಮಾನ್ ಸಹಾ, ಕೇನ್ ವಿಲಿಯಮ್ಸನ್, ಅಭಿನವ್ ಮನೋಹರ್, ಬಿ. ಸಾಯಿ ಸುದರ್ಶನ್, ದರ್ಶನ್ ನಲ್ಕಂಡೆ, ವಿಜಯ್ ಶಂಕರ್, ಜಯಂತ್ ಯಾದವ್, ರಾಹುಲ್ ತೆವಾಟಿಯಾ, ಮೊಹಮ್ಮದ್ ಶಮಿ, ನೂರ್ ಅಹ್ಮದ್, ಆರ್.ಸಾಯಿ ಕಿಶೋರ್, ರಶೀದ್ ಖಾನ್, ಜೋಶ್ ಲಿಟಲ್, ಮೋಹಿತ್ ಶರ್ಮಾ.
ಬಿಡುಗಡೆಯಾದವರು: ಯಶ್ ದಯಾಳ್, ಕೆ.ಎಸ್. ಭರತ್, ಶಿವಂ ಮಾವಿ, ಉರ್ವಿಲ್ ಪಟೇಲ್, ಪ್ರದೀಪ್ ಸಾಂಗ್ವಾನ್, ಓಡಿಯನ್ ಸ್ಮಿತ್, ಅಲ್ಜಾರಿ ಜೋಸೆಫ್, ದಸುನ್ ಶನಕ

4 ಲಖನೌ ಸೂಪರ್ ಜೈಂಟ್ಸ್: ಕೆ.ಎಲ್. ರಾಹುಲ್, ಕ್ವಿಂಟನ್ ಡಿ ಕಾಕ್, ನಿಕೋಲಸ್ ಪೂರನ್, ಆಯುಷ್ ಬದೋನಿ, ದೀಪಕ್ ಹೂಡಾ, ಕೆ. ಗೌತಮ್, ಕೃಣಾಲ್ ಪಾಂಡ್ಯ, ಕೈಲ್ ಮೇಯರ್ಸ್, ಮಾರ್ಕಸ್ ಸ್ಟೊಯಿನಿಸ್, ಪ್ರೇರಕ್ ಮಂಕಡ್, ಯದುವೀರ್ ಸಿಂಗ್, ಮಾರ್ಕ್ ವುಡ್, ಮಯಂಕ್ ಯಾದವ್, ಮೊಹ್ಸಿನ್ ಖಾನ್, ರವಿ ಬಿಷ್ಣೋಯಿ, ಯಶ್ ಠಾಕೂರ್, ಅಮಿತ್ ಮಿಶ್ರಾ, ನವೀನ್ ಉಲ್ ಹಕ್.
ಬಿಡುಗಡೆಯಾದವರು: ಡೇನಿಯಲ್ ಸ್ಯಾಮ್ಸ್, ಕರುಣ್ ನಾಯರ್, ಜಯದೇವ್ ಉನದ್ಕತ್, ಮನನ್ ವೋಹ್ರಾ, ಕರಣ್ ಶರ್ಮಾ, ಸೂರ್ಯಾಂಶ್ ಶೆಡ್ಜೆ, ಸ್ವಪ್ನಿಲ್ ಸಿಂಗ್, ಅರ್ಪಿತ್ ಗುಲೇರಿಯಾ

5 ಸನ್‌ರೈಸರ್ಸ್ ಹೈದರಾಬಾದ್: ಅಬ್ದುಲ್ ಸಮದ್, ಏಡನ್ ಮರ್ಕರಂ, ರಾಹುಲ್ ತ್ರಿಪಾಠಿ, ಗ್ಲೆನ್ ಫಿಲಿಪ್ಸ್, ಹೆನ್ರಿಚ್ ಕ್ಲಾಸೆನ್, ಮಯಂಕ್ ಅಗರವಾಲ್, ಅನ್ಮೋಲ್‌ಪ್ರೀತ್ ಸಿಂಗ್, ಉಪೇಂದ್ರ ಯಾದವ್, ನಿತೀಶ್ ರೆಡ್ಡಿ, ಅಭಿಷೇಕ್ ಶರ್ಮಾ, ಮಾರ್ಕೊ ಜಾನ್ಸೆನ್, ವಾಷಿಂಗ್ಟನ್ ಸುಂದರ್, ಸಂವಿರ್ ಸಿಂಗ್, ಭುವನೇಶ್ವರ್ ಕುಮಾರ್, ಮಯಂಕ್ ಮಾರ್ಕಂಡೆ, ಉಮ್ರಾನ್ ಮಲಿಕ್, ಟಿ. ನಟರಾಜನ್, ಫಜಲ್‌ಹಕ್ ಫಾರೂಕಿ.
ಬಿಡುಗಡೆಯಾದವರು: ಹ್ಯಾರಿ ಬ್ರೂಕ್, ಸಮರ್ಥ ವ್ಯಾಸ್, ಕಾರ್ತಿಕ್ ತ್ಯಾಗಿ, ವಿವ್ರಾಂತ್ ಶರ್ಮಾ, ಅಖೀಲ್ ಹುಸೇನ್, ಆದಿಲ್ ರಶೀದ್

6 ಕೋಲ್ಕತ್ತಾ ನೈಟ್ ರೈಡರ್ಸ್: ನಿತೀಶ್ ರಾಣಾ, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ರಹಮಾನುಲ್ಲಾ ಗುರ್ಬಾಜ್, ಸುನಿಲ್ ನಾರ್ರೈನ್, ಜೇಸನ್ ರಾಯ್, ಸುಯಶ್ ಶರ್ಮಾ, ಅನುಕೂಲ್ ರಾಯ್, ಆಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್, ಹರ್ಷಿತ್ ರಾಣಾ, ವೈಭವ್ ಅರೋರಾ, ವರುಣ್ ಚಕ್ರವರ್ತಿ.
ಬಿಡುಗಡೆಯಾದವರು: ಶಕೀಬ್ ಅಲ್ ಹಸನ್, ಲಿಟ್ಟನ್ ದಾಸ್, ಡೇವಿಡ್ ವೀಸ್, ಆರ್ಯ ದೇಸಾಯಿ, ಎನ್. ಜಗದೀಶನ್, ಮನ್‌ದೀಪ್ ಸಿಂಗ್, ಕುಲ್ವಂತ್ ಖೆಜ್ರೋಲಿಯಾ, ಶಾರ್ದೂಲ್ ಠಾಕೂರ್, ಲಾಕಿ ಫರ್ಗುಸನ್, ಉಮೇಶ್ ಯಾದವ್, ಟಿಮ್ ಸೌಥಿ, ಜಾನ್ಸನ್ ಚಾರ್ಲ್ಸ್

7 ಚೆನ್ನೈ ಸೂಪರ್ ಕಿಂಗ್ಸ್: ಎಂ.ಎಸ್. ಧೋನಿ, ಮೊಯಿನ್ ಅಲಿ, ದೀಪಕ್ ಚಾಹರ್, ಡೆವೊನ್ ಕಾನ್ವೆ, ತುಷಾರ್ ದೇಶಪಾಂಡೆ, ಶಿವಂ ದುಬೆ, ಋತುರಾಜ್ ಗಾಯಕವಾಡ್, ರಾಜವರ್ಧನ್ ಹಂಗರ್ಗೇಕರ್, ರವೀಂದ್ರ ಜಡೇಜಾ, ಅಜಯ್ ಮಂಡಲ್, ಮುಖೇಶ್ ಚೌಧರಿ, ಮತೀಶ ಪಥಿರಾನ, ಅಜಿಂಕ್ಯ ರಹಾನೆ, ಶೇಖ್ ರಶೀದ್, ಮಿಚೆಲ್ ಸ್ಯಾಂಟ್ನರ್, ಸಿಮರ್ಜೀತ್ ಸಿಂಗ್, ನಿಶಾಂತ್ ಸಿಂಧು, ಪ್ರಶಾಂತ್ ಸೋಲಂಕಿ, ಮಹೀಶ ತೀಕ್ಷಣ.
ಬಿಡುಗಡೆಯಾದವರು: ಬೆನ್ ಸ್ಟೋಕ್ಸ್, ಡ್ವೈನ್ ಪ್ರಿಟೋರಿಯಸ್, ಅಂಬಟಿ ರಾಯುಡು, ಸಿಸಂಡಾ ಮಗಲಾ, ಕೈಲ್ ಜೇಮಿಸನ್, ಭಗತ್ ವರ್ಮಾ, ಸೇನಾಪತಿ ಮತ್ತು ಆಕಾಶ್ ಸಿಂಗ್

8 ಡೆಲ್ಲಿ ಕ್ಯಾಪಿಟಲ್ಸ್: ರಿಷಭ್ ಪಂತ್, ಡೇವಿಡ್ ವಾರ್ನರ್, ಪೃಥ್ವಿ ಶಾ, ಅಕ್ಷರ್ ಪಟೇಲ್, ಮಿಚೆಲ್ ಮಾರ್ಷ್, ಅನ್ರಿಚ್ ನಾರ್ಕಿಯ, ಕುಲದೀಪ್ ಯಾದವ್, ಇಶಾಂತ್ ಶರ್ಮಾ, ಮುಕೇಶ್ ಕುಮಾರ್, ಲುಂಗಿ ಎನ್‌ಗಿಡಿ, ಅಭಿಷೇಕ್ ಪೊರೆಲ್, ಲಲಿತ್ ಯಾದವ್, ಯಶ್ ಧುಲ್, ಪ್ರವೀಣ್ ದುಬೆ, ವಿಕ್ಕಿ ಒಸ್ತ್ವಾಲ್, ಖಲೀಲ್ ಅಹ್ಮದ್.
ಬಿಡುಗಡೆಯಾದವರು: ಮನೀಶ್ ಪಾಂಡೆ, ಸರ್ಫರಾಜ್ ಖಾನ್, ರಿಲಿ ರುಸೊ, ರಿಪಾಲ್ ಪಟೇಲ್, ರೋಮನ್ ಪೊವೆಲ್, ಅಮನ್ ಖಾನ್, ಪ್ರಿಯಮ್ ಗಾರ್ಗ್, ಚೇತನ್ ಸಕಾರಿಯಾ, ಮುಸ್ತಾಫಿಜುರ್ ರೆಹಮಾನ್, ಫಿಲ್ ಸಾಲ್ಟ್, ಕಮಲೇಶ್ ನಾಗರ್‌ಕೋಟಿ

9 ರಾಜಸ್ಥಾನ ರಾಯಲ್ಸ್: ಸಂಜು ಸ್ಯಾಮ್ಸನ್, ರವಿಚಂದ್ರನ್ ಅಶ್ವಿನ್, ಯಜುವೇಂದ್ರ ಚಾಹಲ್, ಪ್ರಸಿದ್ಧ ಕೃಷ್ಣ, ನವದೀಪ್ ಸೈನಿ, ಯಶಸ್ವಿ ಜೈಸ್ವಾಲ್, ಕುಲದೀಪ್ ಸೇನ್, ಸಂದೀಪ್ ಶರ್ಮಾ, ರಿಯಾನ್ ಪರಾಗ್, ಧ್ರುವ ಜುರೆಲ್, ಕುನಾಲ್ ಸಿಂಗ್ ರಾಥೋರ್, ಜೋಸ್ ಬಟ್ಲರ್, ಟ್ರೆಂಟ್ ಬೌಲ್ಟ್, ಆ್ಯಡಂ ಜಂಪಾ, ಶಿಮ್ರೊನ್ ಹೆಟ್ಮೆಯರ್, ಡೊನೊವನ್ ಫೆರೆರಾ
ಬಿಡುಗಡೆಯಾದವರು: ಮುರುಗನ್ ಅಶ್ವಿನ್, ಕೆ.ಸಿ.ಕಾರಿಯಪ್ಪ, ಕೆ.ಎಂ. ಆಸೀಫ್, ಆಕಾಶ್ ವಶಿಷ್ಠ, ಅಬ್ದುಲ್ ಬಾಜಿತ್, ಕುಲದೀಪ್ ಯಾದವ್, ಜೋ ರೂಟ್, ಜೇಸನ್ ಹೋಲ್ಡರ್, ಒಬೇದ್ ಮೆಕಾಯ್

10 ಪಂಜಾಬ್ ಕಿಂಗ್ಸ್: ಶಿಖರ್ ಧವನ್, ಜಾನಿ ಬೇಸ್ಟೊ, ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್, ಸಿಕಂದರ್ ರಜಾ, ಮ್ಯಾಥ್ಯೂ ಶಾರ್ಟ್, ಅರ್ಷ್‌ದೀಪ್ ಸಿಂಗ್, ಕಗಿಸೊ ರಬಾಡ, ನಾಥನ್ ಎಲ್ಲಿಸ್, ಪ್ರಭ್‌ಸಿಮ್ರಾನ್ ಸಿಂಗ್, ಜಿತೇಶ್ ಶರ್ಮಾ, ಹರ್‌ಪ್ರೀತ್ ಭಾಟಿಯಾ, ಅಥರ್ವ ತೈಡೆ, ರಿಷಿ ಧವನ್, ಶಿವಂ ಸಿಂಗ್, ಹರ್‌ಪ್ರೀತ್ ಬ್ರಾರ್, ರಾಹುಲ್ ಚಾಹರ್, ಗುರನೂರ್ ಬ್ರಾರ್, ವಿದ್ವತ್ ಕಾವೇರಪ್ಪ.
ಬಿಡುಗಡೆಯಾದವರು: ಭನುಕ ರಾಜಪಕ್ಸೆ, ಮೋಹಿತ್ ರಾಥಿ, ಬಾಲತೇಜ್ ಧಂಡಾ, ರಾಜ್ ಅಂಗದ್ ಬಾವಾ, ಶಾರುಖ್ ಖಾನ್

ಮಹಿಳೆಯರ ಸಿಂಗಲ್ಸ್: ಅಹಮದಾಬಾದ್‌ನ ಝೀಲ್ ದೇಸಾಯಿ ರನ್ನರ್ ಅಪ್

ಚೊಚ್ಚಲ ಐಟಿಎಫ್ ಪ್ರಶಸ್ತಿ ಗೆದ್ದ ಶ್ರೀವಲ್ಲಿ

ಪ್ರಜಾವಾಣಿ ವಾರ್ತೆ

ರನ್ನರ್ ಅಪ್ ಆದ ಝೀಲ್ ದೇಸಾಯಿ ಮತ್ತು ಚಾಂಪಿಯನ್ ಆದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ (ಬಲ) ಟ್ರೋಫಿಯೊಂದಿಗೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕಳೆದ ತಿಂಗಳಷ್ಟೇ ಮೊದಲ ಬಾರಿ ರಾಷ್ಟ್ರೀಯ ಚಾಂಪಿಯನ್ ಆದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ಅವರು ತಿಂಗಳ ಅಂತರದಲ್ಲೇ ಮೊದಲ ಅಂತರರಾಷ್ಟ್ರೀಯ ಟೂರ್ನಿಯೊಂದರ ಚಾಂಪಿಯನ್ ಸಹ ಆದರು. ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ವಿಶ್ವ ಟೂರ್ ಟೆನಿಸ್ ಫೈನಲ್‌ನಲ್ಲಿ ಅವರು ಝೀಲ್ ದೇಸಾಯಿ ಅವರ ಯಶಸ್ಸಿನ ಓಟಕ್ಕೆ ತಡೆಹಾಕಿದರು.

ಭಾನುವಾರ ಇನ್‌ಸ್ಟಿಟ್ಯೂಟ್‌ನ ಟೆನಿಸ್ ಕೋರ್ಟ್‌ನಲ್ಲಿ ಉತ್ತಮ ಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರ ಸಮ್ಮುಖದಲ್ಲಿ ಹೈದರಾಬಾದ್‌ನ ರಶ್ಮಿಕಾ ಮೂರು ಸೆಟ್‌ಗಳ ಸೆಣಸಾಟದಲ್ಲಿ 6–0, 4–6, 6–3 ಅಂತರದಲ್ಲಿ ಗೆಲುವನ್ನು ಸಾಧಿಸಿದರು.

ರಶ್ಮಿಕಾ ಅವರು ಪ್ರಶಸ್ತಿಯ ಜೊತೆ ₹ 3.27 ಲಕ್ಷ ನಗದು ಬಹುಮಾನದ ಚೆಕ್ ಸ್ವೀಕರಿಸಿದರು. ಅದಕ್ಕಿಂತ ಮುಖ್ಯವಾಗಿ 50 ಡಬ್ಲ್ಯುಟಿಎ ಪಾಯಿಂಟ್‌ಗಳು ಅವರ ಖಾತೆ ಸೇರಿದವು. ಉತ್ತಮ ಸಾಧನೆ ತೋರಿದ ಅಹಮದಾಬಾದಿನ ಝೀಲ್ 30 ಡಬ್ಲ್ಯುಟಿಎ ಪಾಯಿಂಟ್‌ಗಳ ಜೊತೆ ₹1.75 ಲಕ್ಷ ನಗದು ಬಹುಮಾನ ಪಡೆದರು.

ಮುಖ್ಯಾಂಶಗಳು

- 6–0, 4–6, 6–3 ಅಂತರದಲ್ಲಿ ಶ್ರೀವಲ್ಲಿ ರಶ್ಮಿಕಾಗೆ ಗೆಲುವು
- ಪ್ರಶಸ್ತಿಯ ಜೊತೆ ₹ 3.27 ಲಕ್ಷ ನಗದು ಬಹುಮಾನ
- ಝೀಲ್ ದೇಸಾಯಿಗೆ ₹1.75 ಲಕ್ಷ ನಗದು ಬಹುಮಾನ

‘ಝೀಲ್ ಉತ್ತಮ ಆಟಗಾರ್ತಿ ಎಂದು ತಿಳಿದುಕೊಂಡಿದ್ದೆ. ಹೀಗಾಗಿ ಮೂರು ಸೆಟ್‌ಗಳ ಪಂದ್ಯಕ್ಕೆ ಮಾನಸಿಕವಾಗಿ ಸಜ್ಜಾಗಿದ್ದೆ’ ಎಂದು ಶ್ರೀವಲ್ಲಿ ರಶ್ಮಿಕಾ ಪ್ರತಿಕ್ರಿಯಿಸಿದರು. ಅವರು ಕಳೆದ ತಿಂಗಳು ನವದೆಹಲಿಯಲ್ಲಿ ನಡೆದಿದ್ದ ಫೆನೆಸ್ತಾ ರಾಷ್ಟ್ರೀಯ ಓಪನ್ ಚಾಂಪಿಯನ್‌ಷಿಪ್‌ನಲ್ಲೂ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದರು.

ಮೊದಲ ಸೆಟ್‌ನ ಎರಡನೇ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ರಶ್ಮಿಕಾ ಸುಲಭ ಮುನ್ನಡೆ ಪಡೆದರು. ಝೀಲ್ ಅವರು ತಪ್ಪುಗಳನ್ನು ಎಸಗಿದ್ದರಿಂದ ಸರಣಿ ‘ಡ್ಯೂಸ್’ ಹೋದ ನಾಲ್ಕನೇ ಗೇಮ್ ಕೂಡ ರಶ್ಮಿಕಾ ಪಾಲಾಯಿತು. ಅವರು ಸುಲಭವಾಗಿ ಮೊದಲ ಸೆಟ್ ಗೆದ್ದರು. ಆದರೆ ಸೆಮಿಫೈನಲ್‌ನಲ್ಲಿ ಸೋಲಿನ ಸುಳಿಯಿಂದ ಗೆಲುವು ಸಂಪಾದಿಸಿದ್ದ ಝೀಲ್ ದೇಸಾಯಿ ಮತ್ತೊಮ್ಮೆ ಮರು-ಹೋರಾಟದಲ್ಲಿ ಎರಡನೇ ಸೆಟ್ ತಮ್ಮ-ದಾಗಿಸಿಕೊಂಡರು.

ನಿರ್ಣಾಯಕ ಮೂರನೆ ಸೆಟ್‌ನಲ್ಲಿ, ಬೀಸುತ್ತಿದ್ದ ಗಾಳಿಯಿಂದ ಚೆಂಡಿನ ಹೊಡೆತ ನಿಯಂತ್ರಿಸಲು ಪರದಾಡಿದ ಝೀಲ್ 0–3 ಹಿನ್ನಡೆ ಅನುಭವಿಸಿದರು. ರಶ್ಮಿಕಾ ಅವರು ಪ್ರಬಲ ಫೋರ್‌ಹ್ಯಾಂಡ್ ಹೊಡೆತಗಳ ಜೊತೆಗೆ ಅಮೋಘ ಕ್ರಾಸ್‌ಕೋರ್ಟ್ ಹೊಡೆತಗಳನ್ನೂ ಆಡಿದರು. ಇದಕ್ಕೆ ಝೀಲ್ ಬಳಿ ಉತ್ತರವಿರಲಿಲ್ಲ.

ಯು.ಪಿ. ಯೋಧಾಸ್ ತಂಡಕ್ಕೆ ಪ್ರದೀಪ್ ನಾಯಕ

ಪ್ರದೀಪ್ ನರ್ವಾಲ್

ನವದೆಹಲಿ (ಪಿಟಿಐ): ಪ್ರಶಸ್ತಿಗಳ ಹ್ಯಾಟ್ರಿಕ್ ಸಾಧಿಸಿರುವ ಪ್ರದೀಪ್ ನರ್ವಾಲ್ ಅವರು ಡಿಸೆಂಬರ್ 2ರಂದು ಆರಂಭವಾಗುವ ಪ್ರೊ ಕಬಡ್ಡಿ ಲೀಗ್‌ನಲ್ಲಿ ಯು.ಪಿ ಯೋಧಾಸ್ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ತಂಡದ ಫ್ರಾಂಚೈಸಿ ಭಾನುವಾರ ತಿಳಿಸಿದೆ.

ಪಿಕೆಎಲ್‌ನ ರೇಡಿಂಗ್‌ನಲ್ಲಿ ಅತ್ಯಧಿಕ ಪಾಯಿಂಟ್ಸ್‌ಗಳ (1,500ಕ್ಕೂ ಹೆಚ್ಚು) ದಾಖಲೆ ಹೊಂದಿರುವ ನರ್ವಾಲ್ ಅವರು ಪಟ್ನಾ ತಂಡ ಸತತ ಮೂರು ಸಲ (2016 ರಿಂದ 2018) ಚಾಂಪಿಯನ್ ಆದಾಗ ನಾಯಕರಾಗಿದ್ದರು. 2018ರ ಏಷ್ಯನ್ ಗೇಮ್ಸ್ ಕಂಚಿನ ಪದಕ ಗೆದ್ದ ತಂಡದಲ್ಲಿ ಆಡಿದ್ದರು.

‘ನನ್ನ ಹೆಗಲ ಮೇಲೆ ದೊಡ್ಡ ಹೊಣೆ ವಹಿಸಿದ್ದಾರೆ. ಇದನ್ನು ಸಾಧಿಸಲು ಸರ್ವ ಪ್ರಯತ್ನ ಮಾಡುತ್ತೇನೆ’ ಎಂದು ನರ್ವಾಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಯುಪಿ ಯೋಧಾಸ್ ತಂಡ ಡಿ.2ರಂದು ಆರಂಭವಾಗುವ ಮೊದಲ ಪಂದ್ಯದಲ್ಲಿ ಯು ಮುಂಬಾ ತಂಡವನ್ನು ಎದುರಿಸಲಿದೆ. 2017ರಲ್ಲಿ ಪಿಕೆಎಲ್‌ನಲ್ಲಿ ಮೊದಲ ಬಾರಿ ಆಡಿರುವ ಯುಪಿ ಯೋಧಾಸ್ ಪ್ಲೇಆಫ್ ಹಂತದಿಂದ ಮೇಲಕ್ಕೇರಿಲ್ಲ.

ಕಲಬುರಗಿ ಓಪನ್ ಐಟಿಎಫ್ ಪುರುಷರ ಟೆನಿಸ್ ಟೂರ್ನಿ

ಆರ್ಯನ್, ಅರ್ಜುನ್ ಜಯಭೇರಿ

• ಬಸವರಾಜ ದಳವಾಯಿ

ಕಲಬುರಗಿ: ಅಂಕಣದಲ್ಲಿ ಚುರುಕಿನ ಓಡಾಟ ಹಾಗೂ ಬಿರುಸಿನ ಹೊಡೆತಗಳಿಂದ ಮಿಂಚಿದ ಭಾರತದ ಆರ್ಯನ್ ಶಾ ಅವರು ಭಾನುವಾರ ಇಲ್ಲಿ ಆರಂಭವಾದ ಕಲಬುರಗಿ ಓಪನ್ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಜಯ ಗಳಿಸಿದರು.

ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ದಿನ, ಸಿಂಗಲ್ಸ್ ವಿಭಾಗದ ಅರ್ಹತಾ ಸುತ್ತಿನ ಮೊದಲ ಹಣಾಹಣಿಯಲ್ಲಿ ಆರ್ಯನ್ ಶಾ 6–2, 4–6, 10–7ರಿಂದ ಸ್ವದೇಶದ ಸಾರ್ಥಕ್ ಸುದೇನ್ ಅವರನ್ನು ಸೋಲಿಸಿದರು. 18 ವರ್ಷದ ಆರ್ಯನ್ ಅವರ ವೇಗದ ಸರ್ವ್‌ಗಳೂ ಆಕರ್ಷಕವಾಗಿದ್ದವು.

ಅರ್ಹತಾ ಸುತ್ತಿನ ಇನ್ನುಳಿದ ಮೊದಲ ಪಂದ್ಯಗಳಲ್ಲಿ ಭಾರತದ ಅರ್ಜುನ್ ಮಹದೇವನ್ 6–0, 6–0ರಿಂದ ಇಶಾನ್ ಖದೀರ್ ವಿರುದ್ಧ, ಮುನಿ ಅನಂತ ಮಣಿ 6–4, 6–3ರಿಂದ ರಿಷಿತ್ ದಾಖನೆ ಎದುರು, ಅಜಯ್ ಮಲಿಕ್ 6–3, 7–5ರಿಂದ ತರುಣ್ ವಿರುದ್ಧ, ಸಂದೇಶ್ ದತ್ತಾತ್ರೇಯ ಕುರಳೆ 6–4, 6–3ರಿಂದ ಮಾನವ್ ಜೈನ್ ಎದುರು, ಯಶ್ ಯಾದವ್ 6–1, 6–2ರಿಂದ ಅನುಜ್ ಮಾನ್ ಎದುರು, ಪಾರ್ಥ್ ಅಗರವಾಲ್ 7–6, 6–2ರಿಂದ ದೀಪಕ್ ಅನಂತರಾಮು ಎದುರು, ಧ್ರುವ ಹಿರ್ಪಾರ 6–3, 7–6 (5)ರಿಂದ ಅಮೆರಿಕದ ವಿಕ್ರಮಜೀತ್ ಚಾವ್ಲಾ ಎದುರು ಗೆಲುವು ಸಾಧಿಸಿದರು.

ಓಜಸ್ ತೇಜೊ ಜಯಪ್ರಕಾಶ್ 4–6, 6–1,10–4ರಿಂದ ಲೋಹಿತಾಕ್ಷ ಬದರಿನಾಥ್ ಎದುರು, ತುಷಾರ್ ಮದನ್ 6–4, 6–1ರಿಂದ ಆದಿತ್ಯ ವರ್ಧನ್ ದುಡ್ಡುಪುಡಿ ವಿರುದ್ಧ, ಜಯ ಗಳಿಸಿ ಅರ್ಹತಾ ಸುತ್ತಿನ ಎರಡನೇ ಹಂತಕ್ಕೆ ಪ್ರವೇಶಿಸಿದರು. ಶಿವಾಂಕ್ ಭಟ್ನಾಗರ್ ಹಾಗೂ ಕರ್ನಾಟಕದ ರಿಷಿ ರೆಡ್ಡಿ ಅವರಿಗೆ ಬೈ ಲಭಿಸಿತು.

ಬ್ಯಾಡ್ಮಿಂಟನ್: ಪ್ರದ್ಯೋತ್, ಬನಶ್ರೀಗೆ ಪ್ರಶಸ್ತಿ

ಬೆಂಗಳೂರು: ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ನ ಆರ್. ಪ್ರದ್ಯೋತ್ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್‌ನ ಬನಶ್ರೀ ಸಿ. ಪಾಟೀಲ್ ಅವರು 18ನೇ ರಮೇಶ್ ಪಡುಕೋಣೆ- ಮೆಹುಲ್ ಸಿರೂರ್ ಸ್ಮಾರಕ ಅಂತರಶಾಲಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಫಲಿತಾಂಶ: ಬಾಲಕರ ವಿಭಾಗ: 16 ವರ್ಷದೊಳಗಿನವರ ಸಿಂಗಲ್ಸ್: ಆರ್. ಪ್ರದ್ಯೋತ್ (ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್); ಡಬಲ್ಸ್: ರುಹಾನ್ ಪಿ. ಜೋಸೆಫ್/ ರುಜಿಲ್ ಪಿ. ಜೋಸೆಫ್ (ಸೇಂಟ್ ಜೋಸೆಫ್ ಬಾಲಕರ ಹೈಸ್ಕೂಲ್); ಟೀಂ ಈವೆಂಟ್: ಡಿಪಿಎಸ್ ಈಸ್ಟ್. 14 ವರ್ಷದೊಳಗಿನವರ ಸಿಂಗಲ್ಸ್: ಸಿದ್ಧಾರ್ಥ್ ಎಸ್. ನಾಯರ್ (ಯೂರೊ ಸ್ಕೂಲ್); ಡಬಲ್ಸ್: ಎರಿಕ್ ಆಂಟನಿ/ ಗೌತಮ್ ಎಸ್. ನಾಯರ್ (ಯೂರೊ ಸ್ಕೂಲ್); ಟೀಂ ಈವೆಂಟ್: ಯುರೊ ಸ್ಕೂಲ್.

12 ವರ್ಷದೊಳಗಿನವರ ಸಿಂಗಲ್ಸ್: ಗೌತಮ್ ಎಸ್. ನಾಯರ್; ಡಬಲ್ಸ್: ಗೌತಮ್ ಎಸ್. ನಾಯರ್/ ಸಿದ್ಧಾರ್ಥ್ ಎಸ್. ನಾಯರ್: ಟೀಂ ಈವೆಂಟ್: ಯುರೊ ಸ್ಕೂಲ್. 10 ವರ್ಷದೊಳಗಿನವರ ಸಿಂಗಲ್ಸ್: ಅರ್ಜುನ್ ಅರಳ (ಡಿಪಿಎಸ್ ಸೌತ್); ಡಬಲ್ಸ್: ರಿಯಾನ್ಸ್ ಎಸ್/ ಸಾಯಿ ಡಾನ್ವಿನ್ ಪಿ (ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್). ಟೀಂ ಈವೆಂಟ್: ಡಿಪಿಎಸ್ ಎಲೆಕ್ಟ್ರಾನಿಕ್ ಸಿಟಿ.

ಬಾಲಕಿಯರ ವಿಭಾಗ: 16 ವರ್ಷದೊಳಗಿನವರ ಸಿಂಗಲ್ಸ್: ಬನಶ್ರೀ ಸಿ ಪಾಟೀಲ್ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್); ಡಬಲ್ಸ್: ಅಂಕಿತಾ ಕೆ/ ಸಿಂಚನಾ ಸಿ. (ದಿ ನ್ಯೂ ಕೇಂಬ್ರಿಡ್ಜ್ ಇಂಗ್ಲಿಷ್ ಸ್ಕೂಲ್); ಟೀಂ ಈವೆಂಟ್: ದಿ ನ್ಯೂ ಕೇಂಬ್ರಿಡ್ಜ್ ಇಂಗ್ಲಿಷ್ ಸ್ಕೂಲ್. 14 ವರ್ಷದೊಳಗಿನವರ ಸಿಂಗಲ್ಸ್: ಗೌರಿ ಸತೀಶ್ (ದೀಪಿಕಾ ಸ್ಕೂಲ್); ಡಬಲ್ಸ್: ಅವನಿ ಕುಲಕರ್ಣಿ/ ಭೂಮಿ ಕುಲಕರ್ಣಿ (ಡಿಪಿಎಸ್ ಸೌತ್) ; ಟೀಂ ಈವೆಂಟ್: ಡಿಪಿಎಸ್ ಸೌತ್. 12 ವರ್ಷದೊಳಗಿನವರ ಸಿಂಗಲ್ಸ್: ಸ್ಮೃತಿ ಎಸ್. (21ಕೆ ಸ್ಕೂಲ್); ಡಬಲ್ಸ್: ಸಿರಿ ಟಿಆರ್/ ಸ್ಮೃತಿ ಎಸ್ (21ಕೆ ಸ್ಕೂಲ್); ಟೀಂ ಈವೆಂಟ್: 21ಕೆ ಸ್ಕೂಲ್.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com